ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಣ್ಣನಿಗೆ ವಿರಾಟ ಗಿಫ್ಟ್
ದೆಹಲಿಯ ಗುರು ಗ್ರಾಮದಲ್ಲಿರುವ 80 ಕೋಟಿ ಮೌಲ್ಯದ ಬಂಗಲೆಯನ್ನು ವಿರಾಟ್ ಕೊಹ್ಲಿ ತಮ್ಮ ಅಣ್ಣ ವಿಕಾಸ್ ಕೊಹ್ಲಿಗೆ ಹಸ್ತಾಂತರಿಸಿದ್ದಾರೆ.

ಸರಕಾರಿ ನೌಕರರ ಸಂಘಟನೆಗೂ ನಿರ್ಬಂಧ, ಬಿಜೆಪಿ ಅವಧಿಯ ಆದೇಶ ಮರು ಜಾರಿ

ಆರೆಸ್ಸೆಸ್‌ಗೆ ಅಂಕುಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸೇರಿದಂತೆ ಖಾಸಗಿ ಸಂಘಟನೆಗಳು ಹಾಗೂ ಸಂಘ ಸಂಸ್ಥೆಗಳು ಸರಕಾರಿ ಸ್ಥಳಗಳಲ್ಲಿ, ಸಾರ್ವಜನಿಕ ಪ್ರದೇಶ ಹಾಗೂ ರಸ್ತೆಗಳಲ್ಲಿ ಮೆರವಣಿಗೆ ನಡೆಸುವುದು ಹಾಗೂ ನಿಯಮ ಮೀರಿ ಕಾರ್ಯಕ್ರಮ ನಡೆಸುವುದನ್ನು ತಡೆಯಲು ಸೂಕ್ತ ನಿಯಮಗಳನ್ನು ತರಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.

ಆರ್‌ಎಸ್‌ಎಸ್ ಚಟುವಟಿಕೆಗಳು ಮತ್ತು ಅದರ ಅಂಗಸಂಸ್ಥೆಗಳ ಚಟುವಟಿಕೆಗಳನ್ನು ನಿರ್ಬಂಧಿಸುವಂತೆ ಕೋರಿ ರಾಜ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಬರೆದ ಪತ್ರದ ಬೆನ್ನಿಗೇ, ಖಾಸಗಿ ಸಂಘ ಸಂಸ್ಥೆಗಳು ಮತ್ತ ಸಂಘಟನೆಗಳ ಚಟುವಟಿಕೆಗಳನ್ನು ಪರಿಶೀಲಿಸಲು ಹಾಗೂ ಕಾನೂನು ವ್ಯಾಪ್ತಿಯಲ್ಲಿ ತರಲು ಸರಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ನಾವು ತರಲು ಬಯಸುವ ನಿಯಮಗಳು ಸಾರ್ವಜನಿಕ ಸ್ಥಳಗಳು, ಸರಕಾರಿ ಶಾಲೆಗಳು, ಕಾಲೇಜುಗಳು, ಸರಕಾರಿ ಆವರಣಗಳು, ಸರಕಾರಿ ಸ್ವಾಮ್ಯದ ಸಂಸ್ಥೆಗಳು ಮತ್ತು ಅನುದಾನಿತ ಸಂಸ್ಥೆಗಳಿಗೆ ಸಂಬಂಧಿಸಿವೆ. ಗೃಹ, ಕಾನೂನು ಇಲಾಖೆ ಮತ್ತು ಶಿಕ್ಷಣ ಇಲಾಖೆ ಹೊರಡಿಸಿದ ಹಿಂದಿನ ಆದೇಶಗಳನ್ನು ಒಟ್ಟುಗೂಡಿಸಿ ಹೊಸ ನಿಯಮ ರೂಪಿಸುತ್ತೇವೆ. ಮುಂದಿನ ಎರಡು ಮೂರು ದಿನಗಳಲ್ಲಿ, ಹೊಸ ನಿಯಮವು ಕಾನೂನು ಮತ್ತು ಸಂವಿಧಾನದ ಚೌಕಟ್ಟಿನೊಳಗೆ ಜಾರಿಗೆ ಬರಲಿದೆ ಎಂದರು.

ನಾವು ಯಾವುದೇ ಸಂಸ್ಥೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಆದರೆ, ಇಂದಿನಿಂದ ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ರಸ್ತೆಗಳಲ್ಲಿ ನಿಮಗೆ ಬೇಕಾದುದನ್ನು ಮಾಡಲು ಸಾಧ್ಯವಿಲ್ಲ. ನೀವು ಏನೇ ಮಾಡಬೇಕಾದರೂ, ಸರಕಾರದ ಅನುಮತಿ ಪಡೆದ ನಂತರವೇ ಅದನ್ನು ಮಾಡಬೇಕು. ಅನುಮತಿ ನೀಡಲು ಕೆಲವು ಮಾನದಂಡಗಳಿವೆ. ಅಧಿಕಾರಿಗಳಿಗೆ ಮಾಹಿತಿ ನೀಡುವ ಮೂಲಕ ನೀವು ರಸ್ತೆಯಲ್ಲಿ ಕೋಲುಗಳನ್ನು ಬೀಸುತ್ತಾ ನಡೆಯಲು ಅಥವಾ ಪಥ ಸಂಚಲನ (ಮೆರವಣಿಗೆ) ನಡೆಸಲು ಸಾಧ್ಯವಿಲ್ಲ. ಈ ಎಲ್ಲಾ ವಿಷಯಗಳು ನಾವು ಪರಿಚಯಿಸಲಿರುವ ನಿಯಮಗಳ ಭಾಗವಾಗಿರುತ್ತವೆ ಎಂದರು.

ಆರೆಸ್ಸೆಸ್ ನಂಟಿನ ನೌಕರರ ಅಮಾನತು

ಆರ್‌ಎಸ್‌ಎಸ್ ವಿಚಾರವಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಿಎಂ ಸಿದ್ದರಾಮಯ್ಯಗೆ ಮತ್ತೊಂದು ಪತ್ರ ಬರೆದು

ಸರಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸುವಂತೆ ಕೋರಿದ್ದಾರೆ. ಇದೇ ಆರ್‌ಎಸ್‌ಎಸ್ ಶತಮಾನೋತ್ಸವದಲ್ಲಿ ಭಾಗವಹಿಸಿದ್ದ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಷೋಕಾಸ್ ನೋಟಿಸ್ ನೀಡಲಾಗಿದ್ದು, ಒಂದೆರಡು ದಿನಗಳಲ್ಲಿ ಅಮಾನತುಗೊಳಿಸುವುದಾಗಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮ ಇಲಾಖೆಯ ಕಾಯಂ ಸಿಬ್ಬಂದಿ ಹಾಗೂ ಅಧಿಕಾರಿಗಳು ಗಣವೇಷ ಧರಿಸಿ, ಶತಮಾನೋತ್ಸವದಲ್ಲಿ ಭಾಗವಹಿಸಿರುವುದನ್ನು ಗುರುತಿಸಲಾಗಿದೆ. ಕೆಲವರು ಸರಕಾರದ ಹಣವನ್ನು ಗುರುಪೂರ್ಣಿಮೆಗಾಗಿ ದೇಣಿಗೆ ನೀಡಿದ್ದಾರೆ. ಯಾವುದೇ ಕಾರಣಕ್ಕೂ ಸರಕಾರದ ಹಣ ನೀಡಬಾರದು ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು, 2021 ಅಡಿ ನಿಯಮ 5(1) ಪ್ರಕಾರ, ರಾಜ್ಯ ಸರಕಾರದ ಯಾವುದೇ ನೌಕರ, ಯಾವುದೇ ರಾಜಕೀಯ ಪಕ್ಷದ ಅಥವಾ ರಾಜಕಾರಣದಲ್ಲಿ ಭಾಗವಹಿಸುವಂಥ ಸಂಘ ಸಂಸ್ಥೆಯ ಸದಸ್ಯನಾಗಿರಬಾರದು. ಸಂಬಂಧ ಹೊಂದಿರಬಾರದು. ಯಾವುದೇ ರಾಜಕೀಯ ಚಳುವಳಿ ಅಥವಾ ಚಟುವಟಿಕೆಯಲ್ಲಿ ಭಾಗವಹಿಸಬಾರದು ಮತ್ತು ಅದರ ಸಹಾಯಾರ್ಥ ವಂತಿಗೆ ನೀಡುವಂತಿಲ್ಲ ಎಂದು ನಿರ್ದೇಶನ ನೀಡಲಾಗಿದೆ.

ತಿರುಗುಬಾಣವಾದ ಬಿಜೆಪಿ ಆದೇಶ: ಕರ್ನಾಟಕದ ಶಾಲೆಗಳು ಹಾಗೂ ಶಾಲೆಗಳ ಆವರಣಗಳು ಯಾವುದೇ ಖಾಸಗಿ ಸಂಸ್ಥೆಗಳ ಕಾರ್ಯಕ್ರಮಗಳಿಂದ ಮುಕ್ತವಾಗಿರಬೇಕು. ಶಾಲೆಗಳ ಆವರಣವು ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಮೀಸಲಿರಬೇಕೆಂದು 2013ರಲ್ಲಿ ರಾಜ್ಯ ಬಿಜೆಪಿ ಸರಕಾರ ಆದೇಶ ಹೊರಡಿಸಿತ್ತು. ಶಾಲಾ ಆವರಣವು ದೈನಂದಿನ ಪಾಠಪ್ರವಚನಗಳೊಂದಿಗೆ ಪಠ್ಯೇತರ ಚಟುವಟಿಕೆಗಳು ಮತ್ತು ಆಟೋಟ ಕಾರ್ಯಕ್ರಮಗಳು, ಶಾರೀರಿಕ ಶಿಕ್ಷಣ ಹಾಗೂ ವ್ಯಾಯಾಮ ಮತ್ತಿತರ ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಸದ್ವಿನಿಯೋಗವಾಗಬೇಕು. ಇತರ ಉದ್ದೇಶಗಳಿಗೆ ಅನುಮತಿ ನೀಡುವುದನ್ನು ಈ ಆದೇಶದಲ್ಲಿ ನಿರ್ಬಂಧಿಸಲಾಗಿತ್ತು. ಇದೀಗ ಇದೇ ಆದೇಶವನ್ನು ಮುಂದಿಟ್ಟುಕೊಂಡು ಸಿದ್ದರಾಮಯ್ಯ ಸರಕಾರ, ಆರೆಸ್ಸೆಸ್ ಸೇರಿದಂತೆ ಖಾಸಗಿ ಸಂಘಟನೆಗಳ ಚಟುವಟಿಕೆಗಳನ್ನು ನಿರ್ಬಂಧಿಸಲು ಮುಂದಾಗಿದೆ. →10

ನಿಷೇಧವಲ್ಲ, ನಿರ್ಬಂಧ

ಕೇಂದ್ರದಲ್ಲಿನ ಹಿಂದಿನ ಕಾಂಗ್ರೆಸ್ ಸರಕಾರಗಳು ಮೂರು ಬಾರಿ ಆರ್‌ಎಸ್‌ಎಸ್ ಸಂಘಟನೆಯನ್ನು ನಿಷೇಧಿಸಿತ್ತು. ಆದರೆ ಆಯಾ ಪ್ರಕರಣಗಳಲ್ಲಿ ಆರ್ ಎಸ್‌ಎಸ್ ವಿರುದ್ಧ ಮಾಡಲಾದ ಆರೋಪ ಸಾಬೀತಾಗದ ಕಾರಣ ನಿಷೇಧ ಹಿಂಪಡೆಯಲಾಗಿತ್ತು. ಹೀಗಾಗಿ, ರಾಜ್ಯ ಕಾಂಗ್ರೆಸ್ ಸರಕಾರ ನಿರ್ಬಂಧ ಹೇರಲು ಮುಂದಾಗಿದೆ. ಸಂಘಟನೆಯ ಕಾರ್ಯಚಟುವಟಿಕೆ ಮೇಲೆ ನಿಷೇಧ ಹೇರುವ ಬದಲು ಪೂರ್ವಾನುಮತಿ ಕಡ್ಡಾಯಗೊಳಿಸಿ ಸರಕಾರ ಆದೇಶ ಹೊರಡಿಸಿದೆ.

ಕೇಂದ್ರ ನೌಕರರಿಗಿಲ್ಲ ಅಡ್ಡಿ

ಇಂದಿರಾ ಗಾಂಧಿ ಸರಕಾರ ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸರಕಾರಿ ನೌಕರರು ಪಾಲ್ಗೊಳ್ಳುವುದನ್ನು ನಿಷೇಧಿಸಿ ಪ್ರತ್ಯೇಕ ಆದೇಶ ಹೊರಡಿಸಿತ್ತು. ಆದರೆ, 2024ರಲ್ಲಿ ನರೇಂದ್ರ ಮೋದಿ ನೇತೃತ್ವ ಕೇಂದ್ರ ಬಿಜೆಪಿ ಸರಕಾರ ಈ 58 ವರ್ಷ ಹಳೆಯ ನಿಯಮವನ್ನು ರದ್ದುಪಡಿಸಿತ್ತು. ಹೀಗಾಗಿ ಪ್ರಸ್ತುತ ಕೇಂದ್ರ ಸರಕಾರಿ ನೌಕರರು ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಪಡೆದಿದ್ದಾರೆ.

30X40 ಮನೆಗಳಿಗೆ ಓಸಿ ವಿನಾಯಿತಿ: ಸಂಪುಟ ಅಸ್ತು

ಸಕ್ರಮ ಭಾಗ್ಯ ವಿಸ್ತರಣೆ

ಬೆಂಗಳೂರು: ರಾಜ್ಯದ ಮಹಾನಗರ ಪಾಲಿಕೆಗಳು, ನಗರಸಭೆ ಹಾಗೂ ಪುರಸಭೆಗಳ ವ್ಯಾಪ್ತಿಯಲ್ಲಿ 1,200 ಚದರಡಿ ವಿಸ್ತೀರ್ಣದವರೆಗಿನ ನಿವೇಶನಗಳಲ್ಲಿ ನಕ್ಷೆ ಮಂಜೂರಾತಿ ಪಡೆದು ನಿರ್ಮಿಸಿರುವ ನೆಲ ಮತ್ತು 2 ಅಂತಸ್ತು, ಸ್ಟಿಲ್ಟ್ ಮತ್ತು 3 ಅಂತಸ್ತಿನ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರದಿಂದ ವಿನಾಯಿತಿ ನೀಡಲು ಸಚಿವ ಸಂಪುಟ ನಿರ್ಧರಿಸಿದೆ.

ಸಚಿವ ಸಂಪುಟ ಸಭೆಯಲ್ಲಿ ಬೆಂಗಳೂರು ಹೊರತುಪಡಿಸಿ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ 1,200 ಚದರಡಿ ವಿಸ್ತೀರ್ಣದ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರದಿಂದ (ಒಸಿ) ವಿನಾಯಿತಿ ನೀಡುವ ಬಗ್ಗೆ ಚರ್ಚಿಸಿ ಈ ನಿರ್ಧಾರಕ್ಕೆ ಬರಲಾಗಿದೆ. ಈ ವೇಳೆ ನಕ್ಷೆ ಮಂಜೂರಾತಿ ಪಡೆಯದ ಕಟ್ಟಡಗಳಿಗೂ ವಿನಾಯಿತಿ ನೀಡುವ ಬಗ್ಗೆ ಚರ್ಚಿಸಲಾಯಿತು. ಆದರೆ, ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಸದ್ಯ ಈ ಕುರಿತು ನಿರ್ಣಯ ತೆಗೆದುಕೊಳ್ಳದಿರಲು ನಿರ್ಧರಿಸಲಾಗಿದೆ.

ಅನುಷ್ಠಾನದ ವೇಳೆ ಅಥವಾ ಸರಕಾರಿ ಆದೇಶದ ವೇಳೆ ನಕ್ಷೆ ಮಂಜೂರಾತಿ ಪಡೆಯದ ನಿರ್ದಿಷ್ಟ ಕಟ್ಟಡಗಳಿಗೂ ವಿನಾಯಿತಿ ನೀಡಲು ಕ್ರಮ ಕೈಗೊಳ್ಳಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ ಎನ್ನಲಾಗಿದೆ. ಹೀಗಾಗಿ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆಗಳ ವ್ಯಾಪ್ತಿಯಲ್ಲಿ 1,200 ಚದರಡಿವರೆಗಿನ ವಿಸ್ತೀರ್ಣದ ನಿವೇಶನಗಳಲ್ಲಿ ನಕ್ಷೆ ಮಂಜೂರಾತಿ ಪಡೆದು ನಿರ್ಮಿಸಿರುವ ನೆಲ ಮತ್ತು ಎರಡು ಅಂತಸ್ತು, ಸ್ಟಿಲ್ಟ್ ಮತ್ತು ಮೂರು ಅಂತಸ್ತಿನ ವಸತಿ ಕಟ್ಟಡಗಳಿಗೆ ಮಾತ್ರ ಸ್ವಾಧೀನಾನುಭವ ಪತ್ರದಿಂದ ವಿನಾಯಿತಿ ನೀಡಲು ಸಂಪುಟ ನಿರ್ಧರಿಸಿದೆ. ಇತ್ತೀಚೆಗಷ್ಟೇ ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ (ಜಿಬಿಎ) 1,200 ಚದರಡಿ ವಿಸ್ತೀರ್ಣದವರೆಗೆ ನಿರ್ಮಿಸಿರುವ ನೆಲ ಮತ್ತು 2 ಅಂತಸ್ತು, ಸ್ಟಿಲ್ಟ್ ಮತ್ತು 3 ಅಂತಸ್ತಿನ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರದಿಂದ ವಿನಾಯಿತಿ ಸರಕಾರ ಅಧಿಕೃತ ಆದೇಶ ಹೊರಡಿಸಿದೆ. →10

ಬೆಳೆಹಾನಿಗೆ 1090 ಕೋಟಿ ರು.

ಭಾರೀ ಮಳೆ ಮತ್ತು ಪ್ರವಾಹದಿಂದ 12.82 ಲಕ್ಷ ಹೆಕ್ಟೇರ್ ಕೃಷಿ ಮತ್ತು ತೋಟಗಾರಿಕೆ ಬೆಳೆ ಹಾನಿಗೆ ಇನ್‌ಪುಟ್ ಸಬ್ಸಿಡಿಯ ದರ ಪ್ರತಿ ಹೆಕ್ಟೇರ್‌ಗೆ 17,000 ರು.ನಂತೆ 2 ಹೆಕ್ಟೆರ್‌ಗೆ ಸೀಮಿತಗೊಳಿಸಿ ಹೆಚ್ಚಿಸಿ, ನೀರಾವರಿ ಬೆಳೆಗಳಿಗೆ 25,500 ರು. 2 ಹೆಕ್ಟೇರ್‌ಗೆ ಹೆಚ್ಚಿಸಿ, ಬಹುವಾರ್ಷಿಕ ಬೆಳೆಗಳಿಗೆ 31,000 ರು. 2 ಹೆಕ್ಟೇರ್‌ಗೆ ದರ ಹೆಚ್ಚಿಸಿ 1090 ಕೋಟಿ ರು. ನೀಡಲು ನಿರ್ಧರಿಸಲಾಗಿದೆ. ಕರ್ನಾಟಕ ಗೃಹ ಮಂಡಳಿಯಿಂದ ಬೆಂಗಳೂರಿನ ಸೂರ್ಯನಗರ-4ನೇ ಹಂತದಲ್ಲಿ ಇಂಡ್ಲವಾಡಿ ಗ್ರಾಮದ 75 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾಂಗಣ ಸಂಕೀರ್ಣದ ಯೋಜನೆಗೆ 2350 ರು. ನೀಡಲು ಒಪ್ಪಿಗೆ ನೀಡಲಾಗಿದೆ.

ಸೊಂಪಾದ ಪುಟಗಳು

ಹಾಯಾದ ಬದುಕಿನ ಗುಟ್ಟು: ಕತ್ತೆ ಬಾಲ, ಕುದುರೆ ಜುಟ್ಟು..!
ಶಿಶಿರಕಾಲ
ಶಿಶಿರ್ ಹೆಗಡೆ 6

ಮಹಾ ಬಯಲಿನಿಂದ ತಂಬಿಗಿ ಬಯಲೆಡೆಗೆ..!
ಬಸವ ಮಂಟಪ
ರವಿ ಹಂಜ್ 7

ದಾರಿದೀಪೋಕ್ತಿ



ನಿಮ್ಮಂತೆ ಜೀವನ ನಡೆಸಬೇಕೆಂದು ಹಲವರು ಕನಸು ಕಾಣುತ್ತಿರಬಹುದು. ನಿಮಗೇನು ದಕ್ಕಿದೆಯೋ ಅದಕ್ಕೆ ಖುಷಿ ಪಡಿ. ಸಿಗದಿರುವುದಕ್ಕೆ ಕೊರಗಬೇಡಿ

ವಕ್ರತುಂಡೋಕ್ತಿ

ಮನುಷ್ಯರು ನಿಜಕ್ಕೂ ಬಹಳ ಕ್ರೇಜಿ. ಅವರು ಮರುಭೂಮಿಯಲ್ಲಿ ಕಾಡುಗಳನ್ನು ಸೃಷ್ಟಿಸಬಲ್ಲರು ಮತ್ತು ಕೆರೆ-ಸರೋವರಗಳನ್ನು ಬತ್ತುವಂತೆ ಮಾಡಬಲ್ಲರು.

ಖರ್ಗೆಗೆ ಬೆದರಿಕೆ: ಆರೋಪಿ ಸೆರೆ

ಬೆಂಗಳೂರು: ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿರ್ಬಂಧಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ

ಅವರಿಗೆ ಪತ್ರ ಬರೆದಿದ್ದಕ್ಕಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕರೆ ಮಾಡಿ ಬೆದರಿಕೆಯೊಡ್ಡಿದ್ದ ಮಹಾರಾಷ್ಟ್ರದ ವ್ಯಕ್ತಿಯನ್ನು ಬೆಂಗಳೂರು ಪೊಲೀಸರು ಮಹಾರಾಷ್ಟ್ರದ ಲಾತೂರ್‌ನಲ್ಲಿ ಬಂಧಿಸಿದ್ದಾರೆ. ಬೆಂಗಳೂರು ಕೇಂದ್ರ ವಿಭಾಗ ಮತ್ತು ಕಲಬುರಗಿ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಆರೋಪಿ ಧನೇಶ್ ನರೋಣೆ ಅಲಿಯಾಸ್ ದಾನಪ್ಪ ನರೋಣೆ ಎಂಬಾತನನ್ನು ಬಂಧಿಸಲಾಗಿದೆ. ಮಹಾರಾಷ್ಟ್ರದ ಸೊಲ್ಲಾಪುರದವನೆಂದು ಪೊಲೀಸ್ ಮೂಲಗಳು ತಿಳಿಸಿವೆ.

ಒಬಿಸಿ ಮೀಸಲು ಸುಪ್ರೀಂ ತಡೆ

ಹೈದರಾಬಾದ್: ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಶೇ. 42ರಷ್ಟು



ಮೀಸಲಾತಿ ನೀಡಲು ಮುಂದಾಗಿದ್ದ ತೆಲಂಗಾಣ ಸರಕಾರದ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಸೆ. 26ರಂದು ತೆಲಂಗಾಣ ಸರಕಾರ ಹೊರಡಿಸಿದ್ದ ಆದೇಶಕ್ಕೆ ಅ. 9ರಂದು ಅಲ್ಲಿನ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ಇದನ್ನು ಪ್ರಶ್ನಿಸಿ ಸರಕಾರ ಸುಪ್ರೀಕೋರ್ಟ್ ಮೆಟ್ಟಿಲೇರಿತ್ತು. ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ಪೂರ್ತಿಯಾಗಲಿ. ಅಲ್ಲಿಯವರೆಗೆ ಮೇಲ್ಮನವಿಗೆ ಅವಕಾಶವಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ತಿಳಿಸಿದೆ.

ಕನ್ನೇರಿಶ್ರೀ ವಿಜಾಪುರ ಭೇಟಿಗೆ ನಿರ್ಬಂಧ

ವಿಜಯಪುರ: ನೆರೆಯ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ-ಕನೇರಿ ಕಾಡಸಿದ್ದೇಶ್ವರ ಮಠದ ಅದೃಶ್ಯ

ಕಾಡಸಿದ್ದೇಶ್ವರ ಸ್ವಾಮೀಜಿ ಯವರ ವಿಜಯಪುರ ಜಿಲ್ಲಾ ಪ್ರವೇಶವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ.ಆನಂದ್ ಕೆ. ಆದೇಶ ಹೊರಡಿಸಿದ್ದಾರೆ. ಸ್ವಾಮೀಜಿ ಅವರಿಗೆ ಇದೇ ಅ. 16ರಿಂದ ಡಿ.16ರ ವರೆಗೆ ವಿಜಯಪುರ ಜಿಲ್ಲಾ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ಆದೇಶ ದಲ್ಲಿ ತಿಳಿಸಲಾಗಿದೆ. ಮಹಾರಾಷ್ಟ್ರದ ಜತ್ತ ತಾಲೂಕಿ ನಲ್ಲಿ ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ, 'ಬಸವ ಸಂಸ್ಕೃತಿ ಉತ್ಸವ' ದಲ್ಲಿ ಭಾಗವಹಿಸಿದ ಲಿಂಗಾಯತ ಸ್ವಾಮೀಜಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು.

ಗುಜರಾತ್ ಸಂಪುಟಕ್ಕೆ ಭರ್ಜರಿ ಸರ್ಜರಿ

ಅಹಮದಾಬಾದ್: ಗುಜರಾತ್ ರಾಜಕೀಯ ದಲ್ಲಿ ಭಾರೀ ಬದಲಾವಣೆ ಆಗು



ತ್ತಿದೆ. ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸಚಿವ ಸಂಪುಟದ ಪುನರ್ರಚನೆ ಮಾಡುತ್ತಿದ್ದಾರೆ. ಹಾಗಾಗಿ, ಭಾರತೀಯ ಜನತಾ ಪಕ್ಷ ನೇತೃತ್ವದ ರಾಜ್ಯ ಸರಕಾರದಲ್ಲಿನ ಎಲ್ಲಾ 16 ಸಚಿವರು ರಾಜೀನಾಮೆ ನೀಡಿದ್ದಾರೆ. ಸಚಿವ ಸಂಪುಟ ಪುನರ್ರಚನೆ ಆಗಲಿದ್ದು, ಶುಕ್ರವಾರ ಮಧ್ಯಾಹ್ನ 12.39ಕ್ಕೆ ಸಂಪುಟದ ನೂತನ ಸಚಿವರ ಪ್ರಮಾಣವಚನ ಸಮಾರಂಭ ನಡೆಯಲಿದೆ. ಸಂಪುಟ ಪುನರ್ರಚನೆ ಆಗುವುದಿದ್ದರೂ ಪ್ರಸ್ತುತ ಇರುವವವರಲ್ಲಿ ಐವರು ಸಚಿವ ರನ್ನು ಹೊಸ ಸಂಪುಟಕ್ಕೂ ಸೇರಿಸಿಕೊಳ್ಳುವ ನಿರೀಕ್ಷೆಯಿದೆ. 16 ಮಂದಿ ಹೊಸಬರಿಗೆ ಅವಕಾಶ ಮಾಡಿಕೊಡಲು ಸಿಎಂ ನಿರ್ಧ ರಿಸಿದ್ದಾರೆ. ಇಬ್ಬರು ಮಹಿಳೆಯ ರಿಗೂ ಅವಕಾಶ ಮಾಡಿಕೊಡಲಿದ್ದಾರೆ ಎಂದು ತಿಳಿದುಬಂದಿದೆ. ಹೊಸ ಸಂಪುಟದಲ್ಲಿ 23 ಸದಸ್ಯರಿರುತ್ತಾರೆ ಎಂದು ನಿರೀಕ್ಷಿಸಲಾಗಿದೆ.

ಸದ್ಯವೇ ಡಿಪಿಆರ್: ಸಚಿವ ಎಚ್‌ಡಿಕೆ ಮಾಹಿತಿ

ಎಚ್‌ಎಂಟಿಗೆ ಮರು ಜೀವ

ಮಂಡ್ಯ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ರಾಜ್ಯದ ಪ್ರತಿಷ್ಠಿತ ಎಚ್‌ಎಂಟಿ ಮತ್ತು ಭದ್ರಾವತಿಯ ಸರ್ ಎಂ.ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಿಗೆ ಮರುಜೀವ ಕೊಡಲು ತೀರ್ಮಾನಿಸಿದ್ದು, ಈ ಕಾರ್ಯಕ್ಕೆ ಅಗತ್ಯ ಸಿದ್ಧತೆ ಆರಂಭಿಸಲಾಗಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಗುರುವಾರ ನಗರದಲ್ಲಿ ಸುದ್ದಿಗೋಷ್ಠಿ ಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಎರಡು ಕಾರ್ಖಾನೆಗಳ ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ಸಂಬಂಧಿಸಿದವರೊಂದಿಗೆ ಮಾತುಕತೆ ನಡೆಲಾಗಿದೆ ಎಂದು ಸ್ಪಷ್ಟಪಡಿಸಿದರು.

ನೀತಿ ಆಯೋಗದ ಸದಸ್ಯ ಡಾ.ವಿ.ಕೆ.ಸಾರಸ್ವತ ಅವರು ಎಚ್‌ಎಂಟಿ ಕಾರ್ಖಾನೆಯ ಪುನಶ್ಚೇತನದ ಬಗ್ಗೆ ಮಹತ್ವದ ವರದಿ ನೀಡಿದ್ದಾರೆ. ಬೃಹತ್ ಕೈಗಾರಿಕೆ ಸಚಿವಾಲಯದ ಉನ್ನತ ಅಧಿಕಾರಿಗಳು, ಎಚ್‌ಎಂಟಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ವಿ.ಕೆ.ಸಾರಸ್ವತ ಅವರೊಂದಿಗೆ ನವದೆಹಲಿಯಲ್ಲಿ ಹಲವು ಸುತ್ತಿನ ಉನ್ನತ ಮಟ್ಟದ ಸಭೆಗಳನ್ನು ನಡೆಸಲಾಗಿದೆ. ಜಪಾನ್ ದೇಶದಿಂದ ತಾಂತ್ರಿಕ ಸಹಕಾರ ಪಡೆಯುವ ಬಗ್ಗೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದ ತಂಡವನ್ನು ಆ ದೇಶಕ್ಕೆ ಕಳಿಸಿದ್ದೆ ಎಂದು ಮಾಹಿತಿ ಎಚ್ಡಿಕೆ ನೀಡಿದರು.

ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆ ಮಾಡಬೇಕೆನ್ನುವುದು ಜನರ ಅಭಿಲಾಷೆಯಾಗಿದೆ. ರಾಜ್ಯ ಸರಕಾರದ ಸಹಕಾರ ಕೇಳಿದ್ದೇನೆ. ದೆಹಲಿ ಮಟ್ಟದಲ್ಲಿಯೂ ಮಂಡ್ಯದಲ್ಲಿ ಉದ್ಯಮ ಸ್ಥಾಪಿಸುವ ಬಗ್ಗೆ ಹಲವಾರು ಉದ್ದಿಮೆದಾರರ ಜತೆ ಮಾತುಕತೆ ನಡೆಸಿದ್ದೇನೆ ಎಂದು ಕೇಂದ್ರ ಸಚಿವರು ಮಾಹಿತಿ ನೀಡಿದರು. ಜಿಲ್ಲೆಯ ಹೆಗ್ಗುರುತುಗಳಲ್ಲಿ ಒಂದಾಗಿರುವ ಮೈಶುಗರ್ ಶಾಲೆಯ ಅಭಿವೃದ್ಧಿಗೆ ಶೀಘ್ರವೇ 10 ಕೋಟಿ ರೂ. ಒದಗಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ವೋಟ್ ಚೋರಿ ತನಿಖೆ ತೀವ್ರ

ಕಲಬುರಗಿ: ರಾಜ್ಯದಲ್ಲಿ ಸಂಚಲನ ಮೂಡಿಸಿರುವ ವೋಟ್ ಚೋರಿ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳದ ಅಧಿಕಾರಿಗಳು ಕಲಬುರಗಿಯಲ್ಲಿ

ಸಾವಿರಾರು ವೋಟರ್ ಐಡಿಗಳನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರಿನಿಂದ ಕಲಬುರಗಿಗೆ ಆಗಮಿಸಿರುವ ಎಸ್‌ಐಟಿ ಅಧಿಕಾರಿಗಳು ಬುಧವಾರ ನಗರದ ಐದು ಪ್ರಮುಖ ಸ್ಥಳಗಳ ಮೇಲೆ ದಾಳಿ ನಡೆಸಿ ಶೋಧ ಕಾರ್ಯ ನಡೆಸಿದ್ದಾರೆ. ಈ ವೇಳೆ ಟಿಪ್ಪು ಚೌಕ್ ಬಳಿಯ ಅಸ್ಲಂ ಎಂಬಾತನ ಮನೆಯಲ್ಲಿ ಆಳಂದ ಮತಕ್ಷೇತ್ರಕ್ಕೆ ಸಂಬಂಧಿಸಿದ ಸಾವಿರಾರು ಮತದಾರರ ಚೀಟಿ ಪತ್ತೆಯಾಗಿವೆ. ಅಸ್ಲಂ ಮನೆಯಿಂದ 15 ಮೊಬೈಲ್ ಫೋನ್‌ಗಳು ಮತ್ತು ಏಳು ಲ್ಯಾಪ್ ಟಾಪ್‌ಗಳನ್ನು ಜಪ್ತಿ ಮಾಡಿಕೊಳ್ಳ ಲಾಗಿದೆ. ಕಲಬುರಗಿ ನಗರದ ಜಂಜಂ ಕಾಲೋನಿಯಲ್ಲಿರುವ ಅಕ್ರಂ ಎಂಬಾತನ ನಿವಾಸದ ಮೇಲೂ ಎಸ್‌ಐಟಿ ಅಧಿಕಾರಿಗಳು ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದ್ದಾರೆ. ಎಸ್ಪಿ ದರ್ಜೆಯ ಅಧಿಕಾರಿಗಳು ಸೇರಿದಂತೆ ಹಲವು ಅಧಿಕಾರಿಗಳು ಈ ದಾಳಿ ಮತ್ತು ಪರಿಶೀಲನೆಯಲ್ಲಿ ಭಾಗವಹಿಸಿದ್ದು ಇನ್ನಷ್ಟು ಜನರನ್ನು ವಶಕ್ಕೆ ಪಡೆಯುವ ನಿರೀಕ್ಷೆ ಇದೆ.

ರಷ್ಯಾದಿಂದ ತೈಲ ಖರೀದಿ ಸ್ಥಗಿತಕ್ಕೆ ಭಾರತ ಒಪ್ಪಿದೆ ಎಂದ ಡೊನಾಲ್ಡ್

ಮುಗಿಯದ ಟ್ರಂಪ್ ಕುಚೋದ್ಯ

ವಾಷಿಂಗ್ಟನ್: ಭಾರತ ಮತ್ತು ಪ್ರಧಾನಿ ನರೇಂದ್ರ ಮೋದಿಯವರನ್ನು ಹೊಗಳುತ್ತಲೇ ಮಿತ್ರ ರಾಷ್ಟ್ರಕ್ಕೆ ಮುಜುಗರವನ್ನುಂಟು

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಚಾಳಿ ಮುಂದುವರಿಸಿದ್ದಾರೆ. ಭಾರತ ಇನ್ನು ಮುಂದೆ ರಷ್ಯಾದಿಂದ ತೈಲ ಖರೀದಿಸುವುದಿಲ್ಲ ಎಂದು ಸ್ವತಃ ಪ್ರಧಾನಿ ಮೋದಿ ಅವರೇ ತಮಗೆ ಭರವಸೆ ನೀಡಿದ್ದಾರೆಂದೂ ಟ್ರಂಪ್ ಹೇಳಿಕೊಂಡಿದ್ದಾರೆ. ಆದರೆ ಭಾರತ ಈ ಹೇಳಿಕೆಯನ್ನು ನಿರಾಕರಿಸಿದೆ. ಶ್ವೇತಭವನದ ಓವಲ್ ಆಫೀಸ್‌ನಲ್ಲಿ ಸುದ್ದಿಗೋಷ್ಠಿ ನಡೆಸಿದ ಟ್ರಂಪ್‌ಗೆ ಸುದ್ದಿಗಾರರು, 'ಭಾರತವನ್ನು ವಿಶ್ವಾಸಾರ್ಹ ಪಾಲುದಾರ ಎಂದು ಪರಿಗಣಿಸುವಿರಾ?' ಎಂದು ಪ್ರಶ್ನಿಸಿದಾಗ, ಖಂಡಿತಾ, ಪ್ರಧಾನಿ ಮೋದಿ ನನ್ನ ಅತ್ಯುತ್ತಮ ಸ್ನೇಹಿತ. →10

ಟ್ರಂಪ್‌ಗೆ ಹೆದರಿದ ಮೋದಿ: ರಾಹುಲ್

ಟ್ರಂಪ್ ಹೇಳಿಕೆ ಬೆನ್ನಿಗೇ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪ್ರಧಾನಿ ಮೋದಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಭಯ ಪಡುತ್ತಿದ್ದಾರೆ. ಭಾರತ ಸರಕಾರ ಕೈಗೊಳ್ಳಬೇಕಾದ ಕೆಲವು ಮಹತ್ವದ ವಿಚಾರಗಳಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಅಮೆರಿಕ ಅಧ್ಯಕ್ಷರಿಗೆ ಹೊರಗುತ್ತಿಗೆ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ.

ಡಿಕೆಶಿ, ರಾಮಲಿಂಗಾ ರೆಡ್ಡಿ ಭಾಗಿ, ಬಿಗಿ ಭದ್ರತೆ

ಇಂದು ಕಾವೇರಿ ತೀರ್ಥೋದ್ಭವ

ಮಡಿಕೇರಿ: ಜೀವನದಿ ಕಾವೇರಿಯ ಪವಿತ್ರ ತೀರ್ಥೋದ್ಭವಕ್ಕೆ ಕ್ಷಣಗಣನೆ ಆರಂಭವಾಗಿದೆ. ಕಾವೇರಿ ಉಗಮಸ್ಥಾನ ತಲಕಾವೇರಿಯಲ್ಲಿ ಶುಕ್ರವಾರ

(ಅ.17) ಮಧ್ಯಾಹ್ನ 1:44ಕ್ಕೆ ಸಲ್ಲುವ ಮಕರ ಲಗ್ನದಲ್ಲಿ ಕಾವೇರಿಯು ತೀರ್ಥರೂಪಿಣಿಯಾಗಿ ಭಕ್ತರಿಗೆ ದರ್ಶನ ನೀಡಲಿದ್ದಾಳೆ. ಸಹಸ್ರಾರು ಭಕ್ತರು ತೀರ್ಥಸ್ವರೂಪಿಣಿ ಕಾವೇರಿ ಮಾತೆಯನ್ನು ಕಣ್ತುಂಬಿಕೊಳ್ಳಲು ಕಾತರರಾಗಿದ್ದಾರೆ. ಒಂದು ತಿಂಗಳ ಕಾಲ ನಡೆಯುವ ಕಾವೇರಿ ತುಲಾ ಸಂಕ್ರಮಣ ಜಾತ್ರೆಗೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ಡಿಸಿಎಂ ಡಿ.ಕೆ ಶಿವಕುಮಾರ್, ಮುಜರಾಯಿ ಇಲಾಖೆಯ ಸಚಿವ ರಾಮಲಿಂಗಾ ರೆಡ್ಡಿ, ವಿರಾಜಪೇಟೆ ಶಾಸಕ ಎ.ಎಸ್ ಪೊನ್ನಣ್ಣ, ಮಂಥರ್ ಗೌಡ ಸೇರಿದಂತೆ ಹಲವಾರು ಗಣ್ಯರು ಸಮಾರಂಭದಲ್ಲಿ ಭಾಗಿಯಾಗಲ್ಲಿದ್ದಾರೆ. ವರ್ಷಕ್ಕೊಮ್ಮೆ ಘಟಿಸುವ ಈ ವಿಸ್ಮಯವನ್ನು ಕಣ್ತುಂಬಿಕೊಳ್ಳಲು ದೇಶದ ನಾನಾ ಭಾಗಗಳಿಂದ ಸಹಸ್ರಾರು ಸಂಖ್ಯೆಯ ಭಕ್ತರು ಆಗಮಿಸಲಿದ್ದಾರೆ. ಮಂಡ್ಯ, ಮೈಸೂರು, ಬೆಂಗಳೂರು ಸೇರಿದಂತೆ ನಾನಾ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ತಮಿಳು ನಾಡಿನಿಂದ ನೂರಾರು ಭಕ್ತರು ಈಗಾಗಲೇ ತಲಕಾ ವೇರಿ ತಲುಪಿದ್ದಾರೆ. ಭಕ್ತರ ದರ್ಶನಕ್ಕೆ ತಲಕಾವೇರಿ ಹಾಗೂ ಭಾಗಮಂಡಲದಲ್ಲಿ ಸಕಲ ಸಿದ್ಧತೆ ನಡೆದಿದೆ.

ಸಮಾಚಾರ ಸಣ್ಣದಲ್ಲ

ಉಪನ್ಯಾಸಕರ ನೇಮಕದಲ್ಲಿ ಲೋಪ: ನ್ಯಾಯಕ್ಕೆ ಆಗ್ರಹ

ಹಾವೇರಿ: ಸರಕಾರಿ ಪದವಿ ಪೂರ್ವ ಕಾಲೇಜಗಳಿಗೆ ಗೆಸ್ಟ್ ಲಕ್ಚರರ್ಸ್ ನೇಮಕ ಮಾಡಿಕೊಳ್ಳುವಂತೆ ರಾಜ್ಯ ಸರಕಾರ ಅವಕಾಶ ನೀಡಿದ್ದು, ನೇಮಕಾತಿಯ ಯಾವುದೇ ನಿಮಯಗಳನ್ನು ಪಾಲಿಸದೇ ಅರ್ಹರಿಗೆ ಅನ್ಯಾಯ ಮಾಡಿರುವ ಹಾನಗಲ್ಲ ಸರಕಾರಿ ಪದವಿ ಪೂರ್ವ ಕಾಲೇಜ ಪ್ರಿನ್ಸಿಪಲ್ ಅವರ ಮೇಲೆ ಕಾನೂನು ಕ್ರಮ ಜರುಗಿಸಬೇಕು ಎಂದು ನೊಂದ ಉಪನ್ಯಾಸಕ ರಾಜು ಮರಡಿ ಡಿಡಿಪಿಯು ಅವರಿಗೆ ಮನವಿ ಸಲ್ಲಿಸಿ ನ್ಯಾಯ ಕೊಡಿಸುವಂತೆ ಹಕ್ಕೊತ್ತಾಯ ಮಾಡಿದ್ದಾರೆ. ಹಾನಗಲ್ಲ ಸರಕಾರಿ ಪದವಿ ಪೂರ್ವ ಕಾಲೇಜಗೆ ಈ ಮೊದಲೇ ಇತಿಹಾಸ ವಿಷಯಕ್ಕೆ ನಾನು ಅರ್ಜಿ ಸಲ್ಲಿಸಿದ್ದು ಮೆರಿಟ್ ಆಧಾರ ಮೇಲೆ ನೇಮಕ ಮಾಡಿಕೊಳ್ಳಬೇಕು ಅನ್ನುವ ಸರಕಾರ ನಿಯಮದಂತೆ ನಾನು ಹೆಚ್ಚಿನ ಮೆರಿಟ್ ಹೊಂದಿದ್ದು ನನಗೆ ಆದ್ಯತೆ ನೀಡದೇ ನನಗಿಂತ ಕಡಿಮೆ ಮೆರಿಟ್ ಪಡೆದವರನ್ನು ಅಲ್ಲಿನ ಪ್ರಿನ್ಸಿಪಾಲ್ ನೇಮಕಾತಿ ಮಾಡಿ ನನಗೆ ಅನ್ಯಾಯ ಮಾಡಿದ್ದಾರೆ ಇದು ಖಂಡನೀಯ ನನಗೆ ನ್ಯಾಯ ಕೊಡದೇ ಹೋದರೇ ಅಮರಣ ಉಪವಾಸ ಸತ್ಯಾಗ್ರಹವನ್ನು ಕಾಲೇಜ ಎದುರೇ ಮಾಡುತ್ತೇನೆ ಎಂದು ಎಚ್ಚರಿಕೆ ನೀಡಿದ್ದಾರೆ. ಕಾಲೇಜ ಪ್ರಿನ್ಸಿಪಲ್ ಅವರು ಮಾಡಿರುವ ಅನ್ಯಾಯದಿಂದ ನನ್ನನ್ನು ನಂಬಿರುವ ಕುಟುಂಬ ಬೀದಿಗೆ ಬಂದಿದೆ. ತಕ್ಷಣವೇ ನನಗೆ ನೇಮಕಮಾಡಿಕೊಳ್ಳಬೇಕು ಎಂದು ಆಗ್ರಹ ಮಾಡಿದ್ದಾರೆ.

ಬ್ಯಾಡ್ಮಿಂಟನ್ ಲೀಗ್ ಪಂದ್ಯಾವಳಿ ಆಯೋಜನೆ

ಶಿರಸಿ: ಇಲ್ಲಿನ ಪೂಗ ಟ್ರಸ್ಟ್ ವತಿಯಿಂದ ರಾಜ್ಯಮಟ್ಟದ ಎಚ್ ಬಿಎಲ್ 2025 ಬ್ಯಾಡ್ಮಿಂಟನ್ ಲೀಗ್ ಪಂದ್ಯಾವಳಿಯನ್ನು ನಗರದಲ್ಲಿ ಆಯೋಜಿಸಲಾಗಿದೆ. ಅಕ್ಟೋಬರ್18 ಮತ್ತು 19ರಂದು ನಗರದ ಅರಣ್ಯ ಭವನದಲ್ಲಿ ಲೀಗ್ ಮಾದರಿಯ ಪಂದ್ಯಗಳು ನಡೆಯಲಿದೆ. ಒಟ್ಟೂ ಐದು 5 ತಂಡಗಳ ನಡುವೆ ಸ್ಪರ್ಧೆ ಜರುಗಲಿದೆ.ಕರ್ನಾಟಕದ ವಿವಿಧ ಭಾಗಗಳಿಂದ ಬಂದಿರುವ ರಾಜ್ಯಮಟ್ಟದ ಪ್ರತಿಭಾವಂತ ಬ್ಯಾಡ್ಮಿಂಟನ್ ಆಟಗಾರರು ಭಾಗವಹಿಸುವ ಪಂದ್ಯಾವಳಿಯನ್ನು18ರ ಬೆಳಗ್ಗೆ 10:30ಕಕೆ ಜೀವ ಜಲಕಾರ್ಯಪಡೆ ಅಧ್ಯಕ್ ಶ್ರೀನಿವಾಸ್ ಹೆಬ್ಬಾರ ಉದ್ಘಾಟಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಹವ್ಯಕ ಸಮುದಾಯದ ಕ್ರೀಡಾ ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮ ಕೂಡ ಇರಲಿದೆ.ಬಹುಮಾನ ವಿತರಣೆಯು ಅ.19ರ ಸಂಜೆ 7ಕ್ಕೆ ನಡೆಯಲಿದೆ ಎಂದು ಪೂಗ ಟ್ರಸ್ಟ್ ಕಾರ್ಯದರ್ಶಿ ಗಣಪತಿ ಹೆಗಡೆ 88803 20222 ತಿಳಿಸಿದ್ದಾರೆ.

ಮಾನಸಿಕ ಆರೋಗ್ಯ ಕಚೇರಿ ಉದ್ಘಾಟನೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಮಾನಸಿಕ ಆರೋಗ್ಯ ಪರಿಶೀಲನ ಮಂಡಳಿಯ ಕಚೇರಿಯನ್ನು ಕ್ರಿಮ್ಸ್ ಭೋಧಕ ಆಸ್ಪತ್ರೆಯ ಮನೋ ವೈದ್ಯಕೀಯ ವಿಭಾಗದ ಕೊಠಡಿ ಸಂಖ್ಯೆ 111 ರಲ್ಲಿಅಧಿಕೃತವಾಗಿ , ಅಧ್ಯಕ್ಷರು ಹಾಗೂ ಒಂದನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾದ ಕಿರಣ್ ಕಿಣಿ ರವರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ , ದಿವ್ಯಶ್ರೀ ಸಿಎಂ, ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರವಾರ., ಡಾಕ್ಟರ್ ವಿಜಯರಾಜ ಎನ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಮನೋವೈದ್ಯಕೀಯ ವಿಭಾಗ, ಡಾಕ್ಟರ್ ಅಕ್ಷಯ ಪಾಠಕ, ಸಹ ಪ್ರಾಧ್ಯಾಪಕರು ಮನೋ ವೈದ್ಯಕೀಯ ವಿಭಾಗ, ಬಸವರಾಜ್ ಎಸ್. ಮುಳಗುಂದ,ಮನೋ ಸಾಮಾಜಿಕ ತಜ್ಞರು, ಮನೋ ವೈದ್ಯಕೀಯ ವಿಭಾಗ, ಕ್ರಿಮ್ಸ್ ಕಾರವಾರ ರವರು ಉಪಸ್ಥಿತರಿದ್ದರು. ಉದ್ಘಾಟನಾ ಕಾರ್ಯಕ್ರಮದ ನಂತರ ಜಿಲ್ಲಾ ಮಾನಸಿಕ ಆರೋಗ್ಯ ಪರಿಶೀಲನ ಮಂಡಳಿಯ ಸಭೆಯನ್ನು ನಡೆಸಲಾಯಿತು.

ಮತದಾರರ ಪಟ್ಟಿಗೆ ಹೆಸರು ನೋಂದಣಿಗೆ ಸಲಹೆ

ಹಾವೇರಿ: ಮತದಾರರ ನೋಂದಣಿ ನಿಯಮಗಳು 1960 ರ 31(4)ನೇ ನಿಯಮದ ಅನುಸಾರ ಪಶ್ಚಿಮ ಪದವೀಧರರ ಮತಕ್ಷೇತದ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ನೋಂದಣಿ ನಿಯಮಗಳ ಅನ್ವಯ ನಮೂನೆ-18 ರಲ್ಲಿ ಅರ್ಜಿ ಮತದಾರರ ನೋಂದಣಾಧಿಕಾರಿಗಳ, ಸಂಬಂಧಪಟ್ಟ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಅಥವಾ ನಿಯೋಜಿತ ಅಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದು ಬೆಳಗಾವಿ ವಿಭಾಗದ ಪ್ರಾದೇಶಿ ಆಯುಕ್ತರು ಹಾಗೂ ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರ ಮತದಾರರ ನೋಂದಣಾಧಿಕಾರಿಗಳು ತಿಳಿಸಿದ್ದಾರೆ. ಅರ್ಹ ವ್ಯಕ್ತಿಗಳು ತಮ್ಮ ಹೆಸರನ್ನು ಇದುವರೆಗೂ ಸೇರಿಸದೇ ಇದ್ದಲ್ಲಿ ನಿಗದಿತ ನಮೂನೆ 18ರಲ್ಲಿ ದಿನಾಂಕ 6 ನವೆಂಬರ್2025 ರೊಳಗೆ (ಅಂದರೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ) ಅಥವಾ ಅದಕ್ಕೂ ಮುಂಚೆ ಅರ್ಜಿಗಳನ್ನು ಸಲ್ಲಿಸಬಹುದು.

{ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ರಾಜ್ಯ ಸರಕಾರ ಗ್ಯಾರಂಟಿ ಕೊಟ್ಟು ಜನರ ಬದುಕು ಹಸನು ಮಾಡೋದು ಎಂದರೆ ಹೀಗೇನಾ? ಜನರ ಮೇಲೆ ತೆರಿಗೆ ವಿಧಿಸಿ 6ನೇ ಗ್ಯಾರಂಟಿ ಕೊಡಲು ಹೊರಟಿದ್ದಾರೆ. ಈ ಸರ್ಕಾರ ಬಂದ ಮೇಲೆ ನಿರಂತರವಾಗಿ ಸುಲಿಗೆ ಮಾಡುತ್ತಿದೆ. ಕೇವಲ ಹಣ ಮಾಡುವುದಕ್ಕೆ ಸರಕಾರ ಹೊರಟಿದೆ. ಪ್ರತಿಯೊಂದರಲ್ಲೂ ದುಡ್ಡು ಮಾಡುವ ಬಗ್ಗೆಯಷ್ಟೇ ಆಲೋಚನೆ ಮಾಡುತ್ತಿದೆ. ,



ಹೋರಾಟ ಜನಾಂದೋಲನವಾಗಿ ರೂಪುಗೊಳ್ಳಬೇಕು | ಶೀಘ್ರ ವಿಜ್ಞಾನಿಗಳ ಸಮ್ಮೇಳನ ಆಯೋಜನೆ: ಅನಂತ ಹೆಗಡೆ ಅಶೀಸರ

ಬೇಡ್ತಿ-ವರದಾ ಜೋಡನೆ ವಿರೋಧಿಸಿ ಬೈಕ್ ರ‍್ಯಾಲಿ

ಶಿರಸಿ: ಶಾಲ್ಮಲಾ ವರದಾ ಜೋಡಣೆ ಬೇಡ, ಸಹಸ್ರಲಿಂಗ ಉಳಿಸಿ, ದೊಡ್ಡ ದೊಡ್ಡ ಯೋಜನೆ ಬೇಡ. ಇಲ್ಲಿಯ ನೀರು ಇಲ್ಲಿಯೇ ಬಳಸಿ, ನಮ್ಮ ನೀರು ನಮ್ಮ ಹಕ್ಕು, ಪಶ್ಚಿಮ ಘಟ್ಟ ಬದುಕಿನ ಉಸಿರು ಎಂಬ ಘೋಷವಾಕ್ಯದೊಂದಿಗೆ ಸೋಂದಾ, ಸದಾಶಿವಳ್ಳಿ, ಭೈರುಂಬೆ ಗ್ರಾಮ ಪಂಚಾಯತ ವ್ಯಾಪ್ತಿಯಿಂದ ಹೊರಟ ಬೈಕ್ ರ‍್ಯಾಲಿಯು ಸಹಸ್ರಲಿಂಗ್ ದಲ್ಲಿ ನಡೆಯಿತು.

ಅನಂತ ಹೆಗಡೆ ಅಶೀಸರ ಪ್ರಾಸ್ತಾವಿಕ ಮಾತನಾಡಿ, ನದಿ ಜೋಡಣೆಯ 21 ಶತಮಾನದ ಆರಂಭದಲ್ಲಿ, ಬಹಳ ದೊಡ್ಡ ಪ್ರಮಾಣದಲ್ಲಿ ಆಣೆಕಟ್ಟು ನಿರ್ಮಾಣಕ್ಕೆ ಕೈಹಾಕಿದಾಗ ವಿರೋಧಿಸಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ಜನಸಂಪನ್ಮೂಲ ಇಲಾಖೆಯು ರೂಪಿಸಿದ ನೀತಿಯಿಂದ ಯಾರಿಗೂ ಉಪಯೋಗವಿಲ್ಲ, ಹಾವೇರಿ ಜಿಲ್ಲೆಯಲ್ಲಿ ಯೋಜನೆ ಬೇಕು ಎಂಬ ಸಭೆ ನಡೆದಿದೆ. ಬೆಂಗಳೂರಿನಲ್ಲಿ ಅಧಿಕಾರಿಗಳನ್ನು ಭೇಟಿಯಾದಾಗ ತಯಾರಿ ನಡೆದಿದೆ ಎಂಬುದನ್ನು ಖಚಿತಪಡಿಸಿಕೊಂಡು ವಿಶೇಷ ಸಭೆ ನಡೆಸಲಾಗಿತ್ತು. ಅಲ್ಲಿ ಅನಧಿಕೃತ ನಿರ್ಣಯ ತೆಗೆದುಕೊಂಡಿದ್ದೇವೆ. ಅಘನಾಶಿನಿ-ವೇದಾವತಿ ನದಿ ಯೋಜನೆ ತಯಾರಿ ಆಗುತ್ತಿದೆ. ಸರ್ಕಾರದ ಮೇಲೆ ಒತ್ತಡ ಹೇರುವಲ್ಲಿ ಬೃಹತ್ ಜನಾಂದೋಲ ರೂಪಿಸಲಾಗಿದೆ. ಯಲ್ಲಾಪುರ, ಶಿರಸಿ, ಬೇಡ್ತಿ, ವರದಾ, ಅಘನಾಶಿನಿ ಸಿದ್ದಾಪುರ ಭಾಗದಲ್ಲಿ ಎಲ್ಲಿ ಪೈಪ್ ಲೈನ್, ವಿದ್ಯುತ್ ಲೈನ್ ಬಗ್ಗೆ ಮಾಹಿತಿ ಇಲ್ಲ, 18 ಸಾವಿರ ಕೋಟಿ ರೂ. ಯೋಜನೆಗೆ ಹಣ ಬಿಡುಗಡೆಯಾಗಿದೆ. ಅರಣ್ಯ ಇಲಾಖೆಯ ಒಪ್ಪಿಗೆ ಕೇಂದ್ರ ಸರ್ಕಾರದ ಸಿಕ್ಕಿಲ್ಲ. ಆರಂಭಿಕ ಹಂತದಲ್ಲಿದ್ದೇವೆ.

ಹೋರಾಟ ಜನಾಂದೋಲನವಾಗಿ ರೂಪುಗೊಳ್ಳಬೇಕು. ಮುಖ್ಯಮಂತ್ರಿ ಹಾಗೂ ಕೇಂದ್ರ ಸರಕಾರಕ್ಕೆ ನಮ್ಮ ನಿಯೋಗವನ್ನು ಕರೆದುಕೊಂಡು ಹೋಗಲು ಜನಪ್ರತಿನಿಧಿಗಳ ಅವಶ್ಯಕ. ಗ್ರಾಪಂ, ಸಹಕಾರಿ ಸಂಘಗಳ ಯೋಜನೆ ವಿರೋಧಿಸಿ ನಿರ್ಣಯ ಮಾಡಲಾಗಿದೆ. ಇದನ್ನು ಪರಿಗಣಿಸಿ, ಸರ್ಕಾರದ ಮೇಲೆ ಒತ್ತಡ ತರಬೇಕು. ವೈಜ್ಞಾನಿಕ ಸಂಗತಿ ಮಂಡಿಸ ಬೇಕಾಗಿದೆ. ಆದ್ದರಿಂದ ವಿಜ್ಞಾನಿಗಳ ಸಮ್ಮೇಳನ ಮಾಡುತ್ತೇವೆ. ಬಯಸಲುಸೀಮೆಗಳಲ್ಲಿ ಕಳೆದ 50 ವರ್ಷಗಳಿಂದ ನಡೆಸುತ್ತಿದ್ದೇವೆ. ಬಜೆಟ್ ನಲ್ಲಿ ಅರ್ಧದಷ್ಟು ಹಣ ನೀರಾವರಿ ಯೋಜನೆಗೆ ಮೀಸಲಿಡಲಾಗುತ್ತಿದೆ. ಎತ್ತಿನಹೊಳೆ ಯೋಜನೆಯಿಂದ ಯಾರಿಗೂ ಉಪಯೋಗವಾಗಿಲ್ಲ. ಕಳೆದ 50 ವರ್ಷಗಳಲ್ಲಿ ನೀರಾವರಿ ಯೋಜನೆಯ ಫಲವಾಗಿರುವುದನ್ನು ನೀರಾವರಿ ಇಲಾಖೆಯ ಮುಖ್ಯಸ್ಥರು ಬಿಡುಗಡೆಗೊಳಿಸಬೇಕು ಎಂದು ಸವಾಲೆಸೆದರು.

ಶಿವಾನಂದ ಕಳವೆ ಮಾತನಾಡಿ, ಹರಿಯುವ ನೀರು, ಕಲ್ಲುಬಂಡೆ ನೋಡಿದರೆ ಭಕ್ತಿ ಭಾವನೆ ಮೂಡುತ್ತದೆ. ಸರ್ಕಾರಕ್ಕೆ ಮಾತ್ರ ಇಲ್ಲಿ ಎಷ್ಟು ಟಿ.ಎಂಸಿ ನೀರು ಕಾಣುತ್ತದೆ. ಕೆರೆಯ ಮೂಲಕ ಕೃಷಿಗೆ, ಕುಡಿಯುವುದಕ್ಕೆ ರಾಷ್ಟ್ರ ಮಟ್ಟದಲ್ಲಿ ಹೆಸರು ಪಡೆದಿದ್ದೇವೆ. ಆಣೆಕಟ್ಟು, ಕೇಂದ್ರೀಕೃತ ಯೋಜನೆ ಬೇಕು ಎಂಬುದರಿಂದ ಕೆರೆ ಯೋಜನೆಗಳು ಕಳೆದುಕೊಂಡೆವು. ಶೇ.75 ರಷ್ಟು ಭೂಮಿ 300 ರಿಂದ 750 ಮಿಲಿ ಮೀಟರ್‌ಮಳೆ ಬೀಳುವ ಪ್ರದೇಶವಿದೆ. 60 ರಷ್ಟು ಭೂಮಿಗೆ ನೀರು ಕೊಡಲು ಸಾಧ್ಯವಿಲ್ಲ ಎಂಬ ಅಂಕಿಅಂಶವಿದೆ.

ಬರಗಾಲದ ಪರಿಹಾರಕ್ಕೆ ನೀರು ನೀಡುವುದು ಉದ್ದೇಶ ಎಂಬುದಕ್ಕೆ ಇಂತಹ ಯೋಜನೆ

ಮಲೆನಾಡಿಗೆ ನೀರಾವರಿ ಯೋಜನೆಯಿಲ್ಲ. ಕಾಡನ್ನು ಉಳಿಸುವುದಕ್ಕೆ ದೊಡ್ಡ ಕೊಡುಗೆ ನೀಡಿದ್ದೇವೆ. ಕಾಡು ಉಳಿಸುವ ಕಾಳಜಿಯಿಲ್ಲ. ನೀರು ತೆಗೆದುಕೊಂಡು ಹೋಗವ ತರಾತುರಿಯಲ್ಲಿದೆ. ದೊಡ್ಡ ಮಾದರಿಯಲ್ಲಿ ಸರ್ಕಾರ ಹೆಚ್ಚು ಗಮನವಹಿಸುತ್ತದೆ. ಅದರಲ್ಲಿ ಲಾಭ ಹೆಚ್ಚಿದೆ. ಸರ್ಕಾರ ಕೆರೆ ಅಭಿವೃದ್ಧಿ ಬಗ್ಗೆ ಗಮನವಹಿಸುತ್ತಿಲ್ಲ. ಕಾಡು ಉಳಿಸಿಕೊಳ್ಳುವ ಜತೆ ನದಿ ಉಳಿಸಿಕೊಳ್ಳಬೇಕು. ಖಾಲಿ ಪೈಪ್ ಯೋಜನೆಗಳ ಬಗ್ಗೆ ಆಸಕ್ತಿ ವಹಿಸುತ್ತೇವೆ. ಹೋರಾಟ ನಿರಂತರವಾಗಿದ್ದು, ಜಿಲ್ಲೆಯ ಕೆರೆಯ ಪುನರುಜ್ಜೀವನ ಮಾಡಲು ಸರ್ಕಾರ ಲಕ್ಷ್ಯವಹಿಸಬೇಕು. ಇಷ್ಟು ದಿನ ಕೆರೆಯಲ್ಲಿ ಹೂಳು ತುಂಬಿದೆ ಎಂದು ಕೊಂಡಿದ್ದೆವು. ಆಳುವ ಸರ್ಕಾರ, ಅಧಿಕಾರಿಗಳಲ್ಲಿ ಹೂಳು ತುಂಬಿದೆ ಎಂದು ಹೇಳಬೇಕಾಗಿದೆ. ಹೋರಾಟದ ವೇಳೆ ಟೀಕೆಗಳು ಸಹಜ. ಅದನ್ನು ಮುಂದಿನ ದಿನದಲ್ಲಿ ತಕ್ಕ ಉತ್ತರ ನೀಡುತ್ತೇವೆ ಎಂದರು. ಸುರೇಶ ಹಕ್ಕಿಮನೆ ಪರಿಸರಸ ಗೀತೆ ಪ್ರಸ್ತುತ ಪಡಿಸಿ ನಿರ್ವಹಿಸಿದರು.

ಈ ಸಂದರ್ಭದಲ್ಲಿ ಆರ್.ಎಫ್.ಒ ಶಿವಾನಂದ ನಿಂಗಾಣಿ ವಿಷಯ ತಜ್ಞ ಕೇಶವ ಕೊರ್ಸೆ,ಪ್ರಧಾನ ಸಂಚಾಲಕ ಆರ್.ಎಸ್.ಹೆಗಡೆ ಭೈರುಂಬೆ, ಸೋಂದಾ ಗ್ರಾಪಂ ಅಧ್ಯಕ್ಷ ರಾಮಣ್ಣ ಹೊಸಗದ್ದೆ, ಭೈರುಂಬೆ ಗ್ರಾಪಂ ಸದಸ್ಯ ನಾಗಪ್ಪ ಪಟಗಾರ ಗುಂಡಿಗದ್ದೆ, ಸದಸ್ಯ ಕಿರಣ ಭಟ್ಟ ಭೈರುಂಬೆ ಇದ್ದರು.

ಬೇಡ್ತಿ-ವರದಾ ಜೋಡನೆ ವಿರೋಧಿಸಿ ಬೈಕ್ ರ‍್ಯಾಲಿ ನಡೆಸಿದರು.

ಹರಿಯುವ ನೀರು ನೋಡಿದರೆ ಭಕ್ತಿ ಮೂಡುತ್ತದೆ

ಹರಿಯುವ ನೀರು, ಕಲ್ಲುಬಂಡೆ ನೋಡಿದರೆ ಭಕ್ತಿ ಭಾವನೆ ಮೂಡುತ್ತದೆ. ಸರಕಾರಕ್ಕೆ ಮಾತ್ರ ಇಲ್ಲಿ ಎಷ್ಟು ಟಿ.ಎಂಸಿ ನೀರು ಕಾಣುತ್ತದೆ. ಕೆರೆಯ ಮೂಲಕ ಕೃಷಿಗೆ, ಕುಡಿಯುವುದಕ್ಕೆ ರಾಷ್ಟ್ರ ಮಟ್ಟದಲ್ಲಿ ಹೆಸರು ಪಡೆದಿದ್ದೇವೆ. ಆಣೆಕಟ್ಟು, ಕೇಂದ್ರೀಕೃತ ಯೋಜನೆ ಬೇಕು ಎಂಬುದರಿಂದ ಕೆರೆ ಯೋಜನೆಗಳು ಕಳೆದುಕೊಂಡೆವು ಎಂದು ಶಿವಾನಂದ ಕಳವೆ ತಿಳಿಸಿದರು.

ವಿವಿ ಕುಲಪತಿಗೆ ಅಶೋಕ ಪ್ರಶಸ್ತಿಯ ಗರಿ

ಹಾವೇರಿ: ಏಲಕ್ಕಿ ಕಂಪಿನ ಹಾವೇರಿ ಶಹರದ ಹೊರವಲಯದಲ್ಲಿರುವ ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊಫೆಸರ್ ಸುರೇಶ್ ಜಂಗಮ ಶೆಟ್ಟಿ ಅವರಿಗೆ ಪ್ರತಿಷ್ಠಿತ ' ಆನರ್‌ಆಫ್ ಅಶೋಕ ಪ್ರಶಸ್ತಿ -25 ' ಗೌರವ ಅರಸಿಬಂದಿದೆ.

ಯುವಕರನ್ನು ಶೈಕ್ಷಣಿಕವಾಗಿ ಗಟ್ಟಿಗೊಳಿಸಲು ಅವರು ಸಲ್ಲಿಸುತ್ತಿರುವ ಬೋಧನಾಕ್ರಮ ಹಾಗೂ ಕುಲಪತಿಗಳಾಗಿ ನೀಡುತ್ತಿರುವ ಆಡಳಿತಾತ್ಮಕ ಸೇವೆಯನ್ನು ಪರಿಗಣಿಸಿ , ಸುರೇಶ್ ಅವರನ್ನು ಈ ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆಮಾ ಡಲಾಗಿದೆ.

ಈ ಗೌರವ ಮುಡಿಗೇರಿಸಿಕೊಂಡ ಪ್ರೊಫೆಸರ್ ಜಂಗಮಶೆಟ್ಟಿ ಅವರ ಆಡಳಿತಾತ್ಮಕ ಕರ್ತವ್ಯಕ್ಕೆ ಈಗ ಮತ್ತಷ್ಟು ಜವಾಬ್ದಾರಿ ಹೆಚ್ಚಿದಂತಾಗಿದೆ.

ದೆಹಲಿಯಲ್ಲಿ ನಡೆದ ಪ್ರಶಸ್ತಿ ಪುರಸ್ಕಾರದ ಈ ಸಮಾರಂಭದಲ್ಲಿ ಪಂಜಾಬ್ ಹಾಗೂ ಹರಿಯಾಣ ಹೈಕೋರ್ಟ್ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ವಿಜೇಂದರ್‌ಜೈನ್ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ಸೇನಾ ಸಿಬ್ಬಂದಿಯ ವಿಶ್ರಾಂತ ಉಪ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಎಸ್.ಕೆ. ಸೈನಿ, ಲೆಫ್ಟಿನೆಂಟ್ ಜನರಲ್ ಕರಣ್ ಬೀರ್‌ಸಿಂಗ್ ಬ್ರಾರ್‌ಮುಖ್ಯ ಅತಿಥಿಯಾಗಿದ್ದರು .

ಈ ಪ್ರಶಸ್ತಿಯ ಸಂಚಾಲಕ ಅಭಿಷೇಕ್ ಪಾಂಡೆ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ನವದೆಹಲಿಯ ಇಂಡಿಯಾ ಹ್ಯಾಬಿಟೇಟ್ ಸೆಂಟರ್‌ನಲ್ಲಿ '' ಚಾರ್ಲ್ಸ್ ವಾಲ್ಟರ್‌ಕೌನ್ಸಿಲ್ ಫಾರ್‌ಇನೋವೇಷನ್ ಅಂಡ್ ರಿಸರ್ಚ್'' ಸಂಸ್ಥೆ ಈ ಸಮಾರಂಭ ಆಯೋಜಿಸಿತ್ತು.

ಪ್ರಶಸ್ತಿಯ ಹಿನ್ನೆಲೆ: ಪಾರದರ್ಶಕ ಆಡಳಿತ , ನ್ಯಾಯಯುತ ಕರ್ತವ್ಯ ಹಾಗೂ ಧರ್ಮ ರಕ್ಷನೇಯಲ್ಲಿ ದಾರ್ಶನಿಕನಿಂದೇ ಗುರುತಿಸಲಾಗುವ ಚಕ್ರವರ್ತಿ ಅಶೋಕನ ಆಡಳಿತ ಕ್ರಮಗಳನ್ನು ಆದರ್ಶವಾಗಿಟ್ಟುಕೊಂಡು ಅಶೋಕನ ಹೆಸರಿನಲ್ಲಿ ಈ ' ಆನರ್‌ಆಫ್ ಅಶೋಕ ' ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.

ಸಾರ್ವಜನಿಕ ಆಡಳಿತ , ಶಿಕ್ಷಣ, ಸೇನೆ, ನ್ಯಾಯಾಂಗ, ಪೊಲೀಸ್ ಹಾಗೂ ಆಡಳಿತಾತ್ಮಕ ಕ್ಷೇತ್ರಗಳಲ್ಲಿ ಅನುಪಮ ಸೇವೆಸಲ್ಲಿಸುವವ ರನ್ನು ಗುರುತಿಸಿ, ಈ ಸಂಸ್ಥೆಯ ನೆರಳಿನಲ್ಲಿ ಗೌರವಿಸಲಾಗುತ್ತದೆ. ಇಂಥ ಪ್ರತಿಷ್ಠಿತ ಗೌರವಕ್ಕೆ ಕರ್ನಾಟಕದ ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊಫೆಸರ್‌ಸುರೇಶ್ ಜಂಗಮಶೆಟ್ಟಿ ಭಾಜನರಾ ಗಿರುವುದು ಕನ್ನಡಿಗರಿಗೆ ಹೆಮ್ಮೆಯಾಗಿದೆ.

ವ್ಯಕ್ತಿತ್ವ ನಿರ್ಮಾಣದ ಮೂಲಕ ರಾಷ್ಟ್ರ ಕಟ್ಟಿ: ಗಂಗಾಧರ

ಶಿರಸಿ : ''ನಮ್ಮೆಲರ ಗುರು ಭಾರತ ಮಾತೆಯನ್ನು ಪರಮ ಬೈಭವದಡೆಗೆ ತೆಗೆದುಕೊಂಡು ಹೊಗುವ ನಿಟ್ಟಿನಲ್ಲಿ ಕಾರ್ಯ ಚಟುವಟಿಕೆಗಳ ಕೇಂದ್ರವಾಗಿ ಕಾರ್ಯಾಲಯ ಆರಂಭಗೊಂಡಿದೆ. ಸರಿಯಾದ ಮಾರ್ಗದಲ್ಲಿ ಸಾಗಿ ಕಾರ್ಯ ಚಟುವಟಿಕೆಯ ಸಾಧನೆ ಮಾಡಬಹುದಾಗಿದೆ. ಇದು ಸಂಸ್ಕಾರ ಕೇಂದ್ರವಾಗಿ ಬೆಳೆಯಬೇಕು'' ವಿಶ್ವ ಹಿಂದು ಪರಿಷತ್ ನ ಉತ್ತರ ಪ್ರಾಂತದ ಉಪಾಧ್ಯಕ್ಷ ಗಂಗಾಧರ ಹೆಗಡೆ ಹೇಳಿದರು.

ಪಟ್ಟಣದ ವಿಕಾಸ ಆಶ್ರಮ ಬೈಲಿನ ಎದುರು ಪಿ.ಜಿ.ಹೆಗಡೆಯವರ ಶ್ರೀಮಾತಾ ಕಟ್ಟಡದಲ್ಲಿ ಬುಧವಾರ ವಿಶ್ವ ಹಿಂದು ಪರಿಷತ್ ನೂತನ ಕಾರ್ಯಾಲಯ ಉದ್ಘಾಟಿಸಿ ಅವರು ಮಾತನಾಡಿದರು.''ಹಿಂದೂ ಸಮಾಜವನ್ನು ಜಾಗೃತಗೊಳಿಸುವುದು ಮತ್ತು ಸಂಸ್ಕೃತೀಕರಣದ ಮೂಲಕ ವ್ಯಕ್ತಿ ನಿರ್ಮಾಣವಾಗಬೇಕು. ವ್ಯಕ್ತಿ ನಿರ್ಮಾಣದ ಮೂಲಕ ದೇಶದ ನಿರ್ಮಾಣವಾಗುತ್ತದೆ'' ಎಂದರು. ಸಂಘದ ವಿಭಾಗ ಪ್ರಚಾರಕ ಗಣೇಶಜಿ ಮಾತನಾಡಿ '' ವಿಶ್ವ ಹಿಂದೂ ಪರಿಷತ್ ಗೆ 61 ಸಂಘಕ್ಕೆ 100 ವರ್ಷ ಸಂದ ಸಂದರ್ಭದಲ್ಲಿ ಕಾರ್ಯದ ಚಿಂತನೆಯ ದೃಷ್ಠಿಯಿಂದ ಕೇಂದ್ರವಾಗಿ ಕಾರ್ಯಾಲಯ ಸ್ಥಾಪನೆಯಾಗಿದೆ. ಕೇವಲ ಕಾರ್ಯಾಲಯ ಆರಂಭಿಸಿದರೆ ಸಾಲದು ನಿರಂತರ ಸಂಪರ್ಕ ಕೇಂದ್ರವಾಗಿ ಕಾರ್ಯ ವಿಸ್ತಾರಕ್ಕೆ ಸ್ಪೂರ್ತಿಯ ಕೇಂದ್ರವಾಗಲಿ'' ಎಂದರು. ವಿಭಾಗ ಕಾರ್ಯವಾಹ ನಿತೀಶ ಅಂಕೋಲೇಕರ ಮಾತನಾಡಿ '' ಧರ್ಮ ಸಂಸ್ಕೃತಿ ರಕ್ಷಣೆಗಾಗಿ ಸಾಮರಸ್ಯಕ್ಕಾಗಿ ಸ್ಥಾಪನೆ ಮಾಡಿದ ವಿಶ್ವ ಹಿಂದು ಪರಿಷತ್ ಉದ್ದೇಶದಲ್ಲಿ ಸಫಲವಾಗಿದ್ದು ಗ್ರಾಮ ಗ್ರಾಮಗಳಲ್ಲಿ ಸಂಘಟನೆಯಾಗಲಿ'' ಎಂದರು ಶಿರಸಿ ಜಿಲ್ಲಾಧ್ಯಕ್ಷ ಎಸ್.ಎನ್.ಭಟ್ ಏಕಾನ ಅಧ್ಯಕ್ಷತೆ ವಹಿಸಿ ಮಾತನಾಡಿದರು. ,

ಪ್ರಾಂತ ಕಾರ್ಯದರ್ಶಿ ಶಿವಕುಮಾರ ಬೋಳಶೆಟ್ಟಿ, ಭಜರಂಗದ ದಳದ ಸಹ ಸಂಯೋಜಕರಾದ ಶಿವಾನಂದ ಸತ್ತಿಗೇರಿ,ಸ್ಥಳದ ಮಾಲಕರಾದ ಸ್ನೇಹಾ ಹೆಗಡೆ ವೇದಿಕೆಯಲ್ಲಿದ್ದರು. ಜಿಲ್ಲಾ ಕಾರ್ಯದರ್ಶಿ ಗಣಪತಿ ಭಟ್ಟ ಮಂಜಗುಣಿ ನಿರೂಪಿಸಿದರು, ಜಿಲ್ಲಾ ಮಾತೃ ಶಕ್ತಿ ಸಂಯೋಜಕಿ ಪ್ರತಿಭಾ ಪುರುಷೋತ್ತಮ ವಂದಿಸಿದರು.

ನೂತನ ಕಾರ್ಯಲಯ ಉದ್ಘಾಟಿಸಿದ ವಿಶ್ವ ಹಿಂದು ಪರಿಷತ್ ನ ಉತ್ತರ ಪ್ರಾಂತದ ಉಪಾಧ್ಯಕ್ಷ ಗಂಗಾಧರ ಹೆಗಡೆ ಮಾತನಾಡಿದರು.

ಅನುದಾನ ಬಿಡುಗಡೆಗೆ ಪರಿಷತ್ ಸದಸ್ಯ ಪ್ರದೀಪ್ ಶೆಟ್ಟರ್‌ಒತ್ತಾಯ



ಹುಬ್ಬಳ್ಳಿ : ಅ-15, ರಾಜ್ಯದಲ್ಲಿನ ನಗರ ಮತ್ತು ಪಟ್ಟಣಗಳ ಮೂಲ ಸೌಕರ್ಯ ಮತ್ತು ನಾಗರಿಕ ಸೌಕರ್ಯ ಸುಧಾರಿಸಲು ನಾಗರೋಥನ ಯೋಜನೆಯಡಿ ಅನುದಾನ ನೀಡುತ್ತಿದ್ದು ಈ ಯೋಜನೆಯಡಿ ರಸ್ತೆಗಳು ಚರಂಡಿಗಳು ಉದ್ಯಾನವನಗಳ ಅಭಿವೃದ್ಧಿ ಕುಡಿಯುವ ನೀರು ಮತ್ತು ನೈರ್ಮಲ್ಯದಂತ ವ್ಯವಸ್ಥೆಯ ಮೇಲೆ ಕೇಂದ್ರೀಕರಿಸಲು ಅನುದಾನ ನೀಡಲಾಗುತ್ತದೆ.

ಧಾರವಾಡ ಜಿಲ್ಲೆಯ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ನಾಗರಾಭಿವೃದ್ಧಿ ಇಲಾಖೆಯ ಮುಖ್ಯಮಂತ್ರಿ ನಾಗರೋಥನ ಯೋಜನೆಯ ಸುಮಾರು 10 ಕೋಟಿ ಅನುದಾನ ಸರಕಾರದ ಮಟ್ಟದಲ್ಲಿ ಬಿಡುಗಡೆ ಯಾಗದೆ ಹಾಗೆ ಉಳಿದುಕೊಂಡಿದೆ ಇಲಾಖೆಯಲ್ಲಿ ವಿವಿಧ ಯೋಜನೆಯ ಫೈಲ್ ಗಳು ತುಂಬಾ ವಿಳಂಬವಾಗುತ್ತಿವೆ ಮತ್ತು ಕಮಿಷನ್ ಕೊಡದೆ ಫೈಲ್ ಗಳು ಮುಂದಕ್ಕೆ ಹೋಗುವುದಿಲ್ಲ ಎಂಬ ದೂರುಗಳು ಬಂದಿವೆ. ಹೀಗಾಗಿ ಧಾರವಾಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಕುಂಠಿತವಾಗುತ್ತಿದೆ ಸಾರ್ವಜನಿಕರು ಸರಕಾರ ಮತ್ತು ಇಲಾಖೆಯ ಸಚಿವರ ನಿರ್ಲಕ್ಷ್ಯದಿಂದ ತಮಗೆ ಸಿಗಬೇಕಾದ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ ಅಲ್ಲದೆ ಧಾರವಾಡ ಜಿಲ್ಲೆಯ ಕ್ಕಉಈ ಇಲಾಖೆಯ ಕಋಎಖ್ಗ 30:54 ಯೋಜನೆ 75.ಲಕ್ಷ ಮತ್ತು ಇತರೆ ಅಭಿವೃದ್ಧಿ ಅನುದಾನ ಮತ್ತು ಕಗಈ ಇಲಾಖೆಯ ಖಕ್ಕ ಯೋಜನೆಯ 50:54 ಸುಮಾರು 135 ಕೋಟಿ ಮತ್ತು ಖ.ಏ ರಾಜ್ಯ ಹೆದ್ದಾರಿಯ ಸುಮಾರು 38 ಕೋಟಿ ಅನುದಾನ ಬರುವುದು ಬಾಕಿ ಇದೆ ಇದೆಲ್ಲ ನೋಡಿದರೆ ಸರಕಾರದ ಬೊಕ್ಕಸದಲ್ಲಿ ಹಣ ಇಲ್ಲ ಎಂದು ಗೊತ್ತಾಗುತ್ತದೆ ಕಾಂಗ್ರೆಸ್ ಸರ್ಕಾರದ ಸುಳ್ಳು ಭರವಸೆಯಿಂದ ಜನರು ಬೇಸತ್ತು ಹೋಗಿದ್ದಾರೆ ಉಚಿತ ಯೋಜನೆಗಳು ಜನರಿಗೆ ಸರಿಯಾಗಿ ತಲುಪುತ್ತಿಲ್ಲ ಸಾರ್ವಜನಿಕರ ಮೇಲೆ ಹೆಚ್ಚುವರಿ ಯಾಗಿ ತೆರಿಗೆ ಹೊರೆ ಬೀಳುತ್ತಿದೆ.

ಅಲ್ಲದೆ ರಾಜ್ಯದಲ್ಲಿ ಸರ್ಕಾರಿ ನೌಕರ ಕೊರತೆ ಎದ್ದು ಕಾಣುತ್ತಿದೆ. ಹಾವೇರಿ ಜಿಲ್ಲೆಯಲ್ಲಿ ಸುಮಾರು 55 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕೊರತೆ ಇದ್ದು ಆಡಳಿತ ಯಂತ್ರಕ್ಕೆ ತೊಂದರೆಯಾಗುತ್ತಿದೆ. ಕಾಯಂ ಸಿಬ್ಬಂದಿಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಿ ನಗರಾಭಿವೃದ್ಧಿ ಸಚಿವರಾದ ಶ್ರೀ ಬೈರತಿ ಸುರೇಶ ರವರು ಧಾರವಾಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಬರಬೇಕಾದ 10 ಕೋಟಿ ಅನುದಾನ ಮತ್ತು ವಿವಿಧ ಇಲಾಖೆಗಳಿಂದ ಬರಬೇಕಾದ ಅನುದಾನವನ್ನು ಧಾರವಾಡ ಜಿಲ್ಲೆ ಉಸ್ತುವಾರಿ ಸಚಿವರು ಮುತುರ್ವರ್ಜಿ ವಹಿಸಿ ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಈ ಮೂಲಕ ಸಚಿವರಿಗೆ ಮತ್ತು ಸರ್ಕಾರಕ್ಕೆ ಈ ಪತ್ರಿಕಾ ಪ್ರಕಟಣೆಯ ಮೂಲಕ ಒತ್ತಾಯಿಸುತ್ತೇನೆ.

ಅಕ್ರಮ ಚಟುವಟಿಕೆ ವಿರುದ್ಧ ಕ್ರಮ: ಡಿಎಸ್ಪಿ ಪಾಟೀಲ್

ಹಾವೇರಿ: ರೈತ ಸಂಘಗಳ ಒಕ್ಕೂಟದ ಹನುಮಂತಪ್ಪ ಕಬ್ಬಾರ ಸೇರಿದಂತೆ ವಿವಿಧ ಮುಖಂಡರ ನೇತೃತ್ವದಲ್ಲಿ ಹಾವೇರಿ ಜಿಲ್ಲೆಯಲ್ಲಿ ಮಿತಿ ಮೀರಿದ್ದ ಓಸಿ,ಇಸ್ಪೀಟು, ಅಕ್ರಮ ಮರಳು ಸಾಗಾಟ,ಅಕ್ರಮ ಸರಾಯಿ ವಿರುದ್ಧ ಧ್ವನಿ ಎತ್ತಿದ್ದ ವಿಚಾರದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಹಾವೇರಿ ಪ್ರವಾಸಿ ಮಂದಿರದಲ್ಲಿ ಡಿಎಸ್ಪಿ ಎಂ.ಎಸ್ ಪಾಟೀಲ್ ಮತ್ತರ ಸಭೆ ನಡೆಸಲಾಯಿತು.

ಏಲಕ್ಕಿ ಕಂಪಿನ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಜಿಲ್ಲೆಯ ಏಂಟು ತಾಲೂಕಿನ ಹಳ್ಳಿ ನಗರದ ಪ್ರದೇಶದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಮಟ್ಕಾ,ಇಸ್ಪೇಟ್, ಅಕ್ರಮ ಮರಳು ಸಾಗಾಟ, ಅಕ್ರಮ ಸರಾಯಿ ದಂಧೆ ಕಡಿವಾಣ ಹಾಕುವಂತೆ ಆಗ್ರಹಿಸಿ ಗುರುವಾರದಂದು ಜಿಲ್ಲಾ ಎಸ್ಪಿ ಕಚೇರಿಗೆ ಮುತ್ತಿಗೆ ಹಾಕಿ ಮನವಿ ಸಲ್ಲಿಸಲು ಮುಂದಾದ ಸಮಯದಲ್ಲಿ ಪೊಲೀಸ್ ಇಲಾಖೆಯ ಡಿಎಸ್ಪಿ ಎಂ.ಎಸ್ ಪಾಟೀಲ್ ಅವರು ಮುಂದಾಳತ್ವದಲ್ಲಿ ಹೋರಾಟರಾರರನ್ನು ಮನ ಒಲಿಸಿ ಹಾವೇರಿ ನಗರದ ಪ್ರವಾಸಿ ಮಂದಿರದಲ್ಲಿ ಮಹತ್ತರ ಸಭೆ ನಡೆಸಿದರು. ರೈತ ಸಂಘದ ಹೋರಾಟಗಾರರ ಉದ್ದೇಶಿಸಿ ಸಭೆ ನಡೆಸಿ ಮಾತನಾಡಿದ ಡಿಎಸ್ಪಿ ಎಂ.ಎಸ್ ಪಾಟೀಲ್ ಅವರು ಜಿಲ್ಲೆಯ ಎಂಟು ತಾಲೂಕಿನ ಹಳ್ಳಿ ಮತ್ತು ನಗರಗಳಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳನ್ನು ತಕ್ಷಣವೇ ಕಡಿವಾಣ ಹಾಕಲು ಎಲ್ಲ ಠಾಣೆಯ ಪಿಎಸ್ಐ, ಸಿಪಿಐ ಪೊಲೀಸ್ ಅಧಿಕಾರಿಗಳಿಗೆ ಜಿಲ್ಲಾ ಎಸ್ಪಿ ಯಶೋಧಾ ವಂಟಗೋಡಿ ಅವರು ನಿರ್ದೇಶನ ನೀಡಿದ್ದಾರೆ. ಅಕ್ರಮ ಚಟುವಟಿಕೆ ಮಾಡುವ ವ್ಯಕ್ತಿಗಳು ಎಷ್ಟೇ ಪ್ರಭಾವಿಗಳಾಗಿದ್ದು ನಾವು ಮುಲಾಜ್ ಕಾನೂನು ಕ್ರಮ ತಗೆದುಕೊಳ್ಳಲಾಗುವುದು. ಯಾರು ಆತಂಕ ಪಡುವ ಅವಶ್ಯಕತೆ ಇರುವುದಿಲ್ಲ ಎಂದು ಅವರು ತಿಳಿಸಿದರು.

ರೈತ ಹೋರಾಟಗಾರರ ಸಭೆ ಉದ್ದೇಶಿಸಿ ಡಿಎಸ್ಪಿ ಎಂ.ಎಸ್. ಪಾಟೀಲ್ ಮಾತನಾಡಿದರು.

ಕಾನೂನಿನ ಮುಂದೆ ಯಾರು ದೊಡ್ಡವರಲ್ಲ. ಬಡವರ ಜೀವನ ಹಾಳು ಮಾಡುತ್ತಿರುವ ಓಸಿ.ಇಸ್ಪೀಟು, ಅಕ್ರಮ ಮರುಳು ದಂಧೆ, ಅಕ್ರಮ ಸರಾಯಿ ಮಾರಾಟ ದಂಗೆಕೋರರನ್ನು ಹೆಡಮುರಿ ಕಟ್ಟುವ ಕೆಲಸ ಪೊಲೀಸ್ ಇಲಾಖೆ ಮಾಡಬೇಕು. ಎಂಟು ತಾಲೂಕಿನ ಠಾಣಾಧಿಕಾರಿಗಳನ್ನು ಕರೆದು ಅಕ್ರಮ ಚಟುವಟಿಕೆ ನಡೆಸುವವರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು. ಕೊಟ್ಟ ಮಾತಿನಂತೆ ನಡೆದುಕೊಳ್ಳದಿದ್ದರೆ ಮುಂದಿನ ದಿನಮಾನದಲ್ಲಿ ಮತ್ತೆ ಹೋರಾಟವನ್ನು ಮುಂದುವರೆಸಲಾಗುವುದು.

-ಹನುಮಂತಪ್ಪ ಕಬ್ಬಾರ, ರೈತ ಸಂಘಗಳ ಒಕ್ಕೂಟ ಮುಖಂಡ

ಕನ್ನಡ ರಾಜ್ಯೋತ್ಸವ, ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನ.10ಕ್ಕೆ

ಶಿರಸಿ: ಕದಂಬರ ನಾಡಿನಲ್ಲಿ ಕನ್ನಡದ ವೈಭವ ಶಿರ್ಷಿಕೆಯಡಿಯಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಬನವಾಸಿಯ ಮಧುಕೇಶ್ವರ ದೇವಸ್ಥಾನದ ಆವರಣದಲ್ಲಿ ನ. 10ರಂದು ಸಂಜೆ 3 ಗಂಟೆಗೆ ಆಯೋಜಿಸಲಾಗಿದೆ ಎಂದು ಕದಂಬ ಕನ್ನಡಸೇನೆಯ ರಾಜ್ಯಾಧ್ಯಕ್ಷ ಕದಂಬ ಶಿವಕುಮಾರ ಹೇಳಿದರು.

ಕದಂಬ ಕನ್ನಡ ಸೇನೆ ಕೊಡಮಾಡುವ ಮುಖ್ಯ ಪ್ರಶಸ್ತಿಯಾದ ರಾಜ ರತ್ನ ಮಯೂರ ವರ್ಮ ಪ್ರಶಸ್ತಿ ಯನ್ನು ಮೈಸೂರು ಆಸ್ಥಾನದ ರಾಜ ಹಾಗೂ ಸಂಸದ ಯದುವೀರ್‌ಕೃಷ್ಣದತ್ತ ಚಾಮರಾಜ ಒಡೆಯರ್‌ಅವರಿಗೆ ನೀಡಿ ಗೌರವಿಸಲಾಗುತ್ತದೆ.ಕಾರ್ಯಕ್ರಮವನ್ನು ಶಾಸಕ ಶಿವರಾಮ ಹೆಬ್ಬಾರ ಉದ್ಘಾಟಿಸಲಿದ್ದು ಸಂಘಟನೆಯ ಗೌರವಾಧ್ಯಕ್ಷ ಯೋಗವಿಧಾನಂದ ಸ್ವಾಮಿಗಳು ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸ್ಥಾಪಕ ಅಧ್ಯಕ್ಷ ಕದಂಬ ನಾ ಅಂಬರೀಷ್, ರಾಜ್ಯಾಧ್ಯಕ್ಷ ಕದಂಬ ಶಿವಕುಮಾರ ರವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ. ಅಂತಾರಾಷ್ಟ್ರೀಯ ಮಟ್ಟದ ಗಾಯಕರಿಂದ ಗಾಯನ ಹಾಗೂ ಸ್ಥಳೀಯ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಪ್ರಶಸ್ತಿ ಪುರಸ್ಕೃತರು, ಸಿನಿಮಾ ತಾರೆಯರು , ಸಾಹಿತಿಗಳು ಹಾಗೂ ಕಲಾವಿದರು ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲೆಯ ಗೌರವಾಧ್ಯಕ್ಷದೀಪಕ್ ಬಂಗ್ಲೆ, ಜಿಲ್ಲಾಧ್ಯಕ್ಷ ಸತೀಶ ನಾಯ್ಕ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಶಾಂತ ನಾಯ್ಕ, ಉಪಾಧ್ಯಕ್ಷ ರವಿ ಪೂಜಾರಿ ಹಾಗೂ ಉಮಾಪತಿ ಭಟ್ ಸೇರಿದಂತೆ ಹಲವರು ಇದ್ದರು.

ಸಂಘಟನೆಯ ಜಿಲ್ಲೆಯ ಗೌರವಾಧ್ಯಕ್ಷ ದೀಪಕ್ ಬಂಗ್ಲೆಅವರು ಮಾತನಾಡಿದರು.

ರಂಗಭೂಮಿಗೆ ತುಂಬಲಾರದ ನಷ್ಟ: ಸಾಹಿತಿ ಸತೀಶ ಕುಲಕರ್ಣಿ

ಹಾವೇರಿ: ನಮ್ಮ ನಾಡಿನಲ್ಲಿ ಕಂಪೆನಿ ನಾಟಕಗಳಿಂದ ಅನೇಕ ಕಲಾವಿದರು ಸಿನೆಮಾ ರಂಗಕ್ಕೆ ಹೋಗಿದ್ದಾರೆ. ಆದರೆ ರಾಜು ತಾಳಿಕೋಟೆ ಅವರು ತಮ್ಮ ಜವಾರಿ ಭಾಷೆಯ ಸಹಜ ಅಭಿನಯದಿಂದಾಗಿ ಜನ ಸಾಮನ್ಯರಿಗೆ ಆಕರ್ಷಣೀಯ ಕೇಂದ್ರವಾಗಿದ್ದರು. ಅಪ್ರತಿಮ ಪ್ರತಿಭೆಯಿಂದಾಗಿ ಸಿನಿಮಾ ರಂಗವು ಅವರನ್ನು ತೊಡಗಿಸಿಕೊಳ್ಳುವಂತ ಹಾಸ್ಯ ಕಲೆ ರಾಜು ತಾಳಿಕೋಟೆ ಅವರಲ್ಲಿತ್ತು ಎಂದು ಹಿರಿಯ ಸಾಹಿತಿ ಸತೀಶ ಕುಲಕರ್ಣಿ ಅಭಿಪ್ರಾಯಪಟ್ಟರು.

ನಗರದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಸಂಜೆ ಡಿವೈಎಫ್ಐ, ಎಸ್‌ಎಫ್ಐ, ಅಲೆಮಾರಿ ಸಮುದಾಯ ಸಂಘಟನೆ, ಡಿಎಸ್ಎಸ್ ಹಾಗೂ ಸಾಹಿತಿ ಕಲಾವಿದರ ಬಳಗ ಸೇರಿದಂತೆ ಸಮಾನ ಮನಸ್ಕ ಪ್ರಗತಿಪರ ಸಂಘಟನೆಗಳು ಆಯೋಜಿಸಿದ್ದ ರಾಜು ತಾಳಿಕೋಟೆಯವರ ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿ, ನಾಟಕ ಕಂಪೆನಿಗಳು ಸಂಕಷ್ಟಕ್ಕೆ ಸಿಲುಕಿದಾಗೆಲ್ಲ ಆ ಕಂಪನಿಗಳು ಪುನಶ್ಚೇತನಗೊಳ್ಳಲು ರಾಜು ತಾಳಿಕೋಟೆ ಸದಾ ಶ್ರಮಿಸುತ್ತಿದ್ದರು. ಧಾರವಾಡ ರಂಗಾಯಣಕ್ಕೆ ನಿರ್ದೇಶಕರಾಗಿ ಆಯ್ಕೆಯಾಗಿ ಬಂದ ಮೇಲೆ ಒಳ್ಳೆಯ ರಂಗ ಚಟುವಟಿಕೆಗಳನ್ನು ಆಯೋಜಿಸಿದ್ದರಲ್ಲದೇ, ಉತ್ತಮ ಕಾರ್ಯಯೋಜನೆಗಳನ್ನು ಹಾಕಿಕೊಂಡಿದ್ದರು ಎಂದರು.

ಡಿವೈಎಫ್ಐ ಜಿಲ್ಲಾ ಮುಖಂಡರಾದ ವಕೀಲ ನಾರಾಯಣ ಕಾಳೆ ಮಾತನಾಡಿ, ಸಮಾಜದಲ್ಲಿರುವ ಬಡ ಜನ ವಿರೋಧಿ ರಾಜಕಾರಣವನ್ನು ತಮ್ಮ ನಾಟಕಗಳ ಮೂಲಕ ಜನತೆಗೆ ತಲುಪಿಸುತ್ತಿದ್ದರು. ಹಿರಿಯ ಕಲಾವಿದರು ಇನ್ನಷ್ಟು ಕಾಲ ಇರಬೇಕಿತ್ತು ಎಂದರು.ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ಸದಸ್ಯರಾದ ಪರಿಮಳ ಜೈನ ಮಾತನಾಡಿ, ತಾಳಿಕೋಟೆಯವರು ರಂಗಭೂಮಿಯ ಗಟ್ಟಿ ಧ್ವನಿಯಾಗಿದ್ದರು. ಜನರ ಬದುಕಿನ ಪ್ರಶ್ನೆಗಳನ್ನು ವಿಡಂಬನೆಯ ಮೂಲಕ ಸ್ಪಷ್ಟವಾದ ಭಾಷೆಯಲ್ಲಿ ಹೇಳುತ್ತಿದ್ದರು. ಸಾಮಾನ್ಯ ಕುಡುಕನ ಪಾತ್ರದ ಮೂಲಕ ಸತ್ಯವನ್ನು ಸಾರಿದ ಮಹಾನ್ ಕಲಾವಿದರಾಗಿದ್ದರು ಎಂದು ಕಂಬನಿ ಮಿಡಿದರು.

ಅಲೆಮಾರಿ ಸಮುದಾಯ ಸಂಘಟನೆಯ ಜಿಲ್ಲಾಧ್ಯಕ್ಷ ಶೆಟ್ಟಿ ವಿಭೂತಿ ನಾಯಕ, ಅಹಿಂದ ಮುಖಂಡರಾದ ಉಡಚಪ್ಪ ಮಾಳಗಿ, ವಕೀಲ ಬಸವರಾಜ ಹಾದಿಮನಿ, ರೈತ ಸಂಘಟನೆಯ ಜಿಲ್ಲಾ ಮುಖಂಡರಾದ ಸುರೇಶ ಛಲವಾದಿ, ಕವಿ ರಾಜೇಂದ್ರ ಹೆಗಡೆ ಮಾತನಾಡಿ ರಾಜು ತಾಳಿಕೋಟೆಯವರ ವ್ಯಕ್ತಿತ್ವವನ್ನು ಕೊಂಡಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ರಾಜು ತಾಳಿಕೋಟೆ ಮುಸ್ಲಿಂ ಸಮುದಾಯದಲ್ಲಿ ಜನಿಸಿದ್ದರೂ ಖಾಸ್ಗತೇಶ್ವರ ಮಠದ ಪರಮ ಭಕ್ತರಾಗಿದ್ದರು. ಕಲೆಯು ಜಾತಿ, ಮತಗಳನ್ನು ಮೀರಿದ್ದು ಎಂಬುದನ್ನು ಸಾಧಿಸಿ ತೋರಿದವರು. ಈ ನೆಲದ ಭಾವೈಕ್ಯತೆಯನ್ನು ತಮ್ಮ ಬದುಕಿನುದ್ದಕ್ಕೂ ಸಹಜವಾಗಿ ಉಸಿರಿಕೊಂಡು ಬಾಳಿದವರು ಅದ್ಭುತ ಕಲಾವಿದರು. ಇವರು ತಮ್ಮ ನಾಟಕಗಳ ಮೂಲಕ ಜನರ ಮನದಲ್ಲಿ ಸದಾ ಅಜರಾಮರಾಗಿರುತ್ತಾರೆ ಎಂದರು. ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಖಲಂದರ್‌ಅಲ್ಲಿಗೌಡ್ರ, ರೇಣುಕಾ ಕಹಾರ, ರಾಜಶೇಖರ ಮಾಳವಾಡ, ನಿಂಗರಾಜ ಪೂಜಾರ, ಉಮೇಶ ಮಹಾಂತ, ಧನುಷ್ ದೊಡ್ಮನಿ, ತೇಜಸ್ ದೊಡ್ಮನಿ, ಅನ್ವಿಕಾ ಆರ್.ಬಿ, ನಕ್ಷತ್ರ ಕಾಳೆ ಸೇರಿದಂತೆ ಇನ್ನಿತರರು ಇದ್ದರು.

ಅಗಲಿದ ರಾಜು ತಾಳಿಕೋಟೆಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ದೀಪಾವಳಿ ಹಬ್ಬ: ಮದ್ದು ಮಾರಾಟಕ್ಕೆ ಸ್ಥಳ ನಿಗದಿ

ಹಾವೇರಿ: ದೀಪಾವಳಿ ಹಬ್ಬದ ಅಂಗವಾಗಿ ಸಾರ್ವಜನಿಕ ಸುರಕ್ಷತೆ ಹಿತದೃಷ್ಟಿಯಿಂದ ಹಾಗೂ ಅಹಿತಕರ ಘಟನೆಗಳನ್ನು ತಪ್ಪಿಸಲು ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯಲ್ಲಿ ಅ.15 ರಿಂದ ಅ.27ರವರೆಗೆ ಮದ್ದು ಮಾರಾಟ ಮಾಡಲು ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳ ನಿಗಧಿಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ.ಅಧಿಕೃತವಾಗಿ ಪರವಾನಿಗೆ ಪಡೆದ ಮಾರಾಟಗಾರರು ಮಾತ್ರ ಕೇವಲ ಹಸಿರು ಪಟಾಕಿಗಳನ್ನಷ್ಟೇ ತಾತ್ಕಾಲಿಕ ಶೆಡ್ಡುಗಳನ್ನು ಅಗ್ನಿಶಾಮಕ ಇಲಾಖೆಯ ನಿರ್ದೇಶನದಂತೆ ನಿರ್ಮಿಸಿಕೊಂಡು , ಎಲ್ಲ ಸುರಕ್ಷತಾ ವ್ಯವಸ್ಥೆಗಳನ್ನು ಅಳವಡಿಸಿಕೊಂಡು, ಆಯಾ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ಹಾಗೂ ಗ್ರಾಮ ಪಂಚಾಯತಿಯವರಿಂದ ಪ್ರತ್ಯೇಕ ಅನುಮತಿ, ನಿರಾಕ್ಷೇಪಣಾ ಪತ್ರ ಪಡೆದುಕೊಂಡು ಮಾರಾಟ ಮಾಡಲು ಆದೇಶಿಸಲಾಗಿದೆ.

ಮದ್ದು ಮಾರಾಟ ಸ್ಥಳ: ಹಾವೇರಿ ನಗರದ ಮುನ್ಸಿಪಲ್ ಹೈಸ್ಕೂಲ್ ಮೈದಾನ, ಗುತ್ತಲ ಗ್ರಾಮದ ಆಸ್ತಿ ನಂ.586/1 ಖುಲ್ಲಾ ಜಾಗ, ಹುಲಗೂರ ಗ್ರಾಮ ಪಂಚಾಯತ್ ಆಸ್ತಿ ನಂ.234/3 ಹಾಗೂ ಆಸ್ತಿ ನಂ.234/37 ಖುಲ್ಲಾ ಜಾಗೆ, ಸವಣೂರ ಹಾಗೂ ಹಾನಗಲ್ ತಾಲೂಕು ಕ್ರೀಡಾಂಗಣ, ಆಕ್ಕಿಆಲೂರು ಗ್ರಾ.ಪಂ. ಆಸ್ತಿ ನಂ.75/1 ಖುಲ್ಲಾ ಜಾಗೆ ನಿಗದಿಪಡಿಸಲಾಗಿದೆ.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕೌಶಲ್ಯ ಕರ್ನಾಟಕ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಹಾಗೂ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಮಹಾನಗರ ಪಾಲಿಕೆ, ಮೈಸೂರು
ಇವರ ಸಂಯುಕ್ತಾಶ್ರಯದಲ್ಲಿ

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಯುವ ಸಮೃದ್ಧಿ ಸಮ್ಮೇಳನ

ಮೈಸೂರು ಉದ್ಯೋಗ ಮೇಳ

17 ಅಕ್ಟೋಬರ್ 2025

ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ

ಮಹಾರಾಜ ಕಾಲೇಜಿನ ಮೈದಾನ, ಮೈಸೂರು

ಯುವ ಜನತೆಗೆ ಉದ್ಯೋಗಭಾಗ್ಯ ಕಲ್ಪಿಸಲು ಕರ್ನಾಟಕ ಸರ್ಕಾರದ ನವ ಹೆಜ್ಜೆ

ಕರ್ನಾಟಕದ ವಿದ್ಯಾವಂತ ನಿರುದ್ಯೋಗಿ ಯುವ ಜನತೆಗೆ ರಾಜ್ಯದಲ್ಲಿರುವ ಕೈಗಾರಿಕೆಗಳು, ಸೇವಾ ಆಧಾರಿತ ಉದ್ಯಮಗಳ ಮೂಲಕ ಉದ್ಯೋಗ ಕಲ್ಪಿಸುವುದು. ನಿರುದ್ಯೋಗ ನಿರ್ಮೂಲನೆಯ ಸಂಕಲ್ಪ ಮತ್ತು ಯುವಜನತೆಯ ಉಜ್ವಲ ಭವಿಷ್ಯ ಈ ಉದ್ಯೋಗ ಮೇಳದ ಪ್ರಮುಖ ಉದ್ದೇಶ.

- ರಾಜ್ಯದ **ಯಾವುದೇ ಜಿಲ್ಲೆಯ ಉದ್ಯೋಗಾಕಾಂಕ್ಷಿಗಳು ಭಾಗವಹಿಸಬಹುದಾಗಿದೆ.**
- ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳದ **ಉದ್ಯೋಗಾಕಾಂಕ್ಷಿಗಳಿಗೆ ಸ್ಥಳದಲ್ಲೇ ನೇರ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.**
- ಉದ್ಯೋಗ ಮೇಳದಲ್ಲಿ **ಕನಿಷ್ಠ ಹಾಗೂ ಗರಿಷ್ಠ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಗೂ ಸಹ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ.**
- **ಸಂಪೂರ್ಣ ಡಿಜಿಟಲ್ ಉದ್ಯೋಗ ಮೇಳ:** ಉದ್ಯೋಗಾಕಾಂಕ್ಷಿಗಳು ಹಾಗೂ ಉದ್ಯೋಗದಾತರು ನೋಂದಣಿಯಿಂದ ಪ್ರಾರಂಭಗೊಂಡು ಸಂದರ್ಶನಗಳನ್ನು ಒಳಗೊಂಡಂತೆ ಅಂತಿಮವಾಗಿ ಆಯ್ಕೆ ಪ್ರಕ್ರಿಯೆಯನ್ನು ಡಿಜಿಟಲ್ ಪೋರ್ಟಲ್ ಮೂಲಕ ನಿರ್ವಹಿಸಲಾಗುವುದು.
- ಉದ್ಯೋಗ ಮೇಳದಲ್ಲಿ ಭಾಗವಹಿಸಲು **ಉದ್ಯೋಗಾಕಾಂಕ್ಷಿಗಳಿಗೆ ಯಾವುದೇ ರೀತಿಯ ದರ ಅಥವಾ ಶುಲ್ಕವು ಇರುವುದಿಲ್ಲ.**
- **200 ಕ್ಕೂ ಹೆಚ್ಚು ಕಂಪನಿಗಳು ಹಾಗೂ ಉದ್ಯೋಗದಾತರು ಉದ್ಯೋಗಮೇಳದಲ್ಲಿ ಭಾಗಿ.**

ಯುವ ನಿಧಿ
ರಾಜ್ಯದ ಒಟ್ಟು
2,55,033
ಯುವಜನರಿಗೆ
₹622 ಕೋಟಿ
ಮೊತ್ತದ ಯುವನಿಧಿ ನಿರುದ್ಯೋಗ ಭತ್ಯೆಯನ್ನು ವಿತರಿಸಲಾಗಿದೆ.

ಮಾನ್ಯ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಚಿವರಾದ **ಡಾ. ಶರಣಪ್ರಕಾಶ ಆರ್. ಪಾಟೀಲ್** ಅವರೊಂದಿಗೆ ಮಾನ್ಯ ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ **ಡಾ. ಹೆಚ್.ಸಿ ಮಹದೇವಪ್ಪ** ಅವರು ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ **ಶ್ರೀಮತಿ ಶಿವಕಾಂತಮ್ಮ ನಾಯಕ** ಅವರು ಉದ್ಯೋಗ ಮೇಳ ಆಯೋಜನೆಯ ಕುರಿತು ಸಭೆಯಲ್ಲಿ ಭಾಗವಹಿಸಿರುವುದು

ಉದ್ಯೋಗ ಮೇಳದ ನೇರ ಲಾಭಗಳು (Direct Benefits)

- ತಕ್ಷಣದ ನೇಮಕಾತಿ ಅವಕಾಶಗಳು:
- ಕಂಪನಿಗಳು **ಸ್ಥಳದಲ್ಲೇ ಪ್ರಾಥಮಿಕ ಸಂದರ್ಶನ** ನಡೆಸಿ ಸೂಕ್ತ **ಅಭ್ಯರ್ಥಿಗಳನ್ನು ಆಯ್ಕೆ** ಮಾಡಬಹುದು.
- ಹೊಸದಾಗಿ ಪದವಿ ಪಡೆದವರು ಮತ್ತು ಅನುಭವಿಗಳು **ಎರಡೂ ಹಂತದ ಉದ್ಯೋಗಗಳನ್ನು ಪಡೆಯಬಹುದು.**
- ಉದ್ಯೋಗಾಕಾಂಕ್ಷಿಗಳಿಗೆ **ಹಲವು ಕಂಪನಿಗಳಲ್ಲಿ ಒಂದೇ ಸ್ಥಳದಲ್ಲಿ ಅರ್ಜಿ ಹಾಕಿ**, ಸಂದರ್ಶನಕ್ಕೆ ಹಾಜರಾಗುವ ಅವಕಾಶ ದೊರೆಯುತ್ತದೆ.
- ಕಂಪನಿಗಳಿಗೆ ಸೂಕ್ತ ಅಭ್ಯರ್ಥಿಗಳನ್ನು **ತ್ವರಿತವಾಗಿ ಆಯ್ಕೆ ಮಾಡುವ ಸೌಲಭ್ಯ** ದೊರೆಯುತ್ತದೆ

ಪರೋಕ್ಷ ಲಾಭಗಳು (Indirect Benefits)

- **ವೃತ್ತಿ ಮಾರ್ಗದರ್ಶನ ಮತ್ತು ಅಭಿವೃದ್ಧಿ:** ಉದ್ಯೋಗಾಕಾಂಕ್ಷಿಗಳಿಗೆ ವೃತ್ತಿ ಆಯ್ಕೆಗಳು, ತರಬೇತಿಗಳು ಮತ್ತು ಪ್ರಮಾಣಪತ್ರಗಳ ಬಗ್ಗೆ ಅರಿವು ದೊರೆಯುತ್ತದೆ.
- **ಸಂಪರ್ಕ ಮತ್ತು ಸಹಭಾಗಿತ್ವದ ಅವಕಾಶ (Networking):** ಉದ್ಯೋಗಾಕಾಂಕ್ಷಿಗಳು ಉದ್ಯೋಗದಾತರು (Employers), ಪ್ರಾಜೆಕ್ಟ್ ಮ್ಯಾನೇಜರ್‌ಗಳು ಮತ್ತು ತಂತ್ರಜ್ಞಾನ ತಜ್ಞರೊಂದಿಗೆ ನೇರ ಸಂಪರ್ಕ ಸಾಧಿಸಬಹುದು.
- **ವೃತ್ತಿ ಬೆಳವಣಿಗೆ ಮತ್ತು ಕೌಶಲ್ಯ ಅಭಿವೃದ್ಧಿ:** ಅಭ್ಯರ್ಥಿಗಳು ಯಾವ ತಂತ್ರಜ್ಞಾನ ಕೌಶಲ್ಯಗಳಿಗೆ ಹೆಚ್ಚು ಬೇಡಿಕೆ ಇದೆ ಎಂಬುದನ್ನು ತಿಳಿದು ತರಬೇತಿ ಅಥವಾ ಕೋರ್ಸ್‌ಗಳನ್ನು ಆರಿಸಿಕೊಳ್ಳಬಹುದು.
- **ಕೌಶಲ್ಯ ಹೊಂದಾಣಿಕೆ (Skill Matching):** ಯಾವ ಕೌಶಲ್ಯಗಳು ಬೇಡಿಕೆಯಲ್ಲಿ ಇವೆ ಎಂಬುದನ್ನು ತಿಳಿದುಕೊಂಡು, ತಮ್ಮ ಕೌಶಲ್ಯವನ್ನು ಅದಕ್ಕೆ ಅನುಗುಣವಾಗಿ ಬೆಳೆಸಿಕೊಳ್ಳುವ ಅವಕಾಶ.
- **ಕಂಪನಿಗಳ ಪರಿಚಯ:** ವಿವಿಧ ಉದ್ಯಮಗಳು ಮತ್ತು ಕಂಪನಿಗಳ ಬಗ್ಗೆ, ಅವರ ಕೆಲಸದ ಹುದ್ದೆಗಳು ಮತ್ತು ನಿರೀಕ್ಷೆಗಳ ಬಗ್ಗೆ ತಿಳಿದುಕೊಳ್ಳುವ ಅವಕಾಶ.
- **ಸ್ವ-ವಿವರ (Resume) ಸಂಗ್ರಹಣೆ ಮತ್ತು ಪರಿಶೀಲನೆ:**
- ಅಭ್ಯರ್ಥಿಗಳು **ತಮ್ಮ ಪ್ರೊಫೈಲ್ ಮತ್ತು ಪ್ರಾಜೆಕ್ಟ್ ಪೋರ್ಟ್‌ಫೋಲಿಯೊಗಳನ್ನು ನೇರವಾಗಿ ಕಂಪನಿಗಳಿಗೆ ತೋರಿಸಬಹುದು.**
- ಕಂಪನಿಗಳು ಪ್ರಸ್ತುತ ಅಥವಾ **ಭವಿಷ್ಯದ ಹುದ್ದೆಗಳಿಗಾಗಿ ಅಭ್ಯರ್ಥಿಗಳ ವಿವರಗಳನ್ನು ಸಂಗ್ರಹಿಸುತ್ತವೆ.**
- **ಉದ್ಯಮ ಧೋರಣೆಗಳ ಅರಿವು (Industry Trends):** ಉದ್ಯೋಗದಾತರು ಮತ್ತು ಉದ್ಯೋಗಾಕಾಂಕ್ಷಿಗಳಿಗೆ ಎರಡೂ ಕೆಲಸದ ಮಾರುಕಟ್ಟೆಯ ಹೊಸ ಧೋರಣೆಗಳನ್ನು ತಿಳಿದುಕೊಳ್ಳುತ್ತಾರೆ.
- **ಆತ್ಮವಿಶ್ವಾಸ ವೃದ್ಧಿ:** ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗದಾತರೊಂದಿಗೆ ಸಂವಹನ ಮಾಡುವ ಮೂಲಕ ಆತ್ಮವಿಶ್ವಾಸ ಮತ್ತು ಸಂದರ್ಶನ ಕೌಶಲ್ಯಗಳು ಹೆಚ್ಚುತ್ತವೆ.

ಸಹಾಯವಾಣಿ ಸಂಖ್ಯೆ:
9606494308 / 9606494301

ಉದ್ಯೋಗ ಮೇಳದಲ್ಲಿ ನೋಂದಣಿಯಾಗಲು **https://udyogamela.ksdckarnataka.com/** ಗೆ ಭೇಟಿ ನೀಡಿ

ಸರ್ವರಿಗೂ ಆದರದ ಸ್ವಾಗತ

ದಾನದಲ್ಲಿ ಮೇಲುಗೈ; ಸಂಘಟನೆಗೆ ಸೈ

ರಾಜಕೀಯವೆಂಬ ಚದುರಂಗದಲ್ಲಷ್ಟೇ ಅಲ್ಲದೇ, ವ್ಯಾಪಾರ ಎನ್ನುವ ಸಾಗರದಲ್ಲಿಯೂ ಯಶಸ್ವಿಯಾಗಿ ಈಜುತ್ತಿರುವ ಪ್ರಮೋದ್ ಮಧ್ವರಾಜ್ ಅವರದ್ದು ರಾಜಕೀಯ ಹಾಗೂ ವ್ಯಾಪಾರ ಹಿನ್ನಲೆ ಇರುವ ಕುಟುಂಬವಾದರೂ, ಕುಟುಂಬದ ಪರಂಪರೆಯೊಂದಿಗೆ ತಮ್ಮದೇಯಾದ ಚತುರತೆಯನ್ನು ಬಳಸಿಕೊಂಡು ಬೆಳೆದದ್ದು ಮಾತ್ರ ಇತಿಹಾಸ. ಮೊದಲನೇ ಬಾರಿಗೆ ಶಾಸಕರಾಗಿ ಅದೇ ವರ್ಷ ಮೀನುಗಾರಿಗೆ ಸಚಿವರಾಗಿ ಕಾರ್ಯನಿರ್ವಹಿಸಿರುವ ಪ್ರಮೋದ್ ಮಧ್ವರಾಜ್ ಅವರು ಈ ಎಲ್ಲಕ್ಕಿಂತ ಮಿಗಿಲಾಗಿ ಸಮ ಸಮಾಜ ನಿರ್ಮಿಸಲು, ಕಷ್ಟವೆಂದು ಬಂದವರಿಗೆ ಕೊಡುಗೈ ದಾನಿಯಾಗಿ ಕರಾವಳಿಯಷ್ಟೇ ಅಲ್ಲದೇ ಇಡೀ ಕರ್ನಾಟಕದಾದ್ಯಂತ ಹೆಸರಾಗಿದ್ದಾರೆ.

ಉಡುಪಿ ಮೂಲದ ಪ್ರಮೋದ್ ಮಧ್ವರಾಜ್ ಅವರು ಅಂತಾರಾಷ್ಟ್ರೀಯ ಮೀನುಗಾರಿಕೆ ಹಾಗೂ ಇನ್ನಿತರೆ ಉದ್ಯಮವನ್ನು ಹೊಂದಿದ್ದು, ಮೀನುಗಾರರ ಬವಣೆಯನ್ನು ಅರಿತಿದ್ದಾರೆ. ಮೀನುಗಾರಿಕೆಯನ್ನು ಕೇವಲ ಉದ್ಯಮವನ್ನಾಗಿ ನೋಡದೇ, ಬೆಸ್ತ ಸಮುದಾಯದ ಅಭಿವೃದ್ಧಿಗೆ, ಮೀನುಗಾರಿಕೆಗೆ ತೆರಳುವ ಸಮಯದಲ್ಲಿ ಎದುರಿಸುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿರಂತರ ಪ್ರಯತ್ನದ ಫಲವಾಗಿ ಮೀನುಗಾರ ಸಮಾಜದ ಪ್ರಶ್ನಾತೀತ ನಾಯಕರಾಗಿ ಬೆಳೆದಿದ್ದಾರೆ. ಹಿಂದುಳಿದ ವರ್ಗದಿಂದ ಬಂದಿರುವ ಪ್ರಮೋದ್ ಮಧ್ವರಾಜ್ ಅವರು ಕರಾವಳಿ ಭಾಗದ ಹತ್ತು ಹಲವು ಸಂಕಷ್ಟಗಳಿಗೆ ಧ್ವನಿಯಾಗಿದ್ದಾರೆ. ಅನೇಕ ಸಮಸ್ಯೆಗಳನ್ನು ಸರಕಾರದಿಂದ ಪರಿಹಾರ ಸಿಗುವುದು ತಡವಾಗುತ್ತದೆ ಎಂದು ಅರಿವಿಗೆ ಬರುತ್ತಿದ್ದಂತೆ, ಸ್ವತಃ ಆರ್ಥಿಕ ನೆರವನ್ನು ನೀಡುವ ಮೂಲಕ ಕರಾವಳಿ ಭಾಗದ ಸಾವಿರಾರು ಕುಟುಂಬಗಳ ಪಾಲಿಗೆ ದಾರಿದೀಪವಾಗಿದ್ದಾರೆ.

ಹಿಂದುಳಿದ ವರ್ಗದ ಏಕೈಕ ನಾಯಕ

ರಾಜ್ಯ ಇತಿಹಾಸದಲ್ಲಿ ಯಾವುದೇ ಸಮುದಾಯವನ್ನು ತೆಗೆದುಕೊಂಡರೂ ಅದಕ್ಕೊಬ್ಬ ನಾಯಕನಿದ್ದಾನೆ. ಆದರೆ ಬೆಸ್ತ ಸಮುದಾಯ ಹಲವು ದಶಕಗಳಿಂದ ಇಂತಹ ನಾಯಕತ್ವವನ್ನು ಹುಡುಕಿದಾಗಲೆಲ್ಲ ಕಾಣಿಸುವುದು ಪ್ರಮೋದ್ ಮಧ್ವರಾಜ್. ಒಬಿಸಿ ಸಮುದಾಯದ 'ಗಟ್ಟಿ' ನಾಯಕತ್ವವನ್ನು ಬಿಜೆಪಿ ಹುಡುಕುತ್ತಿರುವ ಈ ಸಮಯದಲ್ಲಿ ಪಕ್ಷಕ್ಕೆ ಕಾಣಿಸುವುದು ಪ್ರಮೋದ್ ಮಧ್ವರಾಜ್ ಎಂದರೆ ತಪ್ಪಾಗುವುದಿಲ್ಲ. ಈ ಕಾರಣಕ್ಕಾಗಿಯೇ ಕರಾವಳಿಯ ಆಚೆಗೂ ಒಬಿಸಿ ಸಮುದಾಯದ ಸಂಘಟನೆಯಲ್ಲಿ ತಮ್ಮದೇಯಾದ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ 'ಸಬ್ ಕಾ ಸಾಥ್; ಸಬ್ ಕಾ ವಿಕಾಸ್' ಆಶಯವನ್ನು ರಾಜ್ಯಾದ್ಯಂತ ವಿಸ್ತರಿಸಲು ಅವಿರತವಾಗಿ ಶ್ರಮಿಸುತ್ತಿದ್ದಾರೆ.

- ತಮ್ಮದೇ ಟ್ರಸ್ಟ್ ಮೂಲಕ ನೂರಾರು ದಾನ ಧರ್ಮ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಪ್ರಮೋದ್ ಮಧ್ವರಾಜ್ ಅವರು ಸಂಕಷ್ಟವೆಂದು ಬಂದವರಿಗೆ ಸಹಾಯ ಮಾಡುತ್ತಿದ್ದಾರೆ.
- ಮಾನವೀಯತೆಯ ಪ್ರತಿರೂಪ, ಕೊಡುಗೈ ದಾನಿ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿಯ ಹರಿಹಾರ, ಜನರ ಹಿತಕ್ಕಾಗಿ ಸದಾ ಶ್ರಮಿಸುವ ವ್ಯಕ್ತಿತ್ವ.
- ಕರಾವಳಿ ಭಾಗದ ಜನರ ಧ್ವನಿಯಾಗಿ, ಹಿಂದುಳಿದ ವರ್ಗಗಳ ಏಳಿಗೆಗೆ ನಿರಂತರವಾಗಿ ಶ್ರಮಿಸುತ್ತಿರುವ ನಿಮ್ಮ ಜನ್ಮದಿನದ ಸಂದರ್ಭದಲ್ಲಿ ನಿಮ್ಮ ಜೀವನ ಮತ್ತು ದೂರ ದೃಷ್ಟಿಕೋನ ಯುವ ಸಮುದಾಯಕ್ಕೆ ಸ್ಫೂರ್ತಿ.
- ಕರಾವಳಿ ಭಾಗ ಪ್ರದೇಶದ ಪ್ರಶ್ನಾತೀತ ನಾಯಕ; ಬೆಸ್ತರ ಹಾಗೂ ಇತರ ಒಬಿಸಿ ಸಮುದಾಯ ಅಭಿವೃದ್ಧಿಗೆ ಆಸಾಧಾರಣ ಸೇವೆ ಸಲ್ಲಿಸುತ್ತಿದ್ದೀರಿ.
- ದೂರದೃಷ್ಟಿಯ ನಾಯಕರಾಗಿರುವ ನೀವು ಒಬಿಸಿ ಸಮುದಾಯವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದೀರಿ.
- ಸಾಮಾನ್ಯ ಜನರು ಎದುರಿಸುತ್ತಿರುವ ಸವಾಲುಗಳ ಹಾಗೂ ಅವಕಾಶಗಳ ಬಗ್ಗೆ ನೀವು ತೀವ್ರ ತಿಳುವಳಿಕೆಯು ನಿರ್ಣಾಯಗಳನ್ನು ತೆಗೆದುಕೊಳ್ಳುವ ಮೇರು ವ್ಯಕ್ತಿಯಾಗಿದ್ದೀರಿ.
- ಸರಳತೆ, ಪರಿಶ್ರಮ ಮತ್ತು ಜನರಿಗಾಗಿ ಜೀವನದ ಹೆಚ್ಚಿನ ಸಮಯ ವ್ಯಯಿಸುವ ನೀವು ಇಡೀ ಕರ್ನಾಟಕ ಗೌರವಿಸಲ್ಪಟ್ಟ ನಾಯಕರಗಿದ್ದೀರಿ.

VOICE OF ಒಬಿಸಿ
ಪ್ರಮೋದ್ ಮಧ್ವರಾಜ್

ನಿಮಗಿದೋ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು

ಶುಭಕೋರುವವರು
ಶ್ರೀ ವಿಜಯ ಕುಮಾರ ಗಂಗಾಪುತ್ರ
ಬ್ರಹ್ಮಾವರ, ಉಡುಪಿ

ಸಿಂಧನೂರು ತಾಲೂಕಿನ ಜವಳಗೇರಾ ಗ್ರಾಮದಲ್ಲಿ ಕೃಷಿ ಸಂಸ್ಕರಣೆ ಘಟಕ ಉದ್ಘಾಟನೆ

ಕೃಷಿ ಸಂಸ್ಕರಣೆ ಘಟಕದಿಂದ ರೈತರಿಗೆ ಲಾಭ

ರಾಯಚೂರು: ರೈತರು ಕೃಷಿ ಸಂಸ್ಕರಣಾ ಘಟಕಗಳನ್ನು ಸಮರ್ಥವಾಗಿ ಬಳಸಿಕೊಂಡಲ್ಲಿ ಕೃಷಿ ಉತ್ಪನ್ನಗಳಿಗೆ ಸಹಜವಾಗಿಯೇ ಅಧಿಕ ಬೆಲೆ ದೊರೆಯಲಿದೆ. ರೈತರಿಗೆ ಮಾರುಕಟ್ಟೆ ಮತ್ತು ಸಂಪರ್ಕ ಸರಳವಾಗಲಿದೆ ಎಂದು ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟರು.

ಸಿಂಧನೂರು ತಾಲೂಕಿನ ಜವಳಗೇರಾ ಗ್ರಾಮದಲ್ಲಿ ಕೃಷಿ ಸಂಸ್ಕರಣೆ, ರೈತರ ತರಬೇತಿ ಕೇಂದ್ರ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲೂ ಇಂತಹ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಯೋಜನೆ ಅನುಷ್ಠಾನಕ್ಕೆ ಸಂಸದರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಖಾಸಗಿ ಸಹಭಾಗಿತ್ವ ಹಾಗೂ ರೈತರನ್ನು ಬಳಸಿಕೊಳ್ಳಲಾಗಿದೆ ಎಂದರು.

ಬೀದರ್‌ನಲ್ಲಿ ಸೋಯಾ ಚೆಕ್ಸ್, ಸೋಯಾ ಎಣ್ಣೆ, ಕಲಬುರ್ಗಿ ಜಿಲ್ಲೆಯಲ್ಲಿ ಜೋಳದ ಪಾಪ್‌ಕಾರ್ನ್, ಯಾದಗಿರಿ ಜಿಲ್ಲೆಯಲ್ಲಿ ಶೇಂಗಾ ಎಣ್ಣೆ, ಬಳ್ಳಾರಿ ಜಿಲ್ಲೆಯಲ್ಲಿ ಮೆಣಸಿನಕಾಯಿ ಪೌಡರ್, ಕೊಪ್ಪಳ ಜಿಲ್ಲೆಯಲ್ಲಿ ಮಾವಿನ ಹಾಗೂ ಪಪ್ಪಾಯಿ ಸಂಸ್ಕರಣಾ ಘಟಕ, ವಿಜಯನಗರ ಜಿಲ್ಲೆ ಯಲ್ಲಿ ಕಡಲೆಕಾಯಿ ಚಿಕ್ಕಿ, ಹುಣಸೆ ತಿರಳು, ರಾಯಚೂರು ಜಿಲ್ಲೆಯಲ್ಲಿ ತೊಗರಿ, ಕಡಲೆ ಬೆಳೆಗಳ ಸಂಸ್ಕರಣಾ ಘಟಕ ಆರಂಭಿಸಲಾಗಿದೆ. ಈ ಸಂಸ್ಕರಣಾ ಘಟಕಗಳಿಂದಲೇ ಇಲ್ಲಿಯ ಉತ್ಪನ್ನಗಳು ರಾಜ್ಯದ ಎಲ್ಲ ಕಡೆಗೂ ಹೋಗಲಿವೆ. ಇದರಿಂದ ಕೃಷಿ ಉತ್ಪಾದಕರ ಸಹಭಾಗಿತ್ವ ಹೆಚ್ಚಾಗಲಿದೆ. ತಂತ್ರಜ್ಞಾನದ ಬೆಳವಣಿಗೆಯಿಂದ ಬೆಂಗಳೂರಿನ ಅಭಿವೃದ್ಧಿ ಯಾಗುತ್ತಿದೆ. ರಾಯಚೂರು ಅಭಿವೃದ್ಧಿ ಹೊಂದಲು ಕೆಲವಷ್ಟು ಅಡತಡೆಗಳಿವೆ. ಹೀಗಾಗಿ ರಾಯಚೂರು ಅಭಿವೃದ್ಧಿಗೆ ಬೆಳಕು ಚೆಲ್ಲಲಾಗಿದೆ ಎಂದು ತಿಳಿಸಿದರು.

2023ರಲ್ಲಿ ನೀತಿ ಆಯೋಗದ ಮಾನದಂಡಗಳ ಪ್ರಕಾರ ಪರಿಶೀಲಿಸಲಾಗಿ ದೇಶದಲ್ಲಿ 112 ಜಿಲ್ಲೆಗಳಿಗೆ ಮುಂದುವರಿಸಲು ಸಾಧ್ಯವಾಗುತ್ತಿಲ್ಲ. ಕರ್ನಾಟಕದಲ್ಲಿ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳು ಅಭಿವೃದ್ಧಿಯಲ್ಲಿ ಹಿಂದುಳಿವೆ. ಅದಕ್ಕಾಗಿ ಮಹತ್ವಾಕಾಂಕ್ಷಿ ಜಿಲ್ಲೆಗಳನ್ನಾಗಿ ಗುರುತಿಸಲಾಗಿದೆ.

ಸಿಂಧನೂರು ತಾಲೂಕಿನ ಜವಳಗೇರಾ ಗ್ರಾಮದಲ್ಲಿ ಕೃಷಿ ಸಂಸ್ಕರಣೆ, ರೈತರ ತರಬೇತಿ ಕೇಂದ್ರ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಉದ್ಘಾಟಿಸಿದರು.

ಮೂರು ವರ್ಷಕ್ಕೊಮ್ಮೆ ಬರ

ಹವಾಮಾನ ಇಲಾಖೆ 50 ವರ್ಷಗಳ ಅಂಕಿಅಂಶಗಳನ್ನು ಗಮನಿಸಿದಾಗ ಪ್ರತಿ ಮೂರು ವರ್ಷಗಳಿಗೆ ಒಮ್ಮೆ ರಾಯಚೂರಿಗೆ ಬರ ಬರುತ್ತದೆ. ಉತ್ತಮ ಬೆಳೆ ಬೆಳೆದರೂ ಬೆಲೆ ಸಿಗುವುದಿಲ್ಲ. ರೈತರನ್ನು ಗಮನದಲ್ಲಿ ಇಟ್ಟುಕೊಂಡು ಯೋಜನೆಗಳನ್ನು ರೂಪಿಸಬೇಕಾಗಿದೆ. ಕೇಂದ್ರ ಸರಕಾರವು ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಕೊಡುತ್ತಲೇ ಇದೆ. ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡಲಾಗುತ್ತಿದೆ. ರಿಸ್ಕ್ ಮ್ಯಾನೇಜ್‌ಮೆಂಟ್‌ಗೆ ಒತ್ತು ಕೊಟ್ಟು ಕೆಸಿಸಿ ಕಾರ್ಡ್ ಮೂಲಕ ನೆರವು ಕಲ್ಪಿಸಲಾಗುತ್ತಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

ಈ ಜಿಲ್ಲೆಗಳಿಗೆ ಅವಕಾಶಗಳ ಬಾಗಿಲು ತೆರೆಯಲಾಗಿದೆ. ಮಹತ್ವಾಕಾಂಕ್ಷೆ 112 ಜಿಲ್ಲೆಗಳ ಪೈಕಿ ವಿಶೇಷವಾಗಿ ರೂಪಿಸಿದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ರಾಯಚೂರು ಜಿಲ್ಲೆ ಇದೀಗ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡಿದೆ. ಮಸ್ಕಿ ತಾಲ್ಲೂಕು ಮಹತ್ವಾಕಾಂಕ್ಷೆ ಬ್ಲಾಕ್ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎಂಟನೇ ಸ್ಥಾನದಲ್ಲಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಭತ್ತ ಚೆನ್ನಾಗಿ ಬೆಳೆಯುತ್ತಿದೆ. ಇದರ ಜತೆಗೆ ದ್ವಿದಳ ಧಾನ್ಯಗಳನ್ನೂ ಬೆಳೆಯಬೇಕು. ಇದರಿಂದ ರೈತರಿಗೆ ಹೆಚ್ಚು ಅನುಕೂಲವಾಗಲಿದೆ. ಜವಳಗೇರಾದಲ್ಲಿ ಸಂಸ್ಕರಣಾ ಘಟಕ ಹಾಗೂ ರೈತ ತರಬೇತಿ ಕೇಂದ್ರ ತೆರೆಯಲಾಗಿದೆ. ರಾಯಚೂರಲ್ಲಿ ತುಂಗಭದ್ರಾ ಹಾಗೂ ಕೃಷ್ಣೆಯ ಕೃಪೆ ಇದೆ. ಮಹಾರಾಜರ ಕಾಲದಿಂದಲೂ ಕೃಷಿ ಫಲವತ್ತಾದ ಭೂಮಿಗೆ ಯುದ್ಧಗಳು ನಡೆದಿವೆ. ದ್ವಿದಳ ಬೆಳೆ ಪೈಕಿ 18 ಸಾವಿರ ಮೆಟ್ರಿಕ್ ತೊಗರಿ ಹಾಗೂ 10 ಸಾವಿರ ಮೆಟ್ರಿಕ್ ಟನ್ ಕಡಲೆ ಉತ್ಪಾದನೆಯಾಗುತ್ತಿದೆ. ಇಷ್ಟು ಬೆಳೆದರೂ ಲಾಭ ವ್ಯಾಪಾರಿಗಳ ಕೈ ಸೇರುತ್ತಿದೆ. ಒಳ್ಳೆಯ ಆದಾಯ ಕೈಗೆ ಸಿಗುತ್ತಿಲ್ಲ. ಸಂಸ್ಕರಣಾ ಮಾಡಿದರೆ ಒಳ್ಳೆಯ ಬೆಲೆ ಸಿಗಲಿದೆ ಎಂದು ತಿಳಿಸಿದರು.

> ತೊಗರಿ ಬೆಲೆ ಎಂಎಸ್‌ಪಿ 2013-2014ರಲ್ಲಿ ₹ 4300 ಇತ್ತು. ಈಗ 2025ರಲ್ಲಿ ₹ 8 ಸಾವಿರ ಆಗಿದೆ. ಹೆಸರಿಗೆ ಎಂಎಸ್‌ಪಿ ₹ 4500 ರಿಂದ ₹ 8500 ಆಗಿದೆ. ಭತ್ತ ₹ 2069ಗೆ ಏರಿಕೆಯಾಗಿದೆ. ಇದು ಪ್ರಧಾನಿ ಮೋದಿಯಿಂದ ಸಾಧ್ಯವಾಗಿದೆ.
> – ನಿರ್ಮಲಾ ಸೀತಾರಾಮನ್ ಕೇಂದ್ರ ಸಚಿವೆ

ಸಿಎಂಗೆ ಸೊನ್ನೆ, ಡಿಸಿಎಂಗೆ ಅಂಕ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹಾಸನಾಂಬ ತಾಯಿಗೆ ಸಿಎಂ ಸ್ಥಾನದ ಪರೀಕ್ಷೆ ಒಡ್ಡಿದ್ದು, ಹಾಸನಾಂಬ ತಾಯಿ ಸಿದ್ದರಾಮಯ್ಯ ಅವರಿಗೆ ಸೊನ್ನೆ, ಡಿ.ಕೆ.ಶಿವಕುಮಾರ್ ಅವರಿಗೆ ಅಂಕದ ಪ್ರಸಾದ ನೀಡಿದ್ದಾಳೆ ಎಂದು ಪ್ರತಿಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಹಾಸನಾಂಬ ದರ್ಶನದಲ್ಲಿ ಡಿ.ಕೆ.ಶಿವಕುಮಾರ್ ಅವರಿಗೆ ಎರಡು ಹೂವುಗಳ ಪ್ರಸಾದ ಸಿಕ್ಕಿದೆ. ಒಂದು ಪ್ರಸಾದದಲ್ಲಿ ಕೆಂಪು ಹೂ ಬಂದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊರಗೆ ಎನ್ನುವ ಸಂದೇಶ ನೀಡಿದೆ. ಮತ್ತೊಂದು ಪ್ರಸಾದದಲ್ಲಿ ಹಳದಿ ಹೂ ಬಂದಿದ್ದು, ಅವರಿಗೆ ಮುಖ್ಯಮಂತ್ರಿ ಆಗುವುದಕ್ಕೆ ಗ್ರೀನ್ ಸಿಗ್ನಲ್ ಸಿಕ್ಕಿದೆ ಎಂದು ವಿವರಿಸಿದರು.

ಸಿದ್ದರಾಮಯ್ಯ ಅವರು ಸ್ಪರ್ಧಿಸುವ ರೀತಿಯಲ್ಲಿ ಮರುದಿನವೇ ಹಾಸನಾಂಬ ದೇವರ ಬಳಿ ವರ ಕೇಳುವುದಕ್ಕೆ ಹೋಗಿದ್ದಾರೆ. ಆದರೆ ಸಿದ್ದರಾಮಯ್ಯ ಅವರಿಗೆ ವರ ನೀಡಿಲ್ಲ. ಕಾಂಗ್ರೆಸ್ ಸರಕಾರ ಬಂದು ಎರಡೂವರೆ ವರ್ಷ ಆಗಿದ್ದು, ನವೆಂಬರ್ ಕ್ರಾಂತಿ ಶುರುವಾಗಿದೆ. ಡಿ.ಕೆ.ಶಿವಕುಮಾರ್ ಅವರು ಇಷ್ಟು ದಿನ ಹೇಳದ ಸತ್ಯವನ್ನು ಈ ಸಂದರ್ಭದಲ್ಲಿ ಪದೇ ಪದೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಮತ್ತು ಸಿದ್ದರಾಮಯ್ಯ ಅವರಿಗೆ ಬೆದರಿಕೆ ಹಾಕುವುದಕ್ಕೆ ಹೇಳುತ್ತಿದ್ದಾರೆಯೇ? ಎಂದು ಪ್ರಶ್ನಿಸಿದರು. ಅವರ ಹೇಳಿಕೆ ನಿಜವಾಗಿದ್ದರೆ ಕರೆ ಮಾಡಿದವರು ಯಾರು, ಯಾವ ನಂಬರ್‌ನಿಂದ ಕರೆ ಬಂದಿತ್ತು ಮತ್ತು ಯಾವ ಕಾರಣಕ್ಕೆ ಕರೆ ಮಾಡಿದರು ಎಂದು ನಿಜ ಹೇಳಬೇಕು ಎಂದು ತಿಳಿಸಿದರು. ಶಿವಕುಮಾರ್ ಭ್ರಷ್ಟಾಚಾರದ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಈ ಸಂದರ್ಭದಲ್ಲಿ ಹೇಳುತ್ತಿದ್ದಾರೆ ಎಂದರೆ, ಅವರಿಗೆ ಸಿಎಂ ಸ್ಥಾನವನ್ನು ನೀಡಿದರೆ ಹಸಿರು ಬಣ್ಣದ ಬಸ್ ಹತ್ತುತ್ತೇನೆ. ಕೊಡದಿದ್ದರೆ ಕೆಂಪು ಬಸ್ ಹತ್ತುತ್ತೇನೆ ಎಂದುಎ ಹೈಕಮಾಂಡಿಗೆ ಸಂದೇಶ ನೀಡುತ್ತಿದ್ದಾರೆ ಎಂದರು.

ಕೇಂದ್ರ ಸರಕಾರದಿಂದ ರಾಜ್ಯಕ್ಕೆ ದೀಪಾವಳಿ ಉಡುಗೊರೆ
ರಾಜಧಾನಿ-ವಾಣಿಜ್ಯನಗರಿ ಮಧ್ಯೆ ಡಿ.8ರಿಂದ ಹೊಸ ರೈಲು

ಬೆಂಗಳೂರು-ಹುಬ್ಬಳ್ಳಿ ಸೂಪರ್ ಫಾಸ್ಟ್ ರೈಲು

ದೆಹಲಿ: ಕೇಂದ್ರ ಸರಕಾರ ಬೆಂಗಳೂರು ಮತ್ತು ವಾಣಿಜ್ಯನಗರಿ ಹುಬ್ಬಳ್ಳಿ ಮಧ್ಯೆ ನಿತ್ಯ ಸೂಪರ್ ಫಾಸ್ಟ್ ವಿಶೇಷ ರೈಲು ಸಂಚಾರದ ಕೊಡುಗೆ ನೀಡಿದೆ.

ಹುಬ್ಬಳ್ಳಿ-ಬೆಂಗಳೂರು ಮಾರ್ಗದಲ್ಲಿ ಡಿಸೆಂಬರ್ 8ರಿಂದ ನಿತ್ಯವೂ ಈ ವಿಶೇಷ ಸೂಪರ್ ಫಾಸ್ಟ್ ರೈಲು ಸಂಚಾರಕ್ಕೆ ಕೇಂದ್ರ ಸರಕಾರ ಅನುಮೋದನೆ ನೀಡಿದೆ. ಅದರಂತೆ ರೈಲು ಸಂಖ್ಯೆ: 20687 ಮತ್ತು 20688 ಎಸ್‌ಬಿಸಿ ಈ ಮಾರ್ಗದಲ್ಲಿ ನಿಯತಕಾಲಿಕವಾಗಿ ಸಂಚಾರ ಆರಂಭಿಸಲಿವೆ.

ರಾಜಧಾನಿ ಬೆಗಂಗಳೂರು ಮತ್ತು ಉತ್ತರ ಕರ್ನಾಟಕದ ಕೊಂಡಿಯಂತಿರುವ ವಾಣಿಜ್ಯ ನಗರಿ ಹುಬ್ಬಳ್ಳಿಗೆ ಹೆಚ್ಚಿನ ಜನಸಂಪರ್ಕ ಇರುವುದರಿಂದ ಧಾರವಾಡ ಸಂಸದ, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ಕೆಲ ದಿನಗಳ ಹಿಂದಷ್ಟೇ ಕೇಂದ್ರ ರೇಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದರು.

ಸಚಿವ ಜೋಶಿ ಅವರ ಒತ್ತಾಸೆಗೆ ಸ್ಪಂದಿಸಿದ ರೈಲ್ವೆ ಸಚಿವರೀರ್ವರೂ ಇದೀಗ ಬೆಂಗಳೂರು-ಹುಬ್ಬಳ್ಳಿ ಮಾರ್ಗದಲ್ಲಿ ಮತ್ತೊಂದು ಸೂಪರ್ ಫಾಸ್ಟ್ ವಿಶೇಷ ರೈಲು ಸಂಚಾರಕ್ಕೆ ಕ್ರಮ ಕೈಗೊಂಡಿದ್ದಾರೆ.

ಈ ಸೂಪರ್ ಫಾಸ್ಟ್ ರೈಲು ಹುಬ್ಬಳ್ಳಿ, ಕರ್ಜಗಿ, ಹಾವೇರಿ, ರಾಣೆಬೆನ್ನೂರು, ದಾವಣಗೆರೆ, ಬಿರೂರು, ಅರಸಿಕೆರೆ, ಸಂಪಿಗೆ ರೋಡ್, ತುಮಕೂರು, ಯಶವಂತಪುರ ಮತ್ತು ಕೆಎಸ್‌ಆರ್ ಬೆಂಗಳೂರು ಮಧ್ಯೆ ಸಂಚರಿಸಲಿದ್ದು, ರಾಜಧಾನಿ ಮತ್ತು ಉತ್ತರ ಕರ್ನಾಟಕ ಮಾತ್ರವಲ್ಲದೆ, ಮಧ್ಯ ಕರ್ನಾಟಕಕ್ಕೂ ಸಂಪರ್ಕ ಸೇತುವಾಗಿದ್ದು, ಇದರಿಂದ ರಾಜ್ಯದ ಏಳೆಂಟು ಜಿಲ್ಲೆಗಳಿಗೂ ಹೆಚ್ಚಿನ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

ವಾಣಿಜ್ಯ ನಗರಿ ಹುಬ್ಬಳ್ಳಿ ಹಾಗೂ ರಾಜಧಾನಿ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ ಈ ಹೊಸ ರೈಲು ಸಮಸ್ತ ಉತ್ತರ ಕರ್ನಾಟಕದ ಅಭಿವೃದ್ಧಿ ಜತೆಗೆ ವಿವಿಧ ಪ್ರದೇಶಗಳ ವಾಣಿಜ್ಯೋದ್ಯಮಕ್ಕೂ ಅನುಕೂಲವಾಗಲಿದೆ. ಹೀಗಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ಹೊಸ ರೈಲು ಕಲ್ಪಿಸಿದ ಪ್ರಧಾನಿ ನರೇಂದ್ರ ಮೋದಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ವಿ.ಸೋಮಣ್ಣ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ
ತುಮಕೂರು ಜಿಲ್ಲಾ ಪಂಚಾಯತ್,
ಕಾರ್ಯಪಾಲಕ ಅಭಿಯಂತರವರ ಕಛೇರಿ, ತುಮಕೂರು ವಿಭಾಗ,
ತುಮಕೂರು, ದೂರವಾಣಿ : 0816 – 2252937.

ಸಂಖ್ಯೆ : 12/ಕಾ.ಪಾ.ಅ./ಗ್ರಾ.ಕು.ನೀ. ನೈ ವಿ./ತುಮ/ಟೆಂಡರ್/ಎಇ-2/1960/2025–26 ದಿನಾಂಕ : 13–10–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ. ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2025–26 ನೇ ಸಾಲಿಗೆ ಏಕ-ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ತುಮಕೂರು, ಗುಬ್ಬಿ ಮತ್ತು ತಿಪಟೂರು ತಾಲ್ಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ https://kppp.karnataka.gov.in ಬಿಡ್ ಸಲ್ಲಿಸಬಹುದು.

ಅ) ಕನಿಷ್ಠ ಕಾಮಗಾರಿ ಮೊತ್ತ : ರೂ. 17.59 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 79,155/– ಗಳು ಹಾಗೂ ಆ) ಗರಿಷ್ಟ ಮೊತ್ತ : ರೂ. 82.88 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 1,65,760/– ಗಳು, (1) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : 24–10–2025 ರ ಸಂಜೆ 5.00 ಘಂಟೆವರೆಗೆ, (2) ಪೂರ್ವ ಭಾವಿ ಸಭೆ ದಿನಾಂಕ : 21–10–2025 ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ ತುಮಕೂರು, (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27–10–2025 ರ ಸಂಜೆ 5.30 ಘಂಟೆಯ ನಂತರ, (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 29–10–2025 ರ ಸಂಜೆ 5.30 ಘಂಟೆಯ ನಂತರ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕೆ. ಎಂ ಕುಮಾರಸ್ವಾಮಿ,
ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ. ಇಲಾಖೆ,
ತುಮಕೂರು ವಿಭಾಗ, ತುಮಕೂರು.

ಡಿಐಪಿಆರ್/ತುಮಕೂರು/42/ಮಣಿಪಾಲ್/2025–26

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ
ಜಿಲ್ಲೆ: ಶಿವಮೊಗ್ಗ. ತಾಲ್ಲೂಕು:ಹೊಸನಗರ ಇ.ಮೇಲ್: acfhnr@gmail.com
No: ACF/HNR/CAMPA AR MODEL/CR-1/2025-26/50
Date: 14.10.2025

ಸವಿಸ್ತಾರ ಇ-ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ-ಟೆಂಡರ್ ಪ್ರಕಟಣೆ)

2025–26 ನೇ ಸಾಲಿನಲ್ಲಿ ಸಾಗರ ವಿಭಾಗದ ವಿವಿಧ ಅರಣ್ಯ ವಲಯಗಳ CAMPA -AR MODEL ಯೋಜನೆಯಡಿ ಒಟ್ಟು 04 ಮುಂಗಡ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜು ಒಟ್ಟು 43.75 ಲಕ್ಷ ರೂ ಗಳಿಗೆ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಯೂನಿಟ್‌ವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:29–10–2025 ಸಂಜೆ 5–05 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳು ಮತ್ತು ಸ್ಥಳಗಳ ಸಂಪೂರ್ಣ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ವಿವರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/77/10/1099

ಕರ್ನಾಟಕ ಸರಕಾರ
ತಾಲೂಕಾ ಆಸ್ಪತ್ರೆ, ಅಂಕೋಲಾ, ಉತ್ತರ ಕನ್ನಡ (ಕಾರವಾರ) ಜಿಲ್ಲೆ
ದೂರವಾಣಿ: 08388–230249 Email ID: thankola314@gmail.com
ಸಂಖ್ಯೆ: ತಾಆಅಂ/ಇ-ಟೆಂಡರ್/355/2025–26 ದಿನಾಂಕ: 15/10/2025

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ-kppp.karnataka.gov.in)

ವಿಷಯ: ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ತಾಲೂಕಾ ಆಸ್ಪತ್ರೆಗೆ ಜನರಿಕ್ ಔಷಧಿಗಳ ಸರಬರಾಜುಗಾಗಿ ಇ-ಟೆಂಡರ್ ಕರೆಯುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ನೊಂದಾಯಿತ ಸಂಸ್ಥೆಗಳಿಂದ 2025–26ನೇ ಸಾಲಿಗೆ (31/03/2026 ರವರೆಗೆ) ಅಂಕೋಲಾ ತಾಲೂಕಾ ಆಸ್ಪತ್ರೆಗೆ ಜನರಿಕ್ ಔಷಧಿಗಳ ಸರಬರಾಜಿಗಾಗಿ ದ್ವಿ-ಬಿಡ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ಈ ಕೆಳಕಂಡಂತಿರುತ್ತವೆ.

(1) ಸಂಸ್ಥೆಗಳ ಹೆಸರು: ತಾಲೂಕಾ ಆಸ್ಪತ್ರೆ, ಅಂಕೋಲಾ, ಜನರಿಕ್ ಔಷಧಿಗಳ ಖರೀದಿ ಮೊತ್ತ (ಅಂದಾಜು): 10 ಲಕ್ಷ, ಇ.ಎಂ.ಡಿ. ಮೊತ್ತ (ಶೇ. 2.5%): 25,000.00

ವಿವರ: (1) ಟೆಂಡರ್ ಪ್ರಕಟಣೆಯ ಸಂಖ್ಯೆ & ದಿನಾಂಕ: ತಾಆಅಂ/ಇ-ಟೆಂಡರ್/355/2025–26 ದಿನಾಂಕ: 15/10/2025 (2) e-portal ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 15/10/2025 (3) e-portal ಟೆಂಡರ್ ಫಾರಂ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ & ಸಮಯ: ದಿನಾಂಕ: 30/10/2025, ಅಪರಾಹ್ನ 04.30 ಗಂಟೆಯವರೆಗೆ (4) e-portal ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ: ದಿನಾಂಕ: 31/10/2025 ರ ಅಪರಾಹ್ನ 04.30 ಗಂಟೆಗೆ (5) e-portal ನಲ್ಲಿ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ: ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ (Website: https://kppp.karnataka.gov.in) ಸಂಪರ್ಕಿಸುವುದು. ಕ್ರಮ ಸಂಖ್ಯೆ: 04 ಮತ್ತು 05 ರಲ್ಲಿ ನಮೂದಿಸಿದ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆ ಆದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು,
ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಅಂಕೋಲಾ (ಉ.ಕ.)

DIPR/ADK/KSMCA/621/25-6 dt. 16.10.2025

ಪುರಸಭಾ ಕಾರ್ಯಾಲಯ, ಬಿಡದಿ
ಬಿಡದಿ ಮುಖ್ಯ ರಸ್ತೆ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ – 562109
ದೂರವಾಣಿ : 080–27282572 e-mail: ka.bidadi.tmc@gmail.com
website: http://www.bidaditown.mrc.gov.in

ಸಂಖ್ಯೆ: ಪುಕಾಬಿ/ಆ.ಶಾ/ಸಿಆರ್/03/2025–26 ದಿನಾಂಕ: 13.10.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು, 2000 ರಂತೆ ಬಿಡದಿ ಪುರಸಭಾ ನಿಧಿ ಅಡಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು Karnataka Public Procurement Portal ಮುಖಾಂತರ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ. ಸಂ.	ಟೆಂಡರ್ ವಿವರ	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	OBTAINING MANPOWER FOR HEALTH SECTION IN TOWN MUNICIPAL COUNCIL, BIDADI PREMISES. Indent No.: DMA/2025-26/SE5674/CALL-2	1,47,082.00
2	PROVIDING DRIVERS, HELPERS AND LOADERS FOR SWM ACTIVITIES IN TMC BIDADI. Indent No. (DMA/2025-26/SE6193)	95,240.00
3	PROVIDING BREAKFAST FOR SANITATION STAFF IN TMC BIDADI. (DMA/2025-26/SE5747/CALL-2)	25,000.00

ಸೂಚನೆ: 1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 29.10.2025 ಸಂಜೆ 5.30 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ : 31.10.2025ರ ಬೆಳಿಗ್ಗೆ 11.00 ಗಂಟೆ ನಂತರ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ : 03.11.2025ರ ಬೆಳಿಗ್ಗೆ 11.00 ಗಂಟೆ ನಂತರ.** ಹೆಚ್ಚಿನ ವಿವರಗಳಿಗೆ ಕಚೇರಿಯ ವೇಳೆಯಲ್ಲಿ ಆರೋಗ್ಯ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/– ಅಧ್ಯಕ್ಷರು, ಪುರಸಭೆ, ಬಿಡದಿ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಬಿಡದಿ

DIPR/BSD/396/SA/2025-26

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	(1) ಶ್ರೀಮತಿ ಶ್ಯಾಮಲಾ. ಆರ್ ಕೋಂ ಶ್ರೀ ಶ್ರೀನಿವಾಸ. ಎಸ್, (2) ಶ್ರೀ ಶ್ರೀನಿವಾಸ. ಎಸ್ ಬಿನ್ ಶ್ರೀ ಸುಬ್ರಹ್ಮಣ್ಯ ಇವರಿಬ್ಬರ ವಿಳಾಸ : ನಂ.3070, ಕಾಳಮ್ಮಗುಡಿ ಬೀದಿ, ಮಂಡಿ, ಮೊಹಲ್ಲಾ, ಮೈಸೂರು–570021. ಮತ್ತೊಂದು ವಿಳಾಸ: ನಂ.1128, 3ನೇ ಕ್ರಾಸ್, ಪಟ್ವೆಗರ್, ಮಂಡಿ, ಮೊಹಲ್ಲಾ, ಮೈಸೂರು–570021. ಮತ್ತೊಂದು ವಿಳಾಸ: ನಂ.09, ಖಿಲ್ಲೆ, ಮೊಹಲ್ಲಾ, ಕೊಪ್ಪಲೂರು ಬಡಾವಣೆ, ಮೈಸೂರು–570008.	ಶ್ರೀಮತಿ ಶ್ಯಾಮಲಾ ಆರ್ ಮತ್ತು ಶ್ರೀ ಶ್ರೀನಿವಾಸ ಎಸ್ ಅವರಿಗೆ ಸೇರಿದ ಆಸ್ತಿಯ ವಿವರ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಮನೆಯ ಆಸ್ತಿಯ ನಂ.09, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 23.00 ಅಡಿ, ಉತ್ತರದಿಂದ ದಕ್ಷಿಣಕ್ಕೆ: 28½ ಅಡಿ, ಈ ಆಸ್ತಿಯು ಕುಪ್ಪಲೂರು ಲೇಔಟ್, ಖಿಲ್ಲೆ ಮೊಹಲ್ಲಾ, ಮೈಸೂರು ನಗರದಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಮನೆಯ ನಂ.10 ಮತ್ತು ಸಾಮಾನ್ಯ ಗೋಡೆ, ಉತ್ತರಕ್ಕೆ: ಮನೆಯ ನಂ.16 ಮತ್ತು ಸಾಮಾನ್ಯ ಗೋಡೆ, ದಕ್ಷಿಣಕ್ಕೆ: ರಸ್ತೆ. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ.	12.09.2025 ಎನ್‌ಪಿಎ ದಿನಾಂಕ : 10.07.2025	POWER HOME BRE Loan A/c No. PHR015107187564 Amount: Rs. 16,72,857/- ಒಟ್ಟು ಬಾಕಿ ಮೊತ್ತ ರೂ. 17,20,778/– ದಿನಾಂಕ: 12.09.2025 ರಂದು ಇದ್ದಂತೆ
2	(1) ಮೆ॥ ದೀಪ್ತಿ ಕ್ಯಾಶು ಕಂಪನಿ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಮುಕುಂದ್ ಪ್ರದೀಪ್ ಕುಮಾರ್ ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀಮತಿ ಅನಿತಾ ಪಿ ಮಲ್ಲಾರ್, ಪ್ಲಾಟ್ ನಂ.16, ನಂದಿಕೂರ್ ಕೈಗಾರಿಕಾ ಪ್ರದೇಶ, ಪಡುಬಿದ್ರಿ, ನಂದಿಕೂರು ಗ್ರಾಮ, ಉಡುಪಿ–574111. (2) ಶ್ರೀ ಮುಕುಂದ್ ಪ್ರದೀಪ್ ಕುಮಾರ್ ಬಿನ್ ಶ್ರೀ ಮುಕುಂದ್ ಕೃಷ್ಣ ಮಲ್ಲರ್, (3) ಶ್ರೀಮತಿ ಅನಿತಾ ಪ್ರದೀಪ್ ಮಲ್ಲಾರ್ ಕೋಂ ಪ್ರದೀಪ್ ಕುಮಾರ್ ಮಲ್ಲಾರ್, ಇವರಿಬ್ಬರ ವಿಳಾಸ: ನಂ. 2–256, ಅದಿತಿ ಮೂಡುಗರಡಿ ರಸ್ತೆ, ಆಕಾಶವಾಣಿ, ವರಂಬಳ್ಳಿ, ಉಡುಪಿ, ಬ್ರಹ್ಮಾವರ–576213.	ಶ್ರೀ ಮುಕುಂದ್ ಪ್ರದೀಪ್ ಕುಮಾರ್ ಅವರಿಗೆ ಸೇರಿದ ಆಸ್ತಿಯ ವಿವರ: ಷೆಡ್ಯೂಲ್: (ಭೂಮಿಯ ಆಸ್ತಿಯ ವಿವರ) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಪ್ಲಾಟ್ ನಂ.16, ನಂದಿಕೂರ್ ಕೈಗಾರಿಕಾ ಪ್ರದೇಶವು ಸರ್ವೆ ನಂ 51(ಪಿ) &52(ಪಿ)ರಲ್ಲಿ ರೂಪುಗೊಂಡಿದ್ದು, ನಂದಿಕೂರು, ಹೋಬಳಿ ಕಾಪು, ಉಡುಪಿ ತಾಲ್ಲೂಕು ಮತ್ತು ಜಿಲ್ಲೆಯ ವ್ಯಾಪ್ತಿಯಲ್ಲಿದೆ. ಆಸ್ತಿ ನಂ:15260030240 0220316, ಅಸೆಸ್‌ಮೆಂಟ್ ನಂ.152600302400220316, ವಿಸ್ತೀರ್ಣ 1011 ಚದರ ಮೀಟರ್, ಚಕ್ಕುಬಂದಿ: ಉತ್ತರಕ್ಕೆ: 18.00 ಮೀಟರ್ ಅಗಲದ ಮೂರನೇ ಮುಖ್ಯ ರಸ್ತೆ, ದಕ್ಷಿಣಕ್ಕೆ: ಪ್ಲಾಟ್ ನಂ.6, ಪೂರ್ವಕ್ಕೆ: ಪ್ಲಾಟ್ ನಂ.17, ಪಶ್ಚಿಮಕ್ಕೆ: ಪ್ಲಾಟ್ ನಂ.15. ಯಾವುದೇ ಮಾಹಿತಿಗಾಗಿ ಶ್ರೀ ಕೆ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್ 9986316545 ರವರನ್ನು ಸಂಪರ್ಕಿಸಿ.	06.09.2025 ಎನ್‌ಪಿಎ ದಿನಾಂಕ : 01.07.2025	SBB OVER DRAFT (OVER DRAFT) Loan A/c No. 921030043167378 Amount: Rs. 47,22,506/- SBB OVER DRAFT (OVER DRAFT) Loan No. 922060051650369 Amount: Rs. 16,52,070/- ಒಟ್ಟು ಬಾಕಿ ಮೊತ್ತ ರೂ. 63,74,576/– ದಿನಾಂಕ: 15.09.2025 ರಂದು ಇದ್ದಂತೆ
3	(1) ಶ್ರೀ ಮೊಹಮ್ಮದ್ ಮುಕ್ತಿಯಾರ್ ಬಿನ್ ಶ್ರೀ ಅಬ್ದುಲ್ ಗಣಿಸಾಬ್, (2) ಶ್ರೀಮತಿ ಶಕೀಲಾ ಬಾನು ಬಿನ್ ಶ್ರೀ ಮೊಹಮ್ಮದ್ ಮುಕ್ತಿಯಾರ್, ಇವರಿಬ್ಬರ ವಿಳಾಸ: ಡೋರ್ ನಂ. 225, ವಾರ್ಡ್ ನಂ.33, ಮರಾಠಿ ಸ್ಟ್ರೀಟ್, ದೇವಿ ನಗರ, 1ನೇ ಕ್ರಾಸ್, ಗೋವಾ ಮೆಡಿಕಲ್ ಸ್ಟೋರ್ ಹಿಂಭಾಗ, ಬಳ್ಳಾರಿ–583101. ಮತ್ತೊಂದು ವಿಳಾಸ: ಪ್ಲಾಟ್ ನಂ.54, ಅಸೆಸ್‌ಮೆಂಟ್ ನಂ. 29222/54, ಸರ್ವೆ ನಂ. 878ಬಿ2, 880ಎ 879ಬಿ2 & 886ಬಿ, ಕಾರ್ಪ್ ವಾರ್ಡ್ 19, ಸಿಎಂಸಿ ವಾರ್ಡ್, 3ನೇ ಕ್ರಾಸ್, ವೆಂಕಟೇಶ್ವರ ನಗರ, ಹದ್ದಿನಗುನ್, ಬಳ್ಳಾರಿ–583101.	ಶ್ರೀ ಮೊಹಮ್ಮದ್ ಮುಕ್ತಿಯಾರ್ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಆಸ್ತಿಯು ವಿವರ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಪ್ಲಾಟ್ ನಂ:54, ಅಸೆಸ್‌ಮೆಂಟ್ ನಂ:29222/54, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 60 ಅಡಿ, ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಒಟ್ಟು ವಿಸ್ತೀರ್ಣ 240 ಚದರ ಅಡಿ, ಸರ್ವೆ ನಂ.878ಬಿ2, 880ಎ, 879ಬಿ2, 886ಬಿ ರೂಪುಗೊಂಡಿದ್ದು, ವಾರ್ಡ್ ನಂ:19, ಸಿ.ಎಂ.ಸಿ. ವಾರ್ಡ್ ನಂ.17, ಈ ಆಸ್ತಿಯು ವೆಂಕಟೇಶ್ವರ ನಗರ, 3ನೇ ಕ್ರಾಸ್, ಹಡ್ಡಿಂಗುಂಡಿ ರಸ್ತೆ, ಬಳ್ಳಾರಿ, ತಾಲ್ಲೂಕು & ಬಳ್ಳಾರಿ ಜಿಲ್ಲೆಯಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: ನಿವೇಶನದ ಸರ್ವೆ ನಂ.878ಸಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.53, ದಕ್ಷಿಣಕ್ಕೆ: ಪ್ಲಾಟ್ ನಂ.55. ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.	13.09.2025 ಎನ್‌ಪಿಎ ದಿನಾಂಕ : 03.09.2025	POWER HOME VANILLA BRE Loan A/C No. PHR022505256232 Amount: Rs. 39,60,000/- ಒಟ್ಟು ಬಾಕಿ ಮೊತ್ತ ರೂ. 35,53,314/– ದಿನಾಂಕ: 12.09.2025 ರಂದು ಇದ್ದಂತೆ
4	(1) ಶ್ರೀ ಶಾಬಾಜ್ ಅಹಮದ್ ಮಣಿಯಾರ್ ಬಿನ್ ಶ್ರೀ ಬಾಬುಸಾಹೇಬ್ ಮನಿಯಾರ್, (2) ಶ್ರೀಮತಿ ಯಾಸ್ಮೀನ್ ಕೌಸರ್ ಮಣಿಯಾರ್ ಕೋಂ ಶ್ರೀ ಶಾಬಾಜ್ ಅಹಮದ್ ಮನಿಯಾರ್, ಇವರಿಬ್ಬರ ವಿಳಾಸ: ಮನೆ ನಂ.24/5, ಗಿರಾಣಿ ಚಾಲ್, ಹುಬ್ಬಳ್ಳಿ, ನೀಟ್ ಕಾರವಾರ ರಸ್ತೆ, ಕರ್ನಾಟಕ 580029. ಮತ್ತೊಂದು ವಿಳಾಸ: ನಂ.144, ಜೆಪಿ ನಗರ, ಗಾರ್ಡನ್ ವಿಟಿಸಿ ಎದುರು, ಹುಬ್ಬಳ್ಳಿ, ಕರ್ನಾಟಕ 580030. ಮತ್ತೊಂದು ವಿಳಾಸ: ಪ್ಲಾಟ್ ನಂ.144, ಸರ್ವೆ ನಂ.105 ಎ, ವಾರ್ಡ್ ನಂ.38, ಜೆಪಿ ನಗರ, ಕೃಷ್ಣಾಪುರ ಗ್ರಾಮ, ಹಳೇ ಹುಬ್ಬಳ್ಳಿ, ಈಶ್ವರ ದೇವಸ್ಥಾನದ ಹತ್ತಿರ, ಕರ್ನಾಟಕ 580030.	ಶ್ರೀ ಶಾಬಾಜ್ ಅಹಮದ್ ಮಣಿಯಾರ್ ಮತ್ತು ಶ್ರೀಮತಿ ಯಾಸ್ಮೀನ್ ಕೌಸರ್ ಮಣಿಯಾರ್ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಆಸ್ತಿಯು ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪ್ಲಾಟ್ ನಂ:144, ವಿಸ್ತೀರ್ಣ 01 ಗುಂಟೆ–01.92 anna, ಆರ್.ಸಿ.ಸಿ. ಕಟ್ಟಡವನ್ನು ರೂಪಿಸಲಾಗಿದ್ದು, ಸರ್ವೆ ನಂ:105ಎ, ಪಿ.ಐ.ಡಿ ನಂ:38/3614, ವಾರ್ಡ್ ನಂ:38, ಈ ಆಸ್ತಿಯು ಹುಬ್ಬಳ್ಳಿ-ಧಾರವಾಡ ಮುನಿಸಿಪಲ್ ಕಾರ್ಪೋರೇಷನ್ ವ್ಯಾಪ್ತಿಯಲ್ಲಿದೆ, ಕೃಷ್ಣಪುರ ಗ್ರಾಮ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ:145, ಪಶ್ಚಿಮಕ್ಕೆ: ಪ್ಲಾಟ್ ನಂ:143, ಉತ್ತರಕ್ಕೆ: ಪ್ಲಾಟ್ ನಂ:129, ದಕ್ಷಿಣಕ್ಕೆ: ರಸ್ತೆ. ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.	13.09.2025 ಎನ್‌ಪಿಎ ದಿನಾಂಕ : 09.09.2025	POWER HOME VANILLA BRE Loan A/c No. PHR012905208613 Amount: Rs. 18,10,193/- Total Amount: Rs.14,39,804/- ASSET POWER BRE Loan A/c No. LTR012907785986 Amount: Rs. 13,59,129/- Total Amount: Rs.13,15,549/- ASSET POWER BRE Loan A/c No. LTR012908730336 Amount: Rs. 6,67,000/- Total Amount : Rs.6,22,023/- ಒಟ್ಟು ಬಾಕಿ ಮೊತ್ತ ರೂ. 33,77,376/– ದಿನಾಂಕ: 12.09.2025 ರಂದು ಇದ್ದಂತೆ
5	(1) ಶ್ರೀ ಹನಮಂತಪ್ಪ ಬಿನ್ ಶ್ರೀ ದ್ಯಾಮಣ್ಣ ಯಾಪಲದಿನ್ನಿ, ವೆಂಕಲಕುಂಟಾ, ಕೊಪ್ಪಳ– 583237. ಮತ್ತೊಂದು ವಿಳಾಸ: ಪ್ಲಾಟ್ ನಂ.26, ಅಸೆಸ್‌ಮೆಂಟ್ ನಂ.26/10183, ವಾರ್ಡ್ ನಂ.4, ಆಸ್ತಿ ನಂ.35–514–224 ಚವ್ಹಾಣ ಪ್ಲಾಟ್, ವಿಷ್ಣುತೀರ್ಥ ನಗರ, R Beside Mla House, ಕೊಪ್ಪಳ–583278. (2) ಶ್ರೀಮತಿ ರೇಣುಕಾ ಕೋಂ ಶ್ರೀ ಹನಮಂತಪ್ಪ, ನಂ.2/62, ಸರಹರಿ ಕಿರಿಯ ಪ್ರಾಥ್ಮಿಕ ಶಾಲೆ ಹತ್ತಿರ, ಮುಖ್ಯರಸ್ತೆ ಯಾಪಲದಿನ್ನಿ, ವಂಕಲಕುಂಟಾ, ಕೊಪ್ಪಳ–583237. ಮತ್ತೊಂದು ವಿಳಾಸ: ಪ್ಲಾಟ್ ನಂ.26, ಆಸ್ಸೆಸ್ ನಂ.26/10183, ವಾರ್ಡ್ ನಂ.4, ಆಸ್ತಿ ನಂ.35–514–224 ಚವ್ಹಾಣ್ ಪ್ಲಾಟ್‌ನಲ್ಲಿ, ವಿಷ್ಣುತೀರ್ಥ ನಗರ, R Beside Mla House, ಕೊಪ್ಪಳ–583278.	ಶ್ರೀ ಹನಮಂತಪ್ಪ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಆಸ್ತಿಯು ವಿವರ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ಇ-ಸ್ವತ್ತು ನಂ:35–514–224, ಹಳೆ ಆಸ್ತಿ ನಂ:26–10183, ವಿಸ್ತೀರ್ಣ 107.302965 ಚದರ ಮೀಟರ್‌ಗಳು, ಈ ಆಸ್ತಿಯು ಬಿ ಚವ್ಹಾಣ್ ಪ್ಲಾಟ್, ವಿಷ್ಣುತೀರ್ಥ ನಗರ, ಕುಷ್ಟಗಿ ಸಿಟಿ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: 9 ಮೀಟರ್‌ಗಳ ರಸ್ತೆ, ಪಶ್ಚಿಮಕ್ಕೆ: ಕೃಷಿ ಭೂಮಿ, ಉತ್ತರಕ್ಕೆ: ಮನೆ ನಂ.27, ದಕ್ಷಿಣಕ್ಕೆ: ಮನೆ ನಂ.25. ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.	13.09.2025 ಎನ್‌ಪಿಎ ದಿನಾಂಕ : 09.09.2025	ASSET POWER BRE Loan A/c No. LPR012907865888 Amount: Rs. 29,25,000/- ಒಟ್ಟು ಬಾಕಿ ಮೊತ್ತ ರೂ.28,15,826/– ದಿನಾಂಕ: 12.09.2025 ರಂದು ಇದ್ದಂತೆ.

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ-ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ-ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 16.10.2025
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/ JE-2 /2025–26/ 2330 ದಿ:–14/10/2025.

ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
	THIS WORK IS RESERVED FOR SC-CATOGERY	
1	PWD/2025-26/BD/WORK_INDENT23290/CALL-2	100.00
2	PWD/2025-26/RD/WORK_INDENT25765/CALL-2	55.65
3	PWD/2025-26/RD/WORK_INDENT26037/CALL-2	38.00
	THIS WORK IS RESERVED FOR CATOGERY-2A	
4	PWD/2025-26/RD/WORK_INDENT25513/CALL-2	49.00
	General Works	
5	PWD/2025-26/RD/WORK_INDENT26236/CALL-3	52.77
6	PWD/2025-26/RD/WORK_INDENT24787/CALL-3	18.22

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **23.10.2025(16.00 ಗಂಟೆಗೆ).** 3.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **24.10.2025(16.30 ಗಂಟೆಗೆ).** 4.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಅರ್ಥಿಕ ಬಿಡ್ ತೆರೆಯುವ ದಿನಾಂಕ: **KPP Portal** ನಲ್ಲಿ ಇರುವಂತೆ

ಸೂಚನೆ:– ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು **KPP Portal** ನಲ್ಲಿ ನೋಡಿಕೊಳ್ಳಬಹುದು ಹಾಗೂ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ವಾ.ಸಾ.ಸಂ.ಇ/ವಿಜಯನಗರ/2025–26/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/300

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-285/2703/2025–26 ದಿನಾಂಕ: 16.10.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಶಮ ಪರ್ವಿನ್, ನಂ. 710, 61ನೇ ಅಡ್ಡರಸ್ತೆ, 5ನೇ ಕ್ರಾಸ್, ಬಾಷ್ಯಂ ಸರ್ಕಲ್ ಹತ್ತಿರ, ರಾಜಾಜಿನಗರ, ಬೆಂಗಳೂರು ಉತ್ತರ–560010	ಯಲಹಂಕ	ಹೆಸರಘಟ್ಟ	ಮಾದಪ್ಪನಹಳ್ಳಿ	41	21ಎ–14ಗುಂ	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸಮಾಚಾರ ಸಣ್ಣದಲ್ಲ



ನಟ ರಿಷಬ್ ಶೆಟ್ಟಿ ಅವರು ಗುರುವಾರ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಮಸ್ತೇ ಸದಾ ವತ್ಸಲೆ ರಿಂಗ್ ಟೋನ್ ಹಾಕಿ

ಯಲಹಂಕ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿಯ ಪ್ರಯುಕ್ತ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರು ರಾಜ್ಯದಲ್ಲೇ ಮೊದಲ ಬಾರಿಗೆ ವಿನೂತನ ಅಭಿಯಾನ ಒಂದಕ್ಕೆ ಮುಂದಾಗಿದ್ದು, ಯಲಹಂಕ ಕ್ಷೇತ್ರದ ಪ್ರತಿ ಬಿಜೆಪಿ ಕಾರ್ಯಕರ್ತರು ಆರ್‌ಎಸ್‌ಎಸ್‌ನ ಧ್ಯೇಯಗೀತೆ ನಮಸ್ತೆ ಸದಾ ವತ್ಸಲೇ ಮಾತೃಭೂಮಿ ಗೀತೆಯನ್ನು ರಿಂಗ್ ಟೋನ್ ಹಾಗೂ ಕಾಲರ್ ಟ್ಯೂನ್‌ಗೆ ಹಾಕಿಕೊಳ್ಳಬೇಕಾಗಿ ಕಾರ್ಯಕರ್ತರಿಗೆ ಮನವಿ ಪೂರ್ವಕವಾದ ಕರೆ ನೀಡಿದ್ದು, ಅವರ ಮನವಿಗೆ ಓಗೊಟ್ಟಿರುವ ಯಲಹಂಕ ಕ್ಷೇತ್ರದ ಪ್ರತಿ ಬಿಜೆಪಿ ಕಾರ್ಯಕರ್ತರು ನಮಸ್ತೆ ಸದಾ ವತ್ಸಲೇ ಮಾತೃಭೂಮಿ ಗೀತೆಯನ್ನು ರಿಂಗ್ ಟೋನ್ ಹಾಗೂ ಕಾಲರ್ ಟೋನ್ ಹಾಕಿಕೊಳ್ಳುವ ಮೂಲಕ ವಿನೂತನ ಅಭಿಯಾನ ಕೈಗೊಂಡಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಎಸ್.ಆರ್ ವಿಶ್ವನಾಥ್ ಅವರು 'ಆರ್‌ಎಸ್‌ಎಸ್ ಅನ್ನು ಬ್ಯಾನ್ ಮಾಡಬೇಕು, ತಮಿಳು ನಾಡಿನ ಮಾದರಿಯಲ್ಲಿ ಆರ್‌ಎಸ್‌ಎಸ್‌ಗೆ ಅಂಕುಶ ಹಾಕಬೇಕು ಎಂಬ ಕುಹಕದ ಮಾತುಗಳನ್ನಾಡಿರುವ ಸಚಿವ ಪ್ರಿಯಾಂಕ್ ಖರ್ಗೆಯವರು ಆರ್‌ಎಸ್‌ಎಸ್ ಬ್ಯಾನ್ ಮಾಡುವುದಿರಲಿ, ನಮ್ಮ 'ನಮಸ್ತೇ ವತ್ಸಲೇ ಮಾತೃಭೂಮಿ' ರಿಂಗ್ ಟೋನ್ ಮತ್ತು ಕಾಲರ್ ಟ್ಯೂನ್, ಅನ್ನು ಬ್ಯಾನ್ ಮಾಡಲಿ ಸಾಕು ನೋಡೋಣ ಎಂದು ಪ್ರಿಯಾಂಕ್ ಖರ್ಗೆ ಅವರಿಗೆ ಸವಾಲೆಸೆದಿದ್ದಾರೆ.

ಭಾಗವತ ದಿನೇಶ್ ಅಮ್ಮಣ್ಣಾಯ ಇನ್ನಿಲ್ಲ

ಮಂಗಳೂರು: ತೆಂಕುತಿಟ್ಟಿನ ಹೆಸರಾಂತ ಭಾಗವತ ದಿನೇಶ್ ಅಮ್ಮಣ್ಣಾಯ ಅವರು ಗುರುವಾರ ನಿಧನರಾದರು. ದಾಮೋದರ ಮಂಡೆಚ್ಚ ಅವರ ಶಿಷ್ಯರಾಗಿದ್ದ ಅಮ್ಮಣ್ಣಾಯ ಪುತ್ತೂರು ಮೇಳದ ಮೂಲಕ ಕಲಾ ಜೀವನ ಆರಂಭಿಸಿದ್ದ ಅವರು, ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಯಕ್ಷಗಾನ ರಂಗದಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದ್ದರು. ತೆಂಕುತಿಟ್ಟಿನ ಪ್ರಸಿದ್ಧ ಡೇರೆ ಮೇಳವಾಗಿದ್ದ ಕರ್ನಾಟಕ ಮೇಳದಲ್ಲಿ ಭಾಗವತರಾಗಿದ್ದ ಅವರು ತಮ್ಮ ವಿಶಿಷ್ಟ ರಾಗ ಶೈಲಿಯಿಂದಾಗಿ ಭಾರಿ ಅಭಿಮಾನಿಗಳನ್ನು ಗಳಿಸಿದ್ದರು. ಕರುಣಾ ರಸದ ಪದ್ಯಗಳನ್ನು ರಾಗಬದ್ಧವಾಗಿ ಹಾಡುವುದಕ್ಕೆ ಹೆಸರುವಾಸಿಯಾಗಿದ್ದರು. ಅಭಿಮಾನಿಗಳು ಅವರಿಗೆ 'ರಸರಾಗ ಚಕ್ರವರ್ತಿ' ಎಂದು ಬಿರುದು ನೀಡಿದ್ದರು. ಎಡನೀರು ಮೇಳದಲ್ಲೂ ತಿರುಗಾಟ ನಡೆಸಿದ್ದರು. ಕೆಲ ವರ್ಷಗಳಿಂದ ವಿಶ್ರಾಂತ ಜೀವನ ನಡೆಸುತ್ತಿದ್ದರು. ಅತಿಥಿ ಭಾಗವತರಾಗಿ ಯಕ್ಷಗಾನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಕಳೆದ ಎರಡು ತಿಂಗಳುಗಳಿಂದ ಅವರ ಆರೋಗ್ಯ ಹದಗೆಟ್ಟಿತ್ತು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಕೋಲಾರ ಜಿಲ್ಲೆ**

ಸಮಸ್ಯೆಯೇನು..?

- ಶ್ರೀನಿವಾಸಪುರ ತಾಲೂಕಿನ ವ್ಯಾಪ್ತಿಯಲ್ಲಿ ಸುರಿದ ಬಾರಿ ಮಳೆಯಿಂದ ಮನೆಗಳು, ಹಾನಿಯಾಗಿರುವ ಸಂಬಂಧ ವರದಿ ಸಲ್ಲಿಸುತ್ತಿರುವ ಬಗ್ಗೆ.
- **ಪರಿಹಾರ:** ಶ್ರೀನಿವಾಸಪುರ ತಾಲೂಕು ವ್ಯಾಪ್ತಿಯ ಸಂತೆ ಮೈದಾನ ವಾರ್ಡ್ 05 ರಲ್ಲಿ ಒಟ್ಟು 75 ಮನೆಗಳಿಗೆ ಮಳೆ ನೀರು ನುಗ್ಗಿ ಮನೆ ಹಾಗೂ ದಿನಸಿ ಪದಾರ್ಥಗಳು ಜಲಾವೃತಗೊಂಡು ದಿನಸಿ ಸಾಮಗ್ರಿಗಳು ಹಾಳಾಗಿರುವುದು ಕಂಡುಬಂದಿದ್ದು, ಅದರಂತೆ ಫಲಾನುಭವಿಗಳಿಗೆ ದಿನಸಿ ಸಾಮಗ್ರಿಗಳನ್ನು ತೆಗೆದುಕೊಳ್ಳಲು ಆರ್ಥಿಕ ಸಹಾಯ, ನಷ್ಟ ಪರಿಹಾರವನ್ನು ಮಂಜೂರು ಮಾಡಲು ಅಧಿಕಾರಿಗಳು ಫಲಾನುಭವಿಗಳ ಅಂದಾಜು ಪಟ್ಟಿ ಸಿದ್ಧಗೊಳಿಸಿರುತ್ತಾರೆ.

ವಿಶ್ವವಾಣಿ ಕ್ಲಬ್ ಹೌಸ್
17.10.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ
ವಿಷಯ
ಶ್ರೀ ರಾಮಾಯಣ ದರ್ಶನಂ ಸಮೀಕ್ಷೆ

vishwavani.news

ಬೆಂಗಳೂರು ನಗರವೊಂದರಲ್ಲೇ ಪ್ರತೀ ವರ್ಷ 943 ಟನ್ ಆಹಾರ ವ್ಯರ್ಥ: ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ

ಹಸಿವಿನ ಸಂಕಟದ ಅರಿವಿನಿಂದಲೇ ಅನ್ನಭಾಗ್ಯ ಜಾರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಸಿವಿನ ಸಂಕಟ, ಅನ್ನದ ಮೌಲ್ಯ ನನಗೆ ಗೊತ್ತು. ಅದಕ್ಕೇ ಅನ್ನಭಾಗ್ಯ ಜಾರಿಗೆ ತಂದಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ವಿಶ್ವ ಆಹಾರ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕವಿ ಬೇಂದ್ರೆಯವರು ರೈತರನ್ನು ಅನ್ನಬ್ರಹ್ಮ ಎಂದು ಕರೆದಿದ್ದಾರೆ. ಆದ್ದರಿಂದ ಅನ್ನ ವ್ಯರ್ಥ ಮಾಡುವುದು, ಬಿಸಾಡುವುದು ಅನ್ನಬ್ರಹ್ಮನಿಗೆ ಮಾಡುವ ಅವಮಾನ.

> **ಅನ್ನಭಾಗ್ಯದ ಅಕ್ಕಿಯನ್ನು ಸಂಗ್ರಹಿಸಿ ಕಾಳಸಂತೆಯಲ್ಲಿ ಮಾರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಕಾಳ ಸಂತೆ ಮಾರಾಟ ತಪ್ಪಿಸಲು 5 ಕೆಜಿ ಅಕ್ಕಿ ಕೊಟ್ಟು ಉಳಿದ ಐದು ಕೆಜಿ ಕಾಳು, ಬೇಳೆ ವಿತರಿಸಲು ತೀರ್ಮಾನಿಸಿದ್ದೇವೆ. ಆಹಾರದ ಬಗ್ಗೆ ಜಾಗ್ರತೆ, ಸಣ್ಣ ರೈತರ ರಕ್ಷಣೆ ಮಾಡುವುದು ನಮ್ಮ, ನಿಮ್ಮ ಮತ್ತು ನಾಗರಿಕ ಸಮಾಜದ ಜವಾಬ್ದಾರಿ.**
> **-ಸಿದ್ದರಾಮಯ್ಯ**, ಮುಖ್ಯಮಂತ್ರಿ

ನಾವು ಒಂದು ಕಾಲದಲ್ಲಿ ಅನ್ನಕ್ಕಾಗಿ ಅಮೆರಿಕದ ಮೇಲೆ ಅವಲಂಬಿತರಾಗಿದ್ದೆವು. ಈಗ ವಿದೇಶಗಳಿಗೆ ರಫ್ತು ಮಾಡುವ ಮಟ್ಟಕ್ಕೆ ಪ್ರಗತಿ ಸಾಧಿಸಿದ್ದೇವೆ. ಇದರ ಜತೆಗೆ ಊಟ ವ್ಯರ್ಥ ಮಾಡುವ ಪ್ರಮಾಣವೂ ಹೆಚ್ಚಾಗುತ್ತಿರುವುದು ಬೇಸರದ ಸಂಗತಿ ಎಂದರು.

ಬೆಂಗಳೂರು ಒಂದರಲ್ಲೇ ಪ್ರತೀ ವರ್ಷ 943 ಟನ್ ಆಹಾರ ವ್ಯರ್ಥವಾಗುತ್ತಿದೆ. ಹೆಚ್ಚೂ ಕಡಿಮೆ 360 ಕೋಟಿ ಮೌಲ್ಯದ ಆಹಾರ ವ್ಯರ್ಥ ಮಾಡುತ್ತಿದ್ದೇವೆ ಎಂದು ಜಿಕೆವಿಕೆ ಅಧ್ಯಯನವನ್ನು ಉಲ್ಲೇಖಿಸಿದರು. ಗೊತ್ತಿದ್ದೂ ಗೊತ್ತಿದ್ದೂ ಆಹಾರ ವೇಸ್ಟ್ ಮಾಡುವುದು ಅನ್ನಕ್ಕೆ ತೋರಿಸುವ ಅಹಂಕಾರ. ಅನ್ನ ವೇಸ್ಟ್ ಮಾಡುವುದು ಪಾಪದ ಕೆಲಸ ಎಂದು ಮಹಾತ್ಮ ಗಾಂಧಿ ಹೇಳಿದ್ದಾರೆ ಎಂದರು.

ಹಸಿವಿನಿಂದ ಮಲಗಬಾರದು; ಇದು ಕಾಂಗ್ರೆಸ್ ಬದ್ಧತೆ: ಯಾರೂ ಹಸಿವಿನಿಂದ ಮಲಗಬಾರದು ಎನ್ನುವುದು ಕಾಂಗ್ರೆಸ್ ಬದ್ಧತೆ. ಹೀಗಾಗಿ ಬಡವರ ಪರವಾದ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು ಕಾಂಗ್ರೆಸ್. ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತಂದಿದ್ದು ಕಾಂಗ್ರೆಸ್ ಪ್ರಧಾನಿ ಮನಮೋಹನ್ ಸಿಂಗ್. ಆಹಾರ ಭದ್ರತೆ ಕಾಯ್ದೆಯನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿತ್ತು. ಬಡವರ ವಿರೋಧಿ ನೀತಿ ಬಿಜೆಪಿಯ ಸಿದ್ಧಾಂತ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಆ ಕಡೆ ಬಿಜೆಪಿಗೂ ಚಪ್ಪಾಳೆ ತಟ್ಟೋದು, ಈ ಕಡೆ ಬಡವರ ಪರ ಕಾರ್ಯಕ್ರಮ ಕೊಟ್ಟ ಕಾಂಗ್ರೆಸ್ಸಿಗೂ ಚಪ್ಪಾಳೆ ತಟ್ಟೋದು ಮಾಡಬೇಡಿ. ಅನ್ನದ ಪರವಾಗಿ ಇರುವ ಕಾಂಗ್ರೆಸ್ ಬದ್ಧತೆ ಅರ್ಥ ಮಾಡಿಕೊಳ್ಳಿ ಎಂದು ಹೇಳಿದರು.

ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಜಮೀರ್ ಅಹ್ಮದ್ ಖಾನ್ ಸೇರಿದಂತೆ ಅನೇಕರಿದ್ದರು.



'ಅನ್ನ ಸುವಿಧಾ ಯೋಜನೆ' ವಿಸ್ತರಿಸಿದ ಫಲಕ ಬಿಡುಗಡೆ ಸಂದರ್ಭದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವ ಕುಮಾರ್, ಜಮೀರ್ ಅಹ್ಮದ್ ಖಾನ್, ಕೆ.ಎಚ್.ಮುನಿಯಪ್ಪ ಪಾಲ್ಗೊಂಡಿದ್ದರು.

ಕಾಳಸಂತೆ ಮಾರಾಟ ತಡೆಯಲು ಇಂದಿರಾ ಕಿಟ್

ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಸಂಗ್ರಹಿಸಿ ಕಾಳಸಂತೆಯಲ್ಲಿ ಮಾರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಕಾಳ ಸಂತೆಯಲ್ಲಿ ಅಕ್ಕಿ ಮಾರಾಟವನ್ನು ತಪ್ಪಿಸಲು 5 ಕೆ.ಜಿ ಅಕ್ಕಿ ಕೊಟ್ಟು ಉಳಿದ ಐದು ಕೆ.ಜಿ ಕಾಳು, ಬೇಳೆ ವಿತರಿಸಲು ತೀರ್ಮಾನಿಸಿದ್ದೇವೆ. ಆಹಾರದ ಬಗ್ಗೆ ಜಾಗ್ರತೆ, ಸಣ್ಣ ರೈತರ ರಕ್ಷಣೆ ಮಾಡುವುದು ನಮ್ಮ, ನಿಮ್ಮ ಮತ್ತು ನಾಗರಿಕ ಸಮಾಜದ ಜವಾಬ್ದಾರಿ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಅನ್ನ ಸುವಿಧಾ ಯೋಜನೆ ಜಾರಿ

ಕಾರ್ಯಕ್ರಮದಲ್ಲಿ ಮಾತನಾಡಿದ ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಭಾರತ ಸರಕಾರ 2013ರಲ್ಲಿ ಜಾರಿಗೆ ತಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಮೊಟ್ಟಮೊದಲು ಜಾರಿಗೆ ತಂದ ರಾಜ್ಯ ಕರ್ನಾಟಕ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಮೊದಲ ಅವಧಿ ಮತ್ತು ಎರಡನೇ ಅವಧಿಯಲ್ಲಿ ಅನ್ನಭಾಗ್ಯ ಯೋಜನೆಗೆ ಅತ್ಯಂತ ಪ್ರಾಮುಖ್ಯತೆ ಕೊಡುವ ಮೂಲಕ ಕರ್ನಾಟಕ ರಾಜ್ಯ ಹಸಿವು ಮುಕ್ತ ಕರ್ನಾಟಕವಾಗಿಸಿರುವುದು ನಮ್ಮ ಸರಕಾರದ ಹೆಮ್ಮೆಯ ವಿಷಯವಾಗಿದೆ. ಅನ್ನಭಾಗ್ಯ ಯೋಜನೆಯಡಿ ರಾಜ್ಯದಲ್ಲಿ 10,60,800 ಅಂತ್ಯೋದಯ ಅನ್ನಯೋಜನೆ ಮತ್ತು 1,26,00,959 ಆದ್ಯತಾ ಪಡಿತರ ಚೀಟಿಗಳು ಒಟ್ಟು 4,48,29,135 ಫಲಾನುಭವಿಗಳಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಮತ್ತು ರಾಜ್ಯ ಸರಕಾರದ ಹೆಚ್ಚುವರಿ 5 ಕೆ.ಜಿ. ಸೇರಿ ಒಟ್ಟು 10 ಕೆ.ಜಿ. ಅಕ್ಕಿ ಪ್ರತಿ ಸದಸ್ಯರಿಗೆ ಉಚಿತವಾಗಿ ವಿತರಿಸುವ ಮೂಲಕ ಹಸಿದ ಹೊಟ್ಟೆಗೆ ಅನ್ನ ನೀಡುವ ಮಹತ್ವ ಕೆಲಸವನ್ನು ಸರಕಾರ ಮಾಡುತ್ತಿದೆ. 2024-25ನೇ ಸಾಲಿನ ಬಜೆಟ್ ಘೋಷಣೆಯಂತೆ 75 ವರ್ಷ ದಾಟಿದ ಫಲಾನುಭವಿಗಳಿಗೆ ಪಡಿತರ ವಿತರಣೆಯನ್ನು ಮನೆಯ ಬಾಗಿಲಿಗೆ ತಲುಪಿಸುವ ಅನ್ನ ಸುವಿಧಾ ಯೋಜನೆಯನ್ನು ಜಾರಿಗೊಳಿಸಲಾಗಿದೆ ಎಂದು ವಿವರಿಸಿದರು

ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಆಗಮಿಸಿದ ಸಿಬ್ಬಂದಿಯ ಜತೆ ಮಾಹಿತಿಗಳನ್ನು ಹಂಚಿಕೊಂಡರು. ಈ ವೇಳೆ ಜಿಬಿಎ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ತುಳಸಿ ಮುದ್ದಿನೇನಿ, ಕೇಂದ್ರ ನಗರ ಪಾಲಿಕೆಯ ಅಪರ ಆಯುಕ್ತ ದಲ್ಜೀತ್ ಕುಮಾರ್, ಜಂಟಿ ಆಯುಕ್ತರುಗಳಾದ ರಂಗನಾಥ್, ಹೇಮಂತ್, ಶರಣ್ ನೋಡಲ್ ಅಧಿಕಾರಿಯಾದ ಕಮಲಾ ಬಾಯಿ, ಸಮೀಕ್ಷೆ ಸಿಬ್ಬಂದಿ ಇದ್ದರು.

ಪ್ರಿಯಾಂಕ್ ಖರ್ಗೆ ಜತೆಗೆ ಇಡೀ ಕಾಂಗ್ರೆಸ್ ಪಕ್ಷವಿದೆ: ಸಚಿವ ಲಾಡ್

ಬೆದರಿಕೆ ಕರೆಗಳಿಗೆ ಹೆದರುವುದಿಲ್ಲ

ರಾಯಚೂರು: ಬೆದರಿಕೆ ಕರೆಗಳಿಗೆ ನಾವ್ಯಾರೂ ಹೆದರುವುದಿಲ್ಲ. ಸಚಿವ ಪ್ರಿಯಾಂಕ್ ಖರ್ಗೆ ಅವರ ಜತೆಗೆ ಇಡೀ ಕಾಂಗ್ರೆಸ್ ಪಕ್ಷವಿದೆ ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಭಾರತದಲ್ಲಿರುವ ಎಲ್ಲ ಒರಿಜಿನಲ್ ಹಿಂದೂಗಳು ಅವರ ಹಿಂದೆ ಇದ್ದೇವೆ. ಐಡಿಯಾಲಜಿ ವ್ಯತ್ಯಾಸಗಳು ಇರಬಹುದು, ಆದರೆ ಬೆದರಿಕೆ ಹಾಕೋದು ಯಾಕೆ ಮಾಡ್ತಾರೋ, ಯಾರು ಮಾಡಿದ್ದಾರೋ ಗೊತ್ತಿಲ್ಲ ಎಂದರು.

ಆರ್‌ಎಸ್‌ಎಸ್ ಅನ್ನು ಹಿಂದೆ ಬ್ಯಾನ್ ಮಾಡಿದ್ದು ಯಾರು? ಇವರು ಸ್ಟ್ಯಾಚ್ಯು ಮಾಡಿರುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರೇ ಬ್ಯಾನ್ ಮಾಡಿದ್ರು. ಯಾಕೆ ಬ್ಯಾನ್ ಮಾಡಿದ್ರು? ನಮ್ಮ ಕಡೆ ಬೊಟ್ಟು ಮಾಡಿ ಬೈದು ಹೆದರಿಸಲು ಬಂದ್ರೆ ನಾವೇನು ಹೆದರಲ್ಲ ಎಂದು ತಿರುಗೇಟು ನೀಡಿದರು.

> **ಸಚಿವ ಸಂಪುಟ ವಿಸ್ತರಣೆ ಪಕ್ಷಕ್ಕೆ ಬಿಟ್ಟ ವಿಚಾರ. ಯಾವ ಮಾನದಂಡಗಳನ್ನು ಹಾಕುತ್ತಾರೆ ಎನ್ನುವುದು ಪಕ್ಷಕ್ಕೆ ಬಿಟ್ಟ ವಿಚಾರ. ಸಿಎಂ ಡಿನ್ನರ್ ಪಾರ್ಟಿಯಲ್ಲಿ ವಿಶೇಷವಾಗಿ ಗ್ರಾಪಂ, ತಾಪಂ, ಗ್ರೇಟರ್ ಬೆಂಗಳೂರು ಬಗ್ಗೆ ಚರ್ಚೆಯಾಯ್ತು. ಬೆಂಗಳೂರಿನಲ್ಲಿ ಗುಂಡಿಗಳು ಇರುವುದು ನಿಜ. ಅದನ್ನು ಸಿಎಂ, ಡಿಸಿಎಂ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಈಗಾಗಲೇ ಗುಂಡಿಗಳನ್ನು ಮುಚ್ಚುವ ಪ್ರಕ್ರಿಯೆ ಆರಂಭವಾಗಿದೆ.**
> **-ಸಂತೋಷ ಲಾಡ್** ಕಾರ್ಮಿಕ ಸಚಿವ

ಆರ್‌ಎಸ್‌ಎಸ್ ವಿರುದ್ಧವಾಗಿ ನಾನು ಅವಹೇಳನಕಾರಿ ಹೇಳಿಕೆ ಕೊಟ್ಟಿಲ್ಲ. ನಾನು ವಿಚಾರ ದೃಷ್ಟಿಯಿಂದ ಮಾತನಾಡುತ್ತೇನೆ. ಯಾವತ್ತೂ ವೈಯಕ್ತಿಕವಾಗಿ ಮಾತನಾಡಿಲ್ಲ, ಮುಂದೆಯೂ ಮಾತನಾಡಲ್ಲ. ಇಷ್ಟು ದಿನ ಎಲ್ಲಿಯಾದರೂ ನಾನು ತಪ್ಪು ಮಾತನಾಡಿದ್ದರೆ ತೋರಿಸಲಿ. ಈಗ ಪ್ರಿಯಾಂಕ್ ಖರ್ಗೆಯವರಿಗೆ ಜೀವ ಬೆದರಿಕೆ ಬರುತ್ತಿದೆ. ಹೆದರಿಕೊಳ್ಳುವ ಅವಶ್ಯಕತೆಯಿಲ್ಲ. ಭಾರತದಲ್ಲಿರುವ ಕಾಂಗ್ರೆಸ್, ಹಿಂದೂ, ಮುಸ್ಲಿಂ, ಸಿಖ್, ಎಲ್ಲರೂ ಅವರ ಜತೆ ಇದ್ದೇವೆ. ಬೇರೆ ಯಾವ ಸಚಿವರಿಗೂ ಬೆದರಿಕೆ ಬಂದಿಲ್ಲ ಎಂದು ಸ್ಪಷ್ಟನೆ ನೀಡಿದರು.

ಮಂಗಳೂರಿನಲ್ಲಿ ತಿರುಪತಿ ದೇವಾಲಯಕ್ಕೆ ಟಿಟಿಡಿ ಒಪ್ಪಿಗೆ

ಬೆಂಗಳೂರು: ಮಂಗಳೂರಿನಲ್ಲಿ ತಿರುಪತಿ ದೇವಾಲಯ ಮತ್ತು ಕಲ್ಯಾಣ ಮಂಟಪ ನಿರ್ಮಾಣ ಮಾಡುವ ಪ್ರಸ್ತಾವನೆಗೆ ಟಿಟಿಡಿ ಒಪ್ಪಿಗೆ ನೀಡಿದೆ ಎಂದು ಟಿಟಿಡಿ ಸದಸ್ಯ ಎಸ್.ನರೇಶ್ ಕುಮಾರ್ ಹೇಳಿದರು.

2026ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿಯನ್ನು ಬಿಡುಗಡೆಗೊಳಿಸಿ ಮಾತನಾಡಿ, ಈ ಪ್ರಸ್ತಾವನೆಯನ್ನು ಟಿಟಿಡಿ ಆಡಳಿತ ಮಂಡಳಿ ಮುಂದೆ ಇಡಲಾಗಿತ್ತು. ಅದಕ್ಕೆ ಆಡಳಿತ ಮಂಡಳಿಯು ತನ್ನ ಒಪ್ಪಿಗೆ ನೀಡಿದೆ. ಕರ್ನಾಟಕ ಸರಕಾರದಿಂದ ಜಾಗ ಮಂಜೂರಾದ ಬಳಿಕ ನಿರ್ಮಾಣ ಕಾರ್ಯಕ್ಕೆ ಚಾಲನೆ ಸಿಗಲಿದೆ ಎಂದರು. ತಿರುಪತಿಯು ಬೌದ್ಧರ ಕ್ಷೇತ್ರವಾಗಿತ್ತು ಎನ್ನುವ ಬೌದ್ಧ ಚಿಂತಕಿ ಜಯದೇವಿ ಗಾಯಕವಾಡ ಅವರ ಹೇಳಿಕೆಗೆ ನರೇಶ್ ಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಇದು ತೀರಾ ಹಾಸ್ಯಾಸ್ಪದ. ಪ್ರಚಾರ ಪಡೆದುಕೊಳ್ಳ ಬೇಕು ಎಂದು ಧರ್ಮವನ್ನು ಬಳಸಿಕೊಳ್ಳುವುದು ಸರಿ ಅಲ್ಲ ಎಂದರು.

ಟಿಟಿಡಿ ದೇವಾಲಯದ 2026ನೇ ಸಾಲಿನ ಕ್ಯಾಲೆಂಡರ್ ಮತ್ತು ಡೈರಿಯನ್ನು ಟಿಟಿಡಿ ಸದಸ್ಯ ಎಸ್. ನರೇಶ್ ಕುಮಾರ್ ಮತ್ತು ಟಿಟಿಡಿ ಬೆಂಗಳೂರು ದೇವಾಲಯದ ಸೂಪರಿಂಟೆಂಡೆಂಟ್ ಜಯಂತಿ ಅನಾವರಣ ಗೊಳಿಸಿದರು.

ಶುಲ್ಕದ ಹೆಸರಿನಲ್ಲಿಯೇ ನೂರಾರು ಕೋಟಿ ರು. ವಸೂಲಿ

ಎ ಖಾತಾ ಹೆಸರಿನಲ್ಲಿ ಸುಲಿಗೆ

ಮಂಡ್ಯ: ದೀಪಾವಳಿ ಕೊಡುಗೆ ಕೊಡುತ್ತಿದ್ದೇವೆ ಎಂದು ಹೇಳಿ ರಾಜ್ಯ ಸರಕಾರ ಬೆಂಗಳೂರು ಜನರ ಕಿಸೆಗೆ ಕೈ ಹಾಕಿದೆ. ಎ ಖಾತಾ ಸೋಗಿನಲ್ಲಿ ₹15 ಸಾವಿರ ಕೋಟಿ ಸುಲಿಗೆ ಮಾಡುತ್ತಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತನೆ ಮಾಡುವ ಅರ್ಜಿಗೆ ₹500 ಶುಲ್ಕ ತುಂಬಬೇಕು. ಆ ಶುಲ್ಕದ ಹೆಸರಿನಲ್ಲಿಯೇ ನೂರಾರು ಕೋಟಿ ರುಪಾಯಿ ಸುಲಿಗೆ ಮಾಡುತ್ತಿದೆ ಈ ಸರಕಾರ. 30ಷ40 ನಿವೇಶನಕ್ಕೆ ₹4ರಿಂದ 8 ಲಕ್ಷ ರುಪಾಯಿ ವರೆಗೂ ಕಿತ್ತುಕೊಳ್ಳುತ್ತಿದ್ದಾರೆ. ಮೊದಲು ₹10 ಸಾವಿರದಿಂದ ₹13 ಸಾವಿರ ರುಪಾಯಿ ಅಷ್ಟನ್ನೇ ಕಟ್ಟಬೇಕಿದ್ದ ಬೆಂಗಳೂರು ಜನರು ಇನ್ಮುಂದೆ ಲಕ್ಷಗಳಲ್ಲಿ ಹಣ ತೆರಬೇಕಿದೆ ಎಂದು ಹೇಳಿದರು.

'ಜೆಡಿಎಸ್ ಕೊಡುಗೆ ಏನು?' ಎಂದು ಹಾಸನದಲ್ಲಿ ಸಿಎಂ ಪ್ರಶ್ನೆ ಮಾಡಿದ್ದಾರೆ. ನನ್ನ ಆರೋಗ್ಯ ವಿಚಾರಿಸಲು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೊಬ್ಬರು ದೆಹಲಿಗೆ ಬಂದಿದ್ದರು. 2018ರಲ್ಲಿ ನೀವು ಕೊಟ್ಟ ₹500 ಕೋಟಿ ರುಪಾಯಿ ಅನುದಾನದಲ್ಲಿಯೇ ಇನ್ನೂ ಕೆಲಸ ನಡೆಯುತ್ತಿದೆ ಎಂದು ಅವರೇ ಹೇಳುತ್ತಾರೆ. ಅನುದಾನದ ಬಗ್ಗೆ ಮಾತನಾಡುವ ಮುಖ್ಯಮಂತ್ರಿಗಳು, ನಾನು ಅಧಿಕಾರದಲ್ಲಿ ಇದ್ದಾಗ ಎಷ್ಟು ಕೊಟ್ಟಿದ್ದೇನೆ, ಅವರು ಎಷ್ಟು ಕೊಟ್ಟಿದ್ದಾರೆ ಎಂಬ ಬಗ್ಗೆ ಜನರ ಮುಂದೆ ದಾಖಲೆ ಇಡಲಿ ಎಂದು ಸವಾಲು ಹಾಕಿದರು.

> **ಈ ಸರಕಾರದಲ್ಲಿ ಹಣ ಇಲ್ಲ. ಅದಕ್ಕೆ ಕಂಡ ಕಂಡ ಕಡೆ ಹಣಕ್ಕೆ ಕೈ ಹಾಕುತ್ತಿದೆ. ಬೆಂಗಳೂರಿನ ಗುಂಡಿ ಮುಚ್ಚೋದು ಇರಲಿ, ರಾಜ್ಯದಲ್ಲಿರುವ ಗುಂಡಿಗಳನ್ನೂ ಮುಚ್ಚೋಕೆ ಇವರಿಂದ ಆಗುತ್ತಿಲ್ಲ.**
> **- ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಸಂಘದ ಸಿದ್ಧಾಂತದ ಪ್ರಭಾವಿತರಿಂದ ಗಾಂಧಿ ಕೊಲೆ

ಮೈಸೂರು: ಆರ್‌ಎಸ್‌ಎಸ್ ಬಿತ್ತುವ ಸಿದ್ಧಾಂತದಿಂದ ಪ್ರಭಾವಕ್ಕೆ ಒಳಗಾದವರೇ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರನ್ನು ಕೊಂದದ್ದು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಆರ್‌ಎಸ್‌ಎಸ್‌ನವರು ನಾವು ಒಳ್ಳೆಯವರೆಂದು ತೋರಿಸಿಕೊಳ್ಳುತ್ತಾರೆ. ಹಿಂದೂ ಸಂಸ್ಕೃತಿಯ ಉತ್ಕೃಷ್ಟ ಮೌಲ್ಯಗಳನ್ನು ತೋರಿಸುತ್ತೇವೆ ಎನ್ನುತ್ತಾರೆ. ಆದರೆ, ಮಾಡುವುದೆಲ್ಲವೂ ಅನಾಚಾರ; ಮನೆ ಮುಂದೆ ಬೃಂದಾವನ ಎನ್ನವಂತಾಗಿದೆ ಎಂದರು. ಆರ್‌ಎಸ್‌ಎಸ್ ಬಗ್ಗೆ ಪ್ರಿಯಾಂಕ್ ಖರ್ಗೆ ಪತ್ರ ಬರೆದಿರುವುದು ಸರಿಯಾಗಿದೆ. ಬೇರೆ ಸಂಸ್ಥೆಗಳಿಗೆ ಅನುಮತಿ ಪಡೆಯದೇ ಕಾರ್ಯಕ್ರಮಕ್ಕೆ ಅವಕಾಶ ಕೊಡುತ್ತಿದ್ದೀವಾ ನಾವು? ಉದ್ಯಾನಗಳಲ್ಲಿ ಪಥಸಂಚಲನಕ್ಕೆ ಅವಕಾಶ ಸಾಧ್ಯವೇ? ಇಡೀ ದೇಶಕ್ಕೆ ಒಂದು ಕಾನೂನು, ಆರ್‌ಎಸ್‌ಎಸ್‌ಗೆ ಒಂದು ಕಾನೂನು ಏಕೆ? ಎಂದು ಕೇಳಿದರು.

ಆರ್‌ಎಸ್‌ಎಸ್ ಕೇವಲ ಸಾಂಸ್ಕೃತಿಕ ಸಂಸ್ಥೆಯಲ್ಲ, ಅದೊಂದು ರಾಜಕೀಯ ಸಂಸ್ಥೆ. ನಿರ್ದಿಷ್ಟ ಸಿದ್ಧಾಂತ ಇಟ್ಟುಕೊಂಡು ಎಲ್ಲೆಡೆ ಹರಡಲು ಯತ್ನಿಸುತ್ತಿದೆ. ಶಾಲಾ-ಕಾಲೇಜುಗಳಲ್ಲಿ ಒಂದು ಕಾರ್ಯಸೂಚಿ ಇಟ್ಟುಕೊಂಡು ಕೆಲಸ ಮಾಡಲು ಅವಕಾಶ ಕೊಡಬಾರದು. ಆರ್‌ಎಸ್‌ಎಸ್ ಸಂವಿಧಾನಕ್ಕಿಂತಲೂ ಮೇಲೇನಲ್ಲ ಎಂದರು.

> **ನಿಷೇಧಗೊಂಡಿದ್ದ ಸಂಸ್ಥೆಯದು. ಆ ಬಗ್ಗೆ ಇತಿಹಾಸವೇ ಇದೆ. ನಾವೇನೂ ನಿಷೇಧಿಸಲು ಹೊರಟಿಲ್ಲ. ಸಾರ್ವಜನಿಕ ಸ್ಥಳ ಹಾಗೂ ಶಾಲಾ-ಕಾಲೇಜುಗಳಲ್ಲಿ ಅನುಮತಿ ಪಡೆಯದೆ ಪಥಸಂಚಲನಕ್ಕೆ ಅವಕಾಶ ಇಲ್ಲ ಎಂದಷ್ಟೇ ಹೇಳುತ್ತಿದ್ದೇವೆ. ಈ ನಿಟ್ಟಿನಲ್ಲಿ ತಮಿಳುನಾಡಿನಲ್ಲಿರುವ ನಿಯಮಗಳನ್ನು ರಾಜ್ಯದಲ್ಲೂ ಜಾರಿಗೊಳಿಸುತ್ತೇವೆ. ನಮ್ಮ ಸರಕಾರದ ಯೋಚನೆ ಸರಿಯಾಗಿದೆ.**
> **- ಡಾ.ಯತೀಂದ್ರ ಸಿದ್ದರಾಮಯ್ಯ,** ವಿಧಾನ ಪರಿಷತ್ ಸದಸ್ಯ

ಹಾಸನಾಂಬೆ ದರ್ಶನ ಪಡೆಯಲು ಸರತಿ ಸಾಲಿನಲ್ಲಿ ನಿಂತಿರುವ ಮಹಿಳೆಯರು.

ಶೇ.80ರಷ್ಟು ಮಹಿಳೆಯಿಂದಲೇ ಹಾಸನಾಂಬ ದರ್ಶನ
5 ದಿನಗಳಲ್ಲಿ 8,84,503 ಭಕ್ತರಿಂದ ದೇವಿಯ ದರ್ಶನ

ಹಾಸನಾಂಬ ದರ್ಶನಕ್ಕೆ ಶಕ್ತಿ ವರದಾನ

ಹಾಸನ: ವರ್ಷಕ್ಕೊಮ್ಮೆ ದರ್ಶನ ಭಾಗ್ಯ ನೀಡುವ ಶಕ್ತಿ ದೇವತೆ ಹಾಸನಾಂಬ ದರ್ಶನಕ್ಕೆ ರಾಜ್ಯದ ವಿವಿಧ ಮೂಲಗಳಿಂದ ಲಕ್ಷಾಂತರ ಮಹಿಳಾ ಭಕ್ತರು ಆಗಮಿಸುತ್ತಿದ್ದು, ಶಕ್ತಿ ಯೋಜನೆ ವರದಾನವಾಗಿದೆ. ಸಾರ್ವಜನಿಕ ದರ್ಶನ ಪ್ರಾರಂಭವಾದ ಕಳೆದ 6 ದಿನಗಳಿಂದ ಭೇಟಿ ನೀಡಿದ ಭಕ್ತರಲ್ಲಿ ಶೇ.80ರಷ್ಟು ಮಹಿಳಾ ಭಕ್ತರೇ ಇದ್ದಾರೆ. ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯವಿರುವುದರಿಂದ ಕಳೆದ ವರ್ಷಕ್ಕಿಂತ ಈ ಭಾರಿ ಭಕ್ತರ ಸಂಖ್ಯೆ ಹೆಚ್ಚಳವಾಗಿದೆ.

ಉತ್ತರ ಕರ್ನಾಟಕ ಭಾಗದ ಹುಬ್ಬಳ್ಳಿ, ರಾಯಚೂರು, ಯಾದಗಿರಿ, ಧಾರವಾಡ, ಚಿತ್ರದುರ್ಗ, ತುಮಕೂರು, ಕೋಲಾರ, ಮೈಸೂರು, ಮಂಡ್ಯ, ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧ ಜಿಲ್ಲೆ, ತಾಲ್ಲೂಕುಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದಾರೆ.

ಅ.10 ರಿಂದ 15 ರ ವರೆಗೆ ಸುಮಾರು 8,84,503 ಭಕ್ತರು ದೇವಿಯ ದರ್ಶನ ಪಡೆದಿದ್ದಾರೆ. ಮಳೆ, ಗಾಳಿ, ಹಗಲು-ರಾತ್ರಿ ಲೆಕ್ಕಿಸದೇ ಸರದಿ ಸಾಲಿನಲ್ಲಿ ನಿಂತು ದರ್ಶನ ಪಡೆದು ಪುನೀತರಾಗಿದ್ದಾರೆ. ಈ ಭಾರಿ ಜಿಲ್ಲಾಡಳಿತ ವತಿಯಿಂದ ಬಹಳ ಅಚ್ಚುಕಟ್ಟಾಗಿ ದರ್ಶನಕ್ಕೆ ವ್ಯವಸ್ಥೆ ಮಾಡಿದ್ದು, ನಿರಾಸದಾಯಕವಾಗಿ ದರ್ಶನ ಪಡೆಯುತ್ತಿದ್ದಾರೆ. ಇನ್ನು 7 ದಿನಗಳ ಕಾಲ ದರ್ಶನಕ್ಕೆ ಅವಕಾಶ ಇದ್ದು, ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಈ ಬಾರಿ ಚಲನಚಿತ್ರ ನಟ-ನಟಿ ಯರು, ಜನಪ್ರತಿನಿಧಿಗಳು, ಗಣ್ಯರು ಭೇಟಿ ನೀಡಿ ಶಿಸ್ತಾಗಿ ಶಿಷ್ಟಾಚಾರ ಪಾಲನೆ ಮಾಡುತ್ತಾ ದರ್ಶನ ಪಡೆದಿದ್ದಾರೆ.

ಜಿಲ್ಲಾಡಳಿತದಿಂದ ಸಕಲ ಸಿದ್ಧತೆ, ಭದ್ರತೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರ ನಿಯೋಜನೆ

ಇಂದು ಕಾವೇರಿ ತೀರ್ಥೋದ್ಭವ

ಮಡಿಕೇರಿ: ನಾಡಿನ ಜೀವನದಿ ಕಾವೇರಿ ಉಗಮ ಸ್ಥಾನ ತಲಕಾವೇರಿಯಲ್ಲಿ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವಕ್ಕೆ ಜಿಲ್ಲಾಡಳಿತ ವತಿಯಿಂದ ಅಗತ್ಯ ಸಿದ್ಧತೆ ನಡೆದಿದೆ.

ತಲಕಾವೇರಿ ಪವಿತ್ರ ತೀರ್ಥೋದ್ಭವ ವೀಕ್ಷಣೆಗೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕೆ ಅಗತ್ಯ ಬ್ಯಾರಿಕೇಡ್‌ಗಳ ನಿರ್ಮಾಣ ಮಾಡಲಾಗಿದೆ. ಭಕ್ತಾದಿಗಳು ತೀರ್ಥ ಪಡೆಯಲು ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಸಂಬಂಧ ಮಡಿಕೇರಿ, ಭಾಗಮಂಡಲ, ತಲಕಾವೇರಿಗೆ ಹೋಗುವ ರಸ್ತೆ ಬದಿಯಲ್ಲಿ ಕಾಡನ್ನು ಕಡಿಸಿ ಸುಗಮ ಸಾರಿಗೆ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ತಲಕಾವೇರಿ ತುಲಾ ಸಂಕ್ರಮಣ ತೀರ್ಥೋದ್ಭವ ಹಿನ್ನೆಲೆ ಕನ್ನಡ ಮತ್ತು ಸಂಸ್ಕೃತಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ತಾಯಿ ಕಾವೇರಿ ಮಾತೆಯ ಭಕ್ತಿಗೀತೆಗಳ ಗೀತಾ ಗಾಯನ ಕಾರ್ಯಕ್ರಮ ನಡೆಯಲಿದ್ದು, ಈ ಸಂಬಂಧ ವೇದಿಕೆ ನಿರ್ಮಾಣ ಮಾಡಲಾಗಿದೆ. ಕೊಡಗು ಏಕೀಕರಣ ರಂಗದಿಂದ ಭಕ್ತಾದಿಗಳ ಪ್ರಸಾದ ವಿನಿಯೋಗಕ್ಕೆ ಅಗತ್ಯ ಸಿದ್ಧತೆಗಳು ನಡೆದಿವೆ.

ಪರಿಸರ ಶುಚಿತ್ವ ಹಾಗೂ ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಕಂದಾಯ, ಪೊಲೀಸ್, ಪಂಚಾಯತ್ ರಾಜ್, ಸೆಸ್ಕ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹೀಗೆ ವಿವಿಧ ಇಲಾಖೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಆಗಬೇಕಿರುವ ಕೆಲಸಗಳನ್ನು ಕೈಗೊಂಡಿದ್ದಾರೆ.

ಗಣ್ಯರು, ಅತಿಥಿಗಳು, ಪತ್ರಕರ್ತರು ತೆರಳಲು ಪ್ರತ್ಯೇಕ ಬ್ಯಾರಿಕೇಡ್ ಅಳವಡಿಸಲಾಗಿದೆ. ತಲಕಾವೇರಿಯಲ್ಲಿ ಅಗತ್ಯವಿರುವ ಕಡೆಗಳಲ್ಲಿ ಎಲ್‌ಇಡಿ ವಾಲ್‌ಗಳ ಅಳವಡಿಕೆ, ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ತಾತ್ಕಾಲಿಕ ಶೌಚಾಲಯ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ತೀರ್ಥೋದ್ಭವಕ್ಕೆ ಸಿದ್ಧಗೊಂಡ ತಲಕಾವೇರಿ ಕ್ಷೇತ್ರ.

> **ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಅಕ್ಟೋಬರ್ 17 ರಂದು ಮಧ್ಯಾಹ್ನ 1.44 ಗಂಟೆಗೆ ಸಂಭವಿಸಲಿದ್ದು, ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ತಲಕಾವೇರಿ ಪವಿತ್ರ ಕುಂಡಿಕೆ ಬಳಿ ಹೂವಿನ ಅಲಂಕಾರ, ದೀಪಾಲಂಕಾರ ಮಾಡಲಾಗಿದೆ. ಭಾಗಮಂಡಲದಿಂದ ತಲಕಾವೇರಿಗೆ, ತಲಕಾವೇರಿಯಿಂದ ಭಾಗಮಂಡಲದವರೆಗೆ 25 ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚರಿಸಲಿದ್ದು, ಈ ಮಾರ್ಗದಲ್ಲಿ ಭಕ್ತಾದಿಗಳು ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ.**
> **- ಆರ್.ಐಶ್ವರ್ಯ,** ಹೆಚ್ಚುವರಿ ಜಿಲ್ಲಾಧಿಕಾರಿ

ಎಸ್‌ಪಿ ಹಾಗೂ ಎಎಸ್‌ಪಿ ಸೇರಿದಂತೆ ಮೂವರು ಡಿವೈಎಸ್‌ಪಿ, 8 ಪೊಲೀಸ್ ಇನ್ಸ್‌ಪೆಕ್ಟರ್, 21 ಪಿಎಸ್‌ಐ, 41 ಎಎಸ್‌ಐ, 238 ಹೆಡ್ ಕಾನ್ಸ್‌ಟೇಬಲ್, 52 ಡಬ್ಲ್ಯುಪಿಸಿ, 2 ಕೆಎಸ್‌ಆರ್‌ಪಿ, 4 ಡಿಎಆರ್ ಇತರರನ್ನು ನಿಯೋಜಿಸಿ, ಅಗತ್ಯ ಬಂದೋಬಸ್ತ್ ಮಾಡಲಾಗಿದೆ.

ಡಿಸಿಎಂ, ಸಚಿವರ ಭೇಟಿ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಶ್ರೀಭಗಂಡೇಶ್ವರ- ತಲಕಾವೇರಿ ದೇವಾಲಯದಲ್ಲಿ ನಡೆಯುವ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ವನ್ಯಜೀವಿಗಳಿಗಿದು ಕಾಲವಲ್ಲ

ಭಾರತದಲ್ಲಿ ಕಾಡಾನೆಗಳ ಸಂಖ್ಯೆಯು ಶೇ.18ರಷ್ಟು ಇಳಿಕೆಯಾಗಿರುವ ಮಾಹಿತಿಯನ್ನು ದೇಶದ ಮೊದಲ ಡಿಎನ್ಎ ಆಧಾರಿತ ಸಮೀಕ್ಷೆಯು ತಿಳಿಸಿದೆ. 2017ರಲ್ಲಿ ನಡೆಸಲಾದ ಗಣತಿಯಲ್ಲಿ 27,312ರಷ್ಟು ಇದ್ದ ಕಾಡಾನೆಗಳ ಸಂಖ್ಯೆಯು ಪ್ರಸ್ತುತ 22,446ಕ್ಕೆ ಇಳಿದಿರುವುದು ಈ ಸ್ಥೂಲ ಮಾಹಿತಿಗೆ ಮೂಲಾಧಾರ. ಮತ್ತೊಂದೆಡೆ, ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟ ಪ್ರದೇಶದಲ್ಲಿ ಒಂದಷ್ಟು ಹುಲಿಗಳು ಅಸುನೀಗಿದ ಘಟನೆಯೂ ವರದಿಯಾಗಿದೆ. ಇನ್ನು, ಚಿರತೆ, ಹುಲಿ, ಆನೆಗಳಂಥ ಕಾಡುಪ್ರಾಣಿಗಳು ಅರಣ್ಯ ಪ್ರದೇಶಕ್ಕೆ ತಗುಲಿಕೊಂಡಂತಿರುವ ಊರುಗಳನ್ನು ಪ್ರವೇಶಿಸಿ, ಜನಸಮುದಾಯದಲ್ಲಿ ಭೀತಿ ಹುಟ್ಟಿಸುವ ಘಟನೆಗಳು ಆಗಾಗ ವರದಿಯಾಗುವುದಿದೆ. ಅಭಿವೃದ್ಧಿ, ವಿಸ್ತರಣೆ, ನಗರೀಕರಣ, ಕೈಗಾರಿಕೆ/ಎಸ್ಇಜಡ್‌ಗಳ ಸ್ಥಾಪನೆ ಮುಂತಾದ ಹಣೆಪಟ್ಟಿಯಲ್ಲಿ ಅರಣ್ಯಗಳನ್ನು ನಾವು ಒತ್ತುವರಿ ಮಾಡುತ್ತಿರುವುದರಿಂದಾಗಿ ವನ್ಯಜೀವಿಗಳ ನೆಲೆಗಳಿಗೆ ಮತ್ತು ಅಲ್ಲಿನ ಸಹಜ ವಾತಾವರಣಕ್ಕೆ ಧಕ್ಕೆ ಒದಗುತ್ತಿದೆ. ಅಭಯಾರಣ್ಯಗಳ ಮಧ್ಯದಲ್ಲೇ ಹಾದುಹೋಗುವಂತೆ ರಸ್ತೆಗಳನ್ನು ನಿರ್ಮಿಸುವುದಕ್ಕೆ ಕೆಲವರು ಹಪಹಪಿಸುವುದು ಕೂಡ ಇಂಥ ಮತ್ತೊಂದು ಅನಪೇಕ್ಷಿತ ನಡೆಯೇ. ಹೀಗಾಗಿ, ವನ್ಯಜೀವಿಗಳು ಸಹಜವಾಗಿಯೇ ಕಂಗಾಲಾಗುತ್ತಿವೆ, ಆ ಪೈಕಿ ಕೆಲ ಜೀವಿಗಳು ನಾಡೊಳಗೆ ನುಗ್ಗುವಂಥ ಪರಿಸ್ಥಿತಿ ಕಾಣಬರುತ್ತಿದೆ. ಕೆಲ ವರ್ಷಗಳ ಹಿಂದೆ, ದಂತಚೋರರ ಕಾರಣದಿಂದಾಗಿ ಆನೆಗಳ ಮಾರಣಹೋಮವೇ ನಡೆದಿದ್ದನ್ನು ಬಿಡಿಸಿ ಹೇಳಬೇಕಿಲ್ಲ. 'ನಾಡಿನ ಜನರ ಬದುಕು ಸಮಾಧಾನಕರವಾಗಿ ನಡೆಯಬೇಕೆಂದಿದ್ದರೆ, ವನವೂ ಇರಬೇಕು, ವನ್ಯಜೀವಿಗಳೂ ಇರಬೇಕು ಮತ್ತು ಆ ಎರಡರ ಅಸ್ತಿತ್ವಕ್ಕೆ ಸಂಚಕಾರ ತರಬಾರದು' ಎಂಬ ಪ್ರಜ್ಞೆಯು ಜನರಲ್ಲಿ ಮೂಡಬೇಕು. ಇಲ್ಲದಿದ್ದರೆ, ಮುಂಬರುವ ದಿನಗಳಲ್ಲಿ ಅರಣ್ಯಜೀವಿಗಳ ಅಳಲನ್ನು ಮತ್ತಷ್ಟು ಕೇಳಬೇಕಾಗಿ ಬಂದೀತು, 'ವನ್ಯಜೀವಿಗಳಿಗಿದು ಕಾಲವಲ್ಲ' ಎಂದು ಬಹಿರಂಗವಾಗಿ ಹೇಳಬೇಕಾದ ಕ್ಷಣ ಬಂದೀತು. ಹಾಗಾಗದಿರಲಿ...

ಸೊಂಪಾದಕೀಯ

ಹರ್ಷಿತ್ ರಾಣಾ ಪ್ರತಾಪ?

ಭಾರತ ಕ್ರಿಕೆಟ್ ತಂಡದಲ್ಲಿ ಜಾಗ ಸಿಗಬೇಕು ಅಂದ್ರೆ, ಆಯ್ಕೆದಾರರು ಒಬ್ಬ ಆಟಗಾರನತ್ತ ಗಮನ ಹರಿಸಬೇಕು ಅಂದ್ರೆ, ಅದಕ್ಕೆ ಆತ ಎಷ್ಟು ಬೆವರು ಸುರಿಸಬೇಕು ಅಂತ ಎಲ್ಲರಿಗೂ ಗೊತ್ತು. ಆದರೆ ಈಗ ಪದೇ ಪದೆ ತಂಡದಲ್ಲಿ ಸ್ಥಾನ ಗಳಿಸುತ್ತಿರುವ ಹರ್ಷಿತ್ ರಾಣಾ ಮಾತ್ರ ಈ ಮಾತಿಗೆ ಅಪವಾದ ಆಗಿದ್ದಾರೆ. ರಾಣಾ ಅವರ ಆಯ್ಕೆ ನೋಡಿ ಎಲ್ಲರೂ ಈಗ ಕೋಚ್ ಗಂಭೀರ್ ಮತ್ತು ಆಯ್ಕೆದಾರ ಅಗರ್ಕರ್ ಅವರನ್ನು ಪ್ರಶ್ನೆ ಮಾಡ್ತಾ ಇದ್ದಾರೆ.

'ಈ ಹರ್ಷಿತ್ ರಾಣಾ ಅನ್ನೋ ಹುಡುಗ ದೇಸಿ ಕ್ರಿಕೆಟ್‌ನಲ್ಲಿ ಅದ್ಯಾವ ಪ್ರತಾಪ ತೋರಿಸಿದ ಅಂತ ಈತನನ್ನ ಇಂಡಿಯನ್ ಟೀಮಿಗೆ ಆಯ್ಕೆ ಮಾಡಿದ್ರಿ?' ಅಂತ ಎಲ್ಲರೂ ಈಗ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ತೀರಾ ಯಾವುದೋ ದುರ್ಬಲ ತಂಡದ ವಿರುದ್ಧದ ಸರಣಿಗೆ ಈತ ಆಯ್ಕೆ ಆಗಿದ್ದಿದ್ದರೆ ಯಾರೂ ಅಷ್ಟು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಬಲಾಢ್ಯ ಆಸ್ಟ್ರೇಲಿಯಾ ಎದುರಿನ ಸರಣಿಗೆ ಈತ ಬೇಕಿತ್ತಾ ಅನ್ನೋದು ಎಲ್ಲರ ಪ್ರಶ್ನೆ. ಅದಲ್ಲದೆ ಯಾವುದೋ ಒಂದು ಫಾರ್ಮ್ಯಾಟ್‌ನಲ್ಲಿ ಈತ ಭಾರತ ವನ್ನು ಪ್ರತಿನಿಧಿಸಿದ್ದರೆ ಪರವಾಗಿರಲಿಲ್ಲ. ಈತನನ್ನ ಟೆಸ್ಟ್, ಒನ್‌ಡೇ, ಟಿ-20 ಮೂರೂ ಮಾದರಿಯ ಕ್ರಿಕೆಟ್ ತಂಡಗಳಲ್ಲಿ ಆಯ್ಕೆ ಮಾಡಿರೋದು ಎಲ್ಲರ ಹುಬ್ಬೇರಿಸಿದೆ. ಗೌತಮ್ ಗಂಭೀರ್ ಅವರಿಗೆ ಹಿರಿಯ ಆಟಗಾರರ ಬಗ್ಗೆ ಇರೋ ಅಸಮಾಧಾನ ಎಲ್ಲರಿಗೂ ಗೊತ್ತಿರೋದೇ. ಕೊಹ್ಲಿ, ಧೋನಿ ಸೇರಿ ಈತನಿಗೆ ಯಾರನ್ನು ಕಂಡ್ರೂ ಆಗಲ್ಲ. ಹಾಗಾಗಿ ಹೊಸ ಪ್ರತಿಭೆಗಳನ್ನು ಆಯ್ಕೆ ಮಾಡೋ ನೆಪದಲ್ಲಿ ಹಿರಿಯರನ್ನು ಕಡೆಗಣಿಸುತ್ತಿದ್ದಾರೆ ಅನ್ನೋದು ಸತ್ಯ. ಜತೆಗೆ ಹೊಸ ಪ್ರತಿಭೆ, ಯುವ ಪ್ರತಿಭೆ ಅಂದ್ರೆ, ದೇಶದಲ್ಲಿ ಸಾಕಷ್ಟು ಜನ ಆಟಗಾರರು ಸಿಕ್ತಾರೆ. ಆದರೆ ಅವರೆಲ್ಲರನ್ನೂ ಬಿಟ್ಟು ಏನೂ ಮಹಾನ್ ಸಾಧನೆ ಮಾಡಿರದ ರಾಣಾ ಅವರಂಥ ಎಳಸುಗಳಿಗೆ ಮಣೆ ಹಾಕಿದರೆ ಹೇಗೆ ಅನ್ನೋ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಆದರೆ ಈ ಆಯ್ಕೆ ಬಗ್ಗೆ ಪ್ರಶ್ನೆ ಮಾಡಿದರೆ ಗಂಭೀರ್ ಅವರು ಸುಲಭವಾಗಿ ಅಜಿತ್ ಅಗರ್ಕರ್ ಅವರ ಕಡೆ ಕೈ ತೋರಿಸಿ ಸುಮ್ಮನಾಗಬಹುದು, ಎಡಗೈಯಲ್ಲಿ ಆಯ್ಕೆ ಮಾಡಿದ್ದು ಬಲಗೈಗೆ ಗೊತ್ತಾಗಬಾರದು ಎನ್ನುವಂತೆ.

ಸಂಪಾದಕರ ಸದ್ಯಶೋಧನೆ

ಇದು ವಿಮಾನಯಾನದಲ್ಲಿ ಮಾತ್ರ ಸಾಧ್ಯ!

2025ರ ಜನವರಿ 1. ಅಂದು ಹಾಂಗ್‌ಕಾಂಗ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾರಿದ ಕ್ಯಾಥೆ ಪೆಸಿಫಿಕ್ ವಿಮಾನ ಸಿಎಕ್ಸ್- 880 ಪ್ರಯಾಣಿಕರಿಗೆ ಒಂದು ಅಸಾಮಾನ್ಯ ಮತ್ತು ರೋಮಾಂಚಕಾರಿ ಅನುಭವ ನೀಡಿತು. ಈ ವಿಮಾನವು ಮಧ್ಯರಾತ್ರಿ 12:21 ಗಂಟೆಗೆ ಟೇಕಾಫ್ ಆಗಿ, ಪೆಸಿಫಿಕ್ ಮಹಾಸಾಗರದ ಮೇಲೆ ಹಾರುತ್ತಾ ಅಂತಾರಾಷ್ಟ್ರೀಯ ದಿನಾಂಕ ರೇಖೆಯನ್ನು (International Date Line- IDL) ದಾಟಿತು. ಇದರ ಪರಿಣಾಮವಾಗಿ, ವಿಮಾನವು ಸಮಯವನ್ನು ಹಿಂದಕ್ಕೆ ತಿರುಗಿಸಿದಂತೆ ಆಯಿತು. ಹೀಗಾಗಿ, ಲಾಸ್ ಏಂಜಲೀಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆಗ ಸಮಯ ಮತ್ತು ದಿನಾಂಕ 2024ರ ಡಿಸೆಂಬರ್ 31ರಂದು ರಾತ್ರಿ 8:30 ಗಂಟೆ ಆಯಿತು. ಈ ಘಟನೆಯಿಂದ ಪ್ರಯಾಣಿಕರು ಹೊಸ ವರ್ಷದ ಸಂಭ್ರಮಾಚರಣೆಯನ್ನು ಎರಡು ಬಾರಿ ಅನುಭವಿಸುವ ಅಪರೂಪದ ಅವಕಾಶ ಪಡೆದರು. ಈ ವಿಷಯವು ಸಮಯ ವಲಯಗಳು, ಭೂಗೋಳಶಾಸ್ತ್ರ ಮತ್ತು ವಿಮಾನಯಾನದ ಅದ್ಭುತ ಸಂಯೋಜನೆಯನ್ನು ಪ್ರತಿಬಿಂಬಿಸುತ್ತದೆ. ಅಂತಾರಾಷ್ಟ್ರೀಯ ದಿನಾಂಕ ರೇಖೆಯು ಭೂಮಿಯ ಮೇಲೆ ಸುಮಾರು 180 ಡಿಗ್ರಿ ಅಕ್ಷಾಂಶದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಡಿರುವ ಕಾಲ್ಪನಿಕ ರೇಖೆಯಾಗಿದೆ. ಇದು ಪೆಸಿಫಿಕ್ ಮಹಾಸಾಗರದ ಮಧ್ಯದಲ್ಲಿ ಹಾದುಹೋಗುತ್ತದೆ ಮತ್ತು ದಿನಾಂಕಗಳನ್ನು ಬದಲಾಯಿಸುವ ಗಡಿಯಾಗಿ ಕಾರ್ಯನಿರ್ವಹಿಸುತ್ತದೆ. ಪೂರ್ವದಿಂದ ಪಶ್ಚಿಮಕ್ಕೆ ಈ ರೇಖೆಯನ್ನು ದಾಟಿದರೆ ಒಂದು ದಿನ ಮುಂದುವರಿಯುತ್ತದೆ, ಆದರೆ ಪಶ್ಚಿಮದಿಂದ ಪೂರ್ವಕ್ಕೆ ದಾಟಿದರೆ ಒಂದು ದಿನ ಹಿಂದಿರುಗುತ್ತದೆ. ಉದಾಹರಣೆಗೆ, ಹಾಂಗ್‌ಕಾಂಗ್‌ನಲ್ಲಿ ಜನವರಿ 1ರಂದು ಹಾರಿದ ವಿಮಾನವು ಐಡಿಎಲ್ ದಾಟಿದ ನಂತರ ಡಿಸೆಂಬರ್ 31ಕ್ಕೆ ಮರಳಿತು. ಈ ರೇಖೆಯು ನೇರವಾಗಿಲ್ಲ; ಅದು ಕೆಲವು ದ್ವೀಪಗಳ ಸುತ್ತಲೂ ಬಾಗಿದೆ, ಉದಾಹರಣೆಗೆ ಕಿರಿಬಾಟಿ ಮತ್ತು ಫಿಜಿ ದೇಶಗಳಲ್ಲಿ, ಇದರಿಂದಾಗಿ, ಕೆಲವು ಸ್ಥಳಗಳಲ್ಲಿ ಸಮಯ ವ್ಯತ್ಯಾಸವು +14 ಗಂಟೆಗಳವರೆಗೆ ಇರಬಹುದು. ಈ ವ್ಯವಸ್ಥೆಯು 1884ರಲ್ಲಿ ಅಂತಾರಾಷ್ಟ್ರೀಯ ಮೆರಿಡಿಯನ್ ಸಮ್ಮೇಳನದಲ್ಲಿ ಸ್ಥಾಪನೆಯಾಯಿತು. ಇದು ಭೂಮಿಯ ಸಮಯ ವಲಯಗಳನ್ನು ಸಂಯೋಜಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕ್ಯಾಥೆ ಪೆಸಿಫಿಕ್ ವಿಮಾನ ಸಿಎಕ್ಸ್-880 ಹಾಂಗ್‌ಕಾಂಗ್‌ನಿಂದ ಲಾಸ್ ಏಂಜಲೀಸ್‌ಗೆ ನಿಯಮಿತ ಸೇವೆಯಾಗಿದ್ದು, ಸಾಮಾನ್ಯವಾಗಿ ಏರ್‌ಬಸ್ ಎ-350-1000 ವಿಮಾನವನ್ನು ಬಳಸುತ್ತದೆ. ಈ ವಿಮಾನದ ಹಾರಾಟದ ಅವಧಿ ಸುಮಾರು 12-13 ಗಂಟೆಗಳು ಮತ್ತು ಇದು 9 ಸಮಯ ವಲಯಗಳನ್ನು ದಾಟುತ್ತದೆ. 2025ರ ಜನವರಿ 1ರಂದು, ಹಾಂಗ್‌ಕಾಂಗ್‌ನಲ್ಲಿ ಹೊಸ ವರ್ಷದ ಆಚರಣೆ ಮುಗಿದ ಕೆಲವೇ ನಿಮಿಷಗಳಲ್ಲಿ ವಿಮಾನ ಹಾರಿತು. ಪ್ರಯಾಣಿಕರು ಹಾಂಗ್‌ಕಾಂಗ್‌ನಲ್ಲಿ 2025ರ ಹೊಸ ವರ್ಷವನ್ನು ಸ್ವಾಗತಿಸಿದ ನಂತರ ವಿಮಾನಕ್ಕೆ ಏರಿದರು. ಹಾರಾಟದ ದಾರಿಯಲ್ಲಿ, ವಿಮಾನವು ಪೆಸಿಫಿಕ್ ಮಹಾಸಾಗರದ ಮೇಲೆ ಹಾರುತ್ತಾ ಐಡಿಎಲ್ ದಾಟಿತು. ಇದರಿಂದ ಸಮಯ ವ್ಯತ್ಯಾಸವು 16 ಗಂಟೆಗಳಷ್ಟು ಹಿಂದಕ್ಕೆ ಹೋಯಿತು. ಪರಿಣಾಮವಾಗಿ, ಲಾಸ್ ಏಂಜಲೀಸ್‌ನಲ್ಲಿ ಇಳಿಯುವ ಸಮಯಕ್ಕೆ ಅದು 2024ರ ಡಿಸೆಂಬರ್ 31ರ ರಾತ್ರಿ ಆಗಿತ್ತು. ವಿಮಾನವು ನಿಗದಿತ ಸಮಯಕ್ಕಿಂತ 22 ನಿಮಿಷಗಳ ಮುಂಚೆ ಇಳಿಯಿತು. ಇದರಿಂದ ಪ್ರಯಾಣಿಕರು ಲಾಸ್ ಏಂಜಲೀಸ್‌ನಲ್ಲಿ ಮತ್ತೊಮ್ಮೆ ಹೊಸ ವರ್ಷದ ಸಂಭ್ರಮವನ್ನು ಆಚರಿಸುವ ಅವಕಾಶ ಪಡೆದರು. ಪ್ರಯಾಣಿಕರ ಅನುಭವವು ಅತ್ಯಂತ ವಿಶಿಷ್ಟವಾಗಿತ್ತು. ಹಾಂಗ್‌ಕಾಂಗ್‌ನಲ್ಲಿ ಹೊಸ ವರ್ಷದ ಆ ಘೋಷ ಮುಗಿದ ನಂತರ ವಿಮಾನಕ್ಕೆ ಏರಿದ ಅವರು, ಹಾರಾಟದ ನಡುವೆ ಸಮಯ ಹಿಂದಿರುಗುವುದನ್ನು ಕಂಡರು. ಕಾರಣ ಅವರು ಒಂದೇ ದಿನದಲ್ಲಿ ಎರಡು ಬಾರಿ ಹೊಸ ವರ್ಷವನ್ನು ಸ್ವಾಗತಿಸಿದರು. ವಿಮಾನದಲ್ಲಿನ ಸೇವಾ ಸಿಬ್ಬಂದಿ ಈ ಘಟನೆಯನ್ನು ವಿಶೇಷವಾಗಿ ಆಚರಿಸಿದರು, ಸಂಭ್ರಮಾಚರಣೆಯ ಪಾನೀಯಗಳು ಮತ್ತು ಸಂದೇಶಗಳೊಂದಿಗೆ. ಸಾಮಾಜಿಕ ಜಾಲತಾಣಗಳಲ್ಲಿ ಅನೇಕ ಪ್ರಯಾಣಿಕರು ತಮ್ಮ ಅನುಭವಗಳನ್ನು ಹಂಚಿಕೊಂಡರು, 'ನಾವು ಭವಿಷ್ಯದಿಂದ ಹಿಂದಕ್ಕೆ ಬಂದಂತೆ ಭಾಸವಾಯಿತು' ಎಂದು ಬರೆದರು. ಈ ರೀತಿಯ ಘಟನೆಗಳು ವಿಮಾನಯಾನದಲ್ಲಿ ಅಪರೂಪವಲ್ಲದಿದ್ದರೂ, ಹೊಸ ವರ್ಷದ ಸಂದರ್ಭದಲ್ಲಿ ಸಂಭವಿಸಿದ್ದರಿಂದ ವಿಶೇಷವಾಗಿತ್ತು.

ಹಾಯಾದ ಬದುಕಿನ ಗುಟ್ಟು: ಕತ್ತೆ ಬಾಲ, ಕುದುರೆ ಜುಟ್ಟು..!

ಶಿಶಿರಕಾಲ

ಶಿಶಿರ್ ಹೆಗಡೆ
shishirh@gmail.com

ಒಮ್ಮೆ ಗೌತಮ ಬುದ್ಧನನ್ನು ಭೇಟಿಯಾಗಲು ಕೆಲವೊಂದಿಷ್ಟು ಸನ್ಯಾಸಿಗಳು ಅವನ ಆಶ್ರಮ 'ಜೇತವನ'ಕ್ಕೆ ಬಂದಿದ್ದರು. ಅವರು ಬುದ್ಧನ ಜತೆ ಮಾತನಾಡುತ್ತಿದ್ದಾಗ ಅಲ್ಲಿಯೇ ತುಸುದೂರದಲ್ಲಿ ಆಶ್ರಮ ವಾಸಿ, ಸನ್ಯಾಸಿ 'ಬಢಿಯಾ' ಏನೋ ಕೆಲಸ ಮಾಡುತ್ತಿದ್ದ. ಬುದ್ಧ ಅವನನ್ನು ತೋರಿಸಿ ''ನೋಡಿ, ಅಲ್ಲಿರುವ ಸನ್ಯಾಸಿಯ ಹೆಸರು 'ಲಕುಂತಕ ಬಢಿಯಾ', ಅವನು ತನ್ನ ಅಪ್ಪ ಮತ್ತು ಅಮ್ಮನನ್ನು ಕೊಂದಿದ್ದಾನೆ. ಆತ ನಮ್ಮ ಆಶ್ರಮದ ಸರ್ವಶ್ರೇಷ್ಠ ಸನ್ಯಾಸಿಗಳಲ್ಲಿ ಒಬ್ಬ'' ಎಂದು ಪರಿಚಯಿಸಿ ಸುಮ್ಮನಾದ. ಎಲ್ಲರಿಗೂ ಆಶ್ಚರ್ಯ. 'ಬುದ್ಧ ಎಂದರೆ ಅಹಿಂಸೆಯ ಪ್ರತಿಪಾದಕ; ಇಲ್ಲಿ ನೋಡಿದ್ರೆ ಅಪ್ಪ ಅಮ್ಮನನ್ನು ಕೊಂದ ಸನ್ಯಾಸಿಯನ್ನು ಶ್ರೇಷ್ಠ ಎನ್ನುತ್ತಿದ್ದಾನೆ. ಬುದ್ಧನಿಗೇನಾಗಿದೆ?'- ಗುಸುಗುಸು ಮಾತನಾಡಿಕೊಳ್ಳುತ್ತ ಅವರೆಲ್ಲ ನಿರ್ಗಮಿಸಿದ ನಂತರ ಅವನ ಶಿಷ್ಯರಿಗೆ ಕೂಡ ಆಶ್ಚರ್ಯ. ''ತಥಾಗತ, ಬಢಿಯಾ ಅಪ್ಪ ಅಮ್ಮನನ್ನು ಕೊಂದಿದ್ದಾನೆ ಎಂದು ನಮಗೆ ಗೊತ್ತಿರಲಿಲ್ಲ. ಅಪ್ಪ ಅಮ್ಮನನ್ನು ಕೊಂದವನನ್ನು ಶ್ರೇಷ್ಠ ಎನ್ನುತ್ತಿದ್ದಿ, ಏನು ಕಥೆ?'' ಎಂದು ಪ್ರಶ್ನಿಸಿದರು.

ಒಬ್ಬ ಒಳ್ಳೆಯ ತಂದೆ-ತಾಯಿಯ ಲಕ್ಷಣವೇನು? ಮಕ್ಕಳಿಗೆ ಮಾರ್ಗದರ್ಶಿಸುವುದು ಅಲ್ಲವೇ? ''ಹೀಗೆ ಮಾಡು, ಹಾಗೆ ಮಾಡಬೇಡ, ಇದು ಮಾಡಿದರೆ ಹೀಗಾಗುತ್ತದೆ, ನೋಡು ನಾನು ಮೊದಲೇ ಹೇಳಿದ್ದೆ, ಹಿಂದೆಯೇ ಎಚ್ಚರಿಸಿದ್ದೆ, ನಿನಗೆ ಎಷ್ಟು ಹೇಳಿದರೂ ಅಷ್ಟೇ.. ಇತ್ಯಾದಿ. ಇದುವೇ ಮುಂದುವರಿದು ನೀನು ಅಲಸಿ, ಎಂಟಾಣೆ ಪ್ರಯೋಜನಕ್ಕೆ ಬರುವುದಿಲ್ಲ, ನೀನು ಹಾಗೆ ಹೇಳಿದ್ದು ಸರಿಯಲ್ಲ, ಹಾಗೆ ಮಾಡಿದ್ದು, ಮಾತನಾಡಿದ್ದು ಸರಿಯಲ್ಲ ಇತ್ಯಾದಿ. ಸ್ವಲ್ಪ ದೊಡ್ಡವರಾಗುತ್ತಿದ್ದಂತೆ ತಂದೆ-ತಾಯಿಯ ಆ ಜವಾಬ್ದಾರಿಯ ಕ್ರಿಯೆಯನ್ನು ಸ್ನೇಹಿತರು, ಸಂಬಂಧಿಗಳು ಎಲ್ಲರೂ ನಿಭಾಯಿಸಲು ಶುರು ಮಾಡುತ್ತಾರೆ. ಕ್ರಮೇಣ ಸಮಾಜಕ್ಕೆ ತೆರೆದುಕೊಂಡಾಗ ಅಲ್ಲಿ ಎಲ್ಲರೂ ಅಪ್ಪ-ಅಮ್ಮಂದಿರಂತೆ ಅನಿಸಿಕೆ, ಅಭಿಪ್ರಾಯ ಕೊಡುತ್ತಿರುತ್ತಾರೆ. ಕಂಡಕಂಡವರೆಲ್ಲ ಏನೋ ಒಂದು ಹೇಳುವವರೇ. ಕೊನೆಗೆ ನಮ್ಮ ಮನಸೇ ಆ ಕೆಲಸ ಶುರುಮಾಡಿಕೊಂಡುಬಿಡುತ್ತದೆ. ಮನಸ್ಸಿನೊಳಗಿನ ಈ ಅಭಿಪ್ರಯಿಸುವ, ತೀರ್ಮಾನ ಕೊಡುವ, ಬೇರೆಯವರು ಏನಂದುಕೊಳ್ಳುತ್ತಾರೆ? ಎಂಬ ಆ ಧ್ವನಿಯನ್ನು ಸನ್ಯಾಸಿ 'ಲಕುಂತಕ ಬಢಿಯಾ' ಕೊಂದು ಹಾಕಿದ್ದಾನೆ, ಹಾಗಾಗಿ ಶ್ರೇಷ್ಠ'' ಎಂದು ಬುದ್ಧ ಸೂಚ್ಯವಾಗಿ ಹೇಳಿದ್ದು.

ಮನುಷ್ಯನ ಯಾವುದೇ ಗುಣವನ್ನು ಮೂಲದಲ್ಲಿ, ವಿಕಸನದ ಮಸೂರದಲ್ಲಿ ನೋಡಿದಾಗ ಅದು ರಕ್ತಗತ ಗುಣವಾಗಲು ಕಾರಣವೇನಿತ್ತು ಎಂಬುದು ತಿಳಿಯುತ್ತದೆ. ಮನುಷ್ಯ ವಿಕಸನದಲ್ಲಿ ಇನ್ನೊಬ್ಬರ ಅಭಿಪ್ರಾಯ ಅತ್ಯಂತ ಮೌಲ್ಯಯುತವಾದದ್ದಾಗಿತ್ತು. ಏಕೆಂದರೆ ಬೇಟೆಯಿರಬಹುದು, ಅಥವಾ ಆದಿ ಬದುಕಿನ ಏನೇ ಕೆಲಸವಿರಬಹುದು, ನಮ್ಮ ಕುಂದು ಕೊರತೆಯನ್ನು ತಿಳಿಯುವುದು ಮೊದಲ ಅವಶ್ಯಕತೆಯಾಗಿತ್ತು. ಅದು ಬಹುಕಾಲ ಇನ್ನೊಬ್ಬರ ಅಭಿಪ್ರಾಯದಿಂದಷ್ಟೇ ಸಾಧ್ಯವಾಗುತ್ತಿತ್ತು. ಯಾವುದರಲ್ಲಿ ನಾವು ಹಿಂದಿದ್ದೇವೆ ಎಂದು ತಿಳಿಯಲು ಇನ್ನೊಬ್ಬರ ಅಭಿಪ್ರಾಯ- 'ನೀನು ಓಡುವಾಗ ಹೀಗೆ ಓಡುತ್ತೀಯ, ಬೇಟೆಯ ಸಮಯದಲ್ಲಿ ಇಂಥ ತಪ್ಪು ಮಾಡುತ್ತಿದ್ದೀಯ, ಜಾಗ್ರತೆಯಿಂದಿರು' ಎಂಬಿತ್ಯಾದಿ ಎಲ್ಲಾ ಅನಿಸಿಕೆಗಳು ಅತ್ಯಂತ ಮಹತ್ವದ್ದಾಗಿದ್ದವು. ಅದನ್ನು ಸರಿಮಾಡಿಕೊಳ್ಳದಿದ್ದರೆ ಅದು ಜೀವನ್ಮರಣದ ಪ್ರಶ್ನೆ. ಸಮಾಜ ಬೆಳೆದಂತೆ ವ್ಯಕ್ತಿಗತ ಸಾಮರ್ಥ್ಯಕ್ಕೆ ಅನುಗುಣವಾಗಿಯೇ ಇಂದಿಗೂ ವ್ಯಕ್ತಿಯ ಸಾಮಾಜಿಕ ಶ್ರೇಣಿ ನಿರ್ಧರಿತವಾಗುವುದು. ಹಾಗಾಗಿಯೇ ಇನ್ನೊಬ್ಬರ ಅನಿಸಿಕೆಗೆ ನಾವು ಅಷ್ಟೆಲ್ಲಾ ಮಹತ್ವಕೊಡುವುದು. ನಿಂದನೆಗೆ, ಕುಹಕಕ್ಕೆ ನಾವು ಯೋಚಿಸದೆ ಪ್ರತಿಕ್ರಿಯಿಸುವುದು.

''ಜನ ಆಡಿಕೊಳ್ತಾರೆ- ಏನೂ ಮಾಡಲಿಕ್ಕಾಗುವುದಿಲ್ಲ, ನಾವು ಆಡಿಕೊಳ್ಳುವವರನ್ನು ನಿರ್ಲಕ್ಷಿಸಬೇಕು, ಉದಾಸೀನ ಮಾಡಬೇಕು'' ಎಂದು ಎಲ್ಲರೂ ಹೇಳುತ್ತಾರೆ. ಆದರೆ ಉದಾಸೀನ ಮಾಡುವುದು ಹೇಗೆ? ಹೇಳಿದಷ್ಟು ಸುಲಭವೇ? ಒಮ್ಮೆ ಅಲಕ್ಷಿಸಬಹುದು, ಇನ್ನೊಮ್ಮೆ ನಿರ್ಲಕ್ಷಿಸಬಹುದು, ಯಾರೋ ನಿರಂತರ ನಿಂದನೆಗೆ ತೊಡಗಿದರೆ? ಬೆನ್ನ ಹಿಂದೆ ಪದೇ ಪದೇ ನಿಮ್ಮ ಬಗ್ಗೆ ಮಾತನಾಡಿದರೆ? ಸಮಾಜದಲ್ಲಿ, ಎಲ್ಲರಲ್ಲೂ ನಾವು ಸಲ್ಲಬೇಕಲ್ಲ!! 'ಇನ್ನೊಬ್ಬರು ಏನಂದುಕೊಳ್ಳುತ್ತಾರೆ?' ಎಂಬುದೇ ನಮ್ಮಲ್ಲಿ ಬಹುತೇಕರ ಬದುಕನ್ನು ನಿರ್ದೇಶಿಸುತ್ತದೆ ಎಂದಾದರೆ ಬದುಕು ಯಾರ ಹಿಡಿತದಲ್ಲಿದೆ ಎಂದಾಯಿತು? ನಿಂದಾ ಸ್ತುತಿಮೌನಮಿತಿ ಪ್ರಹೃಷ್ಟಃ- ಜಾಣನಾದವನು ಹೊಗಳಿದಾಗ, ಆರೋಪಿಸಿದಾಗ ಮತ್ತು ಅಲಕ್ಷಿಸಿದಾಗ ಆಂತರ್ಯದಲ್ಲಿ ಕದಡುವುದಿಲ್ಲ ಎಂದು ಯೋಗವಾಸಿಷ್ಠದಲ್ಲಿ ಬರುತ್ತದೆ. ನಮ್ಮನ್ನು ಹೊಗಳಿದಾಗ ಹತೋಟಿಯಲ್ಲಿರಬಹುದು, ತೆಗಳಿದಾಗ? ಆರೋಪ ಚಿಕ್ಕದಿರಲಿ, ದೊಡ್ಡದಿರಲಿ, ಹೇಳಿದವರು ಮಿತ್ರರಿರಲಿ, ಶತ್ರುವಿರಲಿ- ಎಲ್ಲರನ್ನೂ, ಎಲ್ಲವನ್ನೂ ಅಲಕ್ಷಿಸುವುದು ಹೇಗೆ? ಅಲಕ್ಷಿಸುವುದು ಕೂಡ ಪ್ರತಿಕ್ರಿಯೆಯಷ್ಟೇ ಕಷ್ಟಕೊಡುವಂಥದ್ದು. ಅವು ನಮ್ಮನ್ನು ಬಾಧಿಸದಂತೆ ಬದುಕುವುದು, ಎದುರಿಸುವುದು ಹೇಗೆ? ಉಳಿದವರು ಏನಂದುಕೊಳ್ಳುತ್ತಾರೆ ಎಂಬ ಪ್ರಶ್ನೆಯನ್ನು ಮೀರುವುದು ಹೇಗೆ? ಪ್ರಶ್ನೆಯನ್ನೇ ಅಲಕ್ಷಿಸುವಂತಿಲ್ಲ- ಏಕೆಂದರೆ ಏನೇ ಮಾಡಲು ಹೊರಟರೂ ಮೊದಲು ಎದುರಾಗುವ ಪ್ರಶ್ನೆಯೇ ಇದು- 'ಯಾರು ಏನನಾಡುಕೊಂಡಾರು?'

ಈ ವಿಷಯದಲ್ಲಿ ಬರಹಗಾರ್ತಿ ಮೆಲ್ ರಾಬಿನ್ಸ್ ಅವರ Let Them Theory ಪುಸ್ತಕದ ಒಂದು ವಾಕ್ಯ ನನ್ನನ್ನು ಬಹುವಾಗಿ ಆಕರ್ಷಿಸಿತು- Give the freedom to let others think whatever they want! ನಿಮ್ಮ ಬಗ್ಗೆ ಏನು ಬೇಕಾದರೂ ಅಂದುಕೊಳ್ಳುವ ಸ್ವಾತಂತ್ರ್ಯವನ್ನು ಉಳಿದವರಿಗೆ ನೀವೇ ಕೊಟ್ಟುಬಿಡಿ. ಇದು ಅಲಕ್ಷಿಸಿದಂತಲ್ಲ- ಪ್ರತಿಬಾರಿಯೂ ನಾನು ಏನೋ ಒಂದು ಹೊಸ ಬಿಸಿನೆಸ್ ಆರಂಭಿಸಿದರೆ, ಪುಸ್ತಕ ಬರೆದರೆ, ಭಾಷಣ ಮಾಡಿದರೆ, ಮಾತನಾಡಿದರೆ, ಏನೇ ಮಾಡಿದರೂ- ಅವರೇನಂದುಕೊಂಡಾರು? ಇವರೇನಂದುಕೊಂಡಾರು? ಈ ಪ್ರಶ್ನೆ ಉದ್ಭವವಾದಾಗಲೆಲ್ಲ- ಏನಾದರೂ ಅಂದುಕೊಳ್ಳಲಿ ಎಂದು ಪ್ರತಿ ಕೆಲಸದ ಮೊದಲು ಮೀರಿ ನಿಲ್ಲುವುದು ಕಷ್ಟ. ಸಮಯ ಮತ್ತು ಶಕ್ತಿವ್ಯರ್ಥ. ಬದಲಿಗೆ ಸಾರಾಸಗಟಾಗಿ- ಇನ್ನು ಮುಂದೆ ಯಾರು ಏನು ಬೇಕಾದರೂ ನಿಮ್ಮ ಬಗ್ಗೆ ಅಭಿಪ್ರಾಯ ಹೊಂದಬಹುದು ಎಂದು ನಾವೇ ಅನುಮತಿಕೊಟ್ಟುಬಿಟ್ಟರೆ? ಸರಾಸರಿ ವ್ಯಕ್ತಿಗೆ ದಿನಕ್ಕೆ ಸುಮಾರು 70 ಸಾವಿರ ಯೋಚನೆ ಬರುತ್ತದಂತೆ. ನಮ್ಮ ಆಜುಬಾಜು ಮಂದಿಗೆ ಈ 70 ಸಾವಿರ ಯೋಚನೆಯಲ್ಲಿ ನಮ್ಮ ಬಗ್ಗೆಯೂ ಅದೆಷ್ಟೋ ಯೋಚನೆಗಳು ಬಂದಿರುತ್ತವೆ. ಕೆಲವು ಸರಿ, ಕೆಲವು ತಪ್ಪು. ನಮಗೆ ನಮ್ಮದೇ ಯೋಚನೆಗಳನ್ನು ಹದ್ದುಬಸ್ತಿನಲ್ಲಿಡಲಾಗದ ಸ್ಥಿತಿಯಿರುವಾಗ ಇನ್ನೊಬ್ಬರು ನಮ್ಮ ಬಗ್ಗೆ ಯೋಚಿಸುವುದನ್ನು ನಾವು ನಿಯಂತ್ರಿಸಲಿಕ್ಕಂತೂ ಸಾಧ್ಯವೇ ಇಲ್ಲ. ಬದಲಿಗೆ ಏನು ಬೇಕಾದರೂ ಅಂದುಕೊಳ್ಳಲಿ ಎಂಬ ಸ್ವಾತಂತ್ರ್ಯವನ್ನು ಎಲ್ಲರಿಗೂ ನಾವೇ ಕೊಟ್ಟುಬಿಟ್ಟರೆ? ಅಯ್ಯೋ, ನಮ್ಮನ್ನು ನಾವು ಸಮರ್ಥಿಸಿಕೊಳ್ಳದೆ ಬದುಕಲಿಕ್ಕಾಗುವುದಿಲ್ಲ ಎನ್ನುತ್ತೀರಾ?

ಎಲ್ಲರಿಗೂ ತಮ್ಮ ತಮ್ಮ ಸಾರ್ವಜನಿಕ ಇಮೇಜ್ ಬಹಳ ಮುಖ್ಯ. ಅದೇನೋ ಸರಿಯೇ, ಹಾಗಂತ ನಾವು ನಮ್ಮನ್ನು ನಿರಂತರ ಸಮರ್ಥಿಸಿಕೊಳ್ಳುತ್ತಲೇ ಇರಬೇಕೇ? ಬದಲಿಗೆ ಸಮರ್ಥಿಸಿಕೊಳ್ಳುವುದನ್ನು ನಿಲ್ಲಿಸಿಬಿಟ್ಟರೆ? ನೀವು ಬೇಕಾದರೆ ಒಂದು ವಾರ ಇದನ್ನು ಪ್ರಯತ್ನಿಸಿ ನೋಡಿ. ಯಾರು ಏನೇ ಹೇಳಲಿ, ಒಮ್ಮೆ ಉತ್ತರಿಸಿ, ಸಮಜಾಯಿಷಿ ಕೊಡಿ. ಆದರೆ ಅದರಾಚೆ ನಿಮ್ಮನ್ನು ಸಮರ್ಥಿಸಿಕೊಳ್ಳುವುದನ್ನು ಸಂಪೂರ್ಣ ನಿಲ್ಲಿಸಿಬಿಡಿ. ಅವಶ್ಯಕತೆಯಿದ್ದಷ್ಟೇ ವಿವರಣೆ- ಅದರಾಚೆ ಅತಿಯಾದ ವಿವರಣೆ ಇಲ್ಲ, ಸ್ವಸಮರ್ಥನೆಯನ್ನು ನಿಲ್ಲಿಸುತ್ತಿದ್ದಂತೆ ಒಂದು ವಿಚಿತ್ರ ಶಾಂತಿ ನಮ್ಮನ್ನು ಆವರಿಸಿದ ಅನುಭವವಾಗುತ್ತದೆ. ನಾನಿಲ್ಲಿ ಮಾನ ಮರ್ಯಾದೆ ಬಿಟ್ಟು ಬದುಕಬೇಕೆನ್ನುತ್ತಿಲ್ಲ. ಕೇವಲ ನಮ್ಮ ವ್ಯಕ್ತಿತ್ವವನ್ನು, ಗುಣವನ್ನು ಸಮರ್ಥಿಸಿಕೊಳ್ಳುವುದನ್ನು ಮಾತ್ರ ನಿಲ್ಲಿಸಿಬಿಡುವುದು. ಉಳಿದವರು ನಿಮ್ಮನ್ನು ಬುದ್ಧಿವಂತರೆಂದುಕೊಳ್ಳಲಿ, ಜ್ಞಾನಿಯೆಂದುಕೊಳ್ಳಲಿ, ದಡ್ಡರೆಂದುಕೊಳ್ಳಲಿ. ನಿಗರ್ವಿಯೆಂದುಕೊಳ್ಳಲಿ ಅಥವಾ ಸೊಕ್ಕಿನವನೆಂದುಕೊಳ್ಳಲಿ. ಒಳ್ಳೆಯವನೆಂದುಕೊಳ್ಳಲಿ, ಕೆಟ್ಟವನೆಂದುಕೊಳ್ಳಲಿ. ಮಿತಿ ಮೀರಿದ ವಿವರಣೆ, ಸ್ವಸಮರ್ಥನೆ ಇಲ್ಲವೇ ಇಲ್ಲ. ಅದೊಂದು ಅನಿರ್ವಚನೀಯ ಸ್ವಾತಂತ್ರ್ಯವನ್ನು ನಮಗೆ ತಂದುಕೊಡುತ್ತದೆ.

ಇನ್ನೊಬ್ಬರ ತಲೆಯಲ್ಲಿ ನಮ್ಮ ಬಗೆಗಿನ ಅಭಿಪ್ರಾಯ, ನಿಲುವನ್ನು ನಿಯಂತ್ರಿಸುವುದು ಅಸಾಧ್ಯದ ಮಾತು. ಚಿಕ್ಕಂದಿನಿಂದಲೂ ನಾವು ಇನ್ನೊಬ್ಬರ ಒಪ್ಪಿಗೆಯನ್ನು ಬಯಸಿಯೇ ಬದುಕಿರುತ್ತೇವೆ: ಅಪ್ಪ-ಅಮ್ಮನಿಗೆ ಹೆಮ್ಮೆಯ ಮಗ/ಮಗಳಾಗಬೇಕು, ಮೇಷ್ಟ್ರ ನೆಚ್ಚಿನ ವಿದ್ಯಾರ್ಥಿಯಾಗಬೇಕು, ಬಾಸ್‌ನ ಅಚ್ಚುಮೆಚ್ಚಿನವನಾಗಬೇಕು, ಸ್ನೇಹಿತರಲ್ಲಿ, ಅಷ್ಟೇ ಅಲ್ಲ ಗುರುತೇ ಇಲ್ಲದ ವ್ಯಕ್ತಿಯಲ್ಲೂ ನನ್ನ ಬಗ್ಗೆ ಒಳ್ಳೆಯ ಇಮೇಜ್ ಇರಬೇಕು. ಎಲ್ಲರೂ ನಮ್ಮನ್ನು ಒಪ್ಪಬೇಕು ಇತ್ಯಾದಿ. ಎಲ್ಲವೂ ಸರಿ. ಆದರೆ ಜನರು ನಿಮ್ಮ ಬಗ್ಗೆ ಏನು ಬೇಕಾದರೂ ಯೋಚಿಸಬಹುದು- ಅದು ನಮ್ಮ ಕೈಯಲ್ಲಿಲ್ಲ, ಅದು ಅವರ ಸ್ವಾತಂತ್ರ್ಯ ಎಂಬ ನಿರಂತರ ಅರಿವು ನಮ್ಮಲ್ಲೊಂದು ಸಮಾಧಾನವನ್ನು ಹುಟ್ಟುಹಾಕುತ್ತದೆ.

ಸ್ವಸಮರ್ಥನೆ ಮನುಷ್ಯಸಹಜ ಗುಣ. ನಮ್ಮ ಯಾವುದೇ ಕೆಲಸದ ಹಿಂದಿನ ಉದ್ದೇಶವನ್ನು ಹತ್ತಿರದವರಿಗೆ ವಿವರಿಸುವ ಅವಶ್ಯಕತೆಯಿರುತ್ತದೆ. ನಮ್ಮ ಆಯ್ಕೆಗಳ ಬಗ್ಗೆ, ನಿರ್ಧಾರಗಳ ಬಗ್ಗೆ ಹೇಳಬೇಕಾಗುತ್ತದೆ. ಅಭಿಪ್ರಾಯ ಪಡೆಯಬೇಕಾಗುತ್ತದೆ. ಅವರು ಯಾವುದಾದರೂ ವಿಷಯದಲ್ಲಿ ತಪ್ಪು ತಿಳಿದುಕೊಂಡರೆ ವಿವರಿಸಬೇಕಾಗುತ್ತದೆ. ನಾನಿಲ್ಲಿ ಅದನ್ನು



ಮಾಡಬಾರದು ಎನ್ನುತ್ತಿಲ್ಲ. ಆದರೆ ನೀವು ನಿಮ್ಮ ಕಥೆಯನ್ನು ಅದೆಷ್ಟೇ ಸ್ಪಷ್ಟವಾಗಿ ಹೇಳಿದರೂ ಅದು ಎದುರಿನವರಿಗೆ ಅರ್ಥವಾಗಬೇಕು ಎಂಬ ನಿಯಮವಿಲ್ಲ. ಎಲ್ಲರೂ ಅವರವರ ತಿಳಿವಳಿಕೆ, ಒಲವು ಮತ್ತು ನಂಬಿಕೆಗಳ ಮೇಲೆಯೇ ನಿಮ್ಮನ್ನು ಅರ್ಥೈಸಿಕೊಳ್ಳುವುದು. ಅವರ ಕನ್ನಡಕದ ಬಣ್ಣ ಬದಲಿಸಲಿಕ್ಕೆ ನಮಗೆ ಸಾಧ್ಯವಿಲ್ಲ. ಕೆಲವರು ಸುಮ್ಮನಿರುವುದನ್ನು, ಸಮರ್ಥಿಸಿಕೊಳ್ಳದಿರುವುದನ್ನು ಸೊಕ್ಕು ಎಂದು ತಪ್ಪುತಿಳಿಯಬಹುದು ಅಥವಾ ಅದನ್ನು ಹೇಡಿತನ ಎಂದುಕೊಳ್ಳಬಹುದು- ಅದು ಕೂಡ ಅವರವರ ವಿಚಾರ. ನಮ್ಮದಲ್ಲ, ಅದು ನಮ್ಮ ಹಿಡಿತದಲ್ಲಿಲ್ಲ, ಇನ್ನೊಬ್ಬರ ವಿಚಾರವನ್ನು ಬದಲಿಸುವಷ್ಟು ವೇದನೆ ಇನ್ನೊಂದಿಲ್ಲ, ಅದು ಅನವಶ್ಯಕ ಘರ್ಷಣೆ.

ಇನ್ನೊಬ್ಬರಿಗೆ ಏನು ಬೇಕಾದರೂ ಅಂದುಕೊಳ್ಳುವ ಸ್ವಾತಂತ್ರ್ಯ ಕೊಡುವುದು ಎಂದರೆ ನಿಮ್ಮ ಬಗೆಗಿನ ಅಭಿಪ್ರಾಯವನ್ನೇ ಅಲಕ್ಷಿಸುವುದು ಎಂದಲ್ಲ, ಧಾರ್ಷ್ಟ್ಯವೂ ಅಲ್ಲ, ಉದ್ಧಟತನವೂ ಅಲ್ಲ, ಸ್ವ-ಸಮರ್ಥನೆಯನ್ನು ನಿಲ್ಲಿಸುವುದು ಎಂದರೆ ಚಪ್ಪಾಳೆಗಾಗಿ ಕುಣಿಯುವುದನ್ನು ನಿಲ್ಲಿಸುವುದು. ನಾವು ನಾವಾಗಿರುವುದಕ್ಕೆ ನಮ್ಮಲ್ಲಿಯೇ ಕ್ಷಮೆ ಕೇಳಿಕೊಳ್ಳುವುದನ್ನು ನಿಲ್ಲಿಸುವುದು. ಇದು ಜನರ ವಿರುದ್ಧ ತಿರುಗಿಬೀಳುವ ಕ್ರಿಯೆಯಲ್ಲ ಅಥವಾ ಹೇಳಿದ್ದೆಲ್ಲ ಕೇಳಿ, ಅವಡುಗಚ್ಚಿ ಕೂರುವುದೂ ಅಲ್ಲ, ಬದಲಿಗೆ ನಮ್ಮನ್ನು ನಾವೇ ಒಪ್ಪಿಸಿಕೊಳ್ಳುವುದರ ನಿರಂತರ ಅವಶ್ಯಕತೆಯ ವಿರುದ್ಧ ತಿರುಗಿಬೀಳುವುದು. ನಮ್ಮ ಎಲ್ಲಾ ಮಾತುಕತೆಗಳಲ್ಲಿ ನಮ್ಮ ಘನತೆಯನ್ನು ನಿರಂತರ ಹೊತ್ತು ತಿರುಗಬೇಕಿಲ್ಲ ಎಂದು ತಿಳಿಯುವುದು. ನಿಮ್ಮ ವ್ಯಕ್ತಿತ್ವವೇನೆಂದು ನಿರಂತರ ಜಾಹೀರಾತು ಮಾಡಿಕೊಂಡಿರಬೇಕಿಲ್ಲ ಎನ್ನುವುದನ್ನು ಮನಗಾಣುವುದು.

ಒಬ್ಬ ಕ್ರಿಮಿನಲ್ ಮತ್ತು ಒಬ್ಬ ಸಾಧಕ ಇವರಿಬ್ಬರಲ್ಲೂ ಈ ಗುಣವನ್ನು ನೋಡಬಹುದು. ಅವರೆಂದೂ ಇನ್ನೊಬ್ಬರು ಏನಂದುಕೊಂಡಾರು ಎಂದು ಯೋಚಿಸುತ್ತ ಕುಳಿತುಕೊಳ್ಳುವುದಿಲ್ಲ. ನಾನಿಲ್ಲಿ ಹೇಳುತ್ತಿರುವುದು ನಿರ್ಲಜ್ಜೆಯ ಅಲಕ್ಷ್ಯವನ್ನಲ್ಲ, ಸಾಧಕನಿಗಿರಬೇಕಾದ ಸ್ವಪ್ರತಿಷ್ಠೆಯ ಅವಶ್ಯಕತೆಯೆಡೆಗಿನ ಅಲಕ್ಷ್ಯವನ್ನು. ನಾವು ಇನ್ನೊಬ್ಬರಿಗೆ ನಮ್ಮ ಬಗ್ಗೆ ಮನವರಿಕೆ ಮಾಡಿಕೊಡುವುದು ನಿಲ್ಲಿಸುತ್ತಿದ್ದಂತೆ ಅವರ ಅಭಿಪ್ರಾಯ ನಮಗೆ ಇನ್ನಷ್ಟು ಸ್ಪಷ್ಟವಾಗಿ ಕಾಣಿಸುತ್ತದೆ. ಪ್ರತಿಯೊಬ್ಬರೂ ನಿಮ್ಮ ಬಗ್ಗೆ ರಚಿಸಿಕೊಂಡ ಅವರದೇ ಕಥೆಗಳನ್ನು ನಂಬಿಕೊಂಡಿರುತ್ತಾರೆ. ಆ ನಂಬಿಕೆಯನ್ನು ಅವರೇ ಬದಲಿಸಿಕೊಳ್ಳಬೇಕೇ ವಿನಾ ಅದನ್ನು ಇನ್ನೊಬ್ಬರು, ನಾವು ಬದಲಿಸಲಿಕ್ಕಾಗುವುದಿಲ್ಲ, ಅದೇನಿದ್ದರೂ ಅವರವರ ಭಾವಕ್ಕೆ, ಅವರವರ ಭಕುತಿಗೆ. ಹಾಗಾದರೆ ಯಾರು ಏನೇ ಅಂದುಕೊಳ್ಳಲಿ ಎಂದು ನಿರ್ಲಜ್ಜೆಯಿಂದ ಬದುಕುವುದೇ? ಅಥವಾ I don't care ತರಹ ನಿಷ್ಕಾಳಜಿಯಿಂದ ಬದುಕುವುದೇ? ತಂದೆ, ತಾಯಿ, ಹೆಂಡತಿ, ಗಂಡ, ಮಕ್ಕಳು, ಸಂಬಂಧಿಕರು, ಸ್ನೇಹಿತರು, ಅಜ್ಞಾತರು ಎಲ್ಲರಿಗೂ ನಿಮ್ಮ ಬಗ್ಗೆ ಅವರಿಗೆ ಬೇಕಾದ ಅಭಿಪ್ರಾಯವನ್ನು ಹೊಂದುವ ಸ್ವಾತಂತ್ರ್ಯವನ್ನು ಕೊಟ್ಟಮೇಲೆ, ಅದನ್ನು ಅವರಿಗೆ ಬೇಕಾದಾಗ ಬದಲಿಸಿಕೊಳ್ಳುವ ಸ್ವಾತಂತ್ರ್ಯವನ್ನೂ ಕೊಟ್ಟಂತೆ.

ಇನ್ನೊಮ್ಮೆ ನಿಮ್ಮನ್ನು ನೀವು ಸಮರ್ಥಿಸಿಕೊಳ್ಳುವ ಸ್ಥಿತಿ ಎದುರಾದಾಗ ಒಮ್ಮೆ ನಿಂತು ಈ ಪ್ರಶ್ನೆಯನ್ನು ಕೇಳಿಕೊಳ್ಳಿ- ''ನಾನು ಇಲ್ಲಿ ನನ್ನನ್ನು ಸಮರ್ಥಿಸಿಕೊಳ್ಳುವ, ನನ್ನ ವಿಚಾರವೇ ಸರಿ, ನಾನು ಮಾಡಿದ್ದೇ ಸರಿ, ನನ್ನ ಜಾಗದಲ್ಲಿ ನೀನಿದ್ದಿದ್ದರೆ ಇದನ್ನೇ ಮಾಡುತ್ತಿದ್ದೆ ಎಂದೆಲ್ಲ ಹೇಳುವ ಅವಶ್ಯಕತೆಯಿದೆಯೇ?'' ಈ ಪ್ರಶ್ನೆಗೆ ನಮ್ಮ ಉತ್ತರ ಸಾಮಾನ್ಯವಾಗಿ ''ಹೌದು, ಸಮರ್ಥಿಸುವುದು ಅವಶ್ಯಕತೆ ಇದೆ, ನನ್ನನ್ನು ನಾನು ಸಮರ್ಥಿಸಿಕೊಳ್ಳದಿದ್ದರೆ ಇನ್ಯಾರು?'' ಎಂಬ ಪ್ರಶ್ನೆ ಏಳುತ್ತದೆ. ಆದರೆ ಒಮ್ಮೆ ಅಲ್ಲಿಯೇ ನಿಲ್ಲಿ, ಸುಮ್ಮನಿರಲು ಸಾಧ್ಯವಾಗುವುದಿಲ್ಲ, ಹೊಟ್ಟೆಯೊಳಗೆಲ್ಲ ಹುಟ್ಟುಹಾಕಿ ತಿರುಗಿಸಿದಂತಾಗುತ್ತದೆ. ಸಮರ್ಥಿಸಿಕೊಳ್ಳದಿದ್ದರೆ ಇಲ್ಲಿಯೇ ನನ್ನ ಅಂತ್ಯ ಎಂದೆಲ್ಲ ಅನಿಸುತ್ತದೆ. ಪರವಾಗಿಲ್ಲ, ಉಸಿರೆಳೆದುಕೊಳ್ಳಿ. ಅದು ನಮ್ಮೊಳಗಿನ ಅಹಂ ತನ್ನ ಹಿಡಿತವನ್ನು ಕಳೆದುಕೊಳ್ಳುವ ಘಟ್ಟ. ಮನಸ್ಸಷ್ಟೇ ಅಲ್ಲ, ಇಡೀ ದೇಹ ಸ್ವ-ಸಮರ್ಥಿಸುವಂತೆ ಒತ್ತಾಯಿಸುತ್ತದೆ. ಎದೆಬಡಿತ, ಬಿಪಿ ಜತೆಯಲ್ಲಿ ಮೈ ಉಷ್ಣತೆ ಹೆಚ್ಚುತ್ತದೆ ಇತ್ಯಾದಿ. ಆಗ ''ಸಮರ್ಥಿಸಿಕೊಳ್ಳದಿದ್ದರೆ ಏನಾಗುತ್ತದೆ ನೋಡಿಯೇಬಿಡೋಣ?'' ಎಂದು ಧೈರ್ಯಮಾಡಿದಿರೋ, ಆಗ ಇಡೀ ಮಾತುಕತೆ ನಮ್ಮ ಹಿಡಿತಕ್ಕೆ ಬಂದುಬಿಡುತ್ತದೆ. ಬೇರೆಯದೇ ರೂಪ ಪಡೆದುಕೊಂಡುಬಿಡುತ್ತದೆ. ನೀವು ನಿಮ್ಮನ್ನು ಸಮರ್ಥಿಸುವುದು ನಿಲ್ಲಿಸುತ್ತಿದ್ದಂತೆ ಕ್ರಮೇಣ ಅದರ ದರ್ದು ಕೂಡ ಕಡಿಮೆಯಾಗುತ್ತಾ ಹೋಗುತ್ತದೆ. ಸ್ವ-ಸಮರ್ಥನೆಯಿಲ್ಲದ ಮಾತುಕತೆಗಳು ಎಂದಿಗೂ ಬೇಸರಕ್ಕೆ ಕಾರಣವಾಗುವುದಿಲ್ಲ. ಮಾತು ಮುಗಿದ ನಂತರ ಕಾಡುವುದಿಲ್ಲ, ಕ್ರಮೇಣ ಯಾವುದಕ್ಕೂ ಸಮರ್ಥಿಸಿಕೊಳ್ಳುವ ಅವಶ್ಯಕತೆಯೇ ಇರುವುದಿಲ್ಲ.

ಎಲ್ಲರೂ ಅವರವರ ವೈಚಾರಿಕತೆಯಲ್ಲಿ ಸ್ವತಂತ್ರರು. ಅವರು ಆರೋಪಿಸುವ ಗುಣ ಅವರ ಕಥೆಯಲ್ಲಿನ ನಿಮ್ಮ ಪಾತ್ರಕ್ಕೆ ಮಾತ್ರ. ಪಾತ್ರ ನಮ್ಮದಾದರೂ ಕಥೆ, ನಿರ್ಮಾಣ, ನಿರ್ದೇಶನ, ಸಂಗೀತ ಎಲ್ಲವೂ ಅವರವರದ್ದು. ಎಷ್ಟು ಜನರ ಕಥೆಯನ್ನು ಬದಲಿಸುತ್ತೀರಿ? ಸರಿಮಾಡುತ್ತೀರಿ? ಅದೆಷ್ಟೋ ಮಂದಿ ಆತ್ಮಹತ್ಯೆಯ ಮಟ್ಟಕ್ಕೂ ಹೋಗುವುದು ಈ ಬೇರೆಯವರ ಕಥೆಯಲ್ಲಿನ ಅವರ ಪಾತ್ರದ ಗುಣದ ಯೋಚನೆಯಿಂದ ಎಂದಾದರೆ ಉಳಿದವರನ್ನು ಇದೆಷ್ಟು ಕಾಡುತ್ತದೆ? ಈ ಭೂಮಿಯಲ್ಲಿ ನಾನು ಅಥವಾ ನೀವು ಹುಟ್ಟದೇ ಇದ್ದಿದ್ದರೆ ಏನೂ ಬದಲಾಗುತ್ತಿರಲಿಲ್ಲ, ಸತ್ತಮೇಲೂ ಅಷ್ಟೇ- ನಮ್ಮನ್ನೇ ಜಗತ್ತು ಮರೆಯುವಾಗ 'ನಮ್ಮ ಬಗೆಗೆ ಯಾರು ಏನೇನಾಡಿಕೊಳ್ಳುತ್ತಾರೆ?' ಎಂದು ಯೋಚಿಸುತ್ತ ಕುಳಿತರೆ? ಯಾರ ಅಭಿಪ್ರಾಯ- ಯಾವ ಕಿಸಬೊಕ್ಕೆ!!

ಯಾರು ಏನು ಬೇಕಾದರೂ ಅಂದುಕೊಳ್ಳಲಿ ಎನ್ನುವಾಗ ನಾವು 'ಕತ್ತೆ ಬಾಲ, ಕುದುರೆ ಜುಟ್ಟು' ಎಂಬ ಮಾತನ್ನು ಬಳಸುತ್ತೇವೆ. ಇದರ ಅರ್ಥ ಏನೆಂದು ನನಗೆ ಗೊತ್ತಿಲ್ಲ. ಆದರೆ ಸ್ವ-ಸಮರ್ಥನೆಗೆ ಇಳಿದಷ್ಟೂ ನಮ್ಮ ಬದುಕಿನ ಓಟದ ಕುದುರೆಯ ಜುಟ್ಟನ್ನು ಇನ್ನೊಬ್ಬರ ಕೈಗೆ ಕೊಟ್ಟಂತೆ ಎನ್ನುವುದು ಸುಳ್ಳಲ್ಲ. 'ಕತ್ತೆ ಬಾಲ ಕುದುರೆ ಜುಟ್ಟು'- ಅದುವೇ ಹಾಯಾದ ಬದುಕಿನ ಗುಟ್ಟು! ಏನಂತೀರಿ?

ಗೂಗಲ್ ಮ್ಯಾಪ್‌ಗೆ ಪರ್ಯಾಯ ಕಟ್ಟಿದ ರಾಕೇಶ್ ವರ್ಮಾ!

ಮನಿ ಮೈಂಡೆಡ್

ಕೇಶವ ಪ್ರಸಾದ್ ಬಿ.
keshavaprasadb@gmail.com

ನಿಮಗೆ ಅಚ್ಚರಿಯಾದೀತು. 1995ರಲ್ಲಿ ಇಂಟರ್ನೆಟ್, ಜಿಪಿಎಸ್ (ಗ್ಲೋಬಲ್ ಪೊಸಿಶನಿಂಗ್ ಸಿಸ್ಟಮ್), ಗೂಗಲ್ ಮ್ಯಾಪ್, ಸ್ಮಾರ್ಟ್ ಫೋನ್‌ಗಳು ಜಗತ್ತಿನಲ್ಲಿ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲೇ, ಭಾರತದಲ್ಲಿ ಡಿಜಿಟಲ್ ಮ್ಯಾಪಿಂಗ್, ನೇವಿಗೇಶನ್ ಕೆಲಸಗಳು ನಡೆದಿದ್ದವು! ಅದೊಂದು ತಂತ್ರಜ್ಞಾನಿ ಕುಟುಂಬವು ಡಿಜಿಟಲ್ ಮ್ಯಾಪಿಂಗ್ ಸಲುವಾಗಿ ಹಗಲಿರುಳೆನ್ನದೆ ಅಪಾರ ನಂಬಿಕೆಯಿಂದ ಸಂಶೋಧನೆ ನಡೆಸುತ್ತಿತ್ತು!

ರಾಕೇಶ್ ವರ್ಮಾ ಅವರು ಆಗ ಡಿಜಿಟಲ್ ಮ್ಯಾಪ್‌ಗಳ ಬಗ್ಗೆ ವಿವರಿಸಿದರೆ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಆದರೆ ಇವರು ಯಾವುದೇ ಉಪಗ್ರಹಗಳ ನೆರವು ಇಲ್ಲದೆಯೇ ಬೀದಿ ಬೀದಿಗಳ ಡಿಜಿಟಲ್ ಮ್ಯಾಪ್ ತಯಾರಿಸಿದ್ದರು. ಗ್ರಾಹಕರು, ಬಿಸಿನೆಸ್, ಸರಕಾರಗಳಿಗೆ ಲೊಕೇಶನ್ ಬಹಳ ಮುಖ್ಯ, ಇದು ಭವಿಷ್ಯದಲ್ಲಿ ದೊಡ್ಡ ಪಾತ್ರ ವಹಿಸಲಿದೆ ಎಂಬುದು ತೊಂಬತ್ತರ ದಶಕದಲ್ಲೇ ವರ್ಮಾ ದಂಪತಿಗೆ ಮನದಟ್ಟಾಗಿತ್ತು! ಕೋಕಾಕೋಲ ಕಂಪನಿಯೇ ವರ್ಮಾ ಅವರ ಮೊದಲ ಗ್ರಾಹಕನಾಗಿತ್ತು. ಆ ಕಂಪನಿಗೆ ಲಾಜಿಸ್ಟಿಕ್ಸ್ ಸಲುವಾಗಿ ಮ್ಯಾಪಿಂಗ್ ಅಗತ್ಯವಿತ್ತು. ಬಳಿಕ ಭಾರತೀಯ ನೌಕಾಪಡೆಗೂ ನೇವಿಗೇಶನ್ ನೆರವು ನೀಡಿದರು. ಸಮುದ್ರದಲ್ಲಿ ಸಂಚಾರ ಸಂದರ್ಭ ನೌಕೆಗಳಿಗೆ ಮಾರ್ಗಗಳನ್ನು ಕಂಡುಕೊಳ್ಳಲು ನೇವಿಗೇಶನ್ ನೆರವು ಬೇಕಿತ್ತು. ''ದೇಶಕ್ಕಾಗಿ ನೀವು ಏನಾದರೂ ಮಾಡಬೇಕು ಎಂಬ ಭಾವನೆ ಬಲವಾದಾಗ, ಬೇರೆ ಯಾವುದೂ ಮಹತ್ವ ಎನ್ನಿಸುವುದಿಲ್ಲ. ಆದ್ದರಿಂದ ಅಮೆರಿಕವನ್ನು ಬಿಟ್ಟು ಬಂದೆವು'' ಎನ್ನುತ್ತಾರೆ ವರ್ಮಾ. ಭಾರತದ 7,500ಕ್ಕೂ ಹೆಚ್ಚು ನಗರ ಮತ್ತು ಪಟ್ಟಣಗಳಲ್ಲಿ ಹಾಗೂ 7.5 ಲಕ್ಷ ಹಳ್ಳಿಗಳಲ್ಲಿ ಅವರ 'ಮ್ಯಾಪ್ ಇಂಡಿಯಾ' ಕಾರ್ಯನಿರ್ವಹಿಸುತ್ತಿದೆ! ಆಟೋಮೇಟಿವ್, ಲಾಜಿಸ್ಟಿಕ್ಸ್, ಇ-ಕಾಮರ್ಸ್ ಮತ್ತು ಸ್ಮಾರ್ಟ್ ಸಿಟಿಗಳ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ.

ನೀವು ಎಲ್ಲಾದರೂ ಹೋಗಬೇಕಿದ್ದರೆ, 'ದಾರಿ ಯಾವುದಯ್ಯಾ' ಎಂದು ಯಾರನ್ನೂ ಕೇಳುವ ಅಗತ್ಯ ಬಹಳ ಕಡಿಮೆ. ಏಕೆಂದರೆ ಗೂಗಲ್ ಮ್ಯಾಪ್ ಬಳಸುತ್ತಿರಬಹುದು. ಹೀಗಿದ್ದರೂ, ಗೂಗಲ್ ಮ್ಯಾಪ್ ಭಾರತದ ಕಂಪನಿಯದ್ದಲ್ಲ, ಅಮೆರಿಕದ ತಂತ್ರಜ್ಞಾನ ದಿಗ್ಗಜ ಗೂಗಲ್‌ನ ಅಧೀನದಲ್ಲಿರುವಂಥದ್ದು. ಅಲ್ಲಿನ ತಿಕ್ಕಲನಂತಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಾಳೆ ಏನಾದರೂ, ಗೂಗಲ್ ಮ್ಯಾಪ್ ಅನ್ನು ಭಾರತದಲ್ಲಿ ಬ್ಯಾನ್ ಮಾಡಿದರೆ? ರಾತ್ರೋರಾತ್ರಿ ಅದರ ಸೇವೆ ಬಂದ್ ಆಗಬಹುದು. ಆದರೆ ಅದಕ್ಕೀಗ ಚಿಂತೆ ಮಾಡುವುದೇ ಬೇಡ! ಏಕೆಂದರೆ ಗೂಗಲ್ ಮ್ಯಾಪ್‌ಗೇ ಸಡ್ಡು ಹೊಡೆಯುವಂತೆ ಭಾರತದ್ದೇ ಆದ 'ಮ್ಯಾಪಲ್ಸ್' ಅನ್ನು ತಂತ್ರಜ್ಞಾನ ಕಂಪನಿಯಾದ 'ಮ್ಯಾಪ್ ಮೈ ಇಂಡಿಯಾ' (MapmyIndia) ತಯಾರಿಸಿದೆ. ದಿನೇ ದಿನೆ ಇದು ಜನಪ್ರಿಯವಾಗುತ್ತಿದೆ! ಈ ಸಂಸ್ಥೆಯ ಸ್ಥಾಪಕರು ರಾಕೇಶ್ ವರ್ಮಾ!

ದೇಶ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುವ ಇಂಥ ಉದ್ಯಮಿಗಳನ್ನು ಹೇಗೆ ಪ್ರೋತ್ಸಾಹಿಸಬೇಕು ಎಂಬುದನ್ನು ಇತರ ರಾಜಕಾರಣಿಗಳು ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್, ಆಂಧ್ರಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು ಅವರನ್ನು ನೋಡಿ ಕಲಿಯಬೇಕು. ಇತ್ತೀಚೆಗೆ 'ಮ್ಯಾಪ್ ಮೈ ಇಂಡಿಯಾ'ದ ತಂಡವು ಕೇಂದ್ರ ಸಚಿವರನ್ನು ಭೇಟಿ ಮಾಡಿತು. ಅವರಿಂದ ಎಲ್ಲ ವಿವರಗಳನ್ನು ಪಡೆದ ಸಚಿವರು ಕುತೂಹಲದಿಂದ ಮ್ಯಾಪಲ್ಸ್ ಅನ್ನು ತಮ್ಮ ಕಾರಿನಲ್ಲಿ ಅಳವಡಿಸಿ ನೋಡಿದರು. ಗೂಗಲ್ ಮ್ಯಾಪ್‌ಗಿಂತಲೂ ವಿಶೇಷ ಮತ್ತು ಅನುಕೂಲಕರ ಫೀಚರ್‌ಗಳನ್ನು ಒಳಗೊಂಡಿರುವ ಮ್ಯಾಪಲ್ಸ್ ಸಚಿವರ ಮನಗೆದ್ದಿತು. ಅವರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಬದಲಿಗೆ ಸಣ್ಣ ವಿಡಿಯೊ ಮೂಲಕ ಸ್ಪಷ್ಟವಾಗಿ ಚಿತ್ರೀಕರಿಸಿ, ಸ್ವತಃ ಮ್ಯಾಪಲ್ಸ್‌ನ ಅನುಕೂಲಗಳನ್ನು ವಿವರಿಸಿ ತಮ್ಮ 'ಎಕ್ಸ್' ಜಾಲತಾಣ ಖಾತೆಯಲ್ಲಿ ಪಿನ್ ಮಾಡಿದರು. ''Swdeshi Mappls by MapIndia, Good features.. must try!'' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ರೈಲ್ವೆ ಇಲಾಖೆಯೂ ಇದನ್ನು ಬಳಸಿಕೊಳ್ಳಲಿದೆ ಎಂದು ತಿಳಿಸಿದರು. ಕೇಂದ್ರ ಐಟಿ ಸಚಿವರು ಈ ಪೋಸ್ಟ್ ಹಾಕಿದ ಬಳಿಕ ಲಕ್ಷಾಂತರ ಮಂದಿ ಮ್ಯಾಪಲ್ಸ್ ಅಪ್ಲಿಕೇಷನ್ ಅನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ!

ನಿಜಕ್ಕೂ ರಾಕೇಶ್ ವರ್ಮಾ ಅವರ ಬದುಕು ಮತ್ತು ಸಾಧನೆ ಕೋಟ್ಯಂತರ ಭಾರತೀಯರಿಗೆ ಸ್ಫೂರ್ತಿದಾಯಕ. ಅವರೊಬ್ಬ ಫಸ್ಟ್ ಜನರೇಶನ್ ಉದ್ಯಮಿ, ಏಂಜೆಲ್ ಇನ್ವೆಸ್ಟರ್. ಅವರು ಮನಸ್ಸು ಮಾಡಿದ್ದರೆ ಅಮೆರಿಕದಲ್ಲೇ ನೆಲೆನಿಂತು ಐಷಾರಾಮಿ ಬದುಕನ್ನು ನಡೆಸಬಹುದಿತ್ತು. 1990ರಲ್ಲಿಯೇ ಅಮೆರಿಕದಲ್ಲಿ ಜನರಲ್ ಮೋಟಾರ್ ಕಂಪನಿಯಲ್ಲಿ 12 ವರ್ಷಗಳ ಅದ್ಭುತ ಕರಿಯರ್ ಅನ್ನು ನಡೆಸಿದ್ದರು. ಆದರೆ ಕೈ ತುಂಬಾ ಸಂಬಳ ಸವಲತ್ತುಗಳನ್ನು ಕೊಟ್ಟಿದ್ದ ಹುದ್ದೆಗೆ ರಾಜೀನಾಮೆ ಕೊಟ್ಟರು. ತಾಯ್ನಾಡಿನಲ್ಲೇ ಉದ್ಯಮಿಯಾಗಿ ಸಮಾಜಸೇವೆ ಮಾಡಬೇಕು, ತಾನೂ ಬೆಳೆಯಬೇಕು, ದೇಶದ ಅಭಿವೃದ್ಧಿಗೂ ಕಾಣಿಕೆ ಸಲ್ಲಿಸಬೇಕು ಎಂಬುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ತಮ್ಮ ಮಕ್ಕಳನ್ನೂ ಭಾರತೀಯ ಸಂಸ್ಕೃತಿಯ ವಾತಾವರಣದಲ್ಲಿ ಬೆಳೆಸಬೇಕು ಎಂಬ ಬಯಕೆಯೂ ಇತ್ತು. ಹೀಗಾಗಿ ಅಮೆರಿಕದಿಂದ ಭಾರತಕ್ಕೆ ಹಿಂತಿರುಗಿದರು!

ಅನೇಕ ಭಾರತೀಯರು ಅಮೆರಿಕದ ಡಾಲರ್ ಕನಸು ಕಾಣುತ್ತಾ ಅಲ್ಲಿಯೇ ಕಾಯಂ ಆಗಿ ನೆಲೆ ನಿಲ್ಲಲು ಹಾತೊರೆದರೆ, ರಾಕೇಶ್ ವರ್ಮಾ ತದ್ವಿರುದ್ಧವಾಗಿ, ಮಹೋನ್ನತ ಆಶಯವನ್ನು ಹೊತ್ತು ಮರಳಿದರು. ಅಷ್ಟೇ ಅಲ್ಲ, ಹಿಡಿದ ಕೆಲಸವನ್ನು ಸಾಧಿಸಿದರು. ಅದರ ಫಲಶ್ರುತಿ ಈಗ ನಮ್ಮ ಮುಂದಿದೆ. ''ನನ್ನ ದೇಶದ ಆಚಾರ-ವಿಚಾರಗಳು, ಜನರ ಪ್ರೀತಿ-ವಿಶ್ವಾಸಗಳು ದೂರದ ಅಮೆರಿಕದಲ್ಲಿ ನಿತ್ಯ ನೆನಪಾಗುತ್ತಿತ್ತು. ದೇಶಪ್ರೇಮವೇ ನನ್ನನ್ನು ಭಾರತಕ್ಕೆ ಮರಳಿಸಿತು'' ಎನ್ನುತ್ತಾರೆ ವರ್ಮಾ. ಹಾಗೆ ವಾಪಸಾದವರು 'ಸಿಇ ಇನ್ಫೋ ಸಿಸ್ಟಮ್ಸ್' ಎಂಬ ಸ್ಟಾರ್ಟಪ್ ಅನ್ನು ಸ್ಥಾಪಿಸಿದರು. ಅದುವೇ ಮುಂದೆ 'ಮ್ಯಾಪ್ ಮೈ ಇಂಡಿಯಾ' ಆಗಿ ಹೊರಹೊಮ್ಮಿತು. ಇಂದು ಗೂಗಲ್ ಮ್ಯಾಪ್‌ಗೆ ಯಶಸ್ವಿ ಪರ್ಯಾಯ ಅಪ್ಲಿಕೇಶನ್ ಕಟ್ಟಿ ಮನೆಮಾತಾಗಿದೆ.

ರಾಜಸ್ಥಾನದ ಪ್ರಸಿದ್ಧ ಖಾಸಗಿ ಯುನಿವರ್ಸಿಟಿ ಬಿಟ್ಸ್ ಪಿಲಾನಿಯಲ್ಲಿ 1972ರಲ್ಲಿ ಎಂಜಿನಿಯರಿಂಗ್ ಓದಿದ ಬಳಿಕ, ಅಮೆರಿಕದ ಈಸ್ಟರ್ನ್ ವಾಷಿಂಗ್ಟನ್ ಯುನಿವರ್ಸಿಟಿಯಲ್ಲಿ ಎಂಬಿಎ ಗಳಿಸಿದರು ವರ್ಮಾ. ಅಮೆರಿಕದಲ್ಲಿ ಕೆಲಸದಲ್ಲಿದ್ದಾಗಲೇ ತಮ್ಮದೇ ಸ್ಟಾರ್ಟಪ್ ಮಾಡುವ ಕನಸು ಅವರಲ್ಲಿತ್ತು. ಪತ್ನಿ ರಶ್ಮಿ ವರ್ಮಾ ಕೂಡ ಐಐಟಿ ರೂರ್ಕಿಯಲ್ಲಿ ಎಂಜಿನಿಯರಿಂಗ್ ಹಾಗೂ ಈಸ್ಟರ್ನ್ ವಾಷಿಂಗ್ಟನ್ ಯುನಿವರ್ಸಿಟಿಯಲ್ಲಿ ಎಂಎಸ್ ಪದವಿ ಗಳಿಸಿದ ಪ್ರತಿಭಾವಂತೆ. ಕಳೆದ 50 ವರ್ಷಗಳಿಂದ ಬಿಟ್ಸ್ ಪಿಲಾನಿಯ ಹಳೆ ವಿದ್ಯಾರ್ಥಿಗಳಲ್ಲಿ ಟಾಪ್ 50 ಸಾಧಕರ ಪಟ್ಟಿಯಲ್ಲಿ ರಾಕೇಶ್ ವರ್ಮಾ ಸ್ಥಾನ ಗಳಿಸಿದ್ದಾರೆ. ನಿರಂತರ ಕಲಿಕೆ ಮತ್ತು ಅಭಿವೃದ್ಧಿ ಸಾಧಿಸುವುದು ಅವರ ಯಶಸ್ಸಿನ ಮಂತ್ರವಾಗಿದೆ. ಅದೇ ಸಂಸ್ಕೃತಿಯನ್ನು

'ಮ್ಯಾಪ್ ಮೈ ಇಂಡಿಯಾ'ದ ಎಲ್ಲ ಉದ್ಯೋಗಿಗಳಿಗೂ ಕಲಿಸುತ್ತಾರೆ. ಮಷಿನ್ ಲರ್ನಿಂಗ್ ಮತ್ತು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಕೌಶಲವನ್ನು ಕಂಪನಿಯ ಬಹುತೇಕ ಉದ್ಯೋಗಿಗಳಿಗೆ ವರ್ಗಾಯಿಸಿದ್ದಾರೆ.

ಇನ್ನೂ ಅನೇಕ ಮಂದಿಗೆ, ಏನಿದು ಮ್ಯಾಪ್ ಮೈ ಇಂಡಿಯಾ? ಇದು ಹೇಗೆ ಕೆಲಸ ಮಾಡುತ್ತದೆ ಎಂಬ ಪ್ರಶ್ನೆ ಇರಬಹುದು. ಈ ಸಂಸ್ಥೆ ಡಿಜಿಟಲ್ ಮ್ಯಾಪ್‌ಗಳನ್ನು, ನೇವಿಗೇಶನ್ ಸೇವೆಗಳನ್ನು ನೀಡುತ್ತದೆ. ಸರಳವಾಗಿ ಹೇಳುವುದಿದ್ದರೆ ಗೂಗಲ್ ಮ್ಯಾಪ್‌ಗೆ ಪರ್ಯಾಯ ಎನ್ನಬಹುದು. ಭಾರತದ ನೇವಿಗೇಶನ್ ವಲಯದಲ್ಲಿ ಮುಂಚೂಣಿಯಲ್ಲಿದೆ. ದೇಶದ ಮೊದಲ ಡಿಜಿಟಲ್ ಮ್ಯಾಪಿಂಗ್ ಪೋರ್ಟಲ್ ಅನ್ನು ಆರಂಭಿಸಿದೆ. ಲಾಸ್ಟ್ ಮೈಲ್ ಚಾಲೆಂಜ್‌ಗಳನ್ನು ಬಗೆಹರಿಸಿದೆ. ರಾಷ್ಟ್ರವ್ಯಾಪಿ ಡಿಜಿಟಲ್ ಅಡ್ರೆಸ್ ಸಿಸ್ಟಮ್ ಅನ್ನು ವ್ಯವಸ್ಥೆಗೊಳಿಸಿದೆ. ರಿಯಲ್ ಟೈಮ್ ಟ್ರ್ಯಾಕಿಂಗ್, ಶಾಪ್ ಲೆವೆಲ್ ಮ್ಯಾಪಿಂಗ್ ಫೀಚರ್‌ಗಳ ಸೇವೆ ಒದಗಿಸುತ್ತಿದೆ. ಸ್ಮಾರ್ಟ್ ಕಾರುಗಳಲ್ಲಿ ಡಿಜಿಟಲ್ ಮ್ಯಾಪ್ ಮತ್ತು ತ್ರಿ-ಡಿ ನೇವಿಗೇಶನ್ ಸಹಿತ ಲೊಕೇಶನ್ ಟೆಕ್ನಾಲಜಿ ಬಳಕೆಗೆ ಉತ್ತೇಜಿಸಿದೆ. ತ್ರೀಡಿ ಜಂಕ್ಷನ್ ವ್ಯೂಸ್, ಡೋರ್‌ಸ್ಟೆಪ್ ನೇವಿಗೇಶನ್, ವೇಗದ ಮಿತಿ, ಅಪಘಾತ ಪ್ರದೇಶ, ಸ್ಪೀಡ್ ಬ್ರೇಕರ್ಸ್‌ಗೆ ರಿಯಲ್-ಟೈಮ್ ಡ್ರೈವಿಂಗ್ ಅಲರ್ಟ್ಸ್ ನೀಡುತ್ತದೆ. ಇದರಲ್ಲಿರುವ ಟ್ರಿಪ್ ಕಾಸ್ಟ್ ಕ್ಯಾಲ್ಕ್ಯುಲೇಟರ್ ಬಳಸಿ ಅಂದಾಜು ಟೋಲ್ ಶುಲ್ಕ ಎಷ್ಟಾಗುತ್ತದೆ ಎಂಬುದನ್ನು ತಿಳಿಯಬಹುದು. ತ್ರಿ-ಡಿ ಜಂಕ್ಷನ್ ವ್ಯೂಸ್ ಫೀಚರ್ ಎಷ್ಟು ಚೆನ್ನಾಗಿದೆ ಎಂದರೆ, ಫ್ಲೈ ಓವರ್, ಅಂಡರ್ ಪಾಸ್‌ಗಳ ಎಂಟ್ರಿ ಮತ್ತು ಎಕ್ಸಿಟ್ ಪಾಯಿಂಟ್‌ಗಳನ್ನು ಅತ್ಯಂತ ಸ್ಪಷ್ಟವಾಗಿ, ರಿಯಲಿಸ್ಟಿಕ್ ಆಗಿ ತೋರಿಸುತ್ತದೆ. ಇದರಿಂದಾಗಿ ಕೊನೆಯ ಕ್ಷಣದಲ್ಲಿ ಲೇನ್ ಬದಲಾವಣೆಯಿಂದಾಗಿ ಎಕ್ಸಿಟ್ ಅಥವಾ ಎಂಟ್ರಿ ಪಾಯಿಂಟ್ ತಪ್ಪುವ ಸಾಧ್ಯತೆ ಇರುವುದಿಲ್ಲ. ಹಿಂದಿ, ಕನ್ನಡ, ಮರಾಠಿ, ಪಂಜಾಬಿ, ಗುಜರಾತಿ ಸೇರಿದಂತೆ 9 ಭಾಷೆಗಳಲ್ಲಿ ಸೇವೆಗಳನ್ನು ನೀಡುತ್ತದೆ. ಮ್ಯಾಪಲ್ಸ್ ಡಾಟ್ ಕಾಮ್ (mappls.com), ಗೂಗಲ್ ಪ್ಲೇ ಸ್ಟೋರ್ ಅಥವಾ ಆಪಲ್ ಆ್ಯಪ್ ಸ್ಟೋರ್ ಮೂಲಕ ಉಚಿತವಾಗಿ ಡೌನ್‌ಲೋಡ್ ಮಾಡಬಹುದು.

ಮತ್ತೊಬ್ಬ ಪ್ರೇರಣಾದಾಯಿ ಟೆಕ್ ಉದ್ಯಮಿ, ಜೊಹೊ ಕಂಪನಿಯ ಸ್ಥಾಪಕ, ವಾಟ್ಸ್ಆ್ಯಪ್‌ಗೆ ಪರ್ಯಾಯವಾದ 'ಅರಟ್ಟೈ' ಆ್ಯಪ್‌ನ ಜನಕ ಶ್ರೀಧರ್ ವೆಂಬು ಅವರು ಮ್ಯಾಪ್ ಮೈ ಇಂಡಿಯಾದ ಬಗ್ಗೆ ಹೀಗೆನ್ನುತ್ತಾರೆ- ''ವಾಸ್ತವವಾಗಿ ಗೂಗಲ್ ಮ್ಯಾಪ್‌ಗಿಂತಲೂ ಹೆಚ್ಚು ಕಾಲದಿಂದ, ದಶಕಗಟ್ಟಲೆ ಸಂಶೋಧನೆ ಮತ್ತು ಅಭಿವೃದ್ಧಿಯ ಬಳಿಕ ಮ್ಯಾಪ್ ಮೈ ಇಂಡಿಯಾದ ನೇವಿಗೇಶನ್ ಆ್ಯಪ್ 'ಮ್ಯಾಪಲ್ಸ್' ಸಿದ್ಧವಾಗಿದೆ. ಬಹಳ ಚೆನ್ನಾಗಿಯೂ ಇದೆ. ಭಾರತದಲ್ಲಿ ಇಂಥ ಸ್ವದೇಶಿ ಉದ್ಯಮಿಗಳ ಸಂಖ್ಯೆ ಹೆಚ್ಚಬೇಕು''. ಮ್ಯಾಪಲ್ಸ್ ನೇವಿಗೇಶನ್ ಮತ್ತು ಮ್ಯಾಪಿಂಗ್ ಅಪ್ಲಿಕೇಶನ್ ಅನ್ನು ಮ್ಯಾಪ್ ಮೈ ಇಂಡಿಯಾ ಸಂಸ್ಥೆಯು ಇಸ್ರೋ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿದೆ. ಇದು ಗೂಗಲ್ ಮ್ಯಾಪ್‌ಗೆ ಹೋಲಿಸಿದರೆ, ಹೈಪರ್ ಲೋಕಲ್ ಪರ್ಯಾಯವಾಗಿದೆ. ''ಭಾರತದಲ್ಲಿ ಉದ್ಯಮಶೀಲರ ಸಂಖ್ಯೆ ಹೆಚ್ಚಬೇಕು. ಆಗ ಮಾತ್ರ ಭಾರತ ನಿಜವಾಗಿಯೂ ಸ್ವಾವಲಂಬಿಯಾಗಲಿದೆ. ಖಾಸಗಿ ವಲಯದ ಉದ್ಯಮಿಗಳ ಬೆಳವಣಿಗೆಗೆ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವ ಪುಷ್ಟಿ ನೀಡಿದೆ. ಹೀಗಾಗಿ ಭಾರತ ಮತ್ತಷ್ಟು ಪ್ರಬಲವಾಗಲಿದೆ'' ಎನ್ನುತ್ತಾರೆ ರಾಕೇಶ್ ವರ್ಮಾ.

ಇಲ್ಲಿ ನಿಜಕ್ಕೂ ಕಾಡುವ ಪ್ರಶ್ನೆ ಏನೆಂದರೆ, ಗೂಗಲ್ ಮ್ಯಾಪ್ ಕಣ್ಣು ಬಿಡುವುದಕ್ಕೆ ಮೊದಲೇ, ಅಮೆರಿಕದಿಂದ ಭಾರತಕ್ಕೆ ಮರಳಿ, ಡಿಜಿಟಲ್ ಮ್ಯಾಪಿಂಗ್ ಕ್ಷೇತ್ರದಲ್ಲಿ ಹಗಲಿರುಳೆನ್ನದೆ ಶ್ರಮಿಸಿದ್ದ ರಾಕೇಶ್ ವರ್ಮಾ ದಂಪತಿಗೆ ಏಕೆ ನಿರೀಕ್ಷಿತ ಬೆಂಬಲ ಲಭಿಸುವಲ್ಲಿ ಇಷ್ಟೊಂದು ವಿಳಂಬವಾಯಿತು? ಖಾಸಗಿ ವಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಮತ್ತು ಟೆಕ್ ಉದ್ಯಮಿಗಳಿಗೆ ಪ್ರೋತ್ಸಾಹ ಸಿಗದಿರುವುದು ಕೂಡ, ಗೂಗಲ್, ಅಮೆಜಾನ್, ಫೇಸ್‌ಬುಕ್‌ನಂಥ ದಿಗ್ಗಜ ತಂತ್ರಜ್ಞಾನ ಕಂಪನಿಗಳು ಭಾರತದಲ್ಲಿ ಅಸ್ತಿತ್ವಕ್ಕೆ ಬರದಿರುವುದಕ್ಕೆ ಕಾರಣವಿರಬಹುದೇ? ಯೋಚಿಸಲು ಇದು ಸಕಾಲವಾಗಿದೆ. ಜಾಗತೀಕರಣದ ಪರಿಣಾಗ ಇಡೀ ವಿಶ್ವವೇ ಒಂದು ಹಳ್ಳಿಯಾಗಿರುವಾಗ, ನಮ್ಮ ದೇಶದಲ್ಲೂ ಗೂಗಲ್, ಅಮೆಜಾನ್, ಫೇಸ್‌ಬುಕ್‌ಗೆ ಪರ್ಯಾಯವಾಗಿ ಪ್ರಬಲ ಟೆಕ್ ಕಂಪನಿಗಳು ಹೊರಹೊಮ್ಮುವ ಉಜ್ವಲ ಅವಕಾಶಗಳು ಇದ್ದೇ ಇವೆ. ಆದರೆ ಅವುಗಳಿಗೆ ಸಮಗ್ರ ಬೆಂಬಲವೂ ಅಗತ್ಯ.

ಭಟ್ಟರ್ ಸ್ಕಾಚ್

- **ನಾಗರಾಜ್ ಮೆಹ್ತಿ, ಹುಬ್ಬಳ್ಳಿ**
ಭಟ್ರೇ, 'ಭಟ್ಟರ್ ಸ್ಕಾಚ್'ನಲ್ಲಿ ಅಸಂಬದ್ಧ ಪ್ರಶ್ನೆ ಇಲ್ಲವಂತೆ, ಹೌದಾ?
– **ನಿಜ, ಅಂಥ ಪ್ರಶ್ನೆಗಳನ್ನು ಅಸೆಂಬ್ಲಿ, ಪಾರ್ಲಿಮೆಂಟಿನಲ್ಲಿ ಮಾತ್ರ ಕೇಳಲಾಗುತ್ತದೆ!**

- **ರಾಜು ಪತ್ತಾರ, ಹುಬ್ಬಳ್ಳಿ**
ಸರ್, ಪಕ್ಷಕ್ಕೆ ಸೇರಿಸಿಕೊಳ್ಳುವಾಗ ಪಟಾಕಿ ಸುಡ್ತಾರೆ, ಉಚ್ಚಾಟಿಸುವಾಗ?
– **ಟೈರ್ ಸುಡ್ತಾರೆ!**

- **ಪಿ.ಪಿ.ವಿನೋದ್, ಮದ್ದೂರು**
ನೀವು ಇನ್ನೂ ನೋಡದ ವ್ಯಕ್ತಿ ಯಾರು ಭಟ್ರೇ?
– **ಆದರ್ಶ ಗಂಡ!**

- **ಮಧುಕರ ಹೆಬ್ಬಾರ, (ಇಮೇಲ್ ಮೂಲಕ)**
ಭಟ್ರೇ, ನಿಮ್ಮ ಅಭಿಮಾನಿಗಳಲ್ಲಿ ಹುಡುಗರು ಹೆಚ್ಚೋ, ಹುಡುಗಿಯರು ಹೆಚ್ಚೋ?
– **ಲಿಂಗ ಗಣತಿ ಮಾಡೋದೊಂದು ಬಾಕಿ ಇತ್ತು ನೋಡು!**

- **ಪ್ರಭಾಕರ ರೆಡ್ಡಿ, ವೈಯಾಲಿಕಾವಲ್**
ಸರ್, ಕಟ್ಟಾ ಸುಬ್ರಮಣ್ಯ ನಾಯ್ಡು ಬಾಲ್ಯದಿಂದಲೂ ಉಣ್ಣೆಟೋಪಿ ಧರಿಸಲು ಕಾರಣವೇನು?
– **'ಇದು ನನ್ನ ಜನ್ಮಸಿದ್ಧ ಲುಕ್ಕು' ಎಂದು ಅವರು ಭಾವಿಸಿದ್ದಾರಂತೆ!**

- **ರಾಜು ಬೆಟ್ಟಹಳ್ಳಿ, ಮಂಡ್ಯ**
ಸರ್, ದೇವರನ್ನು ನೆನಪಿಸಿಕೊಂಡು ಚಹಾ ಕುಡಿಯಬೇಕು ಅಂತಾರಲ್ಲ?
– **ಹೂಂ.. ನಾನು ಕಣ್ಣನ್ 'ದೇವ'ನ್ ನೆನಪಿಸಿಯೇ ಕುಡಿಯೋದು!**

- **ಜೆ.ನಂದಕುಮಾರಿ, (ಇಮೇಲ್ ಮೂಲಕ)**
ಭಟ್ರೇ, ಪರಮ ಆಲಸಿಯಾದ ಅವನನ್ನು ಯಾವ ಗ್ಯಾಜೆಟ್ಟಿಗೆ ಹೋಲಿಸಲಿ?
– **ಸದಾ ಡೆಡ್ ಆಗಿರುವ ಲ್ಯಾಂಡ್ ಲೈನ್‌ಗೆ!**

- **ಕಿಶನ್ ಹೆಣ್ಣೂರು, (ಇಮೇಲ್ ಮೂಲಕ)**
ಭಟ್ರೇ, 'ಫ್ಯಾಟ್ ಈಸ್ ಬ್ಯುಟಿಫುಲ್' ಅಂತ ಇಲ್ಲೊಬ್ಬ ಹೇಳ್ತಾನಲ್ಲ?
– **ಯಾವನೋ ರಕ್ಷಿತಾ ಅಭಿಮಾನಿ ಇರಬೇಕು!**

- **ಭಾಗೀರಥಿ ಶರ್ಮ, ಶಿವಮೊಗ್ಗ**
ಭಟ್ರೇ, 'ಹೆಣ್ಣು ಸಂಸಾರದ ಕಣ್ಣು' ಅಂತಾರಲ್ಲ, ಹಾಗಾದ್ರೆ ಗಂಡು?
– **ಲಕ್ಷಣವಿಲ್ಲದ ಕರುಣಾನಿಧಿ ಕಪ್ಪು ಕನ್ನಡಕ!**

- **ನಂಜೂರು ಹೇಮಂತ, ಮೈಸೂರು**
ಭಟ್ರೇ, ಯಾವತ್ತೂ ಡೈ ಮಾಡುವವರು ಡೈ ಮಾಡದಿದ್ದರೆ ಹೇಗೆ ಕಾಣುತ್ತಾರೆ?
– **ಥೇಟು ಶ್ರೀ ಶ್ರೀ ರವಿಶಂಕರ್ ಥರ!**

- **ಶಶಿಧರ ಭಟ್, ಸಿದ್ದಾಪುರ**
ಭಟ್ರೇ, ನನ್ನ ಸ್ನೇಹಿತ ಇಲ್ಲಿ ತನಕ ಒಂದೂ ಸುಳ್ಳನ್ನೇ ಹೇಳಿಲ್ಲವಲ್ಲ?
– **ಪಕ್ಕದಲ್ಲಿ ನೀನಿದ್ದರೆ ಅವನಿಗೆ ಆ ಪ್ರಸಂಗವೇ ಬರೊಲ್ಲ ಬಿಡು**

ಮಹಾಬಯಲಿನಿಂದ ತಂಬಿಗಿ ಬಯಲೆಡೆಗೆ..!

ಬಸವ ಮಂಟಪ

ರವಿ ಹಂಜ್
vveditoped@gmail.com

ಶ್ರೀ ಟಿ.ಎನ್. ಮಲ್ಲಪ್ಪನವರು ಓರ್ವ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರು. ವೀರಶೈವ ಧರ್ಮದ ಅನೇಕ ಕೃತಿಗಳ ಗ್ರಂಥಕರ್ತರು. ಇವರು 'ನಾಸದೀಯ ಸೂಕ್ತ' ಎಂಬ ಕೃತಿಯನ್ನು 1968ರಲ್ಲಿ ರಚಿಸಿದ್ದಾರೆ. ಈ ಗ್ರಂಥವನ್ನು ಚಿತ್ರದುರ್ಗದ ಮುರುಘಾಮಠ ಪ್ರಕಟಿಸಿದೆ. ಈ ಕೃತಿಯಲ್ಲಿ ಮಲ್ಲಪ್ಪನವರು ನಿಗಮಾಗಮಗಳು ಹೇಗೆ ಶ್ರೀಕಂಠ ಭಾಷ್ಯ, ಶ್ರೀಕರ ಭಾಷ್ಯ, ಸಿದ್ಧಾಂತ ಶಿಖಾಮಣಿಯಲ್ಲದೆ ವಚನಸಾಹಿತ್ಯದಲ್ಲೂ ಹಾಸುಹೊಕ್ಕಾಗಿ ಮಿಳಿತಗೊಂಡಿವೆ ಎಂದು ಪುರಾವೆ ಸಮೇತ ವಿಷಯ ಮಂಡನೆ ಮಾಡಿದ್ದಾರೆ.

ಈ ಕೃತಿಯಲ್ಲಿ ಮಲ್ಲಪ್ಪನವರು ಹೀಗೆ ವಿಶ್ಲೇಷಿಸುತ್ತಾರೆ: ''ನಾಸದೀಯ ಸೂಕ್ತದಲ್ಲಿ 'ಆಭು' ಎಂಬ ಪದವು ಪರಬ್ರಹ್ಮ ಎಂಬ ಅರ್ಥದಲ್ಲಿ ಉಪಯೋಗಿಸಿರುವ ಪಾರಿಭಾಷಿಕಪದವು. ಬೃಹತ್ವಾತ್ ಬ್ರಹ್ಮ ಎಂಬ ಅರ್ಥದಲ್ಲಿ ಬ್ರಹ್ಮ ಎಂಬ ಪದವು ಪರಮಾತ್ಮನನ್ನು ನಿರ್ದೇಶಿಸಲು ಉಪಯೋಗಿಸಿದ ಪಾರಿಭಾಷಿಕ ಪದವಾದರೂ, ಇದನ್ನು ಆ ಅರ್ಥದಲ್ಲಿ ಋಗ್ವೇದದಲ್ಲಿ ಉಪಯೋಗಿಸಿರುವುದು ಕಂಡುಬಂದಿಲ್ಲ. ಋಗ್ವೇದದ ಋಷಿಗಳು ಪರತತ್ತ್ವವನ್ನು ನಿರ್ದೇಶಿಸಲು ಯೋಜಿಸಿಕೊಂಡಿರುವ ಮೊದಲನೆಯ ಪದವು, 'ಆಭು' ಎಂಬ ಪದವೇ ಆಗಿದೆ. ಆಭು ಎಂಬ ಪದಕ್ಕೆ ಟೊಳ್ಳು ಎಂಬ ಸಾಮಾನ್ಯ ಅರ್ಥವೂ, ಪರಮಾತ್ಮ ಎಂಬ ಪಾರಿಭಾಷಿಕ ಅರ್ಥವೂ ಇದೆ. ಮ್ಯಾಕ್ಸ್ ಮುಲ್ಲರರು ನಾಸದೀಯ ಸೂಕ್ತವನ್ನು ಭಾಷಾಂತರಿಸುವುದರಲ್ಲಿ 'ಆಭು' ಪದಕ್ಕೆ 'void' ಎಂದು ಭಾಷಾಂತರಿಸಿರುವರು. ಸೃಷ್ಟಿಯಾದುದೆಲ್ಲವನ್ನೂ 'ಸತ್' ಎಂದರೆ ಇರುವುದು ಎಂದು ಹೇಳುವರಷ್ಟೆ. ಸೃಷ್ಟಿಗೆ ಮೊದಲ ಸ್ಥಿತಿಯು ಸದಸತ್ತುಗಳಿಗೆ ಮೀರಿ ಇಲ್ಲದಂತೆ ಇರುವುದಕ್ಕೆ ವಚನಕಾರರ 'ಶೂನ್ಯ, ಬಯಲು' ಎಂಬ ಪಾರಿಭಾಷಿಕ ಪದಗಳಂತೆ ಇರುವ 'ಆಭು' ಎಂಬ ಪಾರಿಭಾಷಿಕ ಪದವನ್ನು ಈ ಸೂಕ್ತದ ಋಷಿಯು ನಿಯೋಜಿಸಿಕೊಂಡುದು ಕಂಡು ಬರುತ್ತದೆ. ಅಷ್ಟೇಕೆ? ಶೂನ್ಯ, ಬಯಲು– ಎಂಬ ಪದಗಳಿಗೆ ನಾಸದೀಯ ಸೂಕ್ತದ 'ಆಭು' ಪದವೇ ಹಿನ್ನೆಲೆಯಾಗಿದೆಯೆನ್ನಬಹುದು.

ಯದಾ ತಮಸ್ತನ್ನ ದಿವಾ ನರಾತ್ರಿರ್ನಸ್ಸನ್ನ ಚಾಸಚ್ಛಿವ ಏವ ಕೇವಲಃ। ತದಕ್ಷರಂ ತತ್ ಸವಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ ಪ್ರಕೃತಾ ಪುರಾಣೀ ॥– ಶ್ವೇತಾಶ್ವರೋಪನಿಷತ್ತಿನ ಮಂತ್ರವಿದರ ಪದಗಳು ನಾಸದೀಯ ಸೂಕ್ತದಲ್ಲಿನ ಮುಖ್ಯಪದಗಳೇ, ಆದುದರಿಂದಲೇ ಈ ಮಂತ್ರದ ವಿಜ್ಞಾನ ಭಗವದ್ ಕೃತ ವಿವರಣದಲ್ಲಿ 'ನಾಸದಾಸೀನೋಸದಾಸೀತ್ ತಮ ಆಸೀದಿತಿ ಶ್ರುತ್ಯಂತರೋಕ್ತಂ' ಎಂದು ಹೇಳಿ ಮೇಲಿನ ಮಂತ್ರಕ್ಕೆ ನಾಸದೀಯ ಸೂಕ್ತವೇ ಆಧಾರವೆಂಬುದನ್ನು ಸ್ಪಷ್ಟಮಾಡಿದೆ. ನಾಸದೀಯ ಸೂಕ್ತೋಕ್ತ ಪರಬ್ರಹ್ಮವನ್ನು ಉಪನಿಷತ್ತು 'ಶಿವ' ಎಂಬ ಮಂಗಳಾರ್ಥವುಳ್ಳ ಪದದಿಂದ ಕರೆದಿದೆ. ಸೂಕ್ತದ ಒಂದೆರಡನೆಯ ಮಂತ್ರದಂತೆ ರವಿಶಶಿದಿನನಿ ತೈತ್ತರೀಯ ಉಪನಿಷತ್ತಿನಲ್ಲಿ ಆತ್ಮನಿಂದ ಆಕಾಶವೂ ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲವೂ, ಜಲದಿಂದ ಪೃಥ್ವಿಯೂ, ಪೃಥ್ವಿಯಿಂದ ವನಸ್ಪತಿಗಳೂ, ಅವುಗಳಿಂದ ಅನ್ನವೂ, ಅನ್ನದಿಂದ ಪುರುಷನೂ ಉತ್ಪತ್ತಿಯಾದುದನ್ನು ಹೇಳಿದೆ– ಆತ್ಮನ ಆಕಾಶಃ ಸಂಭೂತಃ ಆಕಾಶಾತ್ ವಾಯುಃ ವಾಯೋರಗಿ, ಅರಾಪಃ ಅದ್ಭ ಪೃಥವಿ, ಪೃಥಿವ್ಯಾ ಓಷಧಯಃ ಓಷಧೀಭೆನ್ನಂ, ಅನ್ನಾತ್ ಪುರುಷಃ.

ಡಾರ್ವಿನ್ನನ ನಿಯಮದಂತೆ ಸೂಕ್ಷ್ಮ ಚೇತನವಾದವುಗಳಿಂದ ಸೃಷ್ಟಿಯು ಪ್ರಾರಂಭಿಸಿ ಅತ್ಯಂತ ಚೈತನ್ಯವುಳ್ಳವುಗಳನ್ನು ಕ್ರಮವಾಗಿ ಉದ್ಭವಿಸಿಸುವುದೆಂಬ ಕಲ್ಪನೆಯು ಉಪನಿಷತ್ತಿನಲ್ಲಿಯೂ ಹಾಗೆಯೇ ವಚನ ವಾಙ್ಮಯದಲ್ಲಿಯೂ ಕಂಡುಬರುತ್ತದೆ: ''ಏನೆಂದೆನಲಿಲ್ಲದ ಮಹಾಘನವು ತನ್ನ ಲೀಲೆಯಿಂದ ತಾನೇ ಸ್ವಯಂಭು ಲಿಂಗವಾಯಿತು, ಲಿಂಗದಿಂದಾಯಿತು ಶಿವಶಕ್ತಾತ್ಮಕ, ಆ ಶಿವಶಕ್ತಾತ್ಮಕ ನಿಂದ ಆಯಿತು ಆತ್ಮ, ಆತ್ಮನಿಂದಾದುದು ಆಕಾಶ, ಆಕಾಶದಿಂದಾದುದು ವಾಯು, ವಾಯುವಿನಿಂದಾದುದು ಅಗ್ನಿ, ಅಗ್ನಿಯಿಂದಾದುದು ಅಪ್ಪು, ಅಪ್ಪುವಿನಿಂದಾದುದು ಪೃಥ್ವಿ, ಪೃಥ್ವಿಯಿಂದಾದುದು ಸಕಲ ಜೀವವೆಲ್ಲ, ಇವೆಲ್ಲ ನಿಮ್ಮನೆ ಕಹಿನಿಂದಾದುವು ಚಿಮ್ಮಲಿಗೆಯ ಚೆನ್ನಿಗರಾಮಾ''.

ಈ ವಿಭಾಗವು ಶ್ವೇತಾಶ್ವತರ ಉಪನಿಷತ್ತಿನಲ್ಲಿಯೂ ಕಂಡುಬರುತ್ತದೆ. 'ಭೋಕ್ತಾ ಭೋಗ್ಯಂ, ಪ್ರೇರಿತಾರಂಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್' ಎಂದು ಶ್ವೇತಾಶ್ವತರ ಉಪನಿಷತ್ತಿನಲ್ಲಿ ಹೇಳಿರುವುದರಲ್ಲಿ ಭೋಕ್ತಾ, ಭೋಗ್ಯ ಮತ್ತು ಪ್ರೇರಿತಾರಂ ಎಂದರೆ ಪ್ರೇರಕನಾದ ಈಶ್ವರನು ಎಂಬ ತ್ರಿವಿಧವಾಗಿರುವುದು ಬ್ರಹ್ಮವೆಂದು ಹೇಳಿದೆ. ಶಿವಮಹಾಪುರಾಣದಲ್ಲಿ ಶ್ವೇತಾಶ್ವತರ ಉಪನಿಷತ್ತಿನ ಇದೇ ಮೊದಲಾದ ಶ್ಲೋಕಗಳು ಉದ್ಧೃತವಾಗಿರುವುದರಿಂದ ಆ ಪುರಾಣಕ್ಕೆ ಈ ಉಪನಿಷತ್ತು ಹಿನ್ನೆಲೆಯೆಂಬುದು ಸ್ಪಷ್ಟ. ಈ ಪುರಾಣದ ಅನೇಕ ಶ್ಲೋಕಗಳು ಶ್ರೀಕಂಠಭಾಷ್ಯದಲ್ಲಿಯೂ ಶ್ರೀಕರಭಾಷ್ಯದಲ್ಲಿಯೂ ಆಧಾರವಾಗಿ ತೆಗೆದುಕೊಳ್ಳಲ್ಪಟ್ಟಿವೆ. ಸ್ವಲ್ಪ ಮಟ್ಟಿಗೆ ಸಿದ್ಧಾಂತ ಶಿಖಾಮಣಿಯಲ್ಲಿಯೂ ಇದು ಕಂಡುಬರುವುದು. 'ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಂ' ಎಂದು ಸಿದ್ಧಾಂತ ಶಿಖಾಮಣಿಯಲ್ಲಿಯೂ ಹೇಳಿದೆ. ವೀರಶೈವದ ಇದೇ ಮೊದಲಾದ ನಿಲುವಿಗೆ ಶಿವಮಹಾಪುರಾಣವೂ ಶ್ವೇತಾಶ್ವತರೋಪನಿಷತ್ತೂ ಹಾಗೂ ನಾಸದೀಯ ಸೂಕ್ತವೂ ಹಿನ್ನೆಲೆಗಳೆಂಬುದು ಗಮನಾರ್ಹ ವಿಷಯವಾಗಿದೆ. ಶಕ್ತಿ ವಿಶಿಷ್ಟ ಶಿವನು ಜಗತ್ತಾಗಿ ಹೊರಹೊಮ್ಮಿ, ಅದರಲ್ಲಿ ಅಂತರ್ಯಾಮಿಯಾಗಿದ್ದು ಕಾಪಾಡಿ ಕೊನೆಗೆ ತನ್ನಲ್ಲಿ ಲಯಗೊಳಿಸಿಕೊಳ್ಳುವನೆಂಬ ವೀರಶೈವರ ಮುಖ್ಯ ಸಿದ್ಧಾಂತಕ್ಕೂ ಮೇಲ್ಕಂಡ ಆಧಾರಗಳೇ ಹಿನ್ನೆಲೆಯಾಗಿವೆ''.

ತಮ್ಮ ವಿಶ್ಲೇಷಣೆಯನ್ನು ಮತ್ತಷ್ಟು ವಿಸ್ತರಿಸುತ್ತಾ ಅವರು ಹೀಗೆನ್ನುತ್ತಾರೆ: ''ನಾಸದೀಯ ಸೂಕ್ತವೇ ಮೂಲಾಧಾರವಾಗಿರುವ ವಚನಕಾರರಾದ ವೀರಶೈವ ಶರಣರ ನಿಲುವೇನೆಂಬುದನ್ನು ಸೂಕ್ಷ್ಮವಾಗಿ ವಿವರಿಸುವುದನ್ನು ಅವಲೋಕಿಸಿದರೆ ತುಲನಾತ್ಮಕ ವಿವೇಚನೆಗೆ ಸಹಾಯವಾಗುವುದು. ನಾಸದೀಯ ಸೂಕ್ತದಲ್ಲಿ ಹೇಳಿರುವ ಸದಸತ್ರನಿಶತಿದಿನ ನಿಶಿಗಳಿಲ್ಲದಾಗ ಶಕ್ತಿಯಿಂದ ಹೊರಹೊಮ್ಮದಿದ್ದರೂ ತನ್ನಲ್ಲಿ ಅದ್ವಿತೀಯವಾಗಿ ತನ್ನ ಸ್ವರೂಪವೇ ಆದ ಶಕ್ತಿಯಿಂದ ಸ್ಫುರಿಸುತ್ತಿದ್ದ ಪರತತ್ತ್ವವನ್ನು 'ತದೇಕಂ ತಸ್ಮಾದ್ದಾನ್ಯತ್ ನ ಪರಃ' ಎಂದು ಆ ಸೂಕ್ತದಲ್ಲಿಯೇ ಹೇಳಿದಂತೆ, ಶರಣರು ಹೇಳುವ ಸರ್ವಶೂನ್ಯ ನಿರಾಲಂಬ ಬ್ರಹ್ಮದ ಸ್ವರೂಪವೂ ಅದೇ ಆಗಿದೆ. ನಾಸದೀಯ ಸೂಕ್ತದಲ್ಲಿ ಸೂಕ್ಷ್ಮವಾಗಿ ಹೇಳಿರುವ ಜಗತ್ ಸೃಷ್ಟಿ ವಿಷಯವನ್ನು ಉಪನಿಷತ್ಕಾರರೂ, ವಚನಕಾರರೂ ವಿಸ್ತರಿಸಿಕೊಂಡಿದ್ದಾರೆ 'ಯದಾ ತಮಃ, ನ ದಿವಾ ನ ರಾತ್ರಿಃ ನ ಸತ್ ನಚಾ ಸತ್, ಶಿನ ಏವ ಕೇವಲಃ' ಎನ್ನುವ ಶ್ವೇತಾಶ್ವತರ ಶ್ರುತಿಯಲ್ಲಿ ಮೇಲೆ ಹೇಳಿದ ಪರತತ್ತ್ವವನ್ನು 'ಶಿವ ಏವ' ಎಂದು ಕರೆಯಲಾಗಿದೆ. ಈ ಕಲ್ಪನೆಯನ್ನೇ ಶಿವಮಹಾಪುರಾಣದಲ್ಲಿಯೂ, ಅದನ್ನು ಅನುಸರಿಸಿರುವ ಶ್ರೀಕಂಠ, ಶ್ರೀಕರ ಭಾಷ್ಯಗಳಲ್ಲಿಯೂ, ಸಿದ್ಧಾಂತ ಶಿಖಾಮಣಿಯಲ್ಲಿಯೂ ವಿಸ್ತರಿಸಲಾಗಿದೆ''.

ನಂತರ ಶಿವಾದ್ವೈತ ಮಂಜರಿ, ಕರಣಹಸಿಗೆ, ಸೃಷ್ಟಿ ವಚನಗಳಲ್ಲಿನ ಹನ್ನೊಂದು ಲಿಂಗತತ್ವ ವಿಕಾಸವನ್ನು ಸಮಗ್ರವಾಗಿ ಪ್ರಭುದೇವೋಕ್ತ ಲಿಂಗತತ್ವ ವಿಕಾಸದಲ್ಲಿ ಕಾಣಬಹುದು ಎನ್ನುತ್ತಾ ಅದನ್ನು ಹೀಗೆ ವಿವರಿಸಿದ್ದಾರೆ: ''ಮೊದಲು ನಿಃಕಲಬ್ರಹ್ಮವು, ಆ ನಿಃಕಲಬ್ರಹ್ಮದಿಂದ ಚಿತ್ತು; ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳು ಪುಟ್ಟಿದವು. ಆ ಚಿನ್ನಾದ ಚಿದ್ಬಿಂದು ಚಿತ್ಕಳೆ ಮೂಲ ಚಿತ್ತೆಂಬ ಚತುರ್ವಿಧವು ಘಟ್ಟಿಗೊಂಡು ಅಖಂಡ ಗೋಳಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗ ವಾಯಿತು. ಆ ಮಹಾಲಿಂಗದಿಂದ ಸದಾಶಿವಮೂರ್ತಿ ಪುಟ್ಟಿದನು; ಆ ಸದಾಶಿವನ ಪಂಚಮುಖದಿಂದ ಭೂತಂಗಳು ಪುಟ್ಟಿದವು; ಗೋಪ್ಯಮುಖದಲ್ಲಿ ಆತ್ಮನು ಪುಟ್ಟಿದನು. ಅಂತಪ್ಪ ಪರಬ್ರಹ್ಮದಿಂದಾದ ಅಂಗಸ್ಥಲವೊಂದಕ್ಕೆ ಕನಳಿಗೆಯಾಗಿ ಸೇರಿದ ಇಪ್ಪತ್ತೆದು ತತ್ತ್ವಂಗಳು– ಅವು ಎಂತಾವೆಲಾ ಸ್ವಾಮಿಯೆಂದು ಬೆಸಗೊಂಡೊಡೆ– ಅರಿವು ರೂಪಮಾದ ಶ್ರವಣಾದಿ ಇಂದ್ರಿಯಂಗಳೈದು, ಕರ್ಮಕ್ರಿಯಾರೂಪಮಾದ ವಾಗಾದಿ ಇಂದ್ರಿಯಂಗಳೈದು, ಶಬ್ದ ವಿಷಯವೇ ಮೊದಲಾದ ವಿಷಯಂಗಳೈದು, ಪ್ರಾಣಾದಿ ವಾಯುಗಳೈದು ಈ ಪ್ರಕಾರದಿಂದ ಹೇಳಲ್ಪಟ್ಟವುಗಳಿಂದ ಕೂಡಿರುವುದೇ ಅಂಗವು ಮಹಾಲಿಂಗವನು ತಾನೆ ಹನ್ನೊಂದು ತೆರನಾಯಿತು. ಏಕಾದಶ ತತ್ತ್ವಸ್ವರೂಪವನ್ನು ತಳೆಯಿತು. ಇಂತು ಏಕಾದಶ ತತ್ತ್ವಸ್ವರೂಪನನ್ನು ತಳೆದ ಪರಿಕ್ರಮಂ ತರುವಾಯದ ನಿಲುಕಡೆಯು ಹ್ಯಾಗಿಪ್ಪುದೆಲೆ ಸ್ವಾಮಿಯೆಂದು ಬೆಸರಗೊಂಡೊಡೆ––ಶಾಂತಿ ಶಕ್ತಿಯೆ ಮೊದಲಾದ ಶಕ್ತಿಗಳೈದು, ಶಿವಸಾದಾಖ್ಯವೇ ಮೊದಲಾದ ಕರ್ತೃಗಳೈದು, ಈ ಎಲ್ಲಕ್ಕೂ ಉಪರಿಯಾಗಿ ತೋರುವ ಮೇಲಣ ಮಹಾಲಿಂಗತತ್ತ್ವ ತಾನೊಂದು. ಪ್ರಥಮದಲ್ಲಿ ನಿರೂಪಣವ ಪಾಲಿಸಿದ ಅಂಗ ಸಂಬಂಧವಾದ ತತ್ತ್ವಗಳಿಪ್ಪತ್ತೈದು, ಲಿಂಗ ಸಂಬಂಧನಾದ ತತ್ತ್ವಗಳು ಹನ್ನೊಂದು, ಅಂಗಲಿಂಗ ಸಂಬಂಧವಾದ ಉಭಯ ತತ್ತ್ವಂಗಳೂ ಕೂಡಿ ಮೂವತ್ತಾರು ತತ್ತ್ವಂಗಳಾದವು.

ಕರಣಹಸಿಗೆಯಲ್ಲಿಯೂ ಇತರ ಆಧಾರಗ್ರಂಥಗಳಲ್ಲಿಯೂ ತತ್ತ್ವಾತೀತವಾದ ನಿಃಕಲಬ್ರಹ್ಮದವರೆಗೆ, ತತ್ತ್ವಾತೀತ ಪರಬ್ರಹ್ಮವು ಹಂತಹಂತವಾಗಿ ಸೃಷ್ಟಿಗೆ ಅಭಿಮುಖನಾಗುತ್ತ ಬರುವುದೆಂಬುದು ತಿಳಿದುಬರುವುದು. ಎಲ್ಲಾ ಆಧಾರಗಳಿಂದ ಸಂಕ್ಷಿಪ್ತವಾಗಿ, 'ಸರ್ವಶೂನ್ಯ ನಿರಾಲಂಬ ಬ್ರಹ್ಮ' (ನಿರವಯಲಿಂಗ); ಇದುವೇ ತಿಳಿದುಪ್ಪ ಗಟ್ಟಿಗೊಂಡು ಎರೆದುಪ್ಪವಾದ ಹಾಗೆ' ಆದುದು ನಿರಂಜನ ಬ್ರಹ್ಮ; ಇದರ 'ನಿರಂಜೋಂಕಾರ ಶಕ್ತಿಯ ನೆನಹು ಮಾತ್ರದಿಂದ' ಆದುದು ಶೂನ್ಯಲಿಂಗ; ಇದರ ಮಹಾಜ್ಞಾನ ಚಿತ್ತಿನ ನೆನಹು ಮಾತ್ರದಿಂದ' ಆದುದು ನಿಷ್ಕಲ ಬ್ರಹ್ಮ; ಇದರ ಜ್ಞಾನ ಚಿತ್ತು, ಆ ಚಿತ್ತಿನ ಚೆನ್ನಾದ, ಚಿದ್ಬಿಂದು ಚಿತ್ಕಳೆ ಚತುರ್ವಿಧವು ಗಟ್ಟಿಗೊಂಡು ಆದುದು ಮಹಾಲಿಂಗ; ಇದರಿಂದ ಸದಾಶಿವ ಮೂರ್ತಿಯಾದನು''.

ಸಮಗ್ರವಾಗಿ 'ಚಿನೂಲಾದ್ರಿ ಚಿತ್ಕಳೆ' ಎಂದೇ ಹೆಸರಾದ ಜಗದ್ಗುರು ಮಲ್ಲಿಕಾರ್ಜುನ ಜಗದ್ಗುರುಗಳ ಆಶ್ರಯದಲ್ಲಿ ಪ್ರಕಟಿತಗೊಂಡ ಈ ಕೃತಿ ಮತ್ತು ಕೃತಿಕಾರರಾದ ನಿವೃತ್ತ ನ್ಯಾಯಾಧೀಶರೂ ವಿದ್ವಾಂಸರೂ ಆದ ಟಿ.ಎನ್. ಮಲ್ಲಪ್ಪನವರ ಪ್ರಬುದ್ಧತೆ ಇಲ್ಲಿ ಕಾಣುತ್ತದೆ.

ಟಿ.ಎನ್. ಮಲ್ಲಪ್ಪನವರ ವಿಶ್ಲೇಷಣೆಯಂತೆಯೇ ವಚನಕಾರ ಕಾಡಸಿದ್ಧೇಶ್ವರನು ಹೀಗೆಂದಿದ್ದಾನೆ: ''ಬ್ರಹ್ಮಾಂಡವು ಹೇಗೆ ಪುಟ್ಟಿತ್ತು ಪೇಳ್ವೆ ಕೇಳಿರಯ್ಯಾ. ಆದಿ, ಅನಾದಿಯಿಂದತ್ತತ್ತಲಾದ ನಿರಾಕಾರ ಪರವಸ್ತು ತನ್ನ ಸ್ವರೂಪವ ತಾನರಿಯದ ಅನಂತ ಕಲ್ಪಕಲ್ಪಾಂತರ ಇರ್ದು ತನ್ನ ಸ್ವಲೀಲೆಯಿಂದ ತಾನೇ ಜಗತ್ಸೃಷ್ಟಿ ನಿಮಿತ್ತವಾಗಿ, ನೆನವುದೋರಲು, ಆ ನೆನವು ನಿರ್ಧರವಾಗಿ ಚಿತ್ತೆನಿಸಿತ್ತು. ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು. ಆ ಚಿತ್ತು ತ್ರಿವಿಧಮಲಸಹವಾಗಿ ಚತುರ್ವಿಧವು ಘಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗ ವಾಯಿತ್ತು. ಆ ಮಹಾಲಿಂಗದಿಂದ ಆತ್ಮ ಜನನ; ಆತ್ಮದಿಂದ ಭಾವ ಪುಟ್ಟಿತ್ತು. ಆ ಭಾವದಿಂದ ಮೋಹ ಪುಟ್ಟಿತ್ತು. ಆ ಮೋಹವೆಂದಡೆ, ಮಾಯವೆಂದಡೆ, ಆಶೆಯೆಂದಡೆ, ಮನವೆಂದಡೆ ಏಕಪರ್ಯಾಯಾರ್ಥ. ಇಂತಪ್ಪ ಮೋಹದಿಂದ ತ್ರೈಲೋಕ ಮೊದಲಾಗಿ ಚತುರ್ದಶಭುವನಂಗಳು ಪುಟ್ಟಿದವು. ಆ ಚತುರ್ದಶ ಭುವನದ ಮಧ್ಯದಲ್ಲಿ ಇರುವ ಮೊದಲು ಆನೆ ಕಡೆಯಾಗಿ ಎಂಬತ್ತುನಾಲ್ಕುಲಕ್ಷ ಜೀವರಾಶಿಯೊಳಗೆ ದೇವ–ದಾನವ–ಮಾನವರು ಮೊದಲಾದ ಹೆಣ್ಣು–ಗಂಡು, ಸಚರಾಚರಂಗಳೆಲ್ಲವು ಉತ್ಪತ್ತಿಯಾದವು. ಇಂತೀ ಎಲ್ಲವು ಪರಶಿವನ ನೆನವುಮಾತ್ರದಿಂದ ಮರೀಚಿಕಾಜಲದಂತೆ, ಸುರಚಾಪದಂತೆ, ತೋರಿ ತೋರಿ ಅಡಗುವವಲ್ಲದೆ ನಿಜವಲ್ಲ ಮಿಥ್ಯವೆಂದು ತಿಳಿದು ವಿಸರ್ಜಿಸಿ ಬಿಡುವಾತ ತಾನೇ ಪರಶಿವನೆಂದು ತಿಳಿವುದಯ್ಯ, ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ''. ಅಲ್ಲಿಗೆ ಹಿಂದೂ–ವೀರಶೈವ–ಲಿಂಗವಂತ ಶರಣ ಒಂದಾಗಿ ದೇದೀಪ್ಯಮಾನವಾಗಿ ಬೆಳಗುತ್ತದೆ.

ಅದೇ ರೀತಿ ವೀರಶೈವ ಸಿದ್ಧಾಂತಕ್ಕೆ ಮೂಲವು ಶ್ವೇತಾಶ್ವರೋಪನಿಷತ್ತೆಂದರೆ, ಅದಕ್ಕೆ ಮೂಲವಾದುದು ಋಗ್ವೇದಾಂತರ್ಗತ ನಾಸದೀಯ ಸೂಕ್ತ. ಆ ಸೂಕ್ತದಲ್ಲಿ 'ಕಾಮಸ್ತದಗ್ರೇ' ಎಂದು ಮೊದಲಾಗುವ ಮಂತ್ರದಲ್ಲಿ ಕಾಮ ಎಂದರೆ ಸೃಷ್ಟಿ ವೈಭವ ಲೀಲೆ; ಇದು ಇಚ್ಛಾಶಕ್ತಿಯ ಆವಿರ್ಭಾವವಾಗಿದೆ, ''ತಪಸಸ್ತನ್ಮ ಹಿನಾಂಜಾಯತೈಕಂ'' ಎಂದು ಹೇಳಿರುವುದರಲ್ಲಿ ಜ್ಞಾನಶಕ್ತಿಯ ಅವಿರ್ಭಾವವಾಗಿದೆ. ''ತಪನಾ ಸೃಷ್ಟವ್ಯ ಪರ್ಯಾಲೋಚನ ರೂಪತ್ವಂ'' ಎಂದು ಮೊದಲಾಗಿ ಹೇಳಿದ ಜಗತ್ಸೃಷ್ಟಿ ವಿಷಯಕವಾದವಾಗಿದೆ. ಮುಂದಿನ ನಾಸದೀಯಸೂಕ್ತ ಮಂತ್ರದ ಸಾಯಣಭಾಷ್ಯವು, ''ಏವಂ ಮಾಯಾ ಸಹಿತಃ ಪರಮೇಶ್ವರಃ ಸರ್ವಂ ಜಗತ್ಸೃಷ್ಟ್ವಾ ಸ್ವಯಂಚಾನುಪ್ರವಿಶ್ಯ ಭೋಕ್ತೃಭೋಗ್ಯಾ ದಿರೂಪೇಣ ವಿಭಾಗಂ ಕೃತವಾನಿತ್ಯರ್ಥಃ'' ಎಂದಿದೆ. ಇನ್ನು ಶ್ರೇತಾಶ್ವತರೋಪನಿಷತ್ತಿನಲ್ಲಿ ''ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮ ಮೇತತ್'' ಎಂದು ಹೇಳಿರುವುದು ನಾಸದೀಯಸೂಕ್ತ ಮಂತ್ರಕ್ಕೆ, ಸಾಯಣ ಭಾಷ್ಯದಲ್ಲಿ ಹೇಳಿರುವ ಅರ್ಥಕ್ಕೆ ಅನುಸಾರವಾಗಿದೆ. 'ಸಿದ್ಧಾಂತ ಶಿಖಾಮಣಿ'ಯಲ್ಲಿ ''ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಂ'' ಎಂದು ಹೇಳಿರುವುದರ ಮೂಲವು ನಾಸದೀಯ ಸೂಕ್ತವೂ, ತದನುಸಾರನಾದ ಶ್ರೇತಾಶ್ವತರೋಪನಿಷತ್ತೂ, ಎಂಬುದು ಸ್ಪಷ್ಟವಾಗುತ್ತದೆ. ಇದನ್ನೇ ತೋಂಟದ ಸಿದ್ದಲಿಂಗೇಶ್ವರರು ತಮ್ಮ ಈ ಎರಡು ವಚನಗಳಲ್ಲಿ ಹೀಗೆ ಪ್ರತಿರೂಪಿಸಿದ್ದಾರೆ:

'ಆದಿ ಮಧ್ಯಾವಸಾನವಿಲ್ಲದಂದು, ಆದಿ ಅನಾದಿ, ಬಿಂದು ಕಳೆಗಳಿಲ್ಲದಂದು, ಸಾವಯವ, ನಿರವಯವಿಲ್ಲದಂದು, ತತ್ವ ಬ್ರಹ್ಮಾಂಡಾದಿ ಲೋಕಾದಿ ಲೋಕಂಗಳೇನುಯೇನೂ ಇಲ್ಲದಂದು; ನಿತ್ಯ ನಿರಂಜನ ಪರವಸ್ತು ನೀನೊರ್ಬನೆಯಿದ್ದೆಯಲ್ಲ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ'.

'ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮನೆಂಬ ಅಷ್ಟತನು ಮೂರ್ತಿ ಸ್ವರೂಪುಗೊಳ್ಳದಂದು, ನಾನು, ನೀನೆಂಬ ಭ್ರಾಂತಸೂತಕ ಹುಟ್ಟದಂದು, ನಾಮ, ರೂಪು, ಕ್ರಿಯೆಗಳೇನುಯೇನೂ ಇಲ್ಲದಂದು, ಸರ್ವಶೂನ್ಯವಾಗಿರ್ದೆಯಲ್ಲ ನೀನು, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ'.

ಹೀಗೆ ಹಿಂದೂ ಸಂಸ್ಕೃತಿಯ ಬೀಜಮೂಲವು ಟಿಸಿಲೊಡೆದು ಮತಧರ್ಮಗಳಾಗುತ್ತ ವಿಕಸಿಸಿದ ಛಾಯೆಗಳು ಗ್ರಾಂಥೈತಿಹಾಸಿಕವಾಗಿ ಗಾಢವಾಗಿವೆ, ನಿರೂಪಿಸಲ್ಪಟ್ಟಿವೆ.

(ಮುಂದುವರಿಯುವುದು)

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- ಶೇ.200ರಷ್ಟು ಸುಂಕದ ಬೆದರಿಕೆ ಹಾಕಿ ನಾನು ಭಾರತ–ಪಾಕಿಸ್ತಾನ ಯುದ್ಧವನ್ನು ನಿಲ್ಲಿಸಿದ್ದೆ, ಯುದ್ಧವನ್ನು ನಿಲ್ಲಿಸುವಲ್ಲಿ ನಾನು ನಿಪುಣ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್
– **ಇಷ್ಟಾಗಿಯೂ ನಿಮಗೆ 'ನೊಬೆಲ್ ಶಾಂತಿ ಪುರಸ್ಕಾರ' ಸಿಗಲಿಲ್ಲವಲ್ಲಾ, ಇದು ವಿಶ್ವದ ಎಷ್ಟನೇ ಅದ್ಭುತ ಅಂತ ವಸಿ ಯೋಳಿ ಪುಣ್ಯ ಕಟ್ಗಳಿ ಸಿವಾ...!!**

- ಮಧ್ಯಪ್ರದೇಶದಲ್ಲಿ 20 ಮಕ್ಕಳ ಸಾವಿಗೆ ಕಾರಣವಾದ 'ಕೋಲ್ಡ್ರಿಫ್' ಕೆಮ್ಮಿನ ಸಿರಪ್ ತಯಾರಕನಾದ ಶ್ರೀಸನ್ ಫಾರ್ಮಸ್ಯೂಟಿಕಲ್ ಕಂಪನಿಯ ಉತ್ಪಾದನಾ ಪರವಾನಗಿ ಸಂಪೂರ್ಣ ರದ್ದು: ಸುದ್ದಿ
– **ಈ ಆದೇಶಕ್ಕೆ ಆ ಕಂಪನಿ 'ಕೆಮ್ಮಂಗಿಲ್ಲ' ಬಿಡಿ!**

- ಸಚಿವನಾಗಿ ಹುದ್ದೆ ವಹಿಸಿಕೊಂಡ ನಂತರ ನನ್ನ ಆದಾಯ ಗಮನಾರ್ಹವಾಗಿ ಕಮ್ಮಿಯಾಗಿದೆ, ನಟನೆಗೇ ಮರಳುತ್ತೇನೆ: ಕೇಂದ್ರ ಸಚಿವ ಮತ್ತು ಹಿರಿಯ ನಟ ಸುರೇಶ್ ಗೋಪಿ
– **ನಿಮ್ಮ ಮನದಾಳದ ಭಾವನೆಯನ್ನು ಗೌರವಿಸ್ತೇವೆ ಸರ್. ಅಂದಹಾಗೆ, ರಾಜಕೀಯ ರಂಗದಲ್ಲೇ ಕೆಲವರು 'ನಟನೆ' ಮಾಡ್ತಾ ಇರೋದು ನಿಮಗೆ ಗೊತ್ತಿಲ್ಲವೇ?!**

- ಐಆರ್‌ಸಿಟಿಸಿ ಅಕ್ರಮ. ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಯಾದವ್, ಅವರ ಪತ್ನಿ ರಾಬ್ಡಿ ದೇವಿ ಮತ್ತು ಪುತ್ರ ತೇಜಸ್ವಿ ಯಾದವ್ ವಿರುದ್ಧ ದೋಷಾರೋಪ: ಸುದ್ದಿ
– **'ಫ್ಯಾಮಿಲಿ ಪ್ಯಾಕೇಜ್' ಅಂದ್ರೆ ಇದೇ ಇರಬೇಕು!**

- ಚುನಾವಣೆಗೆ ಸ್ಪರ್ಧಿಸಲ್ಲ, ಪಕ್ಷ ಸಂಘಟನೆಗೆ ಒತ್ತು: ಜನ ಸುರಾಜ್ ಪಕ್ಷದ ಸಂಸ್ಥಾಪಕ–ಮುಖಂಡ ಪ್ರಶಾಂತ್ ಕಿಶೋರ್ ಅಚ್ಚರಿ ಹೇಳಿಕೆ
– **ಒಂದು ಕಾಲಕ್ಕೆ ಬೇರೆ ಪಕ್ಷಗಳಿಗೆ 'ಚುನಾವಣೆಯಲ್ಲಿ ಗೆಲ್ಲುವ' ತಂತ್ರಗಳನ್ನು ಹೇಳಿಕೊಟ್ಟ ಪ್ರಶಾಂತ್ ಕಿಶೋರರು ಈಗ ತಮ್ಮದೇ ಪಕ್ಷಕ್ಕೆ ಆ ತಂತ್ರಗಳನ್ನು ಬಳಸಲು ಸಿದ್ಧರಿಲ್ಲಾ ಅಂದ್ರೆ, ಅವು ಹಳತಾದವು ಅಂತಾನಾ ಅಥವಾ ಪ್ರಶಾಂತರದ್ದನ್ನೂ ಮೀರಿಸೋ ತಂತ್ರಗಳನ್ನು ಹೆಣೆಯಬಲ್ಲ ಚಾಲಾಕಿಗಳು ಮಿಕ್ಕ ಪಕ್ಷಗಳಲ್ಲಿ ಇದ್ದಾರೆ ಅಂತಾನಾ?!!**

- ನಾನು ಯಡಿಯೂರಪ್ಪ ಬಗ್ಗೆ ಸಾಫ್ಟ್ ಆಗಿಲ್ಲ. ಅದು ನಿಮ್ಮ ಡಿಕ್ಷನರಿಯಲ್ಲಿ ಇದ್ರೆ ತೆಗೆದುಬಿಡಿ. ಅವರ ಜತೆ ರಾಜಿನೂ ಮಾಡಿಕೊಳ್ಳಲ್ಲ. ಯಡಿಯೂರಪ್ಪರ ಹಿಡಿತದಿಂದ ಬಿಜೆಪಿ ಮುಕ್ತವಾದರೆ ಮಾತ್ರ ಅದಕ್ಕೆ ಭವಿಷ್ಯವಿದೆ. ನನ್ನನ್ನು ಬಿಜೆಪಿಗೆ ತೆಗೆದುಕೊಳ್ಳದಿದ್ದರೂ ಪರವಾಗಿಲ್ಲ, ನಾನು ಅವರ ವಿಷಯದಲ್ಲಿ ಸಾಫ್ಟ್ ಆಗಲ್ಲ: ಶಾಸಕ ಬಸನಗೌಡ ಪಾಟೀಲ್ ಯತ್ನಾಳ್
– **ವಾವ್! ಏನ್ ಹಠ, ಏನ್ ಛಲ ಸರ್ ನಿಮ್ಮದು. 'ನಾಗರಹಾವು' ಚಿತ್ರದ ಆ ರಾಮಾಚಾರಿ ಕೂಡ, 'ಈ ಅಂಜದ ಎದೆಯಲಿ ನಂಜೇ ಇಲ್ಲ, ಬಗ್ಗುವ ಆಳಲ್ಲ, ತಲೆತಗ್ಗಿಸಿ ಬಾಳಲ್ಲಾ..' ಎಂದು ಶಪಥ ಮಾಡಿದ್ದರು; ನೀವ್ ಬಿಡಿ ಸರ್, 'ರಾಜಕೀಯದ ರಾಮಾಚಾರಿ'ನೇ ಆಗಿಬಿಟ್ರಲ್ಲ ಸರ್...!**

ಪಾಠ ಓದದೆ ಪರೀಕ್ಷೆಗೆ ಬಂದ ಪ್ರಿಯಾಂಕ್ ಖರ್ಗೆ!

ತಿರುಗೇಟು

ಉತ್ಕರ್ಷ ಕೆ.ಎಸ್.
vveditoped@gmail.com

ಭಾರತದ ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಚೇತನದ ಹೃದಯಭಾಗದಲ್ಲಿ ನಿಂತಿರುವ ಸಂಸ್ಥೆಯೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್). 1925ರಲ್ಲಿ ನಾಗಪುರದಲ್ಲಿ ಆರಂಭವಾದ ಈ ಸಂಘಟನೆ, ಇಂದಿಗೆ ವಿಶ್ವದ ಅತಿ ದೊಡ್ಡ ಸ್ವಯಂಸೇವಕ ಚಳವಳಿಗಳಲ್ಲಿ ಒಂದಾಗಿ ರೂಪಾಂತರಗೊಂಡಿದೆ. ರಾಷ್ಟ್ರಭಕ್ತಿಯ ಬಲವಾದ ಅಸ್ತಿತ್ವ, ಶಿಸ್ತುಪಾಲನೆಯ ನಿಷ್ಠೆ, ಸೇವಾ ಮನೋಭಾವ ಹಾಗೂ ಸಾಮಾಜಿಕ ಏಕತೆಯ ಮೌಲ್ಯಗಳ ಮೂಲಕ ಆರೆಸ್ಸೆಸ್ ಜನಮನದಲ್ಲಿ ನಂಬಿಕೆಯನ್ನು ಕಟ್ಟಿಕೊಂಡಿದೆ. ಸಂಘವು 'ವ್ಯಕ್ತಿತ್ವ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣ' ಎಂಬ ಅಸಾಧಾರಣ ದೃಷ್ಟಿಕೋನವನ್ನು ಅಳವಡಿಸಿಕೊಂಡಿದೆ. ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ನ್ಯಾಯದ ಪ್ರಚಾರದ ಕ್ಷೇತ್ರಗಳಲ್ಲಿನ ಅದರ ನಿಷ್ಠಾವಂತ ಸೇವೆಯು ದೇಶದ ನಿಜವಾದ ಪುನರುತ್ಥಾನದ ದಿಕ್ಕಿನಲ್ಲಿ ಮಾರ್ಗದರ್ಶಕವಾಗಿದೆ. ಇಷ್ಟೆಲ್ಲಾ ನಿಸ್ವಾರ್ಥ ಸೇವೆ ಮತ್ತು ಅಪ್ರತಿಮ ದೇಶಭಕ್ತಿಯನ್ನು ಹೊಂದಿರುವ ಸಮೂಹದ ವಿರುದ್ಧ, ಹೊಟ್ಟೆಕಿಚ್ಚಿನ ಕೋಳಿಮೊಟ್ಟೆಯ ರೀತಿಯಲ್ಲಿ ಸದಾ ಬೆಂಕಿಯನ್ನೇ ಉಗುಳುತ್ತದೆ ಕಾಂಗ್ರೆಸ್ ಪಕ್ಷ. ಇದರ ನಾಯಕರಲ್ಲಿ ಒಬ್ಬರಾದ ಮತ್ತು ಹಿರಿಯ ಕಾಂಗ್ರೆಸ್ಸಿಗ ಮಲ್ಲಿಕಾರ್ಜುನ ಖರ್ಗೆಯವರ ಪುತ್ರರೂ ಆದ ಸಚಿವ ಪ್ರಿಯಾಂಕ್ ಖರ್ಗೆಯವರು, ಆರೆಸ್ಸೆಸ್‌ನ ಇತಿಹಾಸದ ಅರಿವಿಲ್ಲದೆ ಮಾತನಾಡುತ್ತಿರುವುದು ನಿಜವಾಗಲೂ ಹಾಸ್ಯಾಸ್ಪದವಾದ ಸಂಗತಿ.

ಸಂಘದ ಬಗ್ಗೆ ಸದಾ ಕುಹಕದ ಮಾತುಗಳನ್ನು ಆಡುತ್ತಾ, 'ಸ್ವಾತಂತ್ರ್ಯ ಹೋರಾಟದಲ್ಲಿ ನಿಮ್ಮ ಪಾತ್ರ ವೇನೂ ಇಲ್ಲ' ಅಂತ ಹೇಳುವ ಜೂನಿಯರ್ ಖರ್ಗೆ ಅವರೇ, ಆರೆಸ್ಸೆಸ್‌ನ ಸಂಸ್ಥಾಪಕರಾದ ಡಾ. ಕೇಶವ ಬಲಿರಾಮ್ ಹೆಡ್ಗೆವಾರ್ ಅವರು, ಒಬ್ಬ ಸಂಘಟಕರು ಮಾತ್ರವಲ್ಲದೆ ಕ್ರಾಂತಿಕಾರಿ ರಾಷ್ಟ್ರಭಕ್ತರೂ ಆಗಿದ್ದವರು. ಬಾಲ್ಯದಲ್ಲಿಯೇ ದೇಶಭಕ್ತಿಯ ಚಿಂತನೆಯ ಬೀಜಗಳನ್ನು ಮನದಲ್ಲಿ ಮೊಳೆಸಿಕೊಂಡಿದ್ದ ಅವರು, ಕೊಲ್ಕತ್ತಾದಲ್ಲಿ ಅಂದು ವೈದ್ಯಕೀಯ ಅಧ್ಯಯನ ಮಾಡುವ ಕಾಲದಲ್ಲೇ ಕ್ರಾಂತಿದಳ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 1920ರ ಅಸಹಕಾರ ಚಳವಳಿಯ ವೇಳೆ ಬ್ರಿಟಿಷ್ ಆಡಳಿತದ ವಿರುದ್ಧ ಧೈರ್ಯವಾಗಿ ದನಿಯೆತ್ತಿದ ಅವರು, ಜೈಲುಶಿಕ್ಷೆಯನ್ನೂ ಅನುಭವಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಾಗಲೇ ಡಾ.ಹೆಡ್ಗೆವಾರ್ ಅವರಿಗೆ 'ರಾಷ್ಟ್ರದ ಶಕ್ತಿಯು ಜನರ ಏಕತೆಯಲ್ಲಿದೆ' ಎಂಬ ನಂಬಿಕೆ ಬಲವಾಗಿ ಮೂಡಿತು. ಈ ನಂಬಿಕೆಯಿಂದಲೇ ಅವರು ನಂತರ ದೇಶದ ಯುವಜನರಲ್ಲೂ ಶಿಸ್ತಿನ, ಸೇವಾಭಾವನೆಯ ಹಾಗೂ ಸಂಘಟನೆಯ ಚೈತನ್ಯವನ್ನು ಮೂಡಿಸಲು ಆರೆಸ್ಸೆಸ್ ಅನ್ನು ಸ್ಥಾಪಿಸಿದರು.

ಜೂನಿಯರ್ ಖರ್ಗೆ ಅವರ ಆರಾಧ್ಯ ದೈವವಾದ ನೆಹರು ಅವರು, 'I will not allow an inch of land to hoist the Bhagawa-Dhwaja' ಎಂದು ಹೇಳಿ, 'ಆರೆಸ್ಸೆಸ್ ಅನ್ನು ನಿಷೇಧಿಸುತ್ತೇನೆ' ಎಂದು ಇದೇ ರೀತಿಯಲ್ಲಿ ಅಬ್ಬರಿಸಿ ಬೊಬ್ಬಿರಿದು, ಕೊನೆಗೆ ಅದೇ ಆರೆಸ್ಸೆಸ್‌ನ 2000 ಸ್ವಯಂಸೇವಕರನ್ನು 1963ರ ಗಣರಾಜ್ಯೋತ್ಸವದ ಮೆರವಣಿಗೆಗೆ ಆಹ್ವಾನಿಸಿದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ಸಂಗತಿ. ಇಷ್ಟು ಮಾತ್ರವಲ್ಲದೆ, 1975ರಲ್ಲಿ ಇಂದಿರಾ ಗಾಂಧಿ, 1993ರಲ್ಲಿ ಪಿ.ವಿ.ನರಸಿಂಹ ರಾವ್ ಅವರು ನಿಷೇಧಿಸಿದರೂ, ಇದೇ ರೀತಿ ಇನ್ನೂ ಅನೇಕ ಎಡರುತೊಡರುಗಳು ಎದುರಾದರೂ, ಅವೆಲ್ಲವನ್ನೂ ಮೀರಿ ಇವತ್ತು ಜಗತ್ತಿನ ಅತಿದೊಡ್ಡ ಸಂಘಟನೆ ಎನಿಸಿಕೊಂಡಿದೆ, ಬೃಹದಾಕಾರವಾಗಿ ಬೆಳೆದು ನಿಂತಿದೆ ಆರೆಸ್ಸೆಸ್.

ಸದಾ ತಮ್ಮ ಬಾಯಿಚಪಲಕ್ಕೆ ಮಾತನಾಡುವ ಪ್ರಿಯಾಂಕ್ ಖರ್ಗೆ ಅವರು ಹೋದಲ್ಲಿ ಬಂದಲ್ಲಿ ''ನಮಸ್ತೇ ಸದಾ ವತ್ಸಲೇ ಮಾತೃಭೂಮೇ ಎಂದು ಹೇಳುವ ಆರೆಸ್ಸೆಸ್ ಭಯೋತ್ಪಾದಕ ಸಂಘಟನೆ'' ಅಂತ ಹೇಳುತ್ತಿರುವುದು ನಗೆಪಾಟಲಿನ ವಿಚಾರ. ಏಕೆಂದರೆ, ಇದೇ ಕಾಂಗ್ರೆಸ್‌ನ ಕಾರ್ಯಕರ್ತರು ವಿಧಾನಸೌಧದ ಆವರಣದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಎಂದು ಘೋಷಣೆ ಕೂಗಿದ್ದು, ಇದೇ ಕಾಂಗ್ರೆಸ್‌ನ ಕನ್ನಯ್ಯ ಕುಮಾರ್ ನೇತೃತ್ವದಲ್ಲಿ 'ಭಾರತ್ ತೇರೆ ಟುಕ್ಡೆ ಹೋಂಗೆ' ಎಂದು ಘೋಷಣೆ ಕೂಗಿದ್ದು ಪ್ರಿಯಾಂಕ್ ಖರ್ಗೆ ಅವರಿಗೆ ಗೊತ್ತಿರದ ವಿಷಯವೇನಲ್ಲ. ಆದರೂ ಅವರು ಜಾಣಕುರುಡನ್ನು ಪ್ರದರ್ಶನ ಮಾಡುತ್ತಿದ್ದಾರೆ. ಇದು ಅವರ ನಿಜಮುಖವನ್ನು ಸಮಾಜದ ಮುಂದೆ ಬಯಲುಮಾಡಿದೆ.

ಡಾ. ಅಂಬೇಡ್ಕರ್ ಅವರು 1939ರಲ್ಲಿ, ಪುಣೆಯಲ್ಲಿ ನಡೆಯುತ್ತಿದ್ದ ಸಂಘದ ಶಿಬಿರಕ್ಕೆ ಭೇಟಿ ನೀಡಿ, ಸ್ವಯಂಸೇವಕರನ್ನು ಉದ್ದೇಶಿಸಿ ಹೀಗೆ ಹೇಳುತ್ತಾರೆ: I am surprised to find the Swayamsevaks moving about in absolute equality and Brotherhood without even caring to know the caste of the others.ಇನ್ನು, ಮಹಾತ್ಮ ಗಾಂಧಿಯವರು 1934ರಲ್ಲಿ ಮಹಾರಾಷ್ಟ್ರದ ವಾರ್ಧಾದಲ್ಲಿ ನಡೆಯುತ್ತಿದ್ದ ಆರೆಸ್ಸೆಸ್ ಶಿಬಿರಕ್ಕೆ ಭೇಟಿಕೊಟ್ಟು, ಸ್ವಯಂಸೇವಕರನ್ನು ಉದ್ದೇಶಿಸಿ 'I am very much surprised by the discipline and absence of untouchability in the camp' ಎಂದು ಹೇಳಿದ್ದು, ಇಂದಿಗೂ ಜೂನಿಯರ್ ಖರ್ಗೆಯವರಂಥ ಕಾಂಗ್ರೆಸ್‌ನ ಅನೇಕ ನಾಯಕರುಗಳಿಗೆ ನುಂಗಲಾರದ ಬಿಸಿತುಪ್ಪವಾಗಿದೆ. ಏಕೆಂದರೆ, ನಕಲಿ ಅಂಬೇಡ್ಕರ್‌ವಾದಿಗಳಿಗೂ ಮತ್ತು ನಕಲಿ ಗಾಂಧಿವಾದಿಗಳಿಗೂ ಇದು ಸಮಂಜಸವಾದ ವಿಚಾರವಲ್ಲ.

2024ರಲ್ಲಿ, ಕಾಂಗ್ರೆಸ್ಸಿಗರ ಪಾಲಿನ ಮನೆದೇವರಾದ ರಾಹುಲ್ ಗಾಂಧಿಯವರು ಪ್ರತಿನಿಧಿಸುತ್ತಿದ್ದ ವಯನಾಡ್ ಕ್ಷೇತ್ರದಲ್ಲಿ ಭೀಕರ ಪ್ರವಾಹ ಸಂಭವಿಸಿದಾಗ, ಯಾವುದೇ ಜಾತಿ, ಮತ, ಪಂಥ, ಪಕ್ಷ ಎಂಬ ಭೇದ–ಭಾವ ಮಾಡದೆ, ಅಲ್ಲಿನ ಜನರಿಗೆ ಸೇವೆಯ ಸಹಾಯಹಸ್ತವನ್ನು ಚಾಚಿದ್ದು ಇದೇ ಆರೆಸ್ಸೆಸ್ ಎಂಬುದು ನಿಮಗೆ ಗೊತ್ತಿರಲಿ ಜೂನಿಯರ್ ಖರ್ಗೆ ಅವರೇ. ಕಲ್ಯಾಣ ಕರ್ನಾಟಕದಲ್ಲಿ, ವಿಶೇಷವಾಗಿ ಕಲಬುರ್ಗಿಯ ಚಿತ್ತಾಪುರದಲ್ಲಿ ಕಿತ್ತು ತಿನ್ನುವಷ್ಟು ಬಡತನವಿದ್ದರೂ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮಸ್ಯೆಗಳಿದ್ದರೂ ಅವಕ್ಕೆ ಸರಿಯಾಗಿ ಸ್ಪಂದಿಸದೆ, ಸದಾ ಆರೆಸ್ಸೆಸ್ ಮೇಲೆ ದ್ವೇಷ ಕಾರುತ್ತಿರುವ ನಿಮಗೆ ಸದ್ಬುದ್ಧಿ ಪ್ರಾಪ್ತಿಯಾಗಲಿ ಎಂದು ಕೋರುತ್ತೇನೆ.

ಆರೆಸ್ಸೆಸ್‌ನ ತತ್ವಗಳು, ತ್ಯಾಗ ಮತ್ತು ನಿಸ್ವಾರ್ಥ ಸೇವಾ ಪರಂಪರೆಯನ್ನು ತಿಳಿಯದೆ ಹೊಮ್ಮಿಸಿದ ಅಸಮರ್ಪಕ ಅಭಿಪ್ರಾಯಗಳಾಗಿವೆ ಪ್ರಿಯಾಂಕ್ ಖರ್ಗೆಯವರ ಇತ್ತೀಚಿನ ಹೇಳಿಕೆಗಳು. ಆರೆಸ್ಸೆಸ್ ಸಂಘಟನೆಯು ಸಮಾಜಸೇವೆಯ ಪಥದಲ್ಲಿ ಜನಶಕ್ತಿಯನ್ನು ಸಂಘಟಿಸಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದೆಯೇ ವಿನಾ ರಾಜಕೀಯ ಪಯಣದಲ್ಲಿ ಅಲ್ಲ. ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಸ್ವಯಂಶಿಸ್ತಿನ ಬೆಳವಣಿಗೆ ಮತ್ತು ದುರಂತದ ಸಂದರ್ಭದಲ್ಲಿ ನೀಡಿದ ನಿರಂತರ ಸೇವೆಗಳು ಆರೆಸ್ಸೆಸ್‌ನ ನಿಜವಾದ ಮುಖವನ್ನು ಪ್ರತಿಬಿಂಬಿಸುತ್ತವೆ. ಇಂಥ ಸಂಸ್ಥೆಯ ಕುರಿತು ರಾಜಕೀಯ ದೃಷ್ಟಿಕೋನದಿಂದ ಅಜ್ಞಾನಪೂರಿತ ಟೀಕೆ ಮಾಡುವುದು ಸಾರ್ವಜನಿಕ ಚರ್ಚೆಯ ಮಟ್ಟವನ್ನು ಕುಗ್ಗಿಸುತ್ತದೆ. ದೇಶದ ಹಿತಾಸಕ್ತಿಯನ್ನು ಪರಿಗಣಿಸುವ ಯಾವುದೇ ನಾಯಕರು ಸಂಘದ ಸೇವಾ ಪರಂಪರೆಯನ್ನು ಗೌರವದಿಂದ ಅಧ್ಯಯನ ಮಾಡುವುದು ಮತ್ತು ನಂತರ ತಮ್ಮ ಅಭಿಪ್ರಾಯವನ್ನು ನೀಡುವುದು ಅವರಿಗೆ ಶೋಭೆ ತರುವ ಸಂಗತಿಯಾಗುತ್ತದೆ.

(ಲೇಖಕರು ಅಂಕಣಕಾರರು)



ಆರೆಸ್ಸೆಸ್ ವಿಪತ್ಕಾರಿ ವ್ಯಾಪಾರಿಗಳ ಸಂಘ..

ಎದುರೇಟು

ಮಂಜುನಾಥ ಅದ್ದೆ
vveditoped@gmail.com

ಈ ನೆಲದ ಜನರ ಮೇಲೆ, ಕಾನೂನಿನ ಮೇಲೆ ಕಿಂಚಿತ್ತೂ ಗೌರವವಿಲ್ಲದ, ಬದ್ಧತೆಯಿಲ್ಲದ ಸಂಘಟನೆ ಆರೆಸ್ಸೆಸ್. ಇವರು ಬಳಸುವ ಧರ್ಮ, ನೈತಿಕತೆ, ರಾಷ್ಟ್ರಪ್ರೇಮ ಎಂಬ ಶಬ್ದಗಳಿಗೆ ಕ್ರಿಯಾರೂಪದ ಅರ್ಥಗಳೇ ಇಲ್ಲ. ಇವುಗಳನ್ನು ಶಬ್ದ ವಿಜೃಂಭಣೆಗಾಗಿ ಮಾತ್ರ ಇವರು ಬಳಸುತ್ತಾರೆ. ತನ್ನ ಆಶಯದಲ್ಲಿ ವೈದಿಕವಾದದ, ವರ್ಣಾಶ್ರಮ ವ್ಯವಸ್ಥೆಯ ತಾರತಮ್ಯದ, ದುಡಿಯುವ ಜನರನ್ನು ಸುಲಿದು ತಿನ್ನುವ ತಾತ್ವಿಕತೆಯನ್ನು ಹೊಂದಿರುವಂಥದ್ದು ಆರೆಸ್ಸೆಸ್. ಒಳಗೆ ವ್ಯಾಘ್ರ, ಹೊರಗೆ ಗೋಮುಖದ ವೇಷ ತೊಟ್ಟಿರುವ ಇವರು ನುಡಿಯುವ 'ನೈತಿಕತೆ, ಸಮಾಜ ಸೇವೆ, ಧರ್ಮ, ರಾಷ್ಟ್ರಪ್ರೇಮ' ಎಂಬ ಶಬ್ದಗಳು, ದುಡಿಯುವ ಬಹುಸಮುದಾಯಗಳ ಯುವಕ, ಯುವತಿಯರನ್ನು ಯಾಮಾರಿಸಲು ತೋರಿಕೆಗಷ್ಟೆ ಬಳಸುತ್ತಿರುವ ಶಬ್ದಗಳಷ್ಟೇ.

ಸುಳ್ಳು ಪ್ರಸರಣವನ್ನೇ ತಮ್ಮ ಶಕ್ತಿಯಂತೆ ಸಾಮಾಜಿಕ ಜಾಲತಾಣಗಳಲ್ಲಿ ಬಿಂಬಿಸುವ ಸನ್ನಿಪ್ರಜ್ಞೆಯ ಇವರು, ಸದನದಲ್ಲಿ ಡಿ.ಕೆ. ಶಿವಕುಮಾರ್ ಅವರು ಮಾಡಿದ ವ್ಯಂಗ್ಯವನ್ನು 'ತಮ್ಮ ಪರವಾದ ಒಲವು' ಎಂದು ಬಿಂಬಿಸಲು ಪ್ರಯತ್ನಿಸಿದ್ದರು. ಇನ್ನು ಬಿ.ಕೆ. ಹರಿಪ್ರಸಾದ್‌ರವರು ಬರೆದ ಲೇಖನಕ್ಕೆ ಕನಿಷ್ಠಪಕ್ಷ ಅರ್ಥಬದ್ಧ ಹಾಗೂ ತಾರ್ಕಿಕ ಉತ್ತರವನ್ನು ಕೊಡಲು ಶಕ್ತರಲ್ಲದ ಸಂಘಪರಿವಾರಿಗಳು, ಬಿಜೆಪಿ ನಾಯಕರುಗಳು, ಕೆಟ್ಟ–ಕೊಳಕ ಭಾಷೆಯಲ್ಲಿ ನಿಂದನೆಯ ರೂಪದ ಪ್ರತಿಕ್ರಿಯೆಗಳನ್ನು ಕೊಟ್ಟು ತಮ್ಮ ಆರೆಸ್ಸೆಸ್ ಟ್ರೈನಿಂಗ್‌ನ ವ್ಯಕ್ತಿತ್ವದ ಸಂಸ್ಕಾರ ಎಂಥದೆಂದು ತೋರಿಸಿಕೊಂಡರು.

ಈಗ ಪ್ರಿಯಾಂಕ್ ಖರ್ಗೆಯವರ ಸರದಿ. ಇವರ ಮೇಲೆ ಸಂಘಪರಿವಾರದವರು, ಬಿಜೆಪಿಯ ಸಾಲು ಸಾಲು ನಾಯಕರು ಮುಗಿಬಿದ್ದಿದ್ದಾರೆ. ಅದರಲ್ಲೂ ಸಾಂವಿಧಾನಿಕ ಹುದ್ದೆಯಲ್ಲಿರುವ ವಿರೋಧ ಪಕ್ಷದ ನಾಯಕ ಅಶೋಕ್‌ರವರು, ಕೇಂದ್ರ ಮಂತ್ರಿಗಳಾದ ಪ್ರಲ್ಹಾದ್ ಜೋಷಿ, ಬಿಜೆಪಿ ರಾಜ್ಯಾಧ್ಯಕ್ಷರಾದ ವಿಜಯೇಂದ್ರ, ಶಾಸಕರಾದ ಸಿ.ಟಿ. ರವಿ, ಸುರೇಶ್ ಕುಮಾರ್, ಸುನೀಲ್ ಕುಮಾರ್, ಅಶ್ವತ್ಥನಾರಾಯಣ್ ಮುಂತಾದವರೆಲ್ಲ ಈ ನೆಲದ ಶಾಸನಗಳ ಅಡಿಯಲ್ಲಿ ವಿವಿಧ ಹುದ್ದೆಗಳನ್ನು ಹೊಂದಿದ್ದವರು, ಹೊಂದಿರುವವರು.

ಇವರಿಗೆ ಪ್ರಿಯಾಂಕ್ ಖರ್ಗೆಯವರ ಪತ್ರದಲ್ಲಿ ಯಾವುದು ಸರಿ ಕಂಡಿಲ್ಲ?

- 'ಆರೆಸ್ಸೆಸ್ ನೋಂದಾಯಿತ ಸಂಸ್ಥೆ ಅಲ್ಲ' ಎಂಬುದು ಸರಿಯಿಲ್ಲವೆ?
- 'ಲಾಠಿ, ತ್ರಿಶೂಲ, ಗದೆ, ಕತ್ತಿಗಳನ್ನು ಸಾರ್ವಜನಿಕವಾಗಿ, ಅದರಲ್ಲೂ ಸಾಮೂಹಿಕವಾಗಿ ಪ್ರದರ್ಶನ ಮಾಡಿ, ಸಾರ್ವಜನಿಕರಲ್ಲಿ ಭೀತಿಯನ್ನು ಮೂಡಿಸುವುದು ತಪ್ಪು' ಎಂದದ್ದು ತಪ್ಪಾಗಿದೆಯೆ?
- 'ಸಾರ್ವಜನಿಕ ಸ್ಥಳಗಳಾದ, ಶಾಲಾಮೈದಾನ, ಉದ್ಯಾನ, ದೇವಳ, ಆಟದ ಅಂಗಳಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಯಾವುದೇ ಸಂಸ್ಥೆ ಬೈಠಕ್, ಸಮ್ಮೇಳನ, ಗುಂಪು ಪ್ರದರ್ಶನ, ಧ್ವನಿವರ್ಧಕ ಅಳವಡಿಕೆ ಮಾಡುವುದು ತಪ್ಪು' ಎಂದದ್ದು ಸರಿಯಾಗಿಲ್ಲವೆ?
- 'ಆರೆಸ್ಸೆಸ್–ಬಿಜೆಪಿಯ ಲೀಡರ್‌ಗಳು ಕೊಟ್ಟ ಹುಕುಂಗೆ ಶೂದ್ರರ, ದಲಿತರ, ಹಿಂದುಳಿದವರ, ದೇಶದಲ್ಲಿ ಸಂಪತ್ತನ್ನು ಸೃಷ್ಟಿಸಲು ದುಡಿಯುವವರ ಮಕ್ಕಳು ಬಲಿಯಾಗುತ್ತಿದ್ದಾರೆ. ಈ ಲೀಡರ್‌ಗಳ ಮಕ್ಕಳು ಇಲ್ಲಿ ಗಾಯಬ್ ಆಗಿ, ದೇಶ–ವಿದೇಶಗಳಲ್ಲಿ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಾಗಿ, ಸಿಇಓಗಳಾಗಿ, ಬಿಸಿನೆಸ್ ಟೈಕೂನ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಬಡವರ ಮಕ್ಕಳು ರಕ್ತ ಚೆಲ್ಲುತ್ತಿದ್ದಾರೆ' ಎಂದದ್ದು ತಪ್ಪೇ?

ಪ್ರಿಯಾಂಕ್ ಅವರ ಈ ಯಾವ ಪ್ರಶ್ನೆಗಳಿಗೂ ಬಿಜೆಪಿ–ಸಂಘಪರಿವಾರದ ಯಾವೊಬ್ಬ ನಾಯಕರೂ ಉತ್ತರ ಕೊಟ್ಟಿಲ್ಲ. ಸ್ವತಃ ವಿರೋಧ ಪಕ್ಷದ ನಾಯಕರಾದ ಅಶೋಕ್‌ರವರು, 'ನಿಮಗೆ ತಾಕತ್ತಿದ್ದರೆ ಆರೆಸ್ಸೆಸ್‌ನ ನಿಷೇಧ ಮಾಡಿ' ಎಂದಿದ್ದಾರೆ. ಇಂಥ ಜವಾಬ್ದಾರಿಯುತ ಸ್ಥಾನದಲ್ಲಿರುವ ಇವರಿಗೆ 'ತಾಕತ್ತು' ಶಬ್ದ ಬಳಸುವುದು ಸರ್ವಾಧಿಕಾರದ, ಗೂಂಡಾಯಿಸಂನ ಲಕ್ಷಣ ಎಂಬುದೇ ತಿಳಿದಿಲ್ಲ. ಇದರ ಬದಲು ಆರೆಸ್ಸೆಸ್‌ನ ತತ್ವವೇನು? ಸಮಾಜಕ್ಕೆ ಅದರ ಕೊಡುಗೆ ಏನು? ಆರೆಸ್ಸೆಸ್‌ನ ಕೊಡೆಯ ಕೆಳಗಡೆ ಇರುವ ರಾಮಸೇನೆ, ವಿಶ್ವ ಹಿಂದೂಪರಿಷತ್, ಗೋರಕ್ಷಕ ಪಡೆಗಳು, ಬಜರಂಗದಳ ಮುಂತಾದ ಹತ್ತಾರು ಸಂಘಟನೆಗಳು ದೇಶದ ಪ್ರಗತಿ, ಅಭಿವೃದ್ಧಿ, ಅನಕ್ಷರತೆ ನಿವಾರಣೆ, ಜಾತಿ ತಾರತಮ್ಯ ನಿರ್ಮೂಲನೆ, ಸಂಪತ್ತಿನ ಹಂಚಿಕೆ, ಆಧ್ಯಾತ್ಮಿಕ ಉನ್ನತೀಕರಣಕ್ಕೆ ಏನೇನು ಕೊಡುಗೆ ಕೊಟ್ಟಿವೆ ಎಂಬುದನ್ನು ದಾಖಲೆಗಳ ಸಮೇತ ಅಶೋಕ್‌ರವರು ಜನರ ಮುಂದೆ ಮಂಡಿಸಿ ವಿಶ್ವಾಸ ಪಡೆಯಬಹುದಿತ್ತು. ಇದನ್ನು ಹೇಳಲು ಆಗದ್ದಿದಕ್ಕೆ ಅಶೋಕ್‌ರವರಿಗೆ ಪಶ್ಚಾತಾಪವಿಲ್ಲ, ಬದಲಿಗೆ 'ತಾಕತ್ತು' ಎನ್ನುತ್ತಾರೆ. ಇದೇ ಭಾರತಾಂಬೆಯ ದುರಂತ.

ಇನ್ನು ಸಿ.ಟಿ. ರವಿಯವರು ಆರೆಸ್ಸೆಸ್ ಹೆಸರಲ್ಲಿ 'ರಾಷ್ಟ್ರೀಯ' ಅಂತ ಇರುವುದೇ ಖರ್ಗೆಯವರ ಹೊಟ್ಟೆ ಉರಿಗೆ ಕಾರಣ ಎಂದಿದ್ದಾರೆ. ಇದೊಂದು ಬಗೆಯ ಬಾಲಿಶ ವಿವರಣೆ. ಇದೇ ತರ್ಕವನ್ನು ವಿಸ್ತರಿಸುವುದಾದರೆ. 'ಭಾರತ ರಾಷ್ಟ್ರೀಯ ಕಾಂಗ್ರೆಸ್' ಎಂಬುದು ಪ್ರಿಯಾಂಕ್‌ರವರ ಪಕ್ಷ. ಹಾಗಾದರೆ ಮೋದಿ–ಶಾರಿಂದ ಮೊದಲ್ಗೊಂಡು ಸಿ.ಟಿ. ರವಿ, ಸುನೀಲ್ ಕುಮಾರ್‌ರ ತನಕ ಎಲ್ಲರೂ ಕಾಂಗ್ರೆಸ್ ಹೆಸರಲ್ಲಿ 'ರಾಷ್ಟ್ರೀಯ' ಎಂಬ ಶಬ್ದ ಇರುವುದರಿಂದ ಕಾಂಗ್ರೆಸ್ ವಿರುದ್ಧ ಮುಗಿಬಿದ್ದಿದ್ದಾರೆ ಎಂದು ಅರ್ಥವೆ? ಇವರ ರಾಷ್ಟ್ರಭಕ್ತಿಯ ಗುಣ ಮಟ್ಟ ಎಲ್ಲಿಗೆ ಬಂದು ಇಳಿದಿದೆ ನೋಡಿ. 'ಸರ್ವರಿಗೂ ಸಮಬಾಳು, ನೆಲದ ಕಾನೂನಿಗೆ ಎಲ್ಲರೂ ಒಂದೇ' ಎಂದರೆ 'ಸಿದ್ರಾಮುಲ್ಲಾ ಖಾನ್, ಡಿ.ಕೆ ಸೈಮನ್' ಎಂದು ಸಿಎಂ ಮತ್ತು ಡಿಸಿಎಂಗೆ ಅನ್ಯ ಧರ್ಮೀಯರ ಹೆಸರು ಕಟ್ಟಿ ಹೀಯಾಳಿಸುವುದು; ಇದನ್ನು ಯಾವ ಅರ್ಥದಲ್ಲಿ ಹೇಳ್ತಿದ್ದೀರಿ ವಿವರಿಸಿ ಎಂದರೆ, ಅಲ್ಲಿಂದ ಎಸ್ಕೇಪ್ ಆಗುವುದು ಇವರ ಜಾಯಮಾನ. ಇದು ಇವರದ್ದು ಮಾತ್ರವಲ್ಲ. ತಾತ್ವಿಕ ಗಟ್ಟಿತನ, ಜೀವಪರತೆ, ಸಮಾನತೆ, ನಿಜದ ದೇವರು–ಧರ್ಮವನ್ನು ಅರಿಯುವಲ್ಲಿನ ಆರೆಸ್ಸೆಸ್‌ನ ಮಿತಿ ಕೂಡ ಆಗಿದೆ.

ಈ ಸಂಘಟನೆಗೆ ಅಂಥಾ ಮಿತಿಗಳು ಇಲ್ಲದಿದ್ದರೆ ಸಮಗ್ರ ಭಾರತದ ಜನರ ಸರ್ವರಕ್ಷಣೆಯ ಕನಸು–ಆಶಯಗಳನ್ನು ಅದು ಹೊಂದಿರುತ್ತಿತು. ದುಡಿಯುವ ಜನಸಮುದಾಯಗಳ ಮಕ್ಕಳ ಎದೆಯಲ್ಲಿ ಸುಳ್ಳಿನ ಅವತಾರಿಕೆಯನ್ನು ಮೂಡಿಸಲು ಇವರು ಕೈ ಹಾಕುತ್ತಿರಲಿಲ್ಲ. ಎಂಥಾ ಕುಚೋದ್ಯ ಇವರದ್ದು ಎಂದರೆ, ಗಾಂಧೀಜಿ ಕೊಲೆಗಾರ ಸಾವರ್ಕರ್‌ನ 'ವೀರ' ಮಾಡುತ್ತಾರೆ; ಗಣವೇಷವನ್ನು ತೊಡಿಸಿ ಗಾಂಧಿ ಫೋಟೋವನ್ನು ಕೈಗೆ ಕೊಟ್ಟು ಮುನಿರತ್ನರನ್ನು ಪ್ರತಿಭಟನೆಯ ಹೆಸರಲ್ಲಿ ಕೂರಿಸುತ್ತಾರೆ. ಇಂಥಾ ಸತ್ವರಹಿತ, ತತ್ವರಹಿತವಾದ ಆರೆಸ್ಸೆಸ್‌ನ ಸಿದ್ಧಾಂತ ಇಂದು ಹಿತಾಸಕ್ತ ಗುಂಪಿನ ರಾಜಕೀಯ, ಆರ್ಥಿಕ ಲಾಭಕ್ಕಾಗಿ ಮಾಡುತ್ತಿರುವ ಸಂಚಾಗಿದೆ. ಇವರ ಇಂಥಾ ವಿಪತ್ಕಾರಿ ವ್ಯಾಪಾರದ ಕ್ರಿಯಾಹೀನ, ಅರ್ಥರಹಿತ ನಡೆಯಿಂದ ಭಾರತದ ಸಾಮರ್ಥ್ಯ ಆಂತರಿಕ ಕ್ಷೋಭೆಗೆ ಬಲಿಯಾಗಿ ಸೊರಗುತ್ತದೆಯೇ ಹೊರತು ನಳನಳಿಸುವುದಿಲ್ಲ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 165

ಬಿಹಾರ: ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಇಂದು ಅಂತ್ಯ

ಪಟನಾ: 243 ಸದಸ್ಯ ಬಲದ ಬಿಹಾರ ವಿಧಾನಸಭೆಯ 121 ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ನ.6ರಂದು ಚುನಾವಣೆ ನಡೆಯಲಿದ್ದು, ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವುದಕ್ಕೆ ಅ.17ರ ಶುಕ್ರವಾರ ಕಡೆ ದಿನವಾಗಿದೆ.

ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಪಾಲುದಾರ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಯು, ಎಲ್‌ಜೆಪಿ ಹಾಗೂ ಎಚ್‌ಎಎಂ(ಎಸ್) ಮತ್ತು ರಾಷ್ಟ್ರೀಯ ಲೋಕ ಮೋರ್ಚಾ(ಆರ್‌ಎಲ್‌ಎಂ) ಅದಾಗಲೇ ಎಲ್ಲಾ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿವೆ.

ಅದರೆ, ಪ್ರತಿಪಕ್ಷಗಳ ಸಾಲಿನಲ್ಲಿರುವ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಮತ್ತು ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳ ಒಕ್ಕೂಟ 'ಮಹಾಘಟಬಂಧನ್'ನಲ್ಲಿ ಸೀಟು ಹಂಚಿಕೆ ವಿಚಾರ ಗುರುವಾರ ಮಧ್ಯಾಹ್ನದವರೆಗೂ ಅಂತಿಮಗೊಂಡಿಲ್ಲ.

ಸದ್ಯ ಸದಸ್ಯ ಬಲ: ಪ್ರಸಕ್ತ ವಿಧಾನಸಭೆಯಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟ ಒಟ್ಟು 131 ಸದಸ್ಯಬಲ ಹೊಂದಿದೆ. ಆರ್‌ಜೆಡಿ ಮತ್ತು ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳ ಒಕ್ಕೂಟ 111 ಸ್ಥಾನಗಳನ್ನು ಹೊಂದಿವೆ. ಎನ್‌ಡಿಎನಲ್ಲಿ ಬಿಜೆಪಿ 80, ಜೆಡಿಯು 45, ಎಚ್‌ಎಎಂ(ಎಸ್) 4 ಮತ್ತು ಇಬ್ಬರು ಸ್ವತಂತ್ರರು ಸರಕಾರದ ಭಾಗವಾಗಿದ್ದಾರೆ. ಆದರೆ, ಪ್ರತಿಪಕ್ಷಗಳಲ್ಲಿ ಆರ್‌ಜೆಡಿ 77, ಕಾಂಗ್ರೆಸ್ 19, ಸಿಪಿಐ(ಎಂಎಲ್) 11, ಸಿಪಿಐ(ಎಂ) 2 ಮತ್ತು ಸಿಪಿಐ 2 ಸ್ಥಾನ ಹೊಂದಿವೆ.



44 ಅಭ್ಯರ್ಥಿಗಳ ಜೆಡಿಯು 2ನೇ ಪಟ್ಟಿ

ಪಟನಾ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಸಂಯುಕ್ತ ಜನತಾ ದಳ(ಜೆಡಿಯು) 44 ಅಭ್ಯರ್ಥಿಗಳ 2ನೇ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದೆ. ಇದರೊಂದಿಗೆ ತನಗೆ ಮೀಸಲಾಗಿರುವ 101 ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಪ್ರಕಟಿಸಿದಂತಾಗಿದೆ.



ನ.6-11ರಂದು ಎರಡು ಹಂತಗಳಲ್ಲಿ ನಡೆಯುವ ಬಿಹಾರ ವಿಧಾನಸಭೆ ಚುನಾವಣೆಗೆ 57 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಜೆಡಿಯು ಬುಧವಾರ ಪ್ರಕಟಿಸಿತ್ತು. ಜೆಡಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದನ್ ಕುಮಾರ್ ಸಿಂಗ್ ಗುರುವಾರ 2ನೇ ಪಟ್ಟಿ ಬಿಡುಗಡೆ ಮಾಡಿದರು. 2ನೇ ಪಟ್ಟಿಯಲ್ಲಿ ಟಿಕೆಟ್ ಪಡೆದ ಪ್ರಮುಖರಲ್ಲಿ ನವಾಡಾ ಪ್ರಭಾವಿ ರಾಜವಲ್ಲಭ್ ಪ್ರಸಾದ್ ಯಾದವ್ ಅವರ ಪತ್ನಿ ವಿಭಾ ದೇವಿ ಹೆಸರಿದೆ. ಅವರಿಗೆ ನವಾಡಾ ಕ್ಷೇತ್ರದ ಟಿಕೆಟ್ ನೀಡಲಾಗಿದೆ.

59 ಎಎಪಿ ಅಭ್ಯರ್ಥಿ

ಆಮ್ ಆದ್ಮಿ ಪಕ್ಷ(ಎಎಪಿ) ಬಿಹಾರ ವಿಧಾನಸಭಾ ಚುನಾವಣೆಗೆ 2 ಹಂತಗ ಳಲ್ಲಿ 59 ಅಭ್ಯರ್ಥಿಗಳ ಪಟ್ಟಿ ಪ್ರಕಟಿ ಸಿದೆ. ಬಿಹಾರದಲ್ಲಿನ ಎಎಪಿ ಉಸ್ತು ವಾರಿ ರಾಜೇಶ್ ಯಾದವ್, ಮೊದಲ ಪಟ್ಟಿಯಲ್ಲಿ 11 ಅಭ್ಯರ್ಥಿ, 2ನೇ ಪಟ್ಟಿ ಯಲ್ಲಿ 48 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ್ದಾರೆ. ಆಮ್ ಆದ್ಮಿ ಪಕ್ಷವು ಬಿಹಾರದಲ್ಲಿ ದೆಹಲಿ ಮತ್ತು ಪಂಜಾ ಬ್ ಮಾದರಿಯ ಪುನರಾವರ್ತನೆ ಮಾಡಲಿದೆ ಎಂದು ಹೇಳಿದ್ದಾರೆ.

ಬಿಹಾರ 2 ಹಂತದ ಚುನಾವಣೆ

ಪ್ರಕ್ರಿಯೆ	1ನೇ ಹಂತ	2ನೇ ಹಂತ
ಕ್ಷೇತ್ರಗಳು	121	122
ನಾಮಪತ್ರ ಕಡೆದಿನ	ಅ.17	ಅ.20
ಪರಿಶೀಲನೆ	ಅ.18	ಅ.21
ವಾಪಸ್ ಕಡೆದಿನ	ಅ.20	ಅ.23
ಮತದಾನ	ನ.6	ನ.11
ಮತ ಎಣಿಕೆ	ನ.14	ನ.14

34 ಕೋಟಿ ರು. ನಗದು, ಮದ್ಯ, ಡ್ರಗ್ಸ್ ವಶ

ಪಟನಾ: ಬಿಹಾರ ವಿಧಾನಸಭೆಗೆ ಅ.6ರಂದು ಚುನಾವಣೆ ಘೋಷಣೆಯಾಗಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ನಂತರ ರಾಜ್ಯದ ವಿವಿಧೆಡೆ ಚುನಾವಣಾ ಆಯೋಗದ ವಿಜಿಲೆನ್ಸ್ ತಂಡ ದಾಳಿ ನಡೆಸಿ 34 ಕೋಟಿ ರು. ನಗದು, ಮಾದಕ ದ್ರವ್ಯ ಮತ್ತು ಮದ್ಯ ಮೊದಲಾದ ವಸ್ತುಗಳನ್ನು ವಶಪಡಿಸಿಕೊಂಡಿದೆ. ರಾಜ್ಯ ಪೊಲೀಸ್, ಅಬಕಾರಿ, ಡಿಆರ್‌ಐ, ಎಸ್‌ಜಿಎಸ್‌ಟಿ, ಅರಣ್ಯ ಮತ್ತು ರಾಜ್ಯ ಸಹಕಾರ ಇಲಾಖೆ, ಅಲ್ಲದೇ, ಕೇಂದ್ರದ ಆದಾಯ ತೆರಿಗೆ ಇಲಾಖೆ, ಆರ್‌ಬಿಐ ತಂಡ, ಕಸ್ಟಮ್ಸ್, ಇ.ಡಿ, ಎನ್‌ಸಿಬಿ, ಸಿಜಿಎಸ್‌ಟಿ, ಆರ್‌ಪಿಎಫ್, ಸಿಐಎಸ್‌ಎಫ್, ಎಸ್‌ಎಸ್‌ಬಿ, ಎಎಐ, ಅಂಚೆ ಇಲಾಖೆಗೆ ಚುನಾವಣೆಯಲ್ಲಿ ಹಣಬಲ, ಉಚಿತ ಉಡುಗೊರೆ, ಮದ್ಯ-ಮಾದಕ ದ್ರವ್ಯ ಹಂಚಿಕೆ ತಡೆಯಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ಮತದಾರರ ಓಲೈಕೆ ಪ್ರಕರಣಗಳತ್ತ ನಿಗಾ ಇಡಲು ಫ್ಲೈಯಿಂಗ್ ಸ್ಕ್ವಾಡ್, ಸರ್ವೆಲೆನ್ಸ್ ತಂಡ, ವಿಡಿಯೊ ಸರ್ವೆಲೆನ್ಸ್ ತಂಡಗಳು ದಿನದ 24 ಗಂಟೆ ಜಾಗರೂಕವಾಗಿರಲಿವೆ. ಅಭ್ಯರ್ಥಿಗಳ ಚುನಾವಣಾ ವೆಚ್ಚದತ್ತ ಕಣ್ಣಿಡಲು ಕ್ಷೇತ್ರ ವೆಚ್ಚ ವೀಕ್ಷಕರನ್ನು ನಿಯೋಜಿಸಲಾಗಿದೆ. ಅಧಿಸೂಚನೆ ಬೆನ್ನಲ್ಲೇ ವೀಕ್ಷಕರು ಕ್ಷೇತ್ರಗಳಿಗೆ ತೆರಳಿದ್ದಾರೆ. ಅಭ್ಯರ್ಥಿಗಳು ನಿಯಮ ಉಲ್ಲಂಘಿಸಿದರೆ ಸಾರ್ವಜನಿಕರು 'ಸಿ-ವಿಜಿಲ್' ಆ್ಯಪ್ ಬಳಸಿ ದೂರು ಸಲ್ಲಿಸಬಹುದು ಎಂದು ಚುನಾವಣಾ ಆಯೋಗ ತಿಳಿಸಿದೆ.

ಬಿಜೆಪಿ 3ನೇ ಪಟ್ಟಿಯಲ್ಲಿ 18 ಮಂದಿಗೆ ಟಿಕೆಟ್

ಪಟನಾ: ಎರಡು ಹಂತಗಳಲ್ಲಿ ನಡೆಯಲಿರುವ ಬಿಹಾರ ವಿಧಾನ ಸಭೆ ಚುನಾವಣೆಗೆ ಪ್ರಮುಖ ಪಕ್ಷವಾದ ಬಿಜೆಪಿ ಒಟ್ಟು 101 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲಿದೆ. 3ನೇ ಪಟ್ಟಿಯಲ್ಲಿ 18 ಅಭ್ಯರ್ಥಿಗಳ ಹೆಸರನ್ನು ಬುಧವಾರ ತಡರಾತ್ರಿ ಪ್ರಕಟಿಸಿದೆ. ಮೊದಲ ಪಟ್ಟಿಯಲ್ಲಿ 71 ಅಭ್ಯರ್ಥಿಗಳ ಹೆಸರು ಪ್ರಕಟಿಸಿದ್ದ ಬಿಜೆಪಿ, 2ನೇ ಪಟ್ಟಿಯಲ್ಲಿ 12 ಜನರಿಗೆ ಟಿಕೆಟ್ ನೀಡಿತ್ತು. ಆ ಮೂಲಕ 3 ಹಂತಗಳಲ್ಲಿ ಒಟ್ಟು 101 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದೆ. ವಿಧಾನಸಭೆ ಸ್ಪೀಕರ್ ನಂದ ಕಿಶೋರ್ ಯಾದವ್, ಕೆಲ ಸಚಿವರು ಸೇರಿದಂತೆ 17 ಹಾಲಿ ಶಾಸಕರಿಗೆ ಟಿಕೆಟ್ ನೀಡಲು ಬಿಜೆಪಿ ವರಿಷ್ಠರು ನಿರಾಕರಿಸಿ ದ್ದಾರೆ. ಆದರೆ, ಈ ಬಾರಿ ಹಲವು ಹೊಸ ಮುಖ ಗಳಿಗೆ, ಅದರಲ್ಲೂ ಯುವಜನರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. 243 ಸದಸ್ಯ ಬಲದ ವಿಧಾ ನಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಪಾಲು ದಾರ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಯು ತಲಾ 101 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುತ್ತಿವೆ. ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ನೇತೃತ್ವದ ಲೋಕ ಜನಶಕ್ತಿ ಪಕ್ಷ 29, ಹಿಂದೂಸ್ತಾನಿ ಅವಾಮ್ ಮೋರ್ಚಾ(ಎಚ್‌ಎಎಂ) 6 ಮತ್ತು ರಾಷ್ಟ್ರೀಯ ಲೋಕ ಮೋರ್ಚಾ (ಆರ್‌ಎಲ್‌ಎಂ) 6 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ.

ಭಾರೀ ಗೊಂದಲದಲ್ಲಿರುವ ಮಹಾಘಟಬಂಧನ್



ಅದರೆ, ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಮತ್ತು ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳ ಒಕ್ಕೂಟ 'ಮಹಾಘಟಬಂಧನ್'ನಲ್ಲಿ ಸೀಟು ಹಂಚಿಕೆ ವಿಚಾರ ಗುರುವಾರ ಮಧ್ಯಾಹ್ನದವರೆಗೂ ಅಂತಿಮಗೊಂಡಿಲ್ಲ. ಇದರಿಂದ ಒತ್ತಡಕ್ಕೆ ಒಳಗಾಗಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಗುರುವಾರ ಮಧ್ಯಾಹ್ನ ಆರ್‌ಜೆಡಿ ಪಕ್ಷದ ಮುಖ್ಯಸ್ಥ ಲಾಲೂ ಪ್ರಸಾದ್ ಯಾದವ್ ಅವರಿಗೆ ಕರೆ ಮಾಡಿ ಮಾತನಾಡಿದ್ದಾರೆ ಎಂದು ವರದಿಯಾಗಿದೆ. 2020ರ ಚುನಾವಣೆಯಲ್ಲಿ ಕಾಂಗ್ರೆಸ್ 70 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಕೇವಲ 19ರಲ್ಲಿ ಜಯ ಗಳಿಸಿತ್ತು. ಕಾಂಗ್ರೆಸ್ ಈ ಬಾರಿಯೂ 70 ಕ್ಷೇತ್ರಗಳನ್ನು ಕೇಳುತ್ತಿದೆ. ಆದರೆ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅಷ್ಟೊಂದು ಕ್ಷೇತ್ರಗಳನ್ನು ನೀಡಲು ಒಪ್ಪಿಲ್ಲ. ಹೀಗಾಗಿ ಮಿತ್ರ ಪಕ್ಷಗಳ ನಡುವೆಯೇ ಸೀಟು ಹಂಚಿಕೆ ಕಗ್ಗಂಟಾಗಿದೆ. ಕಳೆದ ಬಾರಿ 144 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಆರ್‌ಜೆಡಿ ಈ ಬಾರಿ 135 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಿದ್ಧತೆ ಮಾಡಿ ಕೊಂಡಿದೆ. ಕಾಂಗ್ರೆಸ್‌ಗೆ 60 ಕ್ಷೇತ್ರ ಬಿಟ್ಟುಕೊಡಲು ಸಿದ್ಧವಿದೆ ಎನ್ನಲಾಗಿದೆ. ತೇಜಸ್ವಿ ಯಾದವ್ ಸರಕಾರ ಬಂದರೆ ಡಿಸಿಎಂ ಆಗುವೆ ಎಂದು ಬಹಿರಂಗವಾಗಿ ಹೇಳುತ್ತಿರುವ 'ವಿಕಾಸಶೀಲ ಇನ್ಸಾನ್ ಪಾರ್ಟಿ'ಯ ಮುಖೇಶ್ ಸಹಾನಿ, ತಮ್ಮ ಪಕ್ಷಕ್ಕೆ 40 ಕ್ಷೇತ್ರ ಕೇಳುತ್ತಿದ್ದಾರೆ. ಆದರೆ, ಅವರಿಗೆ 16 ಕ್ಷೇತ್ರ ಸಿಗುವ ಸಾಧ್ಯತೆಯಿದೆ. ಉಳಿದ 32 ಕ್ಷೇತ್ರಗಳನ್ನು ಮಿತ್ರ ಪಕ್ಷಗಳಿಗೆ ಹಂಚುವುದು ತೇಜಸ್ವಿ ಅವರ ಲೆಕ್ಕಾಚಾರವಾಗಿದೆ.

ಸಮಾಚಾರ ಸಣ್ಣದಲ್ಲ

ಮ.ಪ್ರ: 24 ತೃತೀಯ ಲಿಂಗಿ ಆತ್ಮಹತ್ಯೆ ಯತ್ನ

ಇಂದೋರ್: ಇಂದೋರ್‌ನ ನಂದಲಾಲ್‌ಪುರದಲ್ಲಿ ತೃತೀಯ ಲಿಂಗಿ ಸಮುದಾಯದಲ್ಲಿ ವಿವಾದ ಉಂಟಾಗಿದ್ದು, ಇದೇ ಸಂದರ್ಭ ಒಂದು ಗುಂಪಿನ 24 ತೃತೀಯ ಲಿಂಗಿಗಳು ಸಾಮೂಹಿಕವಾಗಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದಾರೆ.

ವಿಷಪ್ರಾಶನದ ಬಗ್ಗೆ ಮಾಹಿತಿ ಪಡೆದ ನಂತರ, ಸುದ್ದಿ ತಿಳಿದ ಕೂಡಲೇ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಆಂಬ್ಯುಲೆನ್ಸ್ ಮತ್ತು ಪೊಲೀಸ್ ವಾಹನಗಳಲ್ಲಿ ಅಸ್ವಸ್ಥ ತೃತೀಯ ಲಿಂಗಿಗಳನ್ನು ಇಂಧೋರ್‌ನ ಎಂವೈ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಕೆಲವರ ಸ್ಥಿತಿ ತುಸು ಗಂಭೀರವಾಗಿದೆ ಎನ್ನಲಾಗಿದೆ. ತೃತೀಯ ಲಿಂಗಿಗಳು ಸೇವಿಸಿರುವುದು ವಿಷವಲ್ಲ, ಫಿನಾಯಿಲ್ ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಘಟನೆಗೆ ಕಾರಣವೇನೆಂದು ತಿಳಿದಿಲ್ಲ. ಅಸ್ವಸ್ಥರು ಚೇತರಿಸಿಕೊಂಡ ನಂತರ ಹೇಳಿಕೆ ಪಡೆಯಲಾಗುವುದು ಎಂದು ಹೆಚ್ಚುವರಿ ಡಿಸಿಪಿ ರಾಜೇಶ್ ದಂಡೋಟಿಯಾ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಅಹಮದಾಬಾದಲ್ಲೂ ಚಪ್ಪಲಿ ಎಸೆತ ಪ್ರಕರಣ

ಅಹಮದಾಬಾದ್: ಗುಜರಾತ್‌ನ ಅಹಮದಾಬಾದ್ ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿರುವಾಗ ದೂರುದಾರನೊಬ್ಬ ನ್ಯಾಯಾಧೀಶ ಪುರೋಹಿತ್ ಅವರತ್ತ ಚಪ್ಪಲಿ ಎಸೆದಿದ್ದಾನೆ. ಇದು ಕಳೆದ ವಾರ ಸುಪ್ರೀಂ ಕೋರ್ಟ್‌ನಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ಹಿರಿಯ ವಕೀಲರ ಘಟನೆಯನ್ನು ನೆನಪಿಸಿದೆ. ತಾನು ದೂರು ದಾಖಲಿಸಿದ್ದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನೂ ನ್ಯಾಯಾಧೀಶರು ಖುಲಾಸೆಗೊಳಿಸಿದ್ದರಿಂದ ಕೋಪಗೊಂಡು ಚಪ್ಪಲಿ ಎಸೆದಿದ್ದಾನೆ ಎನ್ನಲಾಗಿದೆ. ಆತನನ್ನು ನ್ಯಾಯಾಲಯದ ಸಿಬ್ಬಂದಿ ತಕ್ಷಣ ಹಿಡಿದು ಕಟಕಟೆಯಲ್ಲಿ ನಿಲ್ಲಿಸಿದರು. ಆದರೆ, ನ್ಯಾಯಾಧೀಶರು ಆತನನ್ನು ಕ್ಷಮಿಸಿ ಶಿಕ್ಷೆ ವಿಧಿಸದೇ ಬಿಟ್ಟು ಕಳುಹಿಸಿದರು. ಅಲ್ಲದೇ, ಆತನ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳಬಾರದು ಎಂದೂ ಪೊಲೀಸರಿಗೆ ಸೂಚಿಸಿದರು ಎಂದು ಹಿರಿಯ ಪೊಲೀಸ್ ಅಧಿಕಾರಿಗಳೇ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

4ನೇ ಪತ್ನಿಗೂ 30,000 ಜೀವನಾಂಶ: ಹೈ ತೀರ್ಪು

ಲಖನೌ: ಪತ್ನಿ 4ನೆಯವರೇ ಆಗಿದ್ದರೂ ಆಕೆಗೂ ಮಾಸಿಕ 30,000 ರು. ಜೀವನಾಂಶ ನೀಡಬೇಕಿದೆ ಎಂದು ಉತ್ತರ ಪ್ರದೇಶದ ಸಮಾಜವಾದಿ ಪಕ್ಷದ ಸಂಸದ ಮೊಹಿಬ್ಬುಲ್ಲಾ ನದ್ವಿಗೆ ಅಲಹಾಬಾದ್ ಹೈಕೋರ್ಟ್ ಕಟ್ಟುನಿಟ್ಟಿನ ಆದೇಶ ನೀಡಿದೆ. 4ನೇ ಪತ್ನಿಗೂ ಜೀವನಾಂಶ ನೀಡಬೇಕು ಎಂದು ಆಗ್ರಾ ಕೌಟುಂಬಿಕ ನ್ಯಾಯಾಲಯ 2024ರ ಏ.1ರಂದು ನೀಡಿದ್ದ ಆದೇಶ ಪ್ರಶ್ನಿಸಿ ನದ್ವಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಹೈಕೋರ್ಟ್ ಪೀಠ, ತಕ್ಷಣವೇ ಜೀವನಾಂಶದ ಹಣ ಪಾವತಿಸಿ ಮುಂದಿನ 3 ತಿಂಗಳಲ್ಲಿ ಕೌಟುಂಬಿಕ ವಿವಾದ ಏನೇ ಇದ್ದರೂ ಬಗೆಹರಿಸಿಕೊಳ್ಳಿ ಎಂದು ಕಾಲಾವಕಾಶ ನೀಡಿದೆ. ಕೌಟುಂಬಿಕ ವಿವಾದ ಪರಿಹಾರಕ್ಕಾಗಿ ಮಧ್ಯಸ್ಥಿಕೆ ಪ್ರಕ್ರಿಯೆಗೂ ಪೀಠ ನಿರ್ದೇಶನ ನೀಡಿದೆ. ಜೀವನಾಂಶ ಮೊತ್ತ ನೀಡುವುದಲ್ಲದೇ, 55,000 ರೂ.ಗಳನ್ನು ಠೇವಣಿಯಾಗಿ ಇರಿಸುವಂತೆಯೂ ಸಂಸದ ನದ್ವಿಗೆ ಆದೇಶ ನೀಡಿದೆ.

ಬಿಎಸ್‌ಎನ್‌ಎಲ್‌ನ ದೀಪಾವಳಿ ಕೊಡುಗೆ

ದೆಹಲಿ: ಕೇಂದ್ರ ಸರಕಾರ ಸ್ವಾಮ್ಯದ ದೂರಸಂಪರ್ಕ ಸಂಸ್ಥೆ 'ಭಾರತೀಯ ಸಂಚಾರ್ ನಿಗಮ್ ಲಿ.'(ಬಿಎಸ್‌ಎನ್‌ಎಲ್) ತಡವಾಗಿಯಾದರೂ 4ಜಿ ನೆಟ್‌ವರ್ಕ್ ಸೇವೆ ಆರಂಭಿಸಿದ್ದು, ಗ್ರಾಹಕರ ಸಂಖ್ಯೆ ಹೆಚ್ಚಿಸಿಕೊಳ್ಳಲು ಯತ್ನಿಸುತ್ತಿದೆ. ಹೊಸ ಗ್ರಾಹಕರನ್ನು ಸೆಳೆಯಲು ದೀಪಾವಳಿಗೆ ವಿಶೇಷ ಕೊಡುಗೆ ಘೋಷಿಸಿದೆ. ಹೊಸ ಗ್ರಾಹಕರು ಬಿಎಸ್‌ಎನ್‌ಎಲ್ ಸಂಪರ್ಕ ಸೇವೆ ಬಳಸಲು ಇಚ್ಛಿಸಿದರೆ ಉಚಿತವಾಗಿ ಸಿಮ್ ನೀಡುವುದಾಗಿ ಹೇಳಿದೆ. ಅಲ್ಲದೇ, 1 ರು.ಗೆ ಅನಿಯಮಿತ ಕರೆಗಳು, ದಿನಕ್ಕೆ 2 ಜಿಬಿ ಡೇಟಾ ಮತ್ತು 100 ಎಸ್‌ಎಂಎಸ್ ಸೌಲಭ್ಯ ನೀಡುಲಾಗು ವುದು. ಈ ಯೋಜನೆ ಪೂರ್ಣ 30 ದಿನಗಳವರೆಗೆ ಮಾನ್ಯ ಎಂದು ಹೇಳಿದೆ. ಹೊಸ ಬಳಕೆದಾರರಿಗೆ ಮಾತ್ರ ಈ ಕೊಡುಗೆ ಎಂಬ ಷರತ್ತನ್ನೂ ವಿಧಿಸಿದೆ. ಅಲ್ಲದೇ ಸೀಮಿತ ಅವಧಿಗೆ ಮಾತ್ರ ಎಂದೂ ಹೇಳಿದೆ. ಕೊಡುಗೆ ಅ.15ರಂದು ಆರಂಭವಾಗಿದ್ದು, ನ.15 ರವರೆಗೆ ಲಭ್ಯವಿರಲಿದೆ ಎಂದಿದೆ.



{ ಎಂ.ಕೆ.ಸ್ಟಾಲಿನ್ } ತ.ನಾಡು ಸಿಎಂ

ಸೆ.27 ಕರೂರಿನ ವೇಲುಸಾಮಿಪುರಂನಲ್ಲಿ 'ಟಿವಿಕೆ' ಪಕ್ಷದ ಬೃಹತ್ ರ‍್ಯಾಲಿಗೆ ನಟ-ರಾಜಕಾರಣಿ ವಿಜಯ್ 7 ಗಂಟೆ ತಡವಾಗಿ ಬಂದಿದ್ದೇ ಕಾಲ್ತುಳಿತಕ್ಕೆ ಕಾರಣ. ಬೆಳಗ್ಗೆಯೇ ಬಂದು ಕಾಯುತ್ತಿದ್ದ ಜನಸಮೂಹಕ್ಕೆ ನೀರು-ಆಹಾರ ಒದಗಿಸಲು ಸಂಘಟಕರು ವ್ಯವಸ್ಥೆ ಮಾಡಿರಲಿಲ್ಲ. ತಕ್ಷಣ ಭಾಷಣ ಆರಂಭಿಸುವಂತೆ ಪೊಲೀಸರು ಮಾಡಿದ ಮನವಿಗೂ ವಿಜಯ್ ಸ್ಪಂದಿಸಲಿಲ್ಲ.

ಅಫ್ಘಾನ್-ಪಾಕ್ ಯುದ್ಧಕ್ಕೆ ಭಾರತವೇ ಕಾರಣ: ಖ್ವಾಜಾ

ಇಸ್ಲಾಮಾಬಾದ್: ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನ ನಡುವೆ ಈಗ ನಡೆಯುತ್ತಿರುವ ಸಂಘರ್ಷಕ್ಕೆ ಭಾರತವೇ ಕಾರಣ ಎಂದು ಪಾಕ್ ಸರಕಾರ ಆರೋಪ ಮಾಡಿದೆ. ಅಫ್ಘಾನಿಸ್ತಾನದ ತಾಲಿಬಾನ್ ಸರಕಾರ ಭಾರತದ ಪರವಾಗಿ ನಮ್ಮ ಮೇಲೆ ಪ್ರಾಕ್ಸಿ ವಾರ್(ನಕಲಿ ಯುದ್ಧ) ನಡೆಸುತ್ತಿದೆ ಎಂದು ಪಾಕ್ ಆರೋಪಿಸಿದೆ.

ತಾಲಿಬಾನ್ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿ ಇತ್ತೀಚೆಗೆ ಭಾರತಕ್ಕೆ ಆರು ದಿನಗಳ ಪ್ರವಾಸ ಕೈಗೊಂಡಿದ್ದಾಗ ಕೆಲವು ಗುಪ್ತ ಯೋಜನೆಗಳನ್ನು ರೂಪಿಸಿದ್ದಾರೆ. ಪಾಕ್ ಭೂಪ್ರದೇಶದ ಮೇಲೆ ಭಯೋತ್ಪಾದಕ ದಾಳಿ ನಡೆಸುವ ಬಂದೂಕುಧಾರಿಗಳನ್ನು ಅಫ್ಘಾನಿಸ್ತಾನ ಬೆಂಬಲಿಸುತ್ತಿದೆ. 2021ರಲ್ಲಿ ತಾಲಿಬಾನ್ ಅಧಿಕಾರವನ್ನು ವಶಪಡಿಸಿಕೊಂಡ ನಂತರ ಈ ದಾಳಿಗಳು ಹೆಚ್ಚಾಗಿವೆ ಎಂದು ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಆರೋಪಿಸಿದ್ದಾರೆ.

ಇಸ್ಲಾಮಾಬಾದ್ ಮತ್ತು ಕಾಬೂಲ್ ನಡುವೆ ಇತ್ತೀಚೆಗೆ 48 ಗಂಟೆಗಳ ಕದನ ವಿರಾಮದ ಬಗೆಗೂ ಅನುಮಾನ ವ್ಯಕ್ತಪಡಿಸಿರುವ ಸಚಿವ ಖ್ವಾಜಾ, ತಾಲಿಬಾನ್ ಸರಕಾರಕ್ಕೆ ಭಾರತ ಬೆಂಬಲ ನೀಡುತ್ತಿದೆ. ತಾಲಿಬಾನ್ ಸರಕಾರದ ನಿರ್ಧಾರಗಳು ದೆಹಲಿ ಪ್ರಾಯೋಜಿತವಾಗಿವೆ. ಹಾಗಾಗಿ, ಈಗಿನ ಕದನ ವಿರಾಮ ಮುಂದುವರಿಯುವ ಬಗ್ಗೆ ಸಂದೇಹವಿದೆ ಎಂದಿದ್ದಾರೆ. ಅಫ್ಘಾನಿಸ್ತಾನ ಮೇಲೆ ವೈಮಾನಿಕ ದಾಳಿ ಆರಂಭಿಸಿದ್ದ ಪಾಕಿಸ್ತಾನ ಕಡೆಗೆ 48 ಗಂಟೆಗಳ ಕದನ ವಿರಾಮಕ್ಕೆ ಒಪ್ಪಿದೆ. ಭಾರತೀಯ ಕಾಲಮಾನ ಬುಧವಾರ ಸಂಜೆ 6.30ಕ್ಕೆ ಕದನ ವಿರಾಮ ಜಾರಿಗೆ ಬಂದಿದೆ.

ಅಟಾರ್ನಿ ಜನರಲ್ ಸಮ್ಮತಿ: ವಿಚಾರಣೆ ಮುಂದಕ್ಕೆ

ಸಿಜೆಐರತ್ತ ಶೂ ಎಸೆಯಲೆತ್ನ: ನ್ಯಾಯಾಂಗ ನಿಂದನೆ ಕೇಸ್?

ದೆಹಲಿ: ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರತ್ತ ಶೂ ಎಸೆಯಲೆತ್ನಿಸಿದ ವಕೀಲ ರಾಕೇಶ್ ಕಿಶೋರ್ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅಟಾರ್ನಿ ಜನರಲ್ ಸಮ್ಮತಿಸಿದ್ದಾರೆ. ಈ ಕುರಿತು ಸುಪ್ರೀಂ ಕೋರ್ಟ್‌ಗೆ ಗುರುವಾರ ಮಾಹಿತಿ ನೀಡಲಾಗಿದೆ.

ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾ.ಜಾಯ್ಮಲ್ಯ ಬಾಗ್ಚಿ ಅವರ ಪೀಠಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ (ಎಸ್‌ಸಿಬಿಎ) ಮುಖ್ಯಸ್ಥರಾದ ಹಿರಿಯ ವಕೀಲ ವಿಕಾಸಿಂಗ್ ಅವರು ರಾಕೇಶ್ ಕಿಶೋರ್ ವಿರುದ್ಧ ನ್ಯಾಯಾಂಗ ನಿಂದನೆ ಕೇಸ್ ದಾಖಲಿಸಲು ಮನವಿ ಮಾಡಿದರು.

ಆದರೆ, ತಕ್ಷಣವೇ ನ್ಯಾಯಾಂಗ ನಿಂದನೆ ಪ್ರಕರಣವನ್ನು ಸುಪ್ರೀಂ ಕೋರ್ಟ್ ವಿಚಾರಣೆ ಪಟ್ಟಿಗೆ ಸೇರಿಸಲು ಇಚ್ಛಿಸದ ದ್ವಿಸದಸ್ಯ ಪೀಠ, ಒಂದು ವಾರದ ನಂತರ ಪರಿಶೀಲಿಸೋಣ ಎಂದು ಹೇಳಿದೆ. ಅ.6ರಂದು ನಡೆದ ಘಟನೆಯ ವಿಚಾರ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚು ವೈರಲ್ ಆಗಿದೆ. ಅದಕ್ಕೆ ಅವಹೇಳನಕಾರಿ ಹೇಳಿಕೆಗಳು ಪ್ರಕಟವಾಗುತ್ತಿವೆ. ಇದರಿಂದ ಸುಪ್ರೀಂಕೋರ್ಟ್‌ನ ಸಮಗ್ರತೆ ಮತ್ತು ಘನತೆಗೆ ಧಕ್ಕೆಯಾಗಿದೆ ಎಂದು ಸಿಂಗ್ ಹೇಳಿದರು. ಈ ವಿಚಾರದಲ್ಲಿ ಸಾಮಾಜಿಕ ಮಾಧ್ಯಮದ ಮೇಲೆ ತಡೆಯಾಜ್ಞೆ ನೀಡುವಂತೆ ಪೀಠಕ್ಕೆ ಮೆಹ್ತಾ ಮತ್ತು ಸಿಂಗ್ ಆಗ್ರಹಿಸಿದರು.

ಅಭಿವ್ಯಕ್ತಿ ಸ್ವಾತಂತ್ರ್ಯವೆಂಬ ಮೂಲಭೂತ ಹಕ್ಕು ಇತರರ ಸಮಗ್ರತೆ ಮತ್ತು ಘನತೆಗೆ ಕುಂದು ತರಬಾರದು. ಇದು ಸಾಮಾಜಿಕ ಮಾಧ್ಯಮದ ಅನಿಯಂತ್ರಿತ ಸ್ವಭಾವದ ದುಷ್ಪರಿಣಾಮಗಳನ್ನು ಎತ್ತಿ ತೋರಿಸಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

ಕೇದಾರನಾಥಕ್ಕೆ 13 ಕಿಮೀ 'ರೋಪ್ ವೇ': ಅದಾನಿ

ಡೆಹರಾಡೂನ್: ಉತ್ತರಾಖಂಡ ರಾಜ್ಯದಲ್ಲಿರುವ ಕೇದಾರನಾಥಕ್ಕೆ ಯಾತ್ರಿಗಳು ಸರಾಗವಾಗಿ ತಲುಪಲು ಸಾಧ್ಯವಾಗುವಂತೆ 12.9 ಕಿಮೀಗಳಷ್ಟು ದೂರ 'ರೋಪ್ ವೇ'(ಹಗ್ಗದ ಮಾರ್ಗ) ನಿರ್ಮಿಸುವುದಾಗಿ ಅದಾನಿ ಕಂಪನಿ ಪ್ರಕಟಿಸಿದೆ.

ಸಾವಿರಾರು ಭಕ್ತರು ತೀರ್ಥಯಾತ್ರೆ ತೆರಳುವ ಕ್ಷೇತ್ರವನ್ನು ಸುಲಭವಾಗಿ, ಅಷ್ಟೇ ಸುರಕ್ಷಿತವಾಗಿ ತಲುಪಲು ಸಾಧ್ಯವಾಗುವಂತೆ ಕೇದಾರನಾಥ ಧಾಮಕ್ಕೆ ಹೊಸದಾಗಿ ರೋಪ್ ನಿರ್ಮಾಣ ಮಾಡಲಾಗುವುದು. ಈ ಯೋಜನೆಯ ಭಾಗವಾಗುವುದಕ್ಕೆ ಹೆಮ್ಮೆಯಿದೆ. ಎಲ್ಲರಿಗೂ ಭಗವಾನ್ ಮಹಾದೇವನ ಆಶೀರ್ವಾದವಿರಲಿ ಎಂದು ಗೌತಮ್ ಅದಾನಿ 'ಎಕ್ಸ್' ಸಂದೇಶದಲ್ಲಿ ತಿಳಿಸಿದ್ದಾರೆ. ಇತ್ತೀಚೆಗೆ, ಸರಣಿ ಮೇಘಸ್ಫೋಟ, ಧಾರಾಕಾರ ಮಳೆ, ಪ್ರವಾಹ, ಭೂಕುಸಿತದ ಸರಣಿ ಪ್ರಾಕೃತಿಕ ವಿಕೋಪದಿಂದ ಸಂಕಷ್ಟಕ್ಕೀಡಾಗಿದ್ದ ಉತ್ತರಾಖಂಡದಲ್ಲಿ ರಸ್ತೆ ಸಂಪರ್ಕ ಕಡಿತವಾಗಿದ್ದರಿಂದ ಈ ಬಾರಿ ಕೇದಾರನಾಥಕ್ಕೆ ತೆರಳಿದ್ದ ಸಾವಿರಾರು ಪ್ರವಾಸಿಗರು ಸಂಕಷ್ಟಕ್ಕೀಡಾಗಿದ್ದರು.

ಕೇದಾರನಾಥದಲ್ಲಿರುವ ಕೇದಾರನಾಥೇಶ್ವರ ಮಂದಿರ ಹಿಮಾಲಯ ಪರ್ವತ ಶಿಖರಗಳ ಸರಣಿಯಲ್ಲಿ ಸಮುದ್ರ ಮಟ್ಟದಿಂದ 11 ಸಾವಿರ ಅಡಿಗಳಷ್ಟು ಎತ್ತರದಲ್ಲಿದೆ. ಚಳಿಗಾಲ ಆರಂಭವಾಗಲಿರುವ ಹಿನ್ನೆಲೆ ಕೇದಾರನಾಥ ಧಾಮದ ದ್ವಾರಗಳನ್ನು ಅ.23ರಂದು ಮುಚ್ಚಲಾಗುತ್ತಿದೆ.

ಕೇಂದ್ರ ಸರಕಾರ, ಅರ್ಜಿದಾರರಿಂದ 'ಸುಪ್ರೀಂ'ಗೆ ಮಾಹಿತಿ

ಯೆಮನ್: ಕೇರಳ ನರ್ಸ್ ಮರಣದಂಡನೆಗೆ ತಡೆ

ದೆಹಲಿ: ಯೆಮನ್ ದೇಶದಲ್ಲಿ ಕೊಲೆ ಆರೋಪದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿರುವ ಕೇರಳದ ನರ್ಸ್ ನಿಮಿಷಾ ಪ್ರಿಯಾಗೆ ಶಿಕ್ಷೆ ಸದ್ಯ ಜಾರಿಯಾಗಿಲ್ಲ ಎಂದು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ಗೆ ಗುರುವಾರ ಮಾಹಿತಿ ನೀಡಿದೆ.

ಕೇಂದ್ರದ ಪರವಾಗಿ ಹಾಜರಾಗಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು, 'ಕೇರಳ ಮೂಲದ ನರ್ಸ್‌ಗೆ ಮರಣದಂಡನೆ ಜಾರಿಯಾಗುವುದನ್ನು ತಡೆಯಲು ಹೊಸ ಸಂದಾನಕಾರರೊಬ್ಬರ ಮಧ್ಯಪ್ರವೇಶವಾಗಿದೆ. ಒಂದು ಒಳ್ಳೆಯ ವಿಷಯವೆಂದರೆ ಯಾವುದೇ ಪ್ರತಿಕೂಲ ಘಟನೆ ಜರುಗಿಲ್ಲ' ಎಂದು ನ್ಯಾ.ವಿಕ್ರಂ ನಾಥ್ ಮತ್ತು ನ್ಯಾ.ಸಂದೀಪ್ ಮೆಹ್ತಾ ಅವರ ಪೀಠಕ್ಕೆ ತಿಳಿಸಿದರು.

'ಮರಣದಂಡನೆ ವಿಚಾರ ಏನಾಯಿತು?' ಎಂಬ ಪೀಠದ ಪ್ರಶ್ನೆಗೆ, 'ಸದ್ಯ ತಡೆ ನೀಡಲಾಗಿದೆ' ಎಂದು ನರ್ಸ್ ನಿಮಿಷ ಪ್ರಿಯಾಗೆ ಕಾನೂನು ನೆರವು ನೀಡುತ್ತಿರುವ 'ಸೇವ್ ನಿಮಿಷಾ ಪ್ರಿಯಾ ಇಂಟರ್‌ನ್ಯಾಷನಲ್ ಆ್ಯಕ್ಷನ್ ಕೌನ್ಸಿಲ್' ಪರ ವಕೀಲರು ಹೇಳಿದರು. '2026ರ ಜನವರಿಗೆ ಅರ್ಜಿ ವಿಚಾರಣೆಗೆ ಪಟ್ಟಿ ಮಾಡಲಾಗಿದೆ. ವಾದಿ-ಪ್ರತಿವಾದಿಗಳು ಆರಂಭಿಕ ವಿಚಾರಣೆಗೆ ಅರ್ಜಿ ಸಲ್ಲಿಸಬಹುದಾಗಿದೆ' ಎಂದು ಹೇಳಿದ ದ್ವಿಸದಸ್ಯ ಪೀಠ ವಿಚಾರಣೆ ಮುಂದೂಡಿತು. ಪಾಲಕ್ಕಾಡ್‌ನ ನರ್ಸ್ ನಿಮಿಷಾ ಪ್ರಿಯಾ(38) ಯೆಮನ್ ರಾಜಧಾನಿ ಸನಾದ ಜೈಲಿನಲ್ಲಿದ್ದಾರೆ. 2017ರಲ್ಲಿ ಯೆಮನ್‌ನ ವ್ಯವಹಾರ ಪಾಲುದಾರನನ್ನು ಕೊಂದ ಆರೋಪದಡಿ ನರ್ಸ್‌ಗೆ ಮರಣ ದಂಡನೆ ಶಿಕ್ಷೆ ವಿಧಿಸಲಾಗಿದೆ. ಆಕೆಯ ರಕ್ಷಣೆಗೆ ರಾಜತಾಂತ್ರಿಕ ಮಾರ್ಗ ಬಳಸಲು ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ನರ್ಸ್ ಕುಟುಂಬ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಗಾಜಾ ನಡುರಸ್ತೆಯಲ್ಲಿ ಕೈ ಕಟ್ಟಿ-ಕಣ್ಣಿಗೆ ಬಟ್ಟೆ ಸುತ್ತಿ ಗುಂಡಿಕ್ಕಿದರು

ಶಾಂತಿ ಒಪ್ಪಂದ ಲೆಕ್ಕಿಸದ ಹಮಾಸ್: 8 ಜನರ ಹತ್ಯೆ

ಟೆಲ್‌ಅವಿವ್: ಗಾಜಾದಿಂದ ಇಸ್ರೇಲ್ ಸೇನಾಪಡೆಗಳು ಜಾಗ ಖಾಲಿ ಮಾಡಿದ ಬಳಿಕ ಹಮಾಸ್ ಉಗ್ರರು ತಮ್ಮ ಆಟಾಟೋಪ ಶುರು ಮಾಡಿದ್ದಾರೆ. ಹಾಡಹಗಲೇ ಗಾಜಾ ನಗರದ 8 ನಿವಾಸಿಗಳನ್ನು ಸಾರ್ವಜನಿಕವಾಗಿ ಗುಂಡಿಟ್ಟು ಕೊಂದಿದ್ದಾರೆ. ಅಲ್ಲದೇ ತಮ್ಮ ಕೃತ್ಯವನ್ನು ವಿಡಿಯೊ ಮಾಡಿ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಇಸ್ರೇಲ್ ಎರಡು ವರ್ಷಗಳಿಂದ ನಡೆಸುತ್ತಿದ್ದ ದೀರ್ಘ ಯುದ್ಧಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರೂಪಿಸಿದ 20 ಅಂಶಗಳ ಶಾಂತಿ ಒಪ್ಪಂದದಿಂದಾಗಿ ವಿರಾಮವೇನೋ ಸಿಕ್ಕಿದೆ. ಆದರೆ, ಶಾಂತಿ ಒಪ್ಪಂದ ಜಾರಿಗೆ

ವಿಧಿಸಿದ ಷರತ್ತುಗಳಲ್ಲಿ ಹಮಾಸ್ ಉಗ್ರ ಸಂಘಟನೆಯ ನಿಶ್ಯಸ್ತ್ರೀಕರಣ ಎಂಬ ಮುಖ್ಯವಾದ ಷರತ್ತು ಪಾಲನೆ ಆಗಿಲ್ಲದಿರುವುದೇ ಈ ಸಮಸ್ಯೆಗೆ ಕಾರಣವಾಗಿದೆ. ಅಮೆರಿಕ, ಈಜಿಪ್ಟ್, ಟರ್ಕಿ, ಸೌದಿ, ಖತಾರ್, ಭಾರತ, ಬ್ರಿಟನ್, ಪಾಕಿಸ್ತಾನ ಸೇರಿದಂತೆ 20 ದೇಶಗಳ ನಾಯಕರು ಈಜಿಪ್ಟ್‌ನಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದಲ್ಲಿ ಸಭೆ ಸೇರಿ 'ಗಾಜಾ ಶಾಂತಿ ಒಪ್ಪಂದ'ಕ್ಕೆ ಸಹಿ ಹಾಕಿದ ದಿನವೇ ಹಮಾಸ್ 8 ಜನರ ನರಮೇಧ ನಡೆಸಿದೆ. ಕದನ ವಿರಾಮ ಒಪ್ಪಂದವನ್ನು ಹಮಾಸ್ ನಿರ್ಲಕ್ಷ್ಯ ಮಾಡಿದೆ. ಗಾಜಾ ನಗರದ 8 ಜನರ ಕೈಗಳನ್ನು ಕಟ್ಟಿಹಾಕಿ ಕಣ್ಣಿಗೆ ಬಟ್ಟೆ ಕಟ್ಟಿ, ಗುಂಡಿಕ್ಕಿ ಹತ್ಯೆ ಮಾಡಿದ್ದು, ಗಾಜಾ ರಸ್ತೆ ಮತ್ತೆ ರಕ್ತಸಿಕ್ತವಾಗಿದೆ. ಇಸ್ರೇಲ್‌ಗೆ ಸಹಕಾರಿಗಳಾ ಗಿದ್ದ, ನಮ್ಮ ಪಾಲಿಗೆ ಅಪರಾಧಿಗಳಾಗಿದ್ದವರನ್ನು ಕೊಲ್ಲಲಾಗಿದೆ ಎಂದ ಹಮಾಸ್ ಹೇಳಿದೆ.

ಆಂಧ್ರದ ಹೂಡಿಕೆ ಖಾರ, ನೆರೆಹೊರೆಗೆ ಹೊಟ್ಟೆ ಉರಿ

ವಿಶಾಖಪಟ್ಟಣಂ: ಬಂಡವಾಳ ಹೂಡಿಕೆ ಆಕರ್ಷಿಸುವ ವಿಚಾರದಲ್ಲಿ ಸದಾ ಕರ್ನಾಟಕ ಜತೆ ಪೈಪೋಟಿಗಿಳಿಯುವ ಆಂಧ್ರ ಪ್ರದೇಶ ಈಗ ವಿಶಾಖಪಟ್ಟಣದಲ್ಲಿ ಗೂಗಲ್ ಕಂಪನಿ 1500 ಕೋಟಿ ಡಾಲರ್ ಹೂಡಿಕೆ ಮಾಡಿ 'ಎಐ ಡೇಟಾ ಸೆಂಟರ್' ಆರಂಭಿಸಲಿರುವ ಒಪ್ಪಂದವಾದ ಬಳಿಕ, ಆಂಧ್ರದ ಮಾಹಿತಿ ತಂತ್ರಜ್ಞಾನ ಸಚಿವ ನಾರಾ ಲೋಕೇಶ್ ಈಗ ಕರ್ನಾಟಕದತ್ತ ಬೊಟ್ಟು ಮಾಡಿ ಮಾತನಾಡಲಾರಂಭಿಸಿದ್ದಾರೆ. ದೊಡ್ಡ ಯೋಜನೆಗಳು ಆಂಧ್ರಪ್ರದೇಶದ ಪಾಲಾಗಿರುವುದಕ್ಕೆ ನೆರೆ ರಾಜ್ಯಕ್ಕೆ ಹೊಟ್ಟೆ ಉರಿ ಎಂದಿದ್ದಾರೆ.

'ಆಂಧ್ರದ ಆಹಾರ ಬಹಳ ಖಾರವಾಗಿರುತ್ತದೆ ಎಂದು ಕೆಲವರು ಹೇಳುತ್ತಾರೆ. ನಮ್ಮ ರಾಜ್ಯಕ್ಕೆ ಬರುವ ಬಂಡವಾಳ ಹೂಡಿಕೆಗಳೂ ಬಹಳ ಖಾರವಾಗಿವೆ ಎಂದು ತೋರುತ್ತದೆ. ನೆರೆಹೊರೆಯ ಕೆಲವರಿಗೆ ಈಗಾಗಲೇ ಹೊಟ್ಟೆ ಉರಿಯುತ್ತಿದೆ. ಖಾರದ ತೀವ್ರತೆಗೆ ನರಳುತ್ತಿದ್ದಾರೆ' ಎಂದು ಗೂಗಲ್ ಹೂಡಿಕೆ ವಿಚಾರದಲ್ಲಿ ಕರ್ನಾಟಕ ಉದ್ದೇಶಿಸಿ ವ್ಯಂಗ್ಯವಾಗಿ 'ಎಕ್ಸ್' ಖಾತೆಯಲ್ಲಿ ಗುರುವಾರ ಪೋಸ್ಟ್ ಮಾಡಿದ್ದಾರೆ.

'ನಮ್ಮ ರಾಜ್ಯ ಈಗಾಗಲೇ 12000 ಕೋಟಿ ಡಾಲರ್ ಹೂಡಿಕೆ ಆಕರ್ಷಿಸಿದೆ. ಆಂಧ್ರ ಪ್ರದೇಶದಲ್ಲಿನ ಸುಧಾರಣೆಗಳ ತ್ವರಿತ ವೇಗ ಕರ್ನಾಟಕದ ಜತೆ ತುರುಸಿನ ಸ್ಪರ್ಧೆ ನಡೆಸುವಂತೆ ಮಾಡಿದೆ. ಆದರೆ, ಈ ವೇಗದ ಸ್ಪರ್ಧೆಗೆ ಚಿಂತೆಗೊಂಡಿರುವ ರಾಜ್ಯಗಳು ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡಬೇಕು. ಅದುವೇ ಅವರ ಮುಂದಿರುವ ಸವಾಲು' ಎಂದು ನಾರಾ ಲೋಕೇಶ್ ಕರ್ನಾಟಕ ಸಚಿವರ ಹೆಸರು ಉಲ್ಲೇಖಿಸದೇ ಅಣಕವಾಡಿದ್ದಾರೆ.



ಆಂಧ್ರಪ್ರದೇಶ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಗುರುವಾರ ನಂದ್ಯಾಲ್ ಜಿಲ್ಲೆಯ ಶ್ರೀಶೈಲದಲ್ಲಿರುವ ಶ್ರೀ ಭ್ರಮರಾಂಬ ಸಮೇತ ಮಲ್ಲಿಕಾರ್ಜುನ ಸ್ವಾಮಿಯ ದೇಗುಲಕ್ಕೆ ತೆರಳಿ ಹಾಲು-ಮೊಸರು-ತುಪ್ಪ, ಜೇನುತುಪ್ಪ ಸೇರಿದ ಪವಿತ್ರ ಪಂಚಾಮೃತ ಮಿಶ್ರಣ ಬಳಸಿ ದೇವರಿಗೆ ರುದ್ರಾಭಿಷೇಕ ನೆರವೇರಿಸಿ ಕೆಲ ಕಾಲ ಧ್ಯಾನ ಮಾಡಿದರು. ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ದೇಶದ 12 ಜ್ಯೋತಿರ್‌ಲಿಂಗಗಳಲ್ಲಿ ಮತ್ತು 52 ಶಕ್ತಿ ಪೀಠಗಳ ಪಟ್ಟಿಗೆ ಸೇರಿದೆ.

ಬಿಹಾರ ಎಸ್‌ಐಆರ್ ನಿಖರ ಸುಪ್ರೀಂಗೆ ಚು.ಆಯೋಗ

ದೆಹಲಿ: ಬಿಹಾರ ರಾಜ್ಯ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆ ಬಹಳ ನಿಖರವಾದುದಾಗಿದೆ. ಆದರೆ, ರಾಜಕೀಯ ಪಕ್ಷಗಳು ಮತ್ತು ಎನ್‌ಜಿಒಗಳು ವೃಥಾ ಈ ಪ್ರಕ್ರಿಯೆಗೆ ಮತ್ತು ಚುನಾವಣಾ ಆಯೋಗಕ್ಕೆ ಕಳಂಕ ತರಲು ಸುಳ್ಳು ಆರೋಪಗಳನ್ನು ಮಾಡುತ್ತಿವೆ ಎಂದು ಭಾರತೀಯ ಚುನಾವಣಾ ಆಯೋಗ(ಇಸಿಐ) ಸುಪ್ರೀಂ ಕೋರ್ಟ್‌ನಲ್ಲಿ ಗುರುವಾರ ಹೇಳಿಕೆ ದಾಖಲಿಸಿದೆ.

ಬಿಹಾರ ರಾಜ್ಯದ ಎಸ್‌ಐಆರ್ ಬಳಿಕ ಮತದಾರರ ಅಂತಿಮ ಪಟ್ಟಿ ಪ್ರಕಟವಾದ ಬಳಿಕ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲ ಎಂಬ ಕುರಿತು ಯಾವುದೇ ಮತದಾರರು ಒಂದೇ ಒಂದು ದೂರು ಸಲ್ಲಿಸಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ.

ಬಿಹಾರದಲ್ಲಿ ಎಸ್‌ಐಆರ್ ನಂತರ ಸಿದ್ಧಪಡಿಸಲಾದ ಮತದಾರರ ಅಂತಿಮ ಪಟ್ಟಿಯಲ್ಲಿ ಮುದ್ರಣ ದೋಷ ಮತ್ತು ಇತರೆ ತಪ್ಪುಗಳನ್ನು ಚುನಾವಣಾ ಆಯೋಗ ಜವಾಬ್ದಾರಿಯಿಂದ ಪರಿಶೀಲಿಸಿ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ನಿರೀಕ್ಷಿಸುವುದಾಗಿ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾ.ಜೋಯ್ಮಲ್ಯ ಬಾಗ್ಚಿ ಅವರ ಪೀಠ ಹೇಳಿದೆ. ಬಿಹಾರದಲ್ಲಿ ನ.6 ಮತ್ತು 11ರಂದು ಚುನಾವಣೆ ನಡೆಯುತ್ತಿರುವುದರಿಂದ ನಾಮಪತ್ರ ಸಲ್ಲಿಕೆಯಲ್ಲಿ ರಾಜಕೀಯ ಪಕ್ಷಗಳ ನಾಯಕರು ವ್ಯಸ್ತವಾಗಿದ್ದರಿಂದ ಗುರುವಾರ ವಿಚಾರಣೆಗೆ ಅರ್ಜಿದಾರರಲ್ಲಿ ಹಲವರು ಹಾಜರಿರಲಿಲ್ಲ.

ಸಮಾಚಾರ ಸಣ್ಣದಲ್ಲ

ಸುಮಾ ಜಿಲ್ಲೆಗೆ ಪ್ರಥಮ ರ‍್ಯಾಂಕ್

ಮುದಗಲ್: ಎಂಕಾಂ ಕೋರ್ಸ್‌ಗಳಲ್ಲಿ ಸುಮಾ ಸಿದ್ದಪ್ಪ ಮೇಟಿ ಈಚನಾಳ ಈ ವಿದ್ಯಾರ್ಥಿನಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ರಾಯಚೂರು ಜಿಲ್ಲೆಗೆ ಪ್ರಥಮ ರಾಂಕ್ ಬಂದಿದ್ದಾಳೆ. 2000 ಅಂಕಗಳಲ್ಲಿ 1672 ಅಂಕಗಳು ಪಡೆಯುವ ಮೂಲಕ ಶೇ.83.6 ಪಡೆದುಕೊಂಡು ರಾಯಚೂರು ಜಿಲ್ಲೆಗೆ ಸುಮಾ,ಸಿದ್ದಪ್ಪ ಮೇಟಿ ಈಚನಾಳ ಜಿಲ್ಲೆಗೆ ಪ್ರಥಮ ರಾಂಕ್ ಬಂದಿದ್ದಾಳೆ ಈ ವಿದ್ಯಾರ್ಥಿಯ ಪೋಷಕರು ಸಂಬಂಧಿಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಮುಂಬಡ್ತಿ ಹೊಂದಿದ ಹನುಮಂತಗೆ ಸನ್ಮಾನ

ಮುದಗಲ್ : ಪೊಲೀಸ್ ಇಲಾಖೆಯಲ್ಲಿ ಸುಮಾರು ವರ್ಷಗಳಿಂದ ಕಾನಸ್ಟೇಬಲ್ ಯಾಗಿ ಉತ್ತಮ ಸೇವೆ ಸಲ್ಲಿಸುತ್ತಿರುವ ಹನುಮಂತ ರವರು ಹೆಡ್ ಕಾನಸ್ಟೇಬಲ್ ಯಾಗಿ ಮುಂಬಡ್ತಿ ಹೊಂದಿದ ಹಿನ್ನೆಲೆಯಲ್ಲಿ ಮುದಗಲ್ ಠಾಣೆಯ ಪಿಎಸ್ಐ ವೆಂಕಟೇಶ ಮಾಡಗೇರಿ ಹಾಗೂ ಸಿಬ್ಬಂದಿ ವರ್ಗದವರು ಸನ್ಮಾನ ಮಾಡಿ ಅಭಿನಂದಿಸಿದರು. ಸರಳ ಸಜ್ಜನಿಕೆ ವ್ಯಕ್ತಿಯಾಗಿ ಜನಸ್ನೇಹಿ ಕಾನಸ್ಟೇಬಲ್ ಆಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿರುವ ಹನುಮಂತ ಅವರು ಹೆಡ್ ಕಾನ್ ಸ್ಟೇಬಲ್ ಯಾಗಿ ಮುಂಬಡ್ತಿ ಯಾಗಿರುವುದು ವಿವಿಧ ಸಂಘಟನೆಗಳ ಮುಖಂಡರಲ್ಲಿ ಹಾಗೂ ಸಾರ್ವಜನಿಕರಲ್ಲಿ ಸಂತಸ ಉಂಟಾಗಿದೆ. ಈ ಸಂದರ್ಭದಲ್ಲಿ ಎಎಸ್ಐ ಚನ್ನಬಸವ, ವೆಂಕಟಪ್ಪ ನಾಯಕ,ಹೆಡ್ ಕಾನ್ಸ್ಟೇಬಲ್ ಗಳಾದ ಅಮರೇಶ ಎಚ್, ಕೆ, ಅಮರಗುಂಡಪ್ಪ, ವೆಂಕಟೇಶ್, ಅನಿಲಕುಮಾರ, ಶರಣಪ್ಪ ಲೆಕ್ಕಿಹಾಳ, ಸಿದ್ದಪ್ಪ ಮೇಟಿ, ಸತ್ತರ ಪಾಷಾ ಸೇರಿದಂತೆ ಠಾಣೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಮೂಲಸೌಕರ್ಯಗಳ ಲೋಕಾರ್ಪಣೆ

ಸಂಡೂರು: ತಾಲೂಕಿನ ಹೊಸೂರು ಗ್ರಾಮದಲ್ಲಿ ಶ್ರೀಶೈಲೇಶ್ವರ ವಿದ್ಯಾಕೇಂದ್ರ ಹಾಗೂ ಭಾರತೀಯ ಸುರಾಜ್ಯ ಸಂಸ್ಥೆಯ ಜಂಟಿ ಸಹಯೋಗದಲ್ಲಿ ಗ್ರಾಮ ಜಾಗೃತಿ ಸಭೆ ಹಾಗೂ ಸೌರ ಬೀದಿ ದೀಪ ಸೇರಿದಂತೆ ಇತರೆ ಮೂಲಸೌಕರ್ಯಗಳನ್ನು ಲೋಕಾರ್ಪಣೆ ಮಾಡಲಾಯಿತು. ಪಟ್ಟಣದ ಶ್ರೀಶೈಲೇಶ್ವರ ವಿದ್ಯಾ ಕೇಂದ್ರ ಕಳೆದ ಆರು ತಿಂಗಳ ಹಿಂದೆ ಗ್ರಾಮದ ಮುಖಂಡರೊಂದಿಗೆ ಸಭೆ ಮಾಡಿ ದತ್ತು ತೆಗೆದುಕೊಂಡು ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, 8 ಸೌರ ಬೀದಿ ದೀಪಗಳು ಹಾಗೂ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಕಂಪ್ಯೂಟರ್‌ಹಾಗೂ ಪ್ರಿಂಟರ್ ನೀಡಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಕುಮಾರ್‌ಎಸ್ ನಾನಾವಟೆ ಮಾತನಾಡಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ದೇವರಾಜ್ ಯು, ಎಂ ಜೆ ಶರಣಬಸಪ್ಪ, ಗೋಣಿಬಸಪ್ಪ, ಮುಖ್ಯ ಶಿಕ್ಷಕರಾದ ಸುಜಾತ ಘೋರ್ಪಡೆ, ರುಕ್ಮಿಣಿ ಕದಂ, ಹೊಸೂರು ಗ್ರಾಮದ ಮುಖಂಡರು, ಸರಕಾರಿ ಶಾಲೆಯ ಸಿಬ್ಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು.

ಗುಂಡಿಯಲ್ಲಿ ಬಿದ್ದು ಆಕಳು ಸಾವು

ಮುದಗಲ್: ಸ್ಥಳೀಯ ಸರಕಾರಿ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿರುವ ತೆಗ್ಗಿನಲ್ಲಿ ಆಕಳು ಬಿದ್ದು ಸಾವಿಗಿಡಾಗಿದ್ದು ಈ ಘಟನೆಗೆ ಹೊಣೆ ಯಾರು ಎಂಬುದು ಯಕ್ಷ ಪ್ರಶ್ನೆಯಾಗಿದೆ.! ಹೌದು ಪಟ್ಟಣದ ನಿವಾಸಿ ಪ್ಯಾರು ಪಾಷಾ ಜಮದಾರ ಎನ್ನುವಾತನ ಕರು ಹಾಕಿದ ಹಸು ಕಳೆದ 15 ದಿನಗಳ ಹಿಂದೆ ಕಾಣೆಯಾಗಿತ್ತು. ಕಾಣೆಯಾಗಿದ್ದ ಹಸುವನ್ನು ಹುಡುಕಾಟ ನಡೆಸಿ ನೊಂದು ಹೋಗಿದ್ದ ಆಕಳು ಮಾಲಿಕ ಸ್ಥಳೀಯ ಸರಕಾರಿ ಆಸ್ಪತ್ರೆಯ ಆವರಣದಲ್ಲಿ ಸುಮಾರು 8 ಅಡಿಗೂ ಅಧಿಕ ಆಳದಷ್ಟು ನೆಲೆ ತೆಗೆದು ಮುಚ್ಚದೆ ಬಿಟ್ಟಿದ್ದ ತೆಗ್ಗಿನಲ್ಲಿ ಆಕಳು ಬಿದ್ದು ಸತ್ತಿರುವುದು ಕಂಡು ಬಂದಿದೆ. ಈ ಬಗ್ಗೆ ಮತ್ತಷ್ಟು ಆಘಾತಕ್ಕೊಳಗಾದ ಹಸುವಿನ ವಾರಸುದಾರ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳನ್ನು ವಿಚಾರಿಸಿದರೆ ಹಾರಿಕೆ ಉತ್ತರ ನೀಡಿದ್ದಾರೆ. ಹಸು ಬಿದ್ದು ಸತ್ತುಹೋಗಿರುವ ತೆಗ್ಗು ಗುಂಡಿಯಲ್ಲಿ ಬೆಳಗ್ಗೆ ನೋಡಲು ಹೋದಾಗ ಸತ್ತು ಹೋದ ಹಸುವಿನ ಕಳೆಬರದ ಮೇಲೆ ಏಕಾ ಏಕಿ ಗಾಡಿಯಷ್ಟು ತ್ಯಾಜ್ಯ ಆ ತೆಗ್ಗಲ್ಲಿ ಸುರಿದಿರುವದು ಬೆಳಕಿಗೆ ಬಂದಿದೆ.

{ ಸಂತೋಷ್ ಲಾಡ್, } ಸಚಿವ

ಸಚಿವ ಸಂಪುಟ ವಿಸ್ತರಣೆ ಪಕ್ಷಕ್ಕೆ ಬಿಟ್ಟ ವಿಚಾರ. ಯಾವ ಮಾನದಂಡಗಳನ್ನು ಹಾಕ್ತಾರೆ ಅನ್ನೋದು ಪಕ್ಷಕ್ಕೆ ಬಿಟ್ಟ ವಿಚಾರ. ಸಿಎಂ ಡಿನ್ನರ್‌ಪಾರ್ಟಿಯಲ್ಲಿ ವಿಶೇಷವಾಗಿ ಗ್ರಾಪಂ, ತಾಪಂ, ಗ್ರೇಟರ್‌ಬೆಂಗಳೂರು ಬಗ್ಗೆ ಚರ್ಚೆಯಾಯ್ತು. ಬೆಂಗಳೂರಿನಲ್ಲಿ ಗುಂಡಿಗಳು ಇರುವುದು ನಿಜ. ಅದನ್ನು ಸಿಎಂ, ಡಿಸಿಎಂ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ.

ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮ I ಕೃಷಿ, ಪಶು ಸಖಿಯರು ಇಲಾಖೆ ಕಾರ್ಯಕ್ರಮಗಳ ಬಗ್ಗೆ ರೈತರಿಗೆ ಅರಿವು ಮೂಡಿಸಿ

ಸಾವಯವ ಕೃಷಿಗೆ ಉತ್ತೇಜನ ಅಗತ್ಯ: ಜಿಲ್ಲಾಧಿಕಾರಿ

ಕೊಪ್ಪಳ: ಆರೋಗ್ಯಯುಕ್ತ ಆಹಾರ ಒದಗಿಸಲು ಸಾವಯವ ಕೃಷಿ ಪದ್ಧತಿಗೆ ಉತ್ತೇಜನ ನೀಡಬೇಕಾಗಿದ್ದು, ಕೃಷಿ ಮತ್ತು ಪಶು ಸಖಿಯರು ಇಲಾಖೆ ಕಾರ್ಯಕ್ರಮಗಳ ಬಗ್ಗೆ ರೈತರಿಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ನಗರದ ಜಿಪಂ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ 2025-26ನೇ ಸಾಲಿನ ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಗುರುವಾರ ಮಾತನಾಡಿದರು.

ಕೃಷಿಯಲ್ಲಿ ರಸಾಯನಿಕ ಗೊಬ್ಬರ, ಕೀಟ ನಾಶಕ ಹೆಚ್ಚಾಗಿ ಬಳಕೆ ಮಾಡಿ ಬೆಳೆದ ದವಸ- ದಾನ್ಯ, ತರಕಾರಿ- ಹಣ್ಣು ಸೇವನೆಯಿಂದ ಮನುಷ್ಯನ ದೇಹದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಇದನ್ನು ತಡೆಗಟ್ಟಬೇಕಿದೆ. ಈ ಹಿನ್ನೆಲೆ ಪರಂಪರಾಗತ ಕೃಷಿ ಯೋಜನೆಯಡಿ ಕೊಪ್ಪಳ ಜಿಲ್ಲೆಯ ಹಳ್ಳಿಗಳನ್ನು ಸಾವಯವ ಕೃಷಿ ಗ್ರಾಮವಾಗಿ ಮಾಡಲು ಪ್ರಯತ್ನಿಸುತ್ತಿದ್ದೇವೆ. ಇದಕ್ಕೆ ಜಿಲ್ಲೆಯ ಎಲ್ಲ ರೈತರು ಕೈಜೋಡಿಸಬೇಕಿದೆ. ಇದರ ಜತೆಗೆ ನೀರಿನ ಸಂರಕ್ಷಣೆ ಹಾಗೂ ಹಾಲು, ಮೊಟ್ಟೆ ಮತ್ತು ಮಾಂಸ ಉತ್ಪಾದನೆ ಸಹ ಸಾವಯವ ಪದ್ಧತಿಯಲ್ಲಿಯೇ ಮಾಡುವ ಅನಿವಾರ್ಯತೆ ಇದೆ. ಈ ಬಗ್ಗೆ ಸಂಬಂಧಿಸಿದ ಇಲಾಖೆ ಮೂಲಕ ರೈತರಿಗೆ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸಬೇಕಿದೆ ಎಂದು ಹೇಳಿದರು.

ವಿಶ್ವ ಆಹಾರ ದಿನಾಚರಣೆಯಲ್ಲಿ ಪ್ರಗತಿಪರ ರೈತರು, ಉಪನ್ಯಾಸಕರಿಗೆ ಸನ್ಮಾನಿಸಲಾಯಿತು.

ಆಹಾರ ಮತ್ತು ಕೃಷಿ ಸಂಸ್ಥೆ(ಎಫ್‌ಎಒ)ಯ ಸ್ಥಾಪನೆ ದಿನವನ್ನು ವಿಶ್ವ ಆಹಾರ ದಿನಾವಾಗಿ ಆಚರಿಸಲಾಗುತ್ತಿದೆ. ದೇಶದ ಎಲ್ಲ ನಾಗರೀಕರಿಗೆ ಗುಣಮಟ್ಟದ ಆಹಾರ ಸಿಗಬೇಕು ಎಂಬ ಉದ್ದೇಶದಿಂದ ಎಫ್‌ಎಒ ಕಾರ್ಯ ನಿರ್ವಹಿಸುತ್ತಿದೆ. 'ಉತ್ತಮ ಆಹಾರ ಮತ್ತು ಉತ್ತಮ ಭವಿಷ್ಯಕ್ಕಾಗಿ ಕೈಜೋಡಿಸಿ' ಎಂಬ ಘೋಷವಾಕ್ಯದೊಂದಿಗೆ ಈ ವರ್ಷದ ವಿಶ್ವ ಆಹಾರ ದಿನ ಆಚರಿಸಲಾಗುತ್ತಿದೆ. ಸ್ವಾತಂತ್ರ್ಯ ಬಂದಾಗ ಭಾರತದ ಜನಸಂಖ್ಯೆ 34 ರಿಂದ 35 ಕೋಟಿ ಇತ್ತು. ಆದರೆ, ಪ್ರಸ್ತುತ 146 ಕೋಟಿಗೆ ತಲುಪಿದೆ. ಪ್ರತಿಯೊಬ್ಬರಿಗೂ ಆಹಾರ ಭದ್ರತೆ ಒದಗಿಸಲು ಕಳೆದ 2013ರಲ್ಲಿ ಅಂದಿನ ಪ್ರಧಾನಿ ಡಾ. ಮನಮೋಹನ ಸಿಂಗ್ ನೇತೃತ್ವದ ಕೇಂದ್ರ ಸರಕಾರ ಆಹಾರ ಭದ್ರತಾ ಕಾಯಿದೆ ಜಾರಿ ತಂದಿದೆ. ಇದರಿಂದ ಅಂತ್ಯೋದಯ ಅನ್ನ ಯೋಜನೆಯಡಿ 35 ಕೆ.ಜಿ ಅಕ್ಕಿ ಮತ್ತು ಇತರೆ ಧಾನ್ಯ, ಬಡ ಕುಟುಂಬಗಳಿಗೆ 5 ಕೆ.ಜಿ ಅಕ್ಕಿ ಹಾಗೂ ಇತರೆ ಧಾನ್ಯ ನೀಡುವ ಕಾರ್ಯಕ್ರಮ ಪ್ರಾರಂಭ ವಾಯಿತು ಎಂದರು.

ಎಲ್ಲರೂ ಪೌಷ್ಟಿಕ ಆಹಾರ ಬಳಕೆಗೆ ಆದ್ಯತೆ ನೀಡಬೇಕು. ಈ ಹಿನ್ನೆಲೆಯಲ್ಲಿ ಅಂಗನವಾಡಿ ಮೂಲಕ ಮಕ್ಕಳು ಹಾಗೂ ಗರ್ಭಿಣಿಯರು, ಬಾಣಂತಿಯರು ಹಾಗೂ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರದ ಜೊತೆಗೆ ಹಾಲು, ಬಾಳೆಹಣ್ಣು ಮತ್ತು ಮೊಟ್ಟೆ ನೀಡಲಾಗುತ್ತಿದೆ ಎಂದರು.ಜಂಟಿ ಕೃಷಿ ನಿರ್ದೇಶಕ ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆ ಅಧ್ಯಕ್ಷ ಟಿ.ಎಸ್. ರುದ್ರೇಶಪ್ಪ ಅಧ್ಯಕ್ಷತೆ ವಹಿಸಿದ್ದರು. ಕೃಷಿ ತಂತ್ರಜ್ಞರ ಸಂಸ್ಥೆಯ ಉಪಾಧ್ಯಕ್ಷ ವಿ.ಕೆ. ಕಮತರ ಪ್ರಾಸ್ತಾವಿಕವಾಗಿ ಮಾತನಾಡಿದರು. ಗಂಗಾವತಿ ಕೃಷಿ ಕಾಲೇಜಿನ ಕೀಟ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ಬದ್ರಿಪ್ರಸಾದ ಪಿ.ಆರ್. ಹಾಗೂ ಗದಗ ಪಶು ವೈದ್ಯಕೀಯ ಕಾಲೇಜಿನ ಪ್ರಾಣಿ ಆಹಾರ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಬಣಕಾರ ಪಿ.ಎಸ್. ವಿಶೇಷ ಉಪನ್ಯಾಸ ನೀಡಿದರು. ಆತ್ಮ ಯೋಜನೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶುಸಂಗೋಪನೆ ಇಲಾಖೆ, ಮೀನುಗಾರಿಕೆ ಇಲಾಖೆ, ಕೃಷಿ ತಂತ್ರಜ್ಞರ ಸಂಸ್ಥೆ ಮತ್ತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

> ಪ್ರಸ್ತುತ ಜನರಲ್ಲಿ ಫಾಸ್ಟ್ ಫುಡ್ ಸೇವನೆ ಹೆಚ್ಚಾಗಿದೆ. ಮಕ್ಕಳೂ ಸಹ ಚಾಕಲೇಟ್, ಬಿಸ್ಕೇಟ್, ಚಿಪ್ಸ್, ಕುರಕುರೆ ತಿಂದರೆ, ನಗರ ಪ್ರದೇಶಗಳ ಹೆಚ್ಚು ಜನರು ದಿನನಿತ್ಯ ಮ್ಯಾಗಿ, ಬರ್ಗರ್, ಪಿಜ್ಜಾದಂತಹ ಫಾಸ್ಟ್ ಫುಡ್ ಬಳಕೆ ಮಾಡುತ್ತಿದ್ದಾರೆ. ನಿರಂತರ ಇಂಥ ಆಹಾರ ಪದಾರ್ಥ ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ.
> – ಡಾ.ಸುರೇಶ ಇಟ್ನಾಳ, ಜಿಲ್ಲಾಧಿಕಾರಿ, ಕೊಪ್ಪಳ

ಜಿಲ್ಲೆಯ ಪ್ರಗತಿಪರ ರೈತರಿಗೆ ಮತ್ತು ವಿಶೇಷ ಉಪನ್ಯಾಸ ನೀಡಿದ ಉಪನ್ಯಾಸಕರಿಗೆ ಸನ್ಮಾನಿಸಲಾಯಿತು. ಪಶು ಇಲಾಖೆ ಉಪ ನಿರ್ದೇಶಕ ಡಾ.ಪಿ.ಎಂ.ಮಲ್ಲಯ್ಯ, ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಶ್ರೀನಿವಾಸ ಕುಲಕರ್ಣಿ,ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಎಂ.ವಿ.ರವಿ, ಉಪ ಕೃಷಿ ನಿರ್ದೇಶಕ ಎಲ್. ಸಿದ್ದೇಶ್ವರ ಇದ್ದರು. ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕಿ ಶಶಿಕಲಾ. ಸವಣೂರು ನಿರೂಪಿಸಿದರು.

ಪಠ್ಯದ ಜತೆಗೆ ಕೌಶಲವೂ ಅಗತ್ಯ: ಡಾ.ಶರಣಪ್ರಕಾಶ್ ಪಾಟೀಲ

ಬಳ್ಳಾರಿ: ಇಂದಿನ ವಿದ್ಯಾರ್ಥಿಗಳಿಗೆ ಪಠ್ಯದ ಕಲಿಕೆಯ ಜತೆಗೆ ಬಹು ಕೌಶಲ ಕಲಿಸುವ ಅಗತ್ಯವಿದೆ ಎಂದು ವೈದ್ಯಕೀಯ ಶಿಕ್ಷಣ, ಕೌಶಲ ಅಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯ ಸಚಿವ ಡಾ.ಶರಣ ಪ್ರಕಾಶ್ ಆರ್.ಪಾಟೀಲ ಹೇಳಿದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೂತನ 'ಇಂಕ್ಯುಬೇಷನ್ ಹಾಗೂ ಜಾಬ್ ಪೋರ್ಟಲ್' ಅನ್ನು ಲೋಕಾರ್ಪಣೆ ಮಾಡಿದರು.

ಇದು 'ಆವಿಷ್ಕಾರಗಳ ಯುಗ'. ಹೊಸ ಆವಿಷ್ಕಾರಗಳಿಗೆ – ಹೊಸ ತಂತ್ರಜ್ಞಾನಗಳಿಗೆ ಪ್ರತಿಯೊಂದು ಕ್ಷೇತ್ರ, ಪ್ರತಿಯೊಬ್ಬರೂ ಕೌಶಲ್ಯವಂತರಾಗಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಉದ್ಯೋಗ ಮೇಳ ಗಳಲ್ಲಿ ನೋಂದಣಿ ಆಗುವವರಿಗೆ ಅಗತ್ಯವಿರುವ ಕೌಶಲ, ಸಂವಹನ, ಜ್ಞಾನ ಇನ್ನಿತರೆಗಳ ಜೊತೆಯಲ್ಲಿ ಎಐ-ಮೆಷಿನ್ ಲರ್ನಿಂಗ್ ತಂತ್ರಜ್ಞಾನದ ಬಳಕೆಯ ಜ್ಞಾನವನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಎಫ್‌ಕೆಸಿಸಿಐನ ಅಧ್ಯಕ್ಷ ಉಮಾರೆಡ್ಡಿ ಅವರು, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಾಬ್ ಪೋರ್ಟಲ್ ಉದ್ಘಾಟಿಸಿ, ಸ್ಕಿಲ್ ಡೆವಲಪ್ ಮೆಂಟ್ ಮತ್ತು ಇಂಕ್ಯುಬೇಷನ್ ಸೆಂಟರ್‌ಆಧುನಿಕ ಡಿಜಿಟಲ್ ತಂತ್ರಜ್ಞಾನವನ್ನು ಹೊಂದಿದ್ದು, ಉದ್ಯಮಶೀಲತೆಯ ಕೇಂದ್ರವಾಗಿದೆ. ಎಫ್‌ಕೆಸಿಸಿಐ ಬಿಡಿಸಿಸಿಐ ಜತೆ ಸ್ಟಾರ್ಟ್‌ಅಪ್ ಮಾರ್ಗದರ್ಶನ, ತರಬೇತಿ ಮತ್ತು ಹೂಡಿಕೆಯ ಸಂಪರ್ಕ ನೀಡಲಿದೆ. ಬಿಡಿಸಿಸಿಐ ಹೊಸ ಅವಕಾಶಗಳನ್ನು ನೀಡಲಿ, ಕರ್ನಾಟಕದ ಪ್ರಗತಿಗೆ ಕೈಜೋಡಿಸಲಿ ಎಂದು ಹಾರೈಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಯಶವಂ ತರಾಜ್ ನಾಗಿರೆಡ್ಡಿ ಅವರು ಮಾತನಾಡಿ, ಇಂಕ್ಯುಬೇಷನ್ ಸೆಂಟರ್‌ಯುವಶಕ್ತಿಗೆ – ನವ ಉದ್ಯಮಿಗಳಿಗೆ ಆಶಾಕಿರಣವಾಗಿ ಸೇವೆ ಸಲ್ಲಿಸುವ ಜವಾಬ್ದಾರಿಗಳನ್ನು ನಿರ್ವಹಿ ಸಲಿದೆ. ಇಂಕ್ಯುಬೇಷನ್ ಸೆಂಟರ್‌ಮುಂಬೈನ ವಿಕಸಿತ ಮ್ಯಾನೇಜ್ ಮೆಂಟ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ ಮತ್ತು ಲಾರ್ವನ್ ಹೋಲ್ಡಿಂಗ್ ಜೊತೆಯ ಒಪ್ಪಂದ ಮಾಡಿಕೊಂಡಿದ್ದು, ಉದ್ಯಮಿಗಳಿಗೆ ಬಂಡವಾಳ ಮತ್ತು ಜ್ಞಾನದ ಮಾರ್ಗ ದರ್ಶನ ನೀಡಲಿದೆ ಎಂದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಾ.ಮರ್ಚೆಡ್ ಮಲ್ಲಿಕಾರ್ಜುನಗೌಡ ಅವರು, ಜಾಬ್ ಪೋರ್ಟಲ್ ಕುರಿತು ಸಮಗ್ರ ಮಾಹಿತಿ ನೀಡಿ, ಉದ್ಯಮಿಗಳು ಮತ್ತು ಉದ್ಯೋಗಾಸಕ್ತರು ಈ ಪೋರ್ಟಲ್‌ನ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಮೇಯರ್ ಮುಲ್ಲಂಗಿ ನಂದೀಶ್, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಪದಾಧಿಕಾರಿಗಳು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಚಿವ ಡಾ.ಶರಣ ಪ್ರಕಾಶ್ ಆರ್.ಪಾಟೀಲ ಅವರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೂತನ 'ಇಂಕ್ಯುಬೇಷನ್ ಹಾಗೂ ಜಾಬ್ ಪೋರ್ಟಲ್' ಅನ್ನು ಲೋಕಾರ್ಪಣೆ ಮಾಡಿದರು.

> ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳ ಡಿಗ್ರಿಗಳು ಸಾಲುತ್ತಿಲ್ಲ. ಪಠ್ಯದ ಜತೆಯಲ್ಲಿ ಕೌಶಲ, ಜ್ಞಾನ, ಸಂವಹನ ಮತ್ತು ಸಾಮಾನ್ಯ ಜ್ಞಾನವೂ ಪ್ರತಿಯೊಬ್ಬರಿಗೆ ಅಗತ್ಯ. ಈ ನಿಟ್ಟಿನಲ್ಲಿ ಎಐಸಿಟಿಸಿಯ ಜತೆಯಲ್ಲಿ ಸರಕಾರ ಕಲಿಕೆಯ ಜತೆಯಲ್ಲಿ ಕೌಶಲಕ್ಕೆ ಆದ್ಯತೆ ನೀಡುವ ಪಠ್ಯವನ್ನು ರಚಿಸಲು ಕೋರಿದೆ.
> -ಡಾ.ಶರಣ ಪ್ರಕಾಶ್ ಆರ್.ಪಾಟೀಲ, ಸಚಿವ

ಅಕ್ರಮ ಮರ ಎಣಿಕೆ: ದೂರು ಸಲ್ಲಿಕೆ

ಸಂಡೂರು: ಪಟ್ಟಣದ ಸೆರಗಂಚಿನ ದೇವದಾರಿ-ಸ್ವಾಮಿ ಮಲೈ ಬೆಟ್ಟದಲ್ಲಿ ರಾಷ್ಟ್ರೀಯ ಸ್ವಾಮ್ಯದ ಕುದುರೆಮುಖ ಗಣಿ ಕಂಪನಿ(KIOCL)ತನ್ನ ಗಣಿ ಚಟುವಟಿಕೆ ಗಳನ್ನು ನಡೆಸಲು ಉದ್ದೇಶಿಸಿದ್ದು ಇದೀಗ ರಾಜ್ಯ ಸರಕಾರ ಅಥವಾ ಅರಣ್ಯ ಇಲಾಖೆಯಿಂದ ಯಾವುದೇ ರೀತಿಯ ಸೂಕ್ತ ಪರವಾನಿಗೆಯನ್ನು ಪಡೆಯದೆ ಲಕ್ಷಾಂತರ ಮರಗಳನ್ನು ಅಕ್ರಮವಾಗಿ ಕಡೆದುರಳಿಸಿ ಗಣಿಕಂಪನಿಗೆ ಕೂಡು ದಾರಿ ನಿರ್ಮಿಸುವ ಸಂಚು ನಡೆಯುತ್ತಿರುವುದು ಕಂಡುಬಂದಿದೆ.

ವಿಷಯ ತಿಳಿದ ಗ್ರಾಮದ ರೈತರು, ಜನ ಸಂಗ್ರಾಮ ಪರಿಷತ್ ಘಟಕ ಹಾಗೂ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಕೂಡಲೇ ದೇವದಾರಿ ಬೆಟ್ಟಕ್ಕೆ ತೆರಳಿ ಅಕ್ರಮ ಮರ ಎಣಿಕೆ ಮಾಡುತ್ತಿದ್ದ ಖಾಸಗಿ ವ್ಯಕ್ತಿಗಳು ಹಾಗೂ ಏಜೆನ್ಸಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡು, ಈ ರೀತಿ ಅಕ್ರಮದ ಮಾರ್ಗ ತುಳಿಯುತ್ತಿದ್ದರೆ ಮುಂದಿನ ದಿನಗಳಲ್ಲಿ ನಮ್ಮಿಂದ ಉಗ್ರ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದಾಗ ಖಾಸಗಿ ಏಜೆನ್ಸಿಯವರು ಅರಣ್ಯ ಪ್ರದೇಶದಿಂದ ಕಾಲ್ಕಿತ್ತಿದ್ದಾರೆ. ಈ ಕುರಿತು ಜನಸಂ ಗ್ರಾಮ ಪರಿಷತ್ ನ ಪದಾಧಿ ಕಾರಿಗಳಾದ ಟಿಎಂ ಶಿವಕುಮಾರ್,ಶ್ರೀಶೈಲ ಆಲ್ದಳ್ಳಿ ಹಾಗೂ ಮೂಲಿಮನಿ ಈರಣ್ಣ, ಅಚ್ಯುತ, ಗುರುಸಿದ್ದಪ್ಪ, ನೀಲಕಂಠ, ಕಾಡಪ್ಪ ಹಾಗೂ ಹಲವಾರು ರೈತರು ಮತ್ತು ಗ್ರಾಮಸ್ಥರೊಂದಿಗೆ ತೆರಳಿ ವಲಯ ಅರಣ್ಯಾಧಿಕಾರಿ ದಾದಾ ಖಲಂದರ್‌ಮೂಲಕ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಈ ಅಕ್ರಮವನ್ನು ತಡೆಯಲು ಮನವಿಯನ್ನು ಕೂಡ ಸಲ್ಲಿಸಿದ್ದಾರೆ.

ಡಿವೈಎಸ್ಪಿ ಜಾಯಪ್ಪ ನ್ಯಾಮಗೌಡರ್‌ಖಡಕ್ ವಾರ್ನಿಂಗ್

ಎರಡು ದಿನದಲ್ಲಿ ಅಕ್ರಮ ಚಟುವಟಿಕೆ ನಿಲ್ಲಬೇಕು

ಕಾರಟಗಿ: ಪಟ್ಟಣ ಸೇರಿ ತಾಲೂಕಿನಾದ್ಯಂತ ಅಕ್ರಮ ಚಟುವಟಿಕೆ ರಾಜಾರೋಷವಾಗಿ ನಡೆಯುತ್ತಿದ್ದು, ಮುಂದಿನ ಎರಡು ದಿನಗಳಲ್ಲಿ ಎಲ್ಲ ಚಟುವಟಿಕೆ ಸಂಪೂರ್ಣ ಬಂದ್ ಆಗಬೇಕು ಎಂದು ಡಿವೈಎಸ್ಪಿ ಜಾಯಪ್ಪ ನ್ಯಾಮಗೌಡರ್ ಕಟ್ಟುನಿಟ್ಟಾಗ ಸೂಚನೆ ನೀಡಿದ್ದಾರೆ.

ಗಂಗಾವತಿ ಡಿವೈಎಸ್ಪಿ ಆಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಕಾರಟಗಿ ಪೊಲೀಸ್ ಠಾಣೆಗೆ ಬುಧವಾರ ಭೇಟಿ ನೀಡಿ ಪರಿಶೀಲಿಸಿ, ಅಧೀನ ಅಧಿಕಾರಿಗಳಿಗೆ ಕಟ್ಟುನಿಟ್ಟಾಗ ಸೂಚನೆ ನೀಡಿದ್ದಾರೆ. ಪಿಐ ಸುಧೀರ್ ಕುಮಾರ್‌ಬೆಂಕಿ ಮತ್ತು ಪಿಎಸ್ಐ ಕಾಮಣ್ಣ ನಾಯಕ ಅವರಿಗೆ ಇಲಾಖೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಜತೆಗೆ ಕಾನೂನು ಸುವ್ಯವಸ್ಥೆ ಕಾಪಾಡುವಂತೆ ಸೂಚಿಸಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಕಾರಟಗಿ ಸೇರಿ ಸುತ್ತಲಿನ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ, ಇಸ್ಪೀಟ್ ಕ್ಲಬ್ ಮತ್ತು ಮಟಕಾ ಸೇರಿ ಅಕ್ರಮ ಮರಳು ಸಾಗಣೆ ನಡೆಯುತ್ತಿದೆ ಎಂಬ ಮಾಹಿತಿ ಇಲಾಖೆ ಗಮನಕ್ಕಿದೆ. ಮರಳು ಸಾಗಿಸುವವರು ನಕಲಿ ಪರ್ಮಿಟ್ ಇಟ್ಟುಕೊಂಡು ಅಧಿಕಾರಿಗಳನ್ನು ಯಾಮಾರಿಸುತ್ತಿರುವುದು ಇಲಾಖೆ ಗಮನಕ್ಕೆ ಇದೆ. ಮರಳು ಸಾಗಣೆ ಲಾರಿಗಳು ಪರವಾನಗಿ ನಕಲಿ ಅಥವಾ ಅಸಲಿ ಎನ್ನುವುದನ್ನು ಪೊಲೀಸರು ಸರಿಯಾಗಿ ಪರಿಶೀಲನೆ ಮಾಡಬೇಕು. ಸರಕಾರಕ್ಕೆ ರಾಜಸ್ವ ನಷ್ಟ ಆಗುವುದನ್ನು ತಪ್ಪಿಸಲು ಕೆಲಸ ಮಾಡಬೇಕು. ಎಂದು ಸೂಚಿಸಿದ್ದಾರೆ.

ಮಟಕಾ ಕಂಪನಿ ನಡೆಸುವವರ ಮನೆಗೆ ಕೆಲ ಪೊಲೀಸ್ ಪೇದೆಗಳು ಹೋಗಿ ಬರುವುದು, ಸುತ್ತಲಿನ ಹಳ್ಳಿಯಲ್ಲಿ ಇಸ್ಪೇಟ್ ಕ್ಲಬ್ ನಡೆಸುವವರ ಜೊತೆಗೆ ಪೊಲೀಸರು ಸಂಪರ್ಕ ಮತ್ತು ಸಂಬಂಧ ಇರುವುದು ಇಲಾಖೆ ಗಮನಕ್ಕೆ ಇದೆ. ಅಕ್ರಮ ಚಟುವಟಿಕೆಯಲ್ಲಿ ತೊಡಗಿರುವವರು ಸಾರ್ವಜನಿಕವಾಗಿ ಬೇರೆ ಮುಖವಾಡ ಹಾಕಿಕೊಂಡಿದ್ದಾರೆ. ಕೆಲ ಪೊಲೀಸರು ನಿತ್ಯ ಇಂಥವರ ನಿವಾಸಕ್ಕೆ ತೆರಳಿ ಮಾಹಿತಿ ನೀಡುವುದು ಸರಿಯಲ್ಲ. ಇಂಥವರ ಮೇಲೆಯೂ ಯಾವುದೇ ಕ್ಷಣದಲ್ಲಿ ಇಲಾಖೆ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ನವಲಿ ವೃತ್ತದಲ್ಲಿ ಕೆಲ ಪೋಕರಿಗಳ ಹಾವಳಿ ಇದೆ ಎನ್ನುವ ದೂರುಗಳು ಇವೆ. ಹದಗೆಟ್ಟ ಕಾನೂನು ಸುವ್ಯವಸ್ಥೆ ತಕ್ಷಣದಿಂದ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು ಎಂದು ಪಿಐಗೆ ಸೂಚಿಸಿದ್ದಾರೆ.

ಕಾರಟಗಿ ಪೊಲೀಸರ ದಾಳಿ !

ಡಿವೈಎಸ್ಪಿ ಭೇಟಿ ನೀಡಿದ ಬಳಿಕ ತಕ್ಷಣ ಕಾರ್ಯ ಪ್ರವೃತ್ತರಾದ ಕಾರಟಗಿ ಪೊಲೀಸರು ಮಟಕಾ ಅಡ್ಡೆಯ ಮೇಲೆ ದಾಳಿ ಮಾಡಿ, ಇಬ್ಬರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಬೆಳಗ್ಗೆಯಿಂದ ಸಂಜೆಯವರೆಗೂ ಪೇದೆಗಳು ನವಲಿ ವೃತ್ತದಲ್ಲಿ ಗಸ್ತು ತಿರುಗುತ್ತಿದ್ದಾರೆ.

> ಪೊಲೀಸ್ ಸಿಬ್ಬಂದಿ ಕಾನೂನು ಅಡಿಯಲ್ಲಿ ಕೆಲಸ ಮಾಡಬೇಕು. ಕೆಲ ಪೊಲೀಸರು ಅಕ್ರಮ ಚಟುವಟಿಕೆ ನಡೆಸುವವರ ಮಾಹಿತದಾರರಾಗಿ ಕೆಲಸ ಮಾಡುವುದು ಗಮನಕ್ಕೆ ಬಂದಿದೆ. ಇನ್ನು ಮುಂದೆ ಈ ಎಲ್ಲ ತಪ್ಪು ದಾರಿ ಮುಚ್ಚಿಕೊಂಡು ಇಲಾಖೆಗಾಗಿ ಕೆಲಸ ಮಾಡಬೇಕು.
> – ಜಾಯಪ್ಪ ನ್ಯಾಮಗೌಡರ್,ಡಿವೈಎಸ್ಪಿ, ಗಂಗಾವತಿ

ಮೋಸ ಮಾಡುವವರನ್ನು ಪಕ್ಷ ಸಹಿಸುವುದಿಲ್ಲ

ಹರಪನಹಳ್ಳಿ: ಕಾಂಗ್ರೆಸ್ ಪಕ್ಷದಲ್ಲಿದ್ದು ಪಕ್ಷಕ್ಕೆ ಪದೇ ಪದೇ ಮೋಸ ಮಾಡುವವರನ್ನು ಪಕ್ಷ ಸಹಿಸುವುದಿಲ್ಲ ಅಂತಹವರ ಬಗ್ಗೆ ಕೆಪಿಸಿಸಿ ಅಧ್ಯಕ್ಷರ ಗಮನಕ್ಕೆ ತರಲಾಗುವುದು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು. ಪಟ್ಟಣದ ಟಿಎಪಿಎಂಎಸ್ ಕಚೇರಿಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.ಟಿಎಪಿಸಿಎಂಎಸ್ ಚುನಾವಣೆ ಸಂಬಂದ ಸಾಮಾಜಿಕ ನ್ಯಾಯದಡಿ ನಮ್ಮ ಬಳಿ ಬಂದ ಕಾರ್ತಕರ್ತರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ, ಇನ್ನು ಕೆಲವರು ನಮ್ಮ ಬಳಿ ಬಂದು ಅವಕಾಶ ಕೇಳಿಲ್ಲ ಅವರಿಗೆ ಬೇರೆ ಕಡೆ ಅಪ್ಪಣೆ ಸಿಕ್ಕಿರಬಹುದು ಆ ಕಾರಣಕ್ಕೆ ಅವರು ಸ್ಪರ್ಧೆ ಮಾಡುವುದಾದರೆ ಮಾಡಲಿ ಯಾರೇ ಆಗಲಿ ಕಾಂಗ್ರೆಸ್ ಪಕ್ಷದ ಚೌಕಟ್ಟಿನಲ್ಲಿ ಸ್ಪರ್ಧೆ ಮಾಡಬೇಕೆಂಬುದು ಪಕ್ಷದ ನಿಲುವು ಆಗಿದೆ ಎಂದರು.

> ಅಧಿಕೃತ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲಿಸುವುದು ಬಿಟ್ಟು ಪ್ರತ್ಯೇಕ ಗುಂಪುಗಾರಿಕೆ ಮಾಡಿಕೊಂಡು ಸ್ಪರ್ಧೆ ಮಾಡುತ್ತಾರೆ ಎಂದರೆ ಅಂತಹವರ ಬಗ್ಗೆ ಕ್ರಮವಹಿಸಲು ಸ್ಥಳೀಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಮೂಲಕ ಪಕ್ಷದ ವರಿಷ್ಠರ ಗಮನಕ್ಕೆ ತರಲಾಗುವುದು.
> – ಎಂ.ಪಿ.ಲತಾ ಮಲ್ಲಿಕಾರ್ಜುನ, ಶಾಸಕಿ

ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಹದಿನೈದು ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿಗಳು ಸ್ಪರ್ಧಿಸಲಿದ್ದು, ಎಲ್ಲಾ ಕ್ಷೇತ್ರದಲ್ಲಿ ಗೆಲ್ಲುವ ವಿಶ್ವಾಸವಿದೆ ಎಂದು ಹೇಳಿದರು.

ಪಕ್ಷದಲ್ಲಿ ಇದೇ ರೀತಿ ಮೋಸ ಮಾಡುತ್ತಾ ಹೋದರೆ 2023ರ ವಿಧಾನಸಭಾ ಚುನಾವಣೆಯಲ್ಲಿ ಆದ ಪರಿಸ್ಥಿತಿನೇ 2028ರ ಸಂದರ್ಭದಲ್ಲಿ ಮರುಕಳಿಸಬಹುದು ಎಂದರು.

ಈ ಸಂಧರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ಕುಬೇರಗೌಡ್ರು, ಕಂಚಿಕೆರೆ ಜಯಲಕ್ಷ್ಮಿ, ಪುರಸಭಾ ಅಧ್ಯಕ್ಷೆ ಫಾತಿಮಾಬಿ, ಉಪಾಧ್ಯಕ್ಷ ಕೊಟ್ರೇಶ್, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ವಕೀಲ ವೆಂಕಟೇಶ್, ಡಿ.ಅಬ್ದುಲ್ ರೆಹಮಾನ್, ಮುಖಂಡರಾದ ಬಿ.ಕೆ. ಪ್ರಕಾಶ್, ಲಾಟಿ ದಾದಾಪೀರ್,ಗಣೇಶ್, ಸಿ.ಜಾಹೇದ್, ಮೈದೂರು ರಾಮಣ್ಣ, ಟಿ.ಎಚ್.ಎಂ.ಮಂಜುನಾಥ, ಉದಯ ಶಂಕರ, ಅಂಜುಮನ್ ಕಾರ್ಯದ್ಯಕ್ಷ ಕೂಲ್ ಇರ್ಫಾನ್, ಎಸ್.ಕೆ.ಸಮೀವುಲ್ಲಾ, ನೇತ್ರಾವತಿ, ಜೀಷಾನ್, ಕವಿತಾ ಸುರೇಶ, ಮತ್ತೂರು ಬಸವರಾಜ ಇದ್ದರು.

ಕೊಪ್ಪಳದಲ್ಲಿ ಸೌಹಾರ್ದ ಸಮಾವೇಶ ನಾಳೆ

ಕೊಪ್ಪಳ: ನಗರದ ತಾಲೂಕು ಕ್ರೀಡಾಂಗಣದಲ್ಲಿ ಅ.18 ರಂದು ಪ್ರವಾದಿ ಮಹಮ್ಮದ್ ಪೈಗಂಬರ್‌ಅವರ 1500ನೇ ಜನ್ಮದಿನ ಹಾಗೂ ವಿಶ್ವಶಾಂತಿ ಸಂದೇಶ ಸಾರಲು ಬೃಹತ್ ಸೌಹಾರ್ದ ಸಮಾವೇಶ ಆಯೋಜಿಸಲಾಗಿದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದರು. ನಗರದ ಪ್ರವಾಸಿ ಮಂದಿರದಲ್ಲಿ ಗುರುವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದರು. ಇದೊಂದು ಐತಿಹಾಸಿಕ ಕಾರ್ಯಕ್ರಮ. ಅ.18ರ ಸಂಜೆ 6.30ಕ್ಕೆ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದೆ. ಕಲಬುರಗಿಯ ಖಾಜಾಬಂದೇನವಾಜ್ ದರ್ಗಾ ಗುರುಗಳು, ಶಿರಹಟ್ಟಿಕೀರ ದಿಂಗಾಲೇಶ್ವರ ಶ್ರೀಗಳು, ಕಲಬುರಗಿಯ ದೊಡ್ಡಬಸಪ್ಪ ಅಪ್ಪ ಸೇರಿ ಇತರ ಶ್ರೀಗಳು ಭಾಗಿಯಾಗುವರು. ಸಚಿವರಾದ ಎಚ್.ಕೆ.ಪಾಟೀಲ್, ಸತೀಶ ಜಾರಕಿಹೊಳಿ, ಶಿವರಾಜ ತಂಗಡಗಿ, ರಹಿಂ ಖಾನ್, ಕ್ರಿಕೇಟಿಗ ಅಜರುದ್ದಿನ್, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ, ಶಾಸಕರಾದ ಹಂಪನಗೌಡ ಬಾದರಲಿ, ರಾಘವೇಂದ್ರ ಹಿಟ್ನಾಳ, ಎಚ್.ಆರ್.ಗವಿಯಪ್ಪ, ಸಂಸದ ರಾಜಶೇಖರ ಹಿಟ್ನಾಳ, ಗಣ್ಯರಾದ ಸಂಗಣ್ಣ ಕರಡಿ, ಇಕ್ಬಾಲ್ ಅನ್ಸಾರಿ, ಶ್ರೀನಾಥ ಆಗಮಿಸುವರು.

ಹಾಸ್ಟೆಲ್ ಬಲವರ್ಧನೆಗೆ ವಿದ್ಯಾರ್ಥಿಗಳಿಂದ ಬೃಹತ್ ಜಾಥಾ

ಲಿಂಗಸೂಗೂರು: ಸಾರ್ವಜನಿಕ ಶಿಕ್ಷಣ ಉಳಿವಿಗಾಗಿ ಹಾಗೂ ಹಾಸ್ಟೆಲ್ ಬಲವರ್ಧನೆಗಾಗಿ ಆಗ್ರಹಿಸಿ ಎಸ್‌ಎಫ್ಐನ ರಾಜ್ಯ ಮಟ್ಟದ ಜಾಥಾವನ್ನು ಹಟ್ಟಿ ಪಟ್ಟಣದಲ್ಲಿ ನೂರಾರು ವಿದ್ಯಾರ್ಥಿಗಳು ಸ್ವಾಗತಿಸಿ ಬಹಿರಂಗ ಸಭೆಯನ್ನು ನಡೆಸಲಾಯಿತು.

ರಾಜ್ಯ ಉಪಾಧ್ಯಕ್ಷ ಡಾ.ದೊಡ್ಡ ಬಸವರಾಜ ಮಾತನಾಡಿ, ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ದೇಶದ ಸ್ವಾತಂತ್ರ್ಯ ಚಳುವಳಿಯ ಆಶಯಗಳ ಈಡೇರಿಕೆಗಾಗಿ ವಿದ್ಯಾರ್ಥಿಗಳನ್ನು ಅಭ್ಯಾಸ ಮತ್ತು ಹೋರಾಟ ಘೋಷಣೆಯಡಿ, ಸರ್ವರಿಗೂ ಸಮಾನ ಶಿಕ್ಷಣ ಹಾಗೂ ಉದ್ಯೋಗ ಮೂಲಭೂತ ಹಕ್ಕಾಗಲು, ದೇಶದ ಐಕ್ಯತೆ, ಸಮಗ್ರತೆ ಹಾಗೂ ಸೌಹಾರ್ದತೆಗಾಗಿ ವಿದ್ಯಾರ್ಥಿಗಳನ್ನು ಶ್ರಮಿಸುವಂತೆ ಪ್ರೇರೆಪಿಸುತ್ತಿರುವ ರಾಷ್ಟ್ರದ ಅತಿದೊಡ್ಡ ದೇಶಪ್ರೇಮಿ ವಿದ್ಯಾರ್ಥಿ ಸಂಘಟನೆಯಾಗಿದ್ದು, ಶಿಕ್ಷಣದ ವ್ಯಾಪಾರೀಕರಣ, ಕೇಂದ್ರೀಕರಣ, ಭ್ರಷ್ಟಾಚಾರ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳ ದಮನದ ವಿರುದ್ಧ ನಿರಂತರವಾಗಿ ಹೋರಾಟ ರೂಪಿಸುತ್ತಾ ಬಲಿಷ್ಠ ವಿದ್ಯಾರ್ಥಿ ಚಳುವಳಿಯನ್ನು ಎಸ್.ಎಫ್.ಐ ಮುನ್ನಡೆಸುತ್ತಿದೆ ಎಂದರು.

ರಾಜ್ಯ ಜಂಟಿ ಕಾರ್ಯದರ್ಶಿ ಗಣೇಶ ರಾಥೋಡ್ ಮಾತನಾಡಿ, ರಾಜ್ಯದಲ್ಲಿ ಬಡ ದಲಿತ, ಕಾರ್ಮಿಕ, ರೈತರ ಮಕ್ಕಳು ಏಳು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಸ್ಟೆಲ್ಗಳಿಗೆ ಅರ್ಜಿಸಲ್ಲಿಸುವ ಮೂಲಕ ಅವಲಂಭಿಸಿದ್ದಾರೆ. ಇಂದು ಕೆಲವು ಕಡೆ ಹೊಸ ಕಟ್ಟಡಗಳಿದ್ದರೂ ಶೌಚಾಲಯ ಸ್ವಚ್ಚತೆ, ಗೋಡೆಗಳ ದುರಸ್ಥಿ, ಗ್ರಂಥಾಲಯ ಇಲ್ಲದೇ ಇರುವುದು, ಒಂದೇ ನಳದಿಂದ ನೀರು ಸರಬರಾಜು, ಅಡುಗೆ ಸ್ವಚ್ಚತೆ ಇಲ್ಲದಿರುವುದು, ವಿದ್ಯಾರ್ಥಿಗಳ ಕೊಠಡಿ, ಸೋಲರ್ ,ಫ್ಯಾನ್, ವಿದ್ಯುತ್ ಲೈಟ್, ಕಾಟ್ ಬೆಡ್ ಹೀಗೆ ನಿರ್ವಾಹಣೆ ಇಲ್ಲದಿರುವುದು ಹಾಗೂ ನೂರಾರು ಹಾಸ್ಟೆಲ್ ಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಖೇದಕರ ಸಂಗತಿಯಾಗಿದೆ. ರಾಜ್ಯದಲ್ಲಿರುವ ಹಾಸ್ಟೆಲ್ಗಳ ಸಂಖ್ಯೆ ಒಟ್ಟು 6104 ಹಾಗೂ ವೃತ್ತಿಪರ ಶಿಕ್ಷಣದ ಹಾಸ್ಟೆಲ್ಗಳ ಸಂಖ್ಯೆ 1200 ಹಾಸ್ಟೆಲ್ಗಳಿದ್ದು, ಒಟ್ಟು 8,804 ಹಾಸ್ಟೆಲ್ಗಳಿವೆ. ರಾಜ್ಯದ ಹಾಸ್ಟೆಲ್ಗಳಲ್ಲಿರುವ ಪ್ರತಿ ವಿದ್ಯಾರ್ಥಿಗೆ 1750 ರು. ಮತ್ತು 1850 ರೂಗಳ ಆಹಾರ ಭತ್ಯೆಯನ್ನು ನೀಡಲಾಗುತ್ತಿದೆ. ಅಂದರೆ ಒಂದು ದಿನದ ಆಹಾರಕ್ಕೆ ಕೇವಲ 60 ರೂಗಳು. ಮಾತ್ರ ಆದರೆ ಜೈಲಲ್ಲಿರುವ ಖೈದಿಗಳಿಗೆ 150 ರು. ಆಹಾರ ಭತ್ಯೆ ನೀಡಲಾ ಗುತ್ತದೆ. ಇಂತಹ ತಾರತಮ್ಯವನ್ನು ಖಂಡಿಸತ್ತಾ ಹಾಸ್ಟೆಲ್ ವಿದ್ಯಾರ್ಥಿಗಳಿಗೆ 4500 ರೂಗಳಿಗೆ ಆಹಾರ ಭತ್ಯೆಯನ್ನು ಹೆಚ್ಚಿಸಬೇಕೆಂದು ಎಸ್ ಎಫ್ ಐ ಒತ್ತಾಯಿಸುತ್ತದೆ ಎಂದು ಗ್ಯಾನೇಶ್ ಕಡಗದ ರಾಜ್ಯ ಉಪಾಧ್ಯಕ್ಷರು ಮಾತಾಡಿದರು. ಎಸ್‌ಎಫ್ಐ ಜಿಲ್ಲಾಧ್ಯಕ್ಷ ರಮೇಶ್ ವೀರಾಪೂರು ಮಾತಾನಾಡಿದರು. ತಾಲೂಕು ಅಧ್ಯಕ್ಷರಾದ ಗೋವಿಂದ, ಜನವಾದಿ ಮಹಿಳಾ ಸಂಘಟನೆಯ ತಾಲೂಕು ಉಪಾಧ್ಯಕ್ಷರಾದ ಶಾಂತಕುಮಾರಿ, ಶಹೀರಾ ಬಾನು, ರಜಿಯಾ ಬೇಗಂ, ವನಜಾಕ್ಷಿ, ಸಿಐಟಿಯು ಮುಖಂಡರಾದ, ನಿಂಗಪ್ಪ ವೀರಾಪುರ, ಆಜೀಬಾಬು,ಡಿವೈಎಫ್ಐ ಮುಖಂ ಡರಾದ ಸಂಸುವುದ್ದಿನ್, ಫಯಾಜ್, ರಿಯಾಜ್, ಗೋಪಾಲ ಸೇರಿದಂತೆ ಸಾಮೂಹಿಕ ಸಂಘಟನೆಗಳ ಮುಖಂಡರು ಹಾಗೂ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಎಸ್‌ಎಫ್ಐನ ರಾಜ್ಯ ಮಟ್ಟದ ಜಾಥಾವನ್ನು ಹಟ್ಟಿ ಪಟ್ಟಣದಲ್ಲಿ ನೂರಾರು ವಿದ್ಯಾರ್ಥಿಗಳು ಸ್ವಾಗತಿಸಿ ಬಹಿರಂಗ ಸಭೆಯನ್ನು ನಡೆಸಲಾಯಿತು.

ಬಾಲಕಿ ಅತ್ಯಾಚಾರ: ಆರೋಪಿಗಳಿಗೆ ಗಲ್ಲು ಶಿಕ್ಷೆ ನೀಡಲು ಒತ್ತಾಯ

ಲಿಂಗಸೂಗೂರು: ಮುದ್ದೇಬಿಹಾಳ ತಾಲೂಕಿನ ಬನೋಸಿ ಗ್ರಾಮದ (12) ಅಪ್ರಾಪ್ತ ಬಾಲಕಿಬಸಮ್ಮ ಚಲುವಾದಿ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಕೊಲೆ ಮಾಡಿದ ಆರೋಪಿಗಳನ್ನು ಬಂಧಿಸಿ ಗಲ್ಲು ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ನಾಗವಾರ ಬಣ) ಕಾರ್ಯಕರ್ತರು ಮುಖ್ಯಮಂತ್ರಿಗೆ ಬರೆದ ಪತ್ರವನ್ನು ಸಹಾಯಕ ಆಯುಕ್ತರಿಗೆ ಸಲ್ಲಿಸಿದರು. ಅ.13 ರಂದು ವಿಜಯಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬನೋಸಿ ಗ್ರಾಮದ ಮಾನಪ್ಪ ಚಲುವಾದಿಯವರ ಮಗಳು ಬಸಮ್ಮ ಎಂಬ (12) ಅಪ್ರಾಪ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಕೊಲೆ ಮಾಡಿರುವ ಬನೋಸಿ ಗ್ರಾಮದ ನಾಗನಗೌಡ, ದ್ಯಾಮಣ್ಣ ಹೊನ್ನಳ್ಳಿ ಹಾಗೂ ಇನ್ನಿತರರು ಸುಮಾರು ಆರು ಗಂಟೆಗಳ ಕಾಲ ಬಸಮ್ಮಳ ಮೇಲೆ ಅತ್ಯಾಚಾರ ಮಾಡಿ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದು, ಅತ್ಯಂತ ಘೋರ ಕೃತ್ಯವಾಗಿದೆ. ಸ್ವಾತಂತ್ರ ಬಂದು 78 ವರ್ಷಗಳು ಗತಿಸಿದರೂ ಕೂಡಾ ಭಾರತ ದೇಶ ಹಾಗೂ ನಮ್ಮ ರಾಜ್ಯದಲ್ಲಿ ಮರಣಾಂತಿಕ ಹಲ್ಲೆ, ಕೊಲೆ ಪ್ರಕರಣಗಳು ಮತ್ತು ಮಹಿಳೆಯರ ಮೇಲಿನ ಅತ್ಯಾಚಾರಗಳು ನಿರಂತರವಾಗಿ ನಡೆಯುತ್ತಿವೆ. ಇದು ನಾಚಿಕೆಗೇಡಿತ ಸಂಗತಿಯಾಗಿದೆ. ಇಂತಹ ನೀಚ ಕೃತ್ಯ ಎಸಗಿದವರನ್ನು ಪೋಲೀಸರು ಕೂಡಲೇ ಬಂಧಿಸಿ ಅವರನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತವಾದ ಕ್ರಮ ಕೈಗೊಂಡು ಬಸಮ್ಮ ಚಲುವಾದಿಯ ಕುಟುಂಬಕ್ಕೆ ಸರಕಾರ 25 ಲಕ್ಷ ಪರಿಹಾರ ಧನವನ್ನು ನೀಡಬೇಕು, ಅವರ ಕುಟುಂಬಕ್ಕೆ ಸುಮಾರು ನಾಲ್ಕು ಎಕರೆ ಸರಕಾರಿ ಜಮೀನು ನೀಡಬೇಕು. ಕುಟುಂಬಕ್ಕೆ ಸರಕಾರಿ ನೌಕರಿಯನ್ನು ಒದಗಿಸಿ ನ್ಯಾಯ ಒದಗಿಸುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಸಂಚಾಲಕ ಪ್ರಭುಲಿಂಗ ಮೇಗಳಮನಿ, ಪರಶುರಾಮ ಗುಡಿಜಾವೂರ, ಮಾಳಪ್ಪಗೌಡ, ಅಕ್ರಮಪಾಶಾ, ದೇವೇಂದ್ರಪ್ಪ ಹುನಕುಂಟಿ, ಖಾಸಿಂಸಾಬ, ಹನುಮಂತ ಹೇಮನಾಳ, ದೇವಪ್ಪ ಗೋಸ್ಲೆ ಕರಡಕಲ್ಲ, ದುರಗಪ್ಪ ಸರ್ಜಾಪೂರ, ಪರಮಾನಂದ ಹಾದಿಮನಿ, ಮಲ್ಲಿಕಾರ್ಜುನ ಚಿತ್ತಾಪೂರ, ಷಣ್ಮುಖರಡ್ಡಿ ಇದ್ದರು.

ಅಮೆರಿಕ, ರಷ್ಯಾ ನಂತರದ ಬಲಿಷ್ಠ ವಾಯುಪಡೆ | 4ನೇ ಸ್ಥಾನಕ್ಕೆ ಕುಸಿದ ಚೀನಾದ ವಾಯುಸೇನೆ

ವೈಮಾನಿಕ ಶಕ್ತಿಯಲ್ಲಿ ಚೀನಾ ಹಿಂದಿಕ್ಕಿದ ಭಾರತಕ್ಕೆ 3ನೇ ಸ್ಥಾನ

ದೆಹಲಿ: ಜಾಗತಿಕ ಸೇನಾಪಡೆಗಳ ಸಾಮರ್ಥ್ಯ ವಿಚಾರದಲ್ಲಿ ಭಾರತ ಈಗ ಚೀನಾವನ್ನು ಹಿಂದಿಕ್ಕಿ ಜಗತ್ತಿನ 3ನೇ ಅತಿ ಬಲಿಷ್ಠ ಸೇನೆಯಾಗಿ ಹೊರಹೊಮ್ಮಿದೆ. ಇತ್ತೀಚೆಗಷ್ಟೇ ಪಾಕಿಸ್ತಾನವನ್ನು 'ಆಪರೇಷನ್ ಸಿಂದೂರ'ದಲ್ಲಿ ಬಗ್ಗುಬಡಿದ ಭಾರತದ ಹೆಮ್ಮೆಯ ಕೀರಿಟಕ್ಕೆ ಈಗ ಮತ್ತೊಂದು ಗರಿ ಸೇರಿಕೊಂಡಿದೆ.

'ವರ್ಲ್ಡ್ ಡೈರೆಕ್ಟರಿ ಆಫ್ ಮಾಡರ್ನ್ ಮಿಲಿಟರಿ ಏರ್‌ಕ್ರಾಫ್ಟ್' ಇತ್ತೀಚೆಗೆ ಪ್ರಕಟಿಸಿದ ಶ್ರೇಯಾಂಕ ಪಟ್ಟಿಯಲ್ಲಿ ಭಾರತ 3ನೇ ಸ್ಥಾನಕ್ಕೇರಿದೆ. ಚೀನಾ ಸೇನಾಪಡೆ ಹಿಂದೆ ಉಳಿದ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

ಶ್ರೇಯಾಂಕ ಪಟ್ಟಿ ಪ್ರಕಾರ ಅಮೆರಿಕದ ವಾಯುಪಡೆ ಅಗ್ರಸ್ಥಾನದಲ್ಲಿದೆ. 2ನೇ ಸ್ಥಾನದಲ್ಲಿ ರಷ್ಯಾ ಸೈನ್ಯವಿದೆ. ದೀರ್ಘಕಾಲದಿಂದ 3ನೇ ಪ್ರಮುಖ ವಾಯುಸೇನಾ ಶಕ್ತಿ ಎಂದು ಪರಿಗಣಿಸಲಾಗಿದ್ದ ಚೀನಾ ಈಗ 4ನೇ ಸ್ಥಾನಕ್ಕೆ ಕುಸಿದಿದೆ.ಡಿ ಡಿ

ಫ್ರಾನ್ಸ್‌ನ ಡಸಾಲ್ಟ್ ಕಂಪನಿಯ 'ರಫೇಲ್' ಯುದ್ಧ ವಿಮಾನಗಳು, ದೇಶೀ ನಿರ್ಮಿತ ತೇಜಸ್ ಸಮರ ವಿಮಾನಗಳ ಸೇರ್ಪಡೆ ಬಳಿಕ ಭಾರತೀಯ ವಾಯುಪಡೆಯ ಸ್ವರೂಪವೇ ಬದಲಾಗಿದೆ. ಜತೆಗೆ ಇತ್ತೀಚೆಗಷ್ಟೇ ಪಾಕಿಸ್ತಾನವನ್ನು 'ಆಪರೇಷನ್ ಸಿಂದೂರ'ದಲ್ಲಿ ಬಗ್ಗುಬಡಿದ ಬಳಿಕ ವಾಯುಪಡೆಯ ಸಾಮರ್ಥ್ಯವೂ ಜಗತ್ತಿನೆದುರು ಅನಾವರಣಗೊಂಡಿದೆ. ಭಾರತದ ಸಮರ ವಿಮಾನಗಳ ಕಾರ್ಯಾಚರಣೆಯ ಪರಿಣಾಮಕಾರಿ ದಾಳಿಯನ್ನು ಶತ್ರುಗಳೂ ಅರ್ಥ ಮಾಡಿಕೊಂಡಿದ್ದಾರೆ.

'ವರ್ಲ್ಡ್ ಡೈರೆಕ್ಟರಿ ಆಫ್ ಮಾಡರ್ನ್ ಮಿಲಿಟರಿ ಏರ್‌ಕ್ರಾಫ್ಟ್' ಶ್ರೇಯಾಂಕಗಳು 103 ದೇಶಗಳು ಮತ್ತು ಸೈನ್ಯ, ನೌಕಾಪಡೆ ಮತ್ತು ಸಮುದ್ರ ವಾಯುಯಾನ ಶಾಖೆಗಳು ಸೇರಿದಂತೆ 129 ವಾಯುಪಡೆ ವಿಭಾಗಗಳನ್ನು ಒಳಗೊಂಡಿದೆ. ಸಮೀಕ್ಷೆಯಲ್ಲಿ ವಿಶ್ವಾದ್ಯಂತದ ಒಟ್ಟು 48,082 ಸಮರ ವಿಮಾನಗಳ ಶಕ್ತಿ ಸಾಮರ್ಥ್ಯವನ್ನು ಕಂಡುಕೊಂಡೇ ಶ್ರೇಯಾಂಕವನ್ನು ನಿಗದಿಪಡಿಸಲಾಗಿದೆ.

1 ಭಾರತೀಯ ವಾಯುಪಡೆ, ನೌಕಾಪಡೆಯಲ್ಲಿರುವ ಫ್ರಾನ್ಸ್ ನಿರ್ಮಿತ ರಫೇಲ್ ಯುದ್ಧ ವಿಮಾನಗಳು

2 ಭಾರತದ ಎಚ್‌ಎಎಲ್‌ನಲ್ಲೇ ತಯಾರಾದ ತೇಜಸ್ ಯುದ್ಧ ವಿಮಾನಗಳು

ಕೆಎಂಎಫ್‌ನಿಂದ ಮಧುಮೇಹಿಗಳಿಗೆ ದೀಪಾವಳಿ ಉಡುಗೊರೆ

ನಂದಿನಿ ಶುಗರ್ ಫ್ರೀ ಸಿಹಿತಿಂಡಿ ಬಿಡುಗಡೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೀಪಾವಳಿ ಹಬ್ಬದ ಹಿನ್ನೆಲೆ ಕೆಎಂಎಫ್ ನಂದಿನಿ ಬ್ರ್ಯಾಂಡ್‌ನಲ್ಲಿ ಮಧುಮೇಹಿಗಳಿಗಾಗಿ ಸಕ್ಕರೆ ರಹಿತ ಸಿಹಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ. ಶಿವಸ್ವಾಮಿ ಮಾತನಾಡಿ, ಮಧುಮೇಹಿಗಳ ಆರೋಗ್ಯ ಕಾಳಜಿ ಹಾಗೂ ಹೆಚ್ಚುತ್ತಿರುವ ಬೇಡಿಕೆಯ ಹಿನ್ನೆಲೆ ಈ ಉತ್ಪನ್ನಗಳನ್ನು ಪರಿಚಯಿಸಲಾಗಿದ್ದು, ನಂದಿನಿ ಖೋವಾ ಗುಲಾಬ್ ಜಾಮೂನ್, ಶುದ್ಧ ಪೇಡಾ, ಬೆಲ್ಲದ ಬರ್ಫಿ ಸೇರಿದಂತೆ ಶುಗರ್ ಫ್ರೀ ಸಿಹಿ ಲಭ್ಯವಿದೆ. ಮಧುಮೇಹಿಗಳಿಗೆಂದೇ ನಂದಿನಿ ಬ್ರ್ಯಾಂಡ್‌ನಲ್ಲಿ ಸಕ್ಕರೆ ರಹಿತ ಸಿಹಿತಿಂಡಿಗಳನ್ನು ಬಿಡುಗಡೆ ಮಾಡಲಾಗಿದ್ದು, ಮಾರುಕಟ್ಟೆಗೆ ಪರಿಚಯಿಸಲಾಗುತ್ತಿದೆ. ಆರೋಗ್ಯ ಕಾಳಜಿಯ ಹಬ್ಬದ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆಗೆ ಪೂರಕವಾಗಿ ನಂದಿನಿ ಶುಗರ್ ಫ್ರೀ ಸಿಹಿತಿಂಡಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಆರೋಗ್ಯದ ಬಗ್ಗೆ ಜನ ಹೆಚ್ಚಿನ ಕಾಳಜಿ ವಹಿಸಬೇಕಾದ ಈ ಕಾಲದಲ್ಲಿ, ಗ್ರಾಹಕರು ಸಕ್ಕರೆ ರಹಿತ ಸಿಹಿತಿಂಡಿಗಳನ್ನು ಹೆಚ್ಚು ಮೆಚ್ಚುತ್ತಿದ್ದಾರೆ. ಸಕ್ಕರೆ ರಹಿತ ನಂದಿನಿ ಸಿಹಿ ತಿಂಡಿಗಳು ಮಧುಮೇಹಿಗಳಿಗೆ ಪ್ರಯೋಜನಕಾರಿಯಾಗಿರುವುದರಿಂದ ನಾವು ಈ ಉತ್ಪನ್ನಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ಸಕ್ಕರೆ ಬಳಕೆ ಮಾಡದೆಯೇ ಆರೋಗ್ಯಕರ ಉತ್ಪನ್ನಗಳನ್ನು ಪರಿಚಯಿಸಲಾಗಿದೆ. ಈ ಉತ್ಪನ್ನಗಳು ಶುದ್ಧ, ರುಚಿಕರ ಮತ್ತು ಕೈಗೆಟುಕುವ ಬೆಲೆಯಲ್ಲಿದ್ದು ಗುಣಮಟ್ಟದ ವಿಚಾರದಲ್ಲಿ ನಂದಿನಿಯ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳಿದ್ದಾರೆ.

ಶುಗರ್ ಫ್ರೀ ಸಿಹಿ ಉತ್ಪನ್ನಗಳ ಬೆಲೆ: ಹಬ್ಬದ ಕೊಡುಗೆಯ ಭಾಗವಾಗಿ, ಸಕ್ಕರೆ ರಹಿತ ನಂದಿನಿ ಖೋವಾ ಗುಲಾಬ್ ಜಾಮೂನ್ 500 ಗ್ರಾಂ ಪ್ಯಾಕ್‌ಗೆ 220 ರು., ಶುದ್ಧ ನಂದಿನಿ ಹಳೆ ಪೇಡಾ (ಸಕ್ಕರೆ ರಹಿತ) 200 ಗ್ರಾಂಗೆ 170 ರು. ಮತ್ತು ಬೆಲ್ಲದಿಂದ ತಯಾರಿಸಿದ ನಂದಿನಿ ಬೆಲ್ಲ ಓಟ್ಸ್ ಮತ್ತು ಬೀಜಗಳ ಬರ್ಫಿ 200 ಗ್ರಾಂಗೆ 170 ರು. ಬೆಲೆಗೆ ಲಭ್ಯವಿದೆ ಎಂದು ಕೆಎಂಎಫ್ ತಿಳಿಸಿದೆ.

> ದಸರಾ ಹಬ್ಬದ ಸಮಯದಲ್ಲಿ, ನಂದಿನಿ ಸಿಹಿ ಉತ್ಪನ್ನಗಳ ಮಾರಾಟವು 750 ಮೆಟ್ರಿಕ್ ಟನ್‌ಗಳನ್ನು ದಾಟಿದೆ. ಇದು ಬ್ರ್ಯಾಂಡ್‌ನ ಶುದ್ಧತೆ ಮತ್ತು ಗುಣಮಟ್ಟದ ಬಗ್ಗೆ ಗ್ರಾಹಕರ ನಿರಂತರ ನಂಬಿಕೆಗೆ ಸಾಕ್ಷಿಯಾಗಿದೆ
>
> -ಬಿ.ಶಿವಸ್ವಾಮಿ, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ

ಜಿಎಸ್‌ಟಿ ಸುಧಾರಣೆ ನಂತರ ಬೆಲೆ ಪರಿಷ್ಕರಿಸಿದ್ದ ಕೆಎಂಎಫ್

ಇತ್ತೀಚೆಗೆ ಜಿಎಸ್‌ಟಿ ಸುಧಾರಣೆಗಳು ಅನುಷ್ಠಾನಕ್ಕೆ ಬಂದ ನಂತರ ಕೆಎಂಎಫ್ ನಂದಿನಿ ಹಾಲಿನ ಉತ್ಪನ್ನಗಳ ಬೆಲೆ ಪಟ್ಟಿಯನ್ನು ಪರಿಷ್ಕರಿಸಿದೆ. ತುಪ್ಪ, ಪನ್ನೀರ್, ಚೀಸ್, ಐಸ್ ಕ್ರೀಮ್‌ಗಳು, ಚಾಕೊಲೇಟ್‌ಗಳು ಮತ್ತು ಇತರ ಉತ್ಪನ್ನಗಳನ್ನು ಒಳಗೊಂಡಂತೆ ಒಟ್ಟು 21 ನಂದಿನಿ ಹಾಲಿನ ಉತ್ಪನ್ನಗಳ ಬೆಲೆಗಳನ್ನು ಪರಿಷ್ಕರಿಸಲಾಗಿದೆ. ದರ ಪರಿಷ್ಕರಣೆಯ ನಂತರ, ಈ ಹಿಂದೆ 650 ರು ಇದ್ದ ತುಪ್ಪದ (1000 ಮಿಲಿ) ದರ ಈಗ 610 ರು. ಆಗಿದೆ. 500 ಗ್ರಾಂ ತೂಕದ ಉಪ್ಪುರಹಿತ ಬೆಣ್ಣೆಯ ಬೆಲೆ ಈಗ 19 ಕಡಿಮೆಯಾಗಿ 286 ರು. ಆಗಿದೆ. 1 ಕೆಜಿ ಸಂಸ್ಕರಿಸಿದ ಚೀಸ್ ಬ್ಲಾಕ್ ಬೆಲೆ 530 ರು.ನಿಂದ 497 ರು.ಗೆ ಇಳಿಕೆಯಾಗಿದೆ.

ನಕ್ಸಲ್ ದಮನ ಕಾರ್ಯ ಯಶಸ್ವಿ: 3 ಜಿಲ್ಲೆಯಲ್ಲಷ್ಟೇ ನಕ್ಸಲ್ ಸಮಸ್ಯೆ

ನಕ್ಸಲ್ ಮುಕ್ತ ಭಾರತ: ಮೋದಿ

ದೆಹಲಿ: ದೇಶದಲ್ಲಿ ಈಗ ಮೂರು ಜಿಲ್ಲೆಗಳಲ್ಲಿ ಮಾತ್ರವೇ ನಕ್ಸಲ್ ಚಟುವಟಿಕೆ ನಡೆದಿದೆ. ಉಳಿದೆಡೆ ಬಹುತೇಕ ಸ್ತಬ್ಧವಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ನಡೆಯುತ್ತಿರುವ ನಕ್ಸಲ್ ನಿಗ್ರಹ ಕಾರ್ಯಾಚರಣೆ ಕುರಿತು ಮಾಹಿತಿ ನೀಡಿದ ಗೃಹ ಸಚಿವಾಲಯ, ಪ್ರಧಾನಿ ನರೇಂದ್ರ ಮೋದಿ ನೇತೃತ್ವ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾರ್ಗದರ್ಶನದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಯುತ್ತಿದ್ದು, ಛತ್ತೀಸ್‌ಗಢ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿನ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆಯನ್ನು ಆರರಿಂದ ಈಗ ಮೂರಕ್ಕೆ ಇಳಿಸಲಾಗಿದೆ. ಛತ್ತೀಸ್‌ಗಢದ ಬಿಜಾಪುರ, ಸುಕ್ಮಾ ಮತ್ತು ಮತ್ತು ಮಹಾರಾಷ್ಟ್ರದ ನಾರಾಯಣಪುರ ಜಿಲ್ಲೆಯಲ್ಲಷ್ಟೇ ನಕ್ಸಲ್ ಹಾವಳಿ ಇದೆ ಎಂದು ವಿವರಿಸಿದೆ.

'ನಕ್ಸಲ್ ಮುಕ್ತ ಭಾರತ ಸೃಷ್ಟಿ' ಪ್ರಧಾನಿ ನರೇಂದ್ರ ಮೋದಿ ಸರಕಾರದ ಗುರಿಯಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಂಟಿಯಾಗಿ ಕೈಗೊಳ್ಳುತ್ತಿರುವ ನಕ್ಸಲ್ ನಿಗ್ರಹ ಅಭಿಯಾನ ಯಶಸ್ಸು ಕಾಣುತ್ತಿದೆ. ನಕ್ಸಲ್ ಸಮಸ್ಯೆ ನಿರ್ಮೂಲನೆಗೆ ಕೇಂದ್ರ ಸರಕಾರ ಹಲವು ಯೋಜನೆಗಳು ಮತ್ತು ಕಠಿಣ ನೀತಿಗಳನ್ನು ಜಾರಿಗೆ ತಂದಿದೆ. ಗುಪ್ತಚರ ಇಲಾಖೆ ಮಾಹಿತಿ ಆಧರಿಸಿ ನಕ್ಸಲ್ ನಿಗ್ರಹ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತಿದೆ. ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ ಮುಂದಿನ ಮಾರ್ಚ್ ವೇಳೆಗೆ ಶೂನ್ಯಕ್ಕಿಳಿಸುವ ಗುರಿ ಇದೆ ಎಂದು ಗೃಹ ಸಚಿವಾಲಯ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ದೇಶದ 126 ಜಿಲ್ಲೆಗಳಲ್ಲಿನ 18 ಸಾವಿರ ಚದರ ಕಿಮೀಗಳಷ್ಟು ಪ್ರದೇಶದಲ್ಲಿ ನಕಲ್ಸರದ್ದೇ ಪರ್ಯಾಯ ಸರಕಾರ ನಡೆಯುತ್ತಿತ್ತು. ನಕ್ಸಲ್ ಕಮಾಂಡರ್‌ಗಳ ನೇತೃತ್ವದ ಜನತಾ ನ್ಯಾಯಾಲಯಗಳು ಆ ಭಾಗದ ನಾಗರಿಕ ವ್ಯಾಜ್ಯದಲ್ಲಿ ಮೂಗು ತೂರಿಸಿ ತೀರ್ಪು ನೀಡುತ್ತಿದ್ದವು, ದಂಡನೆ ನೀಡುತ್ತಿದ್ದವು. 2004-14ರ ನಡುವಿನ ದಶಕದಲ್ಲಿ ದೇಶದ ವಿವಿಧೆಡೆ ಒಟ್ಟು 16,400 ನಕ್ಸಲ್ ಸಂಬಂಧಿ ಹಿಂಸಾಚಾರ ನಡೆದಿವೆ. ವರ್ಷ 2010 ಒಂದರಲ್ಲೇ ನಕ್ಸಲರಿಂದ 2213 ಹಿಂಸಾಚಾರ ಕೃತ್ಯಗಳಾಗಿವೆ. ನಕ್ಸಲರ ಗುಂಡೇಟಿನಿಂದ 1851 ಪೊಲೀಸರು, ಅರೆಸೇನಾಪಡೆಗಳ ಯೋಧರು ಹುತಾತ್ಮರಾಗಿದ್ದಾರೆ. 4766 ನಾಗರಿಕರು ಸಾವಿಗೀಡಾಗಿದ್ದಾರೆ. ಇದೆಲ್ಲದರಿಂದಾಗಿ ನಕ್ಸಲ್ ಪೀಡಿತ ಭಾಗಗಳಲ್ಲಿ ಸರಕಾರ ಅಭಿವೃದ್ಧಿ ಕಾರ್ಯಗಳನ್ನೇ ಕೈಗೊಳ್ಳಲು ಅಸಾಧ್ಯವಾಗಿತ್ತು. ನಾಗರಿಕರಿಗೆ ಅಗತ್ಯವಾದ ಸೇವೆಗಳನ್ನು ಒದಗಿಸು ವುದಕ್ಕೆ, ಸೌಲಭ್ಯಗಳನ್ನು ತಲುಪಿಸುವುದಕ್ಕೆ ಕಷ್ಟವಾಗಿತ್ತು.

ನಕ್ಸಲರ ಸಾವು, ಬಂಧನ, ಶರಣಾಗತಿ

ಕಳೆದೆರಡು ದಿನಗಳಲ್ಲಿಯೇ ಛತ್ತೀಸ್‌ಗಢ ಮತ್ತು ಮಹಾರಾಷ್ಟ್ರದಲ್ಲಿ ಮಾವೋವಾದಿ ಸಂಘಟನೆಗಳ ಒಟ್ಟು 88 ನಕ್ಸಲರು ಪೊಲೀಸರಿಗೆ ಶರಣಾಗಿದ್ದಾರೆ. ಅದಕ್ಕೂ ಮೊದಲು ಸಿಪಿಐ ಪ್ರಧಾನ ಕಾರ್ಯದರ್ಶಿ ಮತ್ತು 8 ಪೊಲಿಟ್ ಬ್ಯೂರೋ ಹಾಗೂ ಕೇಂದ್ರ ಸಮಿತಿ ಸದಸ್ಯರು ಸೇರಿದಂತೆ 312 ನಕ್ಸಲರು ವಿವಿಧೆಡೆ ನಡೆದ ಕಾರ್ಯಾಚರಣೆಗಳಲ್ಲಿ ಹತರಾಗಿದ್ದಾರೆ. ಒಟ್ಟು 836 ನಕ್ಸಲರನ್ನು ಈವರೆಗೆ ಬಂಧಿಸಲಾಗಿದೆ. ಅಲ್ಲದೆ ನಕ್ಸಲ್ ನಿಗ್ರಹ ಅಭಿಯಾನ ಶುರುವಾದಾಗಿನಿಂದ ಈವರೆಗೆ 1,639 ನಕ್ಸಲರು ಪೊಲೀಸರಿಗೆ ಶರಣಾಗಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯ ಅಂಕಿ ಅಂಶ ನೀಡಿದೆ.

ನಕ್ಸಲ್ ಹಾವಳಿಯ ತೀವ್ರತೆ: 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟದ ಸರಕಾರ ಅಧಿಕಾರಕ್ಕೆ ಬರುವುದಕ್ಕೂ ಮುನ್ನ ದೇಶದಲ್ಲಿದ್ದ ಬಹು ದೊಡ್ಡ ಸಮಸ್ಯೆಗಳಲ್ಲಿ ನಕ್ಸಲ್ ಚಟುವಟಿಕೆಯೂ ಒಂದಾಗಿತ್ತು. ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಛತ್ತೀಸ್‌ಗಢ, ಬಿಹಾರ ಮತ್ತು ಪಶ್ಚಿಮ ಬಂಗಾಳ ಹಾಗೂ ಈಶಾನ್ಯ ಭಾರತದ ಕೆಲವು ರಾಜ್ಯಗಳಲ್ಲಿ ನಕ್ಸಲಿಸಂ ತೀವ್ರವಾಗಿತ್ತು.

ದೀಪಾವಳಿಗೆ ರೈಲಿನಲ್ಲಿ ಪಟಾಕಿಗಳನ್ನು ಕೊಂಡೊಯ್ದರೆ ಕಾನೂನಿನ ಪ್ರಕಾರ ಶಿಕ್ಷೆ

ಸಾರ್ವಜನಿಕ ಸಾರಿಗೆಗಳಲ್ಲಿ ಪಟಾಕಿ ಸಾಗಣೆ ನಿಷೇಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೀಪಾವಳಿ ಹಬ್ಬದ ಹಿನ್ನೆಲೆ ಊರುಗಳಿಗೆ ತೆರಳುವವರು ರೈಲಿನಲ್ಲಿ ಪಟಾಕಿಗಳನ್ನು ಕೊಂಡೊಯ್ದರೆ ಕಾನೂನಿನ ಪ್ರಕಾರ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ರೈಲ್ವೆ ಮೂಲಗಳು ತಿಳಿಸಿದೆ.

ಇದು ಕೇವಲ ರೈಲುಗಳಿಗೆ ಮಾತ್ರವಲ್ಲದೇ ರಾಜ್ಯ ಸಾರ್ವಜನಿಕ ಸಾರಿಗೆ ಪ್ರಯಾಣಿಕರಿಗೂ ಅನ್ವಯವಾಗುತ್ತಿದ್ದು, ಈಗಾಗಲೇ ಪ್ರಯಾಣಿಕರು ಸಂಚರಿಸುವಾಗ ಪಟಾಕಿ ಅಥವಾ ಇನ್ನ್ಯಾವುದೇ ಮಾದರಿಯ ಸ್ಫೋಟಗೊಳ್ಳುವಂತಹ ವಸ್ತುಗಳನ್ನು ಸಾಗಾಟ ಮಾಡಿದರೆ ರೈಲ್ವೆ ಇಲಾಖೆ, ರಾಜ್ಯ ಸಾರಿಗೆ ಇಲಾಖೆ ನಿಷೇಧಿಸಿವೆ. ನಿಯಮ ಉಲ್ಲಂಘಿಸಿದಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಈಗಾಗಲೇ ತಿಳಿಸಿವೆ. ಸದ್ಯ ಈ ಬಗ್ಗೆ ರೈಲ್ವೆ ಇಲಾಖೆಯು ಒಂದು ವಾರದಿಂದಲೂ ಜಾಗೃತಿ ಮೂಡಿಸುತ್ತಿದೆ. ಒಂದು ವೇಳೆ ರೈಲಿನಲ್ಲಿ ಪಟಾಕಿ ಸಾಗಣೆ ಕಂಡು ಬಂದರೆ ಏನು ಶಿಕ್ಷೆ, ದಂಡ ವಿಧಿಸಲಾಗುವುದು ಎಂದು ತಿಳಿಸಿದೆ.

ನಾಗರಿಕರ ಸುರಕ್ಷತೆ, ಜೀವ ರಕ್ಷಣೆಗೆ ಆದ್ಯತೆ:

ದೀಪಾವಳಿ ಪ್ರಯುಕ್ತ ಬೆಂಗಳೂರಿನಿಂದ ವಿವಿಧ ಮಾರ್ಗಗಳಲ್ಲಿ ಮತ್ತು ಅಂತಾರಾಜ್ಯಗಳಿಗೆ ವಿಶೇಷ ರೈಲುಗಳ ವ್ಯವಸ್ಥೆ ಮಾಡಲಾಗಿದೆ. ಪ್ರಯಾಣಿಕರು ರೈಲಿನಲ್ಲಿ ಪ್ರಯಾಣಿಸುವಾಗ ಪಟಾಕಿ ಅಥವಾ ಸ್ಫೋಟಕ ವಸ್ತುಗಳನ್ನು ತೆಗೆದುಕೊಂಡು ಹೋಗುವುದನ್ನು ತಡೆಯಬೇಕು ಎಂದು ರೈಲ್ವೆ ಇಲಾಖೆ ಒತ್ತಾಯಿಸಿದ್ದು, ರೈಲ್ವೆ ಸುರಕ್ಷತಾ ನಿಯಮಗಳ ಅಡಿಯಲ್ಲಿ ಅಂತಹ ವಸ್ತುಗಳನ್ನು ತೆಗೆದುಕೊಂಡು ಹೋಗುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ನಿಯಮ ಉಲ್ಲಂಘಿಸಿದ ಜೀವಗಳಿಗೆ ಅಪಾಯ ಉಂಟಾಗುವ ಸಾಧ್ಯತೆ ಇರುತ್ತದೆ ಎನ್ನುವ ಕಾರಣಗಳಿಂದ ಈ ಕ್ರಮಕ್ಕೆ ಮುಂದಾಗಿದೆ.

ಒಂದು ವೇಳೆ ರೈಲಿನಲ್ಲಿ ಪಟಾಕಿ ತೆಗೆದುಕೊಂಡು ಹೋದರೆ ಅಪರಾಧವಾಗಿ ಪರಿಗಣಿಸಲಾಗುತ್ತದೆ. ಅಂತಹ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಅವರ ವಿರುದ್ಧ ಶಿಕ್ಷೆ ಮತ್ತು ದಂಡ ವಿಧಿಸುತ್ತದೆ. ನಿಯಮ ಉಲ್ಲಂಘಿಸಿದರೆ, 3 ವರ್ಷದವರೆಗೆ ಜೈಲು ಶಿಕ್ಷೆ ಅಥವಾ 5,000 ರು. ದಂಡ ವಿಧಿಸಬಹುದು. ಕೆಲವೊಂದು ಪ್ರಕರಣಗಳಲ್ಲಿ ಈ ಎರಡನ್ನೂ ವಿಧಿಸುವ ಸಾಧ್ಯತೆ ಇರುತ್ತದೆ.

ಯಾವ ಕಾಯಿದೆಯಡಿ ಕ್ರಮ

- **ಕಾನೂನು ಕ್ರಮ: ತಪ್ಪಿತಸ್ಥರ ವಿರುದ್ಧ ಭಾರತೀಯ ಕಾಯಿದೆ ಆಯ್ಕೆಯ ಸೆಕ್ಷನ್ 164ರ ಅಡಿಯಲ್ಲಿ ಕ್ರಮಗೊಳ್ಳಲಾಗುತ್ತದೆ.**
- **ಶಿಕ್ಷೆ ಏನು: 3 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ 5,000 ರು. ದಂಡ.**
- **ಕಟ್ಟುನಿಟ್ಟಾದ ನಿಯಮ: ರೈಲುಗಳಲ್ಲಿ ಬೆಂಕಿ ಹತ್ತಿಕೊಳ್ಳುವ ಮತ್ತು ಸ್ಫೋಟಗೊಳ್ಳುವ ವಸ್ತುಗಳನ್ನು ಸಂಪೂರ್ಣವಾಗಿ ಸಾಗಿಸುವುದನ್ನು ನಿಷೇಧಿಸಲಾಗಿದೆ.**
- **ಕರ್ನಾಟಕ ಸಾರಿಗೆ ಇಲಾಖೆ ಸಹ ಬಸ್‌ಗಳಲ್ಲಿ ಪಟಾಕಿ ಒಯ್ಯುವುದನ್ನು ನಿಷೇಧಿಸಿ ಜನರ ರಕ್ಷಣೆಗೆ ಆದ್ಯತೆ ನೀಡಿದೆ.**
- **ಒಯ್ದದ್ದು ಗೊತ್ತಾದರೆ ಕಾನೂನು ರಿತ್ಯಾ ಕ್ರಮಗಳ ಜರುಗಿಸುವುದಾಗಿ ಈ ಹಿಂದಿನ ಆದೇಶದಲ್ಲಿ ತಿಳಿಸಿದೆ**

ಮುಗಿಯದ ಟ್ರಂಪ್ ಕುಚೋದ್ಯ

← ಮೊದಲಪುಟದಿಂದ

ನಮ್ಮ ನಡುವೆ ಉತ್ತಮ ಸಂಬಂಧವಿದೆ. ಹಿ ಲವ್ಸ್ ಟ್ರಂಪ್ (ಅವರು ಟ್ರಂಪ್ ಅನ್ನು ಪ್ರೀತಿಸುತ್ತಾರೆ) ಎಂದು ಉತ್ತರಿಸಿದರು. ರಷ್ಯಾದಿಂದ ಭಾರತ ತೈಲ ಖರೀದಿಸುವುದರಿಂದ ನನಗೆ ಬೇಸರವಾಗಿತ್ತು. ಈಗ ಅವರು, ಇನ್ನು ಮುಂದೆ ರಷ್ಯಾದಿಂದ ತೈಲ ಖರೀದಿಸುವುದಿಲ್ಲ ಎಂದು ಭರವಸೆ ನೀಡಿದ್ದಾರೆ. ಇದೊಂದು ದೊಡ್ಡ ನಡೆ. ಚೀನಾ ಕೂಡಾ ಇದೇ ರೀತಿ ಮಾಡಬೇಕಿದೆ ಎಂದು ಟ್ರಂಪ್ ಹೇಳಿದರು.

ಭಾರತ ನಿರಾಕರಣೆ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನು ಅಲ್ಲಗಳೆದಿರುವ ಭಾರತದ ವಿದೇಶಾಂಗ ಸಚಿವಾಲಯ, ಕಳೆದ ಇತ್ತೀಚಿನ ದಿನಗಳಲ್ಲಿ ಅಮೆರಿಕ ಅಧ್ಯಕ್ಷರು ಮತ್ತು ಭಾರತದ ಪ್ರಧಾನಿ ನಡುವೆ ಯಾವುದೇ ಮಾತುಕತೆ ನಡೆದೇ ಇಲ್ಲ. ಯಾವುದೇ ದೂರವಾಣಿ ಕರೆಯೂ ಅಮೆರಿಕದ ಶ್ವೇತಭವನದಿಂದ ಭಾರತ ಸರಕಾರಕ್ಕೆ ಬಂದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

ಅಗತ್ಯ ಇಂಧನ ಖರೀದಿ ನಮ್ಮ ಅಗತ್ಯ, ದೇಶದ ಗ್ರಾಹಕರ ಹಿತರಕ್ಷಣೆಗೆ ಸಂಬಂಧಿಸಿದ ವಿಚಾರ. ಭಾರತ ಸರಕಾರಕ್ಕೆ ತನ್ನ ಪ್ರಜೆಗಳ ಹಿತ ರಕ್ಷಣೆಯೇ ಮುಖ್ಯ. ಅದಕ್ಕೇ ಸದಾ ಆದ್ಯತೆ ನೀಡುತ್ತದೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಇಲಾಖೆ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಸಂಸ್ಥೆಗೆ ಗುರುವಾರ ಪ್ರತಿಕ್ರಿಯಿಸಿದ್ದಾರೆ.

ರಷ್ಯಾ ಪ್ರತಿಕ್ರಿಯೆ: ಈ ಮಧ್ಯೆ, ರಷ್ಯಾ ಸರಕಾರ 'ಅಮೆರಿಕ ಅಧ್ಯಕ್ಷರು ಭಾರತದ ತೈಲ ಖರೀದಿ ವಿಚಾರದಲ್ಲಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸುವುದಿಲ್ಲ. ಈ ವಿಚಾರದಲ್ಲಿ ಮಧ್ಯಪ್ರವೇಶಿಸಲು ಬಯಸುವುದಿಲ್ಲ. ಭಾರತ ಮತ್ತು ರಷ್ಯಾ ನಡುವಣ ಸಂಬಂಧ ದೀರ್ಘ ಕಾಲದ ನಂಬಿಕೆಯ ಮೇಲೆ ನಿಂತಿದೆ ಎಂದು ಹೇಳಿದೆ.

ಆರೆಸ್ಸೆಸ್‌ಗೆ ಅಂಕುಶ

← ಮೊದಲಪುಟದಿಂದ

ಮೂರು ಬಾರಿ ಆರ್‌ಎಸ್‌ಎಸ್ ನಿಷೇಧ

ಕೇಂದ್ರ ಸರಕಾರ ಈ ಹಿಂದೆ ಮೂರು ಬಾರಿ ಆರ್‌ಎಸ್‌ಎಸ್ ಮೇಲೆ ನಿಷೇಧ ಹೇರಿತ್ತು, ಈ ನಿಷೇಧಗಳು ಆಯಾ ಕಾಲದ ರಾಜಕೀಯ ಮತ್ತು ಸಾಮಾಜಿಕ ಬಿಕ್ಕಟ್ಟುಗಳಿಗೆ ಸಂಬಂಧಿಸಿದ್ದಾಗಿವೆ.

1 **ಗಾಂಧಿ ಹತ್ಯೆಯಲ್ಲಿ ಕೈವಾಡ ಆರೋಪ (1948)**
ಗಾಂಧೀಜಿ ಹತ್ಯೆಯಲ್ಲಿ ಸಂಘದ ಪಾತ್ರವಿದೆ ಎಂಬ ಆರೋಪದ ಮೇಲೆ ಅಂದಿನ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ 1948ರಲ್ಲಿ ಆರ್‌ಎಸ್‌ಎಸ್ ಮೇಲೆ ಮೊದಲ ಬಾರಿ ನಿಷೇಧ ಹೇರಿದ್ದರು. ಹತ್ಯೆಯ ವಿಚಾರಣೆ 1949 ರಲ್ಲಿ ಪೂರ್ಣಗೊಂಡ ನಂತರ ಈ ದುರ್ಘಟನೆ ಹಿಂದೆ ಆರ್‌ಎಸ್‌ಎಸ್ ಯಾವುದೇ ಪಾತ್ರವಿಲ್ಲ ಎಂದು ಸ್ಪಷ್ಟವಾದ ತರುವಾಯು ನಿಷೇಧ ಹಿಂಪಡೆಯಲಾಗಿತ್ತು.

2 **ತುರ್ತು ಪರಿಸ್ಥಿತಿ ಅವಧಿಯ ನಿಷೇಧ (1975-1977)**
ಪ್ರಧಾನಿ ಇಂದಿರಾ ಗಾಂಧಿ 1975 ರಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಾಗ, ಆರ್‌ಎಸ್‌ಎಸ್ ಸೇರಿದಂತೆ ಪ್ರಮುಖ ವಿರೋಧ ಪಕ್ಷಗಳು ಮತ್ತು ಸಂಘಟನೆಗಳನ್ನು ನಿಷೇಧಿಸಲಾಗಿತ್ತು. ಇಂದಿರಾ ಗಾಂಧಿ ಸರಕಾರ ಪತನಗೊಂಡ ನಂತರ 1977 ರಲ್ಲಿ ಈ ನಿಷೇಧ ಹಿಂತೆಗೆದುಕೊಳ್ಳಲಾಗಿತ್ತು.

3 **ಬಾಬರಿ ಮಸೀದಿ ಧ್ವಂಸದ ನಂತರ ನಿಷೇಧ (1992)**
ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ವಿವಾದಾತ್ಮಕ ಬಾಬರಿ ಮಸೀದಿ ಧ್ವಂಸಗೊಂಡ ನಂತರ 1992ರಲ್ಲಿ ಅಂದಿನ ಪ್ರಧಾನಿ ಪಿ. ವಿ. ನರಸಿಂಹ ರಾವ್ ನೇತೃತ್ವದ ಸರಕಾರ ಆರ್‌ಎಸ್‌ಎಸ್ ಸೇರಿ ಕೆಲವು ಸಂಘಟನೆಗಳ ಮೇಲೆ ನಿಷೇಧ ಹೇರಿತ್ತು. ಬಳಿಕ ನ್ಯಾಯಾಲಯದ ಆದೇಶದ ಮೇರೆಗೆ 1993 ರಲ್ಲಿ ಈ ನಿಷೇಧ ಹಿಂತೆಗೆದುಕೊಳ್ಳಲಾಗಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದ ಸಚಿವ ಪ್ರಿಯಾಂಕ್ ಖರ್ಗೆ | ಹಳೆ ಆದೇಶದ ನೆನಪು

ಸಂಘದ ಕಾರ್ಯದಲ್ಲಿ ಸರಕಾರಿ ನೌಕರರಿಗೆ ನಿರ್ಬಂಧ ವಿಧಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂಘ ಪರಿವಾರದ ಕಾರ್ಯಚಟುವಟಿಕೆ ನಿರ್ಬಂಧ ವಿಧಿಸಬೇಕೆಂಬ ವಿವಾದಿತ ಪತ್ರದ ಗದ್ದಲ ಮರೆಯುವ ಮೊದಲೇ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಂಘದ ಚಟುವಟಿಕೆಯಲ್ಲಿ ಸರಕಾರಿ ನೌಕರರು ಭಾಗವಹಿಸುವುದನ್ನು ನಿರ್ಬಂಧಿಸಬೇಕು ಎನ್ನುವ ಪತ್ರವನ್ನು ಬರೆದಿರುವುದು ಮತ್ತಷ್ಟು ವಿವಾದಕ್ಕೆ ಕಾರಣ ವಾಗಿದೆ.

ಗುರುವಾರ ಬೆಳಗ್ಗೆ ಈ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪ್ರಿಯಾಂಕ್ ಖರ್ಗೆ, ಈಗಾಗಲೇ ಸುತ್ತೋಲೆಯಲ್ಲಿರುವ ಮಾರ್ಗಸೂಚಿಯನ್ನು ಪಾಲಿಸಬೇಕು ಎಂದು ಮನವಿ ಮಾಡಿದರು. ಬಳಿಕ ಸಚಿವ ಸಂಪುಟ ಸಭೆಗೂ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ, ಈ ಸಂಬಂಧ ಚರ್ಚಿಸಿದ್ದರು.

ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಕರ್ನಾಟಕ ರಾಜ್ಯದಲ್ಲಿ ಸರಕಾರಿ ನೌಕರರುಗಳಿಗೆ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು, 2021 ಅಡಿ ನಿಯಮ 5(1) ಪ್ರಕಾರ ಜಾರಿಯಲ್ಲಿರುವ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ಆದೇಶಿಸಬೇಕು. ಯಾರೇ ಸರಕಾರಿ ನೌಕರ, ಯಾವುದೇ ರಾಜಕೀಯ ಪಕ್ಷದ ಅಥವಾ ರಾಜಕಾರಣದಲ್ಲಿ ಭಾಗವಹಿಸುವಂಥ ಯಾವುದೇ ಸಂಘ ಸಂಸ್ಥೆಯ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಅವುಗಳೊಂದಿಗೆ ಅನ್ಯಥಾ ಸಂಬಂಧ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ರಾಜಕೀಯ ಚಳುವಳಿ ಅಥವಾ ಚಟುವಟಿಕೆಯಲ್ಲಿ ಭಾಗವಹಿಸತಕ್ಕದ್ದಲ್ಲ, ಅದರ ಸಹಾಯಾರ್ಥ ವಂತಿಗೆ ನೀಡತಕ್ಕದ್ದಲ್ಲ ಅಥವಾ ಅದಕ್ಕೆ ಯಾವುದೇ ರೀತಿಯ ನೆರವು ನೀಡತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ನಿರ್ದೇಶನ ನೀಡಲಾಗಿದೆ. ಆದರೂ ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಇತರೆ ಸಂಘ ಸಂಸ್ಥೆಗಳು ಹಮಿಕೊಳ್ಳುವ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ ಸರಕಾರಿ ಅಧಿಕಾರಿಗಳು ಹಾಗೂ ನೌಕರರು ಭಾಗವಹಿಸುತ್ತಿದ್ದಾರೆ. ಆದ್ದರಿಂದ ರಾಜ್ಯದ ಸರಕಾರಿ ಅಧಿಕಾರಿ ಮತ್ತು ನೌಕರರು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಇತರೆ ಸಂಘ ಸಂಸ್ಥೆಗಳು ಹಮಿಕೊಳ್ಳುವ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಿ ಹಾಗೂ ಇದನ್ನು ಉಲ್ಲಂಘಿಸುವ ಅಧಿಕಾರಿ ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗು ವುದೆಂದು ತಿಳಿಸುವ ಸುತ್ತೋಲೆಯನ್ನು ಹೊರಡಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಮುಖ್ಯಮಂತ್ರಿ ಅವರಿಗೆ ಪ್ರಿಯಾಂಕ್ ಖರ್ಗೆ ಮನವಿ ಮಾಡಿಕೊಂಡಿದ್ದಾರೆ.

ಆರ್‌ಎಸ್‌ಎಸ್ ನಿಷೇಧ ವಾಪಸ್ ಸರಿಯಲ್ಲ: ನಾನು ಯಾವತ್ತೂ ಒಂದು ಸಂಸ್ಥೆ ಅಂತ ಹೇಳಿಲ್ಲ. ಇಂತಹ ಯಾವುದೇ ಸಂಸ್ಥೆ ಇರಲಿ, 2013ರಲ್ಲಿ ಜಗದೀಶ್ ಶೆಟ್ಟರ್ ಸಿಎಂ ಆಗಿದ್ದಾಗ ಸರಕಾರಿ ಶಾಲೆಗಳಲ್ಲಿ ಖಾಸಗಿ ಕಾರ್ಯಕ್ರಮ ನಡೆಸಬಾರದು ಎಂಬ ಸುತ್ತೋಲೆ ಹೊರಡಿಸಿದ್ದರು. ಹಲವು ಇಲಾಖೆಗಳು ಈ ಹಿಂದೆ ಈ ನಿಟ್ಟಿನಲ್ಲಿ ಆದೇಶ ಮಾಡಿವೆ. ಹಾಗಾಗಿ ಅವರು ಆರ್‌ಎಸ್‌ಎಸ್ ವಿರೋಧಿಗಳಾ? ಇವತ್ತು ಹಲವು ಲೋಪಗಳಿವೆ, ಅದಕ್ಕಾಗಿಯೇ ಇವರೆಲ್ಲರೂ ಬೆಳೆದಿದ್ದಾರೆ. ಸರ್ದಾರ್ ಪಟೇಲ್, ಇಂದಿರಾ ಗಾಂಧಿ ಆರ್‌ಎಸ್‌ಎಸ್ ಬ್ಯಾನ್ ಮಾಡಲು ಸಾಧ್ಯವಾಗಿಲ್ಲ ಅಂತಾರೆ. ಹೌದು ಆವತ್ತು ನಿಷೇಧ ವಾಪಸ್ ಪಡೆದಿದ್ದು ಸರಿಯಲ್ಲ ಅಂತ ನಾವು ಹೇಳುತ್ತೇವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಅಮಾನತು ಮಾಡಲಾಗುವುದು: ಖರ್ಗೆ

ಗ್ರಾಮೀಣಾಭಿವೃದ್ಧಿ ಇಲಾಖೆಯ ಕೆಲವು ಸಿಬ್ಬಂದಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಈ ಬಗ್ಗೆ ವರದಿ ಕೇಳಿದ್ದು, ಅಂಥವರನ್ನು ಅಮಾನತು ಮಾಡಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರಿ ನೌಕರರು ಕೆಲಸ ಮಾಡುತ್ತಾರೆ ಅಂದುಕೊಂಡಿದ್ದೇವೆ. ಆದರೆ, ಅವರು ನಮಗಿಂತಲೂ ಹೆಚ್ಚು ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸರಕಾರಿ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಷಣ ಮಾಡುವುದಲ್ಲದೆ, ಬೇರೆ ರೀತಿಯಲ್ಲೂ ಪಾಲ್ಗೊಂಡಿದ್ದಾರೆ. ಇದರಲ್ಲಿ ನಮ್ಮ ಇಲಾಖೆಯ ಕೆಲವರಿದ್ದಾರೆ. ಈ ಸಂಬಂಧ ವರದಿ ತರಿಸಿಕೊಳ್ಳುತ್ತಿದ್ದು, ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಹುಲಿ ದಾಳಿ: ರೈತನಿಗೆ ಗಂಭೀರ ಗಾಯ

ಮೈಸೂರು: ಜಿಲ್ಲೆಯ ಸರಗೂರು ತಾಲೂಕಿನ ಬಡಗನಪುರ ಗ್ರಾಮದಲ್ಲಿ ಅರಣ್ಯ ಇಲಾಖೆಯಿಂದ ಗುರುವಾರ ಸೆರೆ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ, ಹುಲಿಯು ರೈತರ ಮೇಲೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿದೆ. 'ಭೀಮ' ಆನೆಯನ್ನು ಬಳಸಿಕೊಂಡು ಹುಲಿ ಸೆರೆಗೆ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಈ ವೇಳೆ ಕಾಡಂಚಿನಲ್ಲಿರುವ ಬಡಗಲಪುರ ಬಳಿ ಹುಲಿ ದಾಳಿ ಮಾಡಿದೆ. ರೈತ ಮಾದೇಗೌಡ ಎನ್ನುವವರು ತಮ್ಮ ಜಮೀನಿನಲ್ಲಿ ಹತ್ತಿ ಬಿಡಿಸುತ್ತಿದ್ದಾಗ ಘಟನೆ ನಡೆದಿದೆ. ಇತರ ಜಮೀನುಗಳ ರೈತರು ಮರವನ್ನೇರಿ ಅಪಾಯದಿಂದ ಪಾರಾಗಿದ್ದಾರೆ.

ಸಕ್ರಮ ಭಾಗ್ಯ ವಿಸ್ತರಣೆ

← ಮೊದಲಪುಟದಿಂದ

ಸಂಪುಟ ನಿರ್ಧಾರದ ಹೈಲೈಟ್ಸ್

ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ತಲಾ ಎರಡು ಸೀರೆಗಳಂತೆ ಒಟ್ಟು 2,79,688 ಸೀರೆಗಳನ್ನು ತಲಾ 500 ರು. ನಂತೆ ಖರೀದಿಸಲು 13.98 ರು. ಅನುದಾನ

- ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳನ್ನು ತುಂಬಿಸುವ ಯೋಜನೆಗೆ 650 ಕೋಟಿ ರು.
- ಮೈಸೂರು ಮತ್ತು ಕಲಬುರಗಿಯಲ್ಲಿ ನಿಮ್ಹಾನ್ಸ್ ಮಾದರಿ ಸಂಸ್ಥೆ ಸ್ಥಾಪನೆಗೆ ತಲಾ 100 ಕೋಟಿ ರು. ಅನುದಾನ
- ರಾಜ್ಯದ 69922 ಅಂಗನವಾಡಿ ಕೇಂದ್ರಗಳಿಗೆ 1,500/- ಘಟಕ ವೆಚ್ಚದಲ್ಲಿ ಔಷಧ ಕಿಟ್ ಒದಗಿಸಲು 10.49 ಕೋಟಿ ರು.
- ಸಂಜಯಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ನೂತನ ವ್ಯಾಸ್ಕ್ಯುಲರ್ ಶಾಸ್ತ್ರ ಚಿಕಿತ್ಸಾ ವಿಭಾಗಕ್ಕೆ 26.09 ರು.
- ಮಳವಳ್ಳಿ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಮಂಜೂರಾದ ನಿವೇಶನಕ್ಕೆ ಪರಿಹಾರ ಧನ ನೀಡುವುದು.
- ವಿಜಯಪುರ ಜಿಲ್ಲೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಆರಂಭಿಸಲು 54.92 ಕೋಟಿ ರು.

ಸ್ವಾಮೀಜಿಗಳ ವಿರುದ್ಧದ ಹೇಳಿಕೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಯಿಂದ ಮೂರು ತಿಂಗಳು ನಿರ್ಬಂಧ ಆದೇಶ

ಕಾಡಸಿದ್ದೇಶ್ವರ ಸ್ವಾಮೀಜಿಗೆ ವಿಜಯಪುರ ಜಿಲ್ಲೆ ಪ್ರವೇಶ ನಿರ್ಬಂಧ

ವಿಜಯಪುರ: ನೆರೆಯ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ-ಕನ್ಹೇರಿ ಕಾಡಸಿದ್ಧೇಶ್ವರ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರಿಗೆ ವಿಜಯಪುರ ಜಿಲ್ಲಾ ಪ್ರವೇಶವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ.ಆನಂದ್ ಕೆ. ಆದೇಶ ಹೊರಡಿಸಿದ್ದಾರೆ.

ಸ್ವಾಮೀಜಿ ಅವರಿಗೆ ಇದೇ ಅ. 16ರಿಂದ ಡಿ.16ರ ವರೆಗೆ ವಿಜಯಪುರ ಜಿಲ್ಲಾ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಮಹಾರಾಷ್ಟ್ರದ ಜತ್ತ ತಾಲೂಕಿನ ಬೀಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ ಮಾತನಾಡಿದ್ದ ಕಾಡಸಿದ್ದೇಶ್ವರ ಸ್ವಾಮೀಜಿ, 'ಮುಖ್ಯಮಂತ್ರಿ ಕೃಪಾಪೋಷಿತ ಲಿಂಗಾಯತ ಸ್ವಾಮೀಜಿ, ಮುಖ್ಯಮಂತ್ರಿ ಕೃಪಾಪೋಷಿತ ಲಿಂಗಾಯತ ಮಠಾಧೀಶರ ಒಕ್ಕೂಟ ಎಂಬ ನಾಟಕ ಮಂಡಳಿಯ ಕಲಾವಿದರು ಕರ್ನಾಟಕದಲ್ಲಿ ಒಂದು ತಿಂಗಳ ಕಾಲ ಬಸವ ಸಂಸ್ಕೃತಿ ಉತ್ಸವ ಎಂದು ತಿರುಗಾಡಿದರು. ಈ ಸಂರ್ಭದಲ್ಲಿ ಅವರು, ದೇವರು ಗುಡಿಯಲ್ಲಿ ಇಲ್ಲ, ಗುಡಿಗೆ ಹೋಗಬೇಡಿ, ಮನೆಯಲ್ಲಿರುವ ದೇವರನ್ನು ಹೊಳೆಗೆ ಹಾಕಿ, ಹೋಟೆಲ್‌ಗಳಿಗೆ ಹೋಗಿ ದಾರು ಕುಡಿಯಿರಿ, ಮಾಂಸ ತಿನ್ನಿರಿ, ಆರಾಮವಾಗಿರಿ ಎಂದು ಹೇಳಿದ್ದಾರೆ. ಅವರನ್ನು ಮುಂದೆ ಕೂರಿಸಿಕೊಂಡು ಆ ಸೂಳೆಮಕ್ಕಳಿಗೆ ನಾನೇ ಬುದ್ಧಿ ಹೇಳಬೇಕು, ಹಿಡಿದು ಮೆಟ್ಟಲ್ಲಿ ಹೊಡೆಯಬೇಕು' ಎಂದು ಅವಹೇಳನಕಾರಿಯಾಗಿ ವಾಗ್ದಾಳಿ ನಡೆಸಿದ್ದರು.

ಶ್ರೀಗಳ ಹೇಳಿಕೆ ಖಂಡಿಸಿ ಲಿಂಗಾಯತ ಮಠಾಧೀಶರು, ಬಸವ ಭಕ್ತರು ವಿಜಯಪುರ ಜಿಲ್ಲೆ ಸೇರಿದಂತೆ ರಾಜ್ಯದ ಹಲವೆಡೆ ಪ್ರತಿಭಟನೆ ನಡೆಸಿ, ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದ್ದರು.

ಈ ನಡುವೆ ಇದೇ ಅ.16 ಮತ್ತು 17ರಂದು ಬಸವನ ಬಾಗೇವಾಡಿಗೆ ಕಾಡಸಿದ್ದೇಶ್ವರ ಸ್ವಾಮೀಜಿ ಬರುವ ಕಾರ್ಯಕ್ರಮ ಇತ್ತು. ಈ ವೇಳೆ ಅಹಿತಕರ ಘಟನೆ ನಡೆಯಬಹುದು, ಶಾಂತಿ, ಸುವ್ಯವಸ್ಥೆಗೆ ಧಕ್ಕೆಯಾಗಬಹುದು ಎಂದು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವರದಿ ನೀಡಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಅವರು ಶ್ರೀಗಳು ಜಿಲ್ಲೆ ಪ್ರವೇಶಿಸದಂತೆ ನಿರ್ಬಂಧ ವಿಧಿಸಿ ಆದೇಶ ಹೊರಡಿಸಿದ್ದಾರೆ.

> ಅಧಿಕಾರಕ್ಕೆ ಬಂದಾಗಿನಿಂದಲೂ ಹಿಂದೂ ಧರ್ಮ ಒಡೆಯುವ ಕುತಂತ್ರ ನೀತಿ ಅನುಸರಿಸುತ್ತಿರುವ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಕನ್ಹೇರಿ ಮಠ ಕಾಡಸಿದ್ದೇಶ್ವರ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಗಳಿಗೆ 'ಶಾಂತಿ ಕದಡುವವರು' ಎಂಬ ಹಣೆಪಟ್ಟಿ ಕಟ್ಟಿ ವಿಜಯಪುರ ಪ್ರವೇಶ ನಿರ್ಬಂಧಿಸಿ, ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿರುವುದು ಖಂಡನೀಯ.
>
> -**ಜಗದೀಶ ಶೆಟ್ಟರ್,** ಸಂಸದ

> ರಾಜ್ಯ ಸರಕಾರ ಮತ್ತೊಮ್ಮೆ ಹಿಂದೂ ಧರ್ಮ ಗುರುಗಳ ದನಿಯನ್ನು ಅಡಗಿಸುವ ದುಸ್ಸಾಹಸಕ್ಕೆ ಕೈಹಾಕಿದೆ. ಈ ಹಿಂದೆ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ದಿವಂಗತ ಚಂದ್ರಶೇಖರನಾಥ ಸ್ವಾಮೀಜಿ ವಿರುದ್ಧ ಎಫ್‌ಐಆರ್ ಹಾಕಿದ್ದ ಕಾಂಗ್ರೆಸ್ ಸರಕಾರ, ಈಗ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರ ಮೇಲೆ ನಿಷೇಧ ಹೇರುವ ಮೂಲಕ ಪಕ್ಷಕ್ಕೆ ವಾಕ್ ಸ್ವಾತಂತ್ರ್ಯ, ಸಂವಿಧಾನದಲ್ಲಿ ನಂಬಿಕೆಯಿಲ್ಲ ಎನ್ನುವುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.
>
> -**ಆರ್.ಅಶೋಕ** ವಿಧಾನಸಭೆ ಪ್ರತಿಪಕ್ಷ ನಾಯಕ

> ಸಮಾಜದಲ್ಲಿ ನಡೆಯುತ್ತಿರುವ ಘಟನಾವಳಿಗಳನ್ನು ಯಥಾವತ್ತಾಗಿ ವಿವರಿಸಿದ್ದಕ್ಕೆ ಕನ್ಹೇರಿ ಮಠದ ಪರಮಪೂಜ್ಯ ಶ್ರೀ ಅದೃಶ್ಯ ಕಾಡ ಸಿದ್ದೇಶ್ವರ ಸ್ವಾಮೀಜಿರವರನ್ನು ವಿಜಯಪುರ ಜಿಲ್ಲೆ ಪ್ರವೇಶಿಸಿದಂತೆ 3 ತಿಂಗಳವರೆಗೂ ನಿರ್ಬಂಧ ಹೇರಿರು ವುದು ಸರಕಾರ ಹಿಂದೂ ಸಮಾಜ ಒಡೆಯುವ ಮತ್ತೊಂದು ಹುನ್ನಾರವಷ್ಟೇ. ಸರಕಾರ ಕೂಡಲೇ ಈ ನಿಷೇಧವನ್ನು ವಾಪಾಸ್ ಪಡೆಯಬೇಕು.
>
> - **ಪ್ರತಾಪ್ ಸಿಂಹ,** ಮಾಜಿ ಸಂಸದ

ಆ್ಯಂಟಿಬಯೋಟಿಕ್: ಮ.ಪ್ರ. ಆಸ್ಪತ್ರೆ ಬಾಟಲಿಗಳಲ್ಲಿ ಹುಳು



ಭೋಪಾಲ್: ತಮಿಳುನಾಡಿನ ಕಾಂಚಿಪುರನ ಶ್ರೀಸನ್ ಫಾರ್ಮಾಸ್ಯುಟಿಕಲ್‌ನಲ್ಲಿ ತಯಾರಾದ ಕೆಮ್ಮಿನ ಸಿರಪ್ 'ಕೋಲ್ಡ್ರಿಫ್'ನಿಂದಾಗಿ 27 ಮಕ್ಕಳು ಸರಣಿಯೋಪಾದಿಯಲ್ಲಿ ಸಾವಿಗೀಡಾದ ನಂತರ ಈಗ ಮಧ್ಯಪ್ರದೇಶದಲ್ಲಿ 'ಆ್ಯಂಟಿಬಯಾಟಿಕ್'ನಿಂದಾಗಿ ಹೊಸ ಭೀತಿ ಶುರುವಾಗಿದೆ.

ಮಧ್ಯಪ್ರದೇಶ ರಾಜ್ಯದ ಗ್ವಾಲಿಯರ್‌ನಲ್ಲಿನ ಸರಕಾರಿ ಆಸ್ಪತೆಯಲ್ಲಿ ಮಗುವೊಂದಕ್ಕೆ ನೀಡಿದ ಆಂಟಿಬಯೋಟಿಕ್ ಔಷಧದ ಬಾಟಲಿಯಲ್ಲಿ ಹುಳುಗಳು ಇರುವುದು ಕಂಡುಬಂದಿದೆ ಎಂದು ದೂರು ದಾಖಲಾಗಿದೆ. ಮೊರಾರ್‌ನ ಸರಕಾರಿ ಆಸ್ಪತ್ರೆಯಲ್ಲಿ ಮಗುವನ್ನು ಚಿಕಿತ್ಸೆಗೆ ದಾಖಲಿಸಿದ್ದ ತಾಯಿಯೊಬ್ಬರು ತಮ್ಮ ಮಗುವಿಗೆ ನೀಡಲಾದ 'ಅಜಿಥ್ರೊಮೈಸಿನ್' ಆಂಟಿಬಯೋಟಿಕ್ ಔಷಧದ ಬಾಟಲಿಯಲ್ಲಿ ಹುಳುಗಳ ಕಂಡುಬಂದ ಬಗ್ಗೆ ದೂರು ನೀಡಿದ್ದಾರೆ. ಈ ವಿಚಾರವನ್ನು ಡ್ರಗ್ ಇನ್‌ಸ್ಪೆಕ್ಟರ್ ಅನುಭೂತಿ ಶರ್ಮಾ ಅವರೂ ದೃಢಪಡಿಸಿದ್ದಾರೆ.

ವಿಶ್ವವಾಣಿ
@vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 17-10-2025 ಶುಕ್ರವಾರ

ಚಿತ್ತವಿಹಾರ

ಸೃಷ್ಟಿ-ದೃಷ್ಟಿ

• ಅಂದಾನಯ್ಯ, ವಸ್ತ್ರದ, ನಾಗೂರ

ಹೆಣ್ಣಿಗೊಂದು ಉದರವಂತೆ
ಉದರದಲ್ಲಿ ಗರ್ಭವಂತೆ
ಗರ್ಭದೊಳಗೆ ಶಿಶುವಂತೆ
ಶಿಶುವಿನ ಎದೆಯೊಳು ಉಸಿರಂತೆ
ನವಮಾಸ ಕಳೆದು ಗರ್ಭಸೀಳಿ
ಶಿಶು ಹೊರಬರುವುದಂತೆ
ಏನೀ ಸೃಷ್ಟಿಯ ವೈಚಿತ್ರ್ಯ!

ಸೂರ್ಯಶಾಖಕೆ ಕಡಲ ನೀರು
ಆವಿಯಾಗುವುದಂತೆ
ಆವಿಯಾದ ನೀರು
ಮೋಡವಾಗುವುದಂತೆ
ಕಾರ್ಮೋಡಕ್ಕೆ ತಂಪು
ತಂಪು ತಗುಲಿ ಮಳೆಯಾಗಿ
ಧರೆಗೆ ಬೀಳುವುದಂತೆ
ಏನೀ ಸೃಷ್ಟಿಯ ವೈಚಿತ್ರ್ಯ!

ಬೀಜ ಮೊಳಕೆ ಒಡೆದು
ಹೆಮ್ಮರವಾಗುವುದಂತೆ
ಮರದೊಳೊಂದು ಗೂಡಂತೆ
ಗೂಡಿನೋಳ್ ಹಕ್ಕಿಯೊಂದು
ಮೊಟ್ಟೆ ಇಡುವುದಂತೆ
ಮೊಟ್ಟೆಯಿಂದ ಮರಿಗಳು
ಹೊರಬರುವುದಂತೆ
ಏನೀ ಸೃಷ್ಟಿಯ ವೈಚಿತ್ರ್ಯ!

ಸೂರ್ಯನಂತೆ ಚಂದ್ರನಂತೆ
ಹಗಲಂತೆ ಇರುಳಂತೆ
ಸೂರ್ಯನನ್ನು ಗ್ರಹ
ಸುತ್ತುವುದಂತೆ, ಇದು-
ವಿಶ್ವವಂತೆ, ಸೌರವ್ಯೂಹವಂತೆ
ಏನೀ ಸೃಷ್ಟಿಯ ವೈಚಿತ್ರ್ಯ!

ತಾಳಿದವನು ಬಾಳಿಯಾನು

ತಲ್ಲಣಿಸದಿರು ಕಂಡ್ಯ, ತಾಳು ಮನವೇ...

• ಮಲ್ಲಪ್ಪ ಸಿ. ಖೊದ್ನಾಪೂರ

ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಅವರು ''ತಾಳ್ಮೆ ಎಂಬುದು ದುರ್ಬಲತೆಯಲ್ಲ, ಅದು ಮನುಷ್ಯನನ್ನು ದೀರ್ಘಕಾಲ ಸ್ಥಿರವಾಗಿ ನಿಲ್ಲಿಸುವ ಪ್ರಬಲವಾದ ಶಕ್ತಿ'' ಎಂದು ಹೇಳಿದ್ದಾರೆ. ಬದುಕಿನಲ್ಲಿ ಯಶಸ್ಸು ಎನ್ನುವುದು ರಾತ್ರಿ ಬೆಳಗಾಗುವುದರೊಳಗೆ ದೊರೆಯುವಂಥದ್ದಲ್ಲ, ಅದು ಹಲವಾರು ವರ್ಷಗಳ ಅವಿರತ ಪ್ರಯತ್ನ, ಸಾಧನೆಯಿಂದ ದಕ್ಕುವ ಫಲ. ಅದಕ್ಕಾಗಿ ಸಾಕಷ್ಟು ಶ್ರಮ ವಹಿಸಬೇಕು. ಅಂಥ ಯಶಸ್ಸನ್ನು ಪಡೆಯಲು ವ್ಯಕ್ತಿಯಲ್ಲಿ ಇರಬೇಕಾದುದು ತಾಳ್ಮೆ. ಅದಕ್ಕೆಂದೇ ಹಿರಿಯರು 'ತಾಳಿದವನು ಬಾಳಿಯಾನು' ಎಂದು ಹೇಳಿದ್ದಾರೆ.

• **ಇದೊಂದು ತಂತ್ರಗಾರಿಕೆ**

ಬದುಕೆಂಬುದು ಒಂದು ಸಾಗರವಿದ್ದಂತೆ. ಅದರಲ್ಲಿ ಸಮಸ್ಯೆಗಳು-ಸವಾಲುಗಳು ಅಲೆಗಳ ಹಾಗೆ ಒಂದರ ಹಿಂದೆ ಒಂದರಂತೆ ಬರುತ್ತಲೇ ಇರುತ್ತವೆ. ಅವೆಲ್ಲವನ್ನೂ ಎದುರಿಸಿ ಗುರಿಯತ್ತ ಮುನ್ನುಗ್ಗಬೇಕು ಎಂದರೆ, ವ್ಯಕ್ತಿಗೆ ತಾಳ್ಮೆ ಅಸ್ತ್ರವಾಗಿ ಬೇಕಾಗುತ್ತದೆ. ''ತಾಳ್ಮೆ ಎಂದರೆ, ನಾವು ಗುರಿಯ ಬೆನ್ನುಹತ್ತಿ ಹೊರಟಾಗ ಬಂದೆರಗುವ ಸಂಕಷ್ಟಗಳನ್ನು ಹೇಗೆ ಸಮರ್ಥವಾಗಿ ಎದುರಿಸುತ್ತೇವೆ ಎಂಬುದಷ್ಟೇ ಅಲ್ಲ; ಬದಲಿಗೆ ಅದು, ಆ ಸಂದರ್ಭದಲ್ಲಿ ನಾವು ತೋರುವ ಪ್ರತಿಕ್ರಿಯೆ ಮತ್ತು ಶಾಂತ ಮನಸ್ಸಿನಿಂದ ಆ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಲ್ಲಿ ಕಾಯುವ ಪ್ರತಿಯೊಂದು ಕ್ಷಣ ಮತ್ತು ಅನುಸರಿಸುವ ತಂತ್ರಗಾರಿಕೆಯಾಗಿದೆ'' ಎಂದು ಹೇಳಿದ್ದಾರೆ ಗೌತಮ ಬುದ್ಧರು.

• **ಪರಿಹಾರ ಇದ್ದೇ ಇದೆ**

'ಪ್ರತಿ ಸಮಸ್ಯೆಗೂ ಒಂದಲ್ಲಾ ಒಂದು ಪರಿಹಾರ ಇದ್ದೇ ಇರುತ್ತದೆ' ಎಂದು ಭಾವಿಸಿ ಮುನ್ನಡೆದರೆ ನಮ್ಮಲ್ಲಿ ನಂಬಿಕೆ ನೆಲೆಸುತ್ತದೆ, ಭರವಸೆಯು ಮೂಡುತ್ತದೆ, ಅದುವೇ ಬಾಳಿನ ಯಶಸ್ಸಿನ ಕೀಲಿಕೈ ಆಗುತ್ತದೆ. ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಆ ಎರಡೂ ಸಂದರ್ಭಗಳನ್ನೂ ಸಮಭಾವದಿಂದ ಸ್ವೀಕರಿಸಬೇಕು. ನಿರ್ದಿಷ್ಟ ಕೆಲಸವೊಂದಕ್ಕೆ ಸಾಕಷ್ಟು ಪರಿಶ್ರಮವನ್ನು ವಿನಿಯೋಗಿಸಿದ ಹೊರತಾಗಿಯೂ ಸೋಲು ಒದಗಿದಾಗ ಧೃತಿಗೆಡದೆ, ಆ 'ಪರಿಶ್ರಮ' ಮತ್ತು ಸೋಲಿನಿಂದ ಕಲಿತ 'ಪಾಠ' ಎರಡನ್ನೂ ಮುಂದಿನ ಪ್ರಯತ್ನಗಳಿಗೆ ಮೆಟ್ಟಿಲುಗಳಾಗಿ ಮಾಡಿಕೊಳ್ಳಬೇಕು. ಆಗ ಅವು ಮುಂದಿನ ಗೆಲುವಿಗೆ ದಿಕ್ಸೂಚಿಯಾಗುತ್ತವೆ. ಆದರೆ ಇಷ್ಟೂ ಅವಧಿಯಲ್ಲಿ ಅಪಾರ ತಾಳ್ಮೆ ಅಗತ್ಯವಾಗುತ್ತದೆ.

• **ಕಷ್ಟ ಮರಕ್ಕೆ ಬರೋದಿಲ್ಲ**

'ಕಷ್ಟಗಳು ಮನುಷ್ಯನಿಗೆ ಬಾರದೆ ಮರಕ್ಕೆ ಬರುತ್ತವೆಯೇ?' ಎಂಬುದೊಂದು ಮಾತಿದೆ. ಜೀವನ ಎಂದ ಮೇಲೆ ಕಷ್ಟ-ಸುಖಗಳು ಇದ್ದದ್ದೇ. ಕಷ್ಟಗಳು ಬಂದಾಗ ಹತಾಶರಾಗದೆ, 'ನಂತರ ಒಳ್ಳೆಯ ದಿನಗಳು ಬಂದೇ ಬರುತ್ತವೆ' ಎಂಬ ಭರವಸೆಯನ್ನು ಇಟ್ಟುಕೊಳ್ಳಬೇಕು. ಎದುರಾಗುವ ಎಲ್ಲಾ ಸವಾಲು- ಸಮಸ್ಯೆಗಳನ್ನು ಪರಿಹರಿಸಿಕೊಂಡೇ ತೀರುತ್ತೇನೆ ಎಂಬ ಛಲ ಮನಸ್ಸಿನಲ್ಲಿದ್ದರೆ ಕೊನೆಗೆ ನಮಗೆ ಯಶಸ್ಸು ಸಿಗುವುದು ಖಂಡಿತ. ಇಲ್ಲಿಯೂ ಬೇಕಾಗುವುದು ತಾಳ್ಮೆಯೇ. ''ಸೋಲು ಕಣ್ಣ ಮುಂದೆ ಇದ್ದರೆ, ಆ ಸೋಲಿನ ಬೆನ್ನ ಹಿಂದೆಯೇ ಗೆಲುವು ಇರುತ್ತದೆ; ಅಲ್ಲಿಯವರೆಗೂ ಕಾಯುವ ತಾಳ್ಮೆ ನಮ್ಮಲ್ಲಿ ಇರಬೇಕಷ್ಟೇ'' ಎಂದು ಹಿರಿಯರು ಹೇಳುವುದು ಈ ಕಾರಣಕ್ಕಿಂದಲೇ.

• **ಬೇಕು ಸಕಾರಾತ್ಮಕತೆ**

ನಾವು ಇಂದು ಏನನ್ನು ಅಂದುಕೊಳ್ಳುತ್ತೇವೋ, ಭರವಸೆಯಿಟ್ಟು ಯತ್ನಿಸಿದರೆ ನಾಳೆ ಅದೇ ಆಗುತ್ತೇವೆ. 'ನಾನು ಸಮರ್ಥ, ನನ್ನಲ್ಲಿ ಶಕ್ತಿ-ಸಾಮರ್ಥ್ಯಗಳಿವೆ, ಹಿಡಿದ ಕಾರ್ಯವನ್ನು ನಾನು ಮಾಡಬಲ್ಲೆ' ಎಂಬ ಸಕಾರಾತ್ಮಕ ಆಲೋಚನೆ-ಆತ್ಮಬಲಗಳು ನಮ್ಮಲ್ಲಿದ್ದರೆ, ಅವು ನಮ್ಮನ್ನು ಯಶಸ್ಸಿನತ್ತ ಸಾಗಿಸಬಲ್ಲವು. 'ಕಾಲಾಯ ತಸ್ಮೈ ನಮಃ' ಎನ್ನುವಂತೆ ಕಾಲವೇ ಎಲ್ಲಕ್ಕೂ ಉತ್ತರವನ್ನು ಕೊಡುತ್ತದೆ. ಅಲ್ಲಿಯವರೆಗೆ ಕಾಯುವ ತಾಳ್ಮೆ ನಮ್ಮಲ್ಲಿ ಇರಬೇಕಷ್ಟೇ.

• **ಸೋಲು ಹಣೆಬರಹವಲ್ಲ**

''ಯಶಸ್ಸು ಎಂಬುದು ಅಂತಿಮವಲ್ಲ, ಸೋಲು ಎಂಬುದು ಯಾರ ಹಣೆಬರಹವೂ ಅಲ್ಲ. ಪ್ರತಿಯೊಂದು ಸೋಲಿನಿಂದ ಕಲಿತ ಪಾಠಗಳು ಮತ್ತು ಅನುಭವಗಳು, ಮುಂದೆ ಗೆಲುವನ್ನು ದಕ್ಕಿಸಿಕೊಳ್ಳಲು ಸಹಕಾರಿ. ಆದ ಕಾರಣ, ಸೋತೆ ಎಂಬ ಕಾರಣಕ್ಕೆ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಬೇಕಿಲ್ಲ'' ಎಂದಿದ್ದಾರೆ ವಿನ್‌ಸ್ಟನ್ ಚರ್ಚಿಲ್. ಆದ್ದರಿಂದ, ಬದುಕಿನಲ್ಲಿ ಎಂಥದೇ ಸಂಕಟ-ಸಂಕಷ್ಟ, ಸಮಸ್ಯೆ-ಸವಾಲು ಎದುರಾದರೂ ನಾವು ಎದೆಗುಂದದೆ ತಾಳ್ಮೆಯಿಂದ ಇದ್ದುಕೊಂಡು ಪ್ರಯತ್ನವನ್ನು ಮುಂದುವರಿಸಿದರೆ, ಅವು ತಮ್ಮಷ್ಟಕ್ಕೆ ತಾವೇ ಪರಿಹಾರವಾಗುವುವು. ಹೋರಾಟದ ಮನೋಭಾವ ಮತ್ತು ತಾಳ್ಮೆ ನಮ್ಮಲ್ಲಿ ಇದ್ದರೆ, ಅವು ಯಶಸ್ಸಿನ ಮೂಲಮಂತ್ರ ಆಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ತಾಳ್ಮೆಯಿಂದ ತಪಃಸಿದ್ಧಿ

• ಮಾಯಾ ಬಾಲಚಂದ್ರ



ತ್ಯಾಗ, ತಪ, ಅಪಾರ ಸಹನಶೀಲತೆಗಳಿಲ್ಲದೆ, ಯಾವ ಘನಕಾರ್ಯವನ್ನೂ ನಾವು ಸಾಧಿಸಲಾಗುವುದಿಲ್ಲ ಎನ್ನುವುದಕ್ಕೆ ಹತ್ತನೇ ಶತಮಾನದ ಘಟನೆಯೊಂದು ಸಾಕ್ಷಿಯಾಗುತ್ತದೆ.

ಅದ್ವೈತದ ಪರಂಪರೆಗಳಲ್ಲಿ ಒಂದಾದ 'ಭಾಮತೀ' ಪರಂಪರೆಯನ್ನು ಸಾಧಿಸಿದ ಒಬ್ಬ ಭಾರತೀಯ ತತ್ವಶಾಸ್ತ್ರಜ್ಞರ ಹೆಸರು 'ವಾಚಸ್ಪತಿ ಮಿಶ್ರಾ'. ಅಪಾರ ಪ್ರತಿಭಾ ಸಂಪನ್ನರೂ, ಅಧ್ಯಯನಶೀಲರೂ ಆದ ಮಿಶ್ರಾರವರಿಗೆ, ಏಕಾಗ್ರತೆ ಸಹಜವಾಗಿಯೇ ಸಿದ್ಧಿಸಿತ್ತು. ಆದಿ ಶಂಕರರ ಬ್ರಹ್ಮಸೂತ್ರದ ಭಾಷ್ಯದ ಮೇಲೆ ಅವರು ವ್ಯಾಖ್ಯಾನ ಮಾಡಿದ್ದಾರೆ. ಈ ವ್ಯಾಖ್ಯಾನ ಬರೆಯಲು ಸುಮಾರು ವರುಷಗಳೇ ಕಳೆಯುತ್ತವೆ ಎಂಬುದನ್ನು ಗಮನಿಸಿದ ಹಿರಿಯರು, ಅವರಿಗೆ ಮೊದಲೇ ಮದುವೆ ಮಾಡಿದ್ದರು. ಮಿಶ್ರಾರವರು ವ್ಯಾಖ್ಯಾನ ಬರೆಯಲು ಕುಳಿತೇ ಬಿಟ್ಟರು. ಆ ಗ್ರಂಥವನ್ನು ಮುಗಿಸಲು ಸುದೀರ್ಘ ವರ್ಷಗಳೇ ಬೇಕಾದವು, ದಶಕಗಳೇ ಗತಿಸಿದವು.

ಒಂದು ದಿನ ಗ್ರಂಥ ಪೂರ್ಣಗೊಂಡಿದ್ದು, ಕೋಣೆಯಲ್ಲಿ ಕತ್ತಲೆ ಆವರಿಸಿತ್ತು. ಆಗ, ಮಡದಿ ದೀಪ ಬೆಳಗಿಸಿದಳು. ತಮ್ಮ ಮುಂದೆ ಹೆಣ್ಣು ಮಗಳು ಬಂದಂತೆನಿಸಿ, ''ಯಾರಮ್ಮ ತಾಯಿ ನೀನು?'' ಎಂದು ಕೇಳಿದರು ವಾಚಸ್ಪತಿ ಮಿಶ್ರಾ. ''ನಾನು ನಿಮ್ಮ ಸತಿ'' ಎಂದಳಾಕೆ. ''ಹೌದೇ..?!'' ಎಂದ ಮಿಶ್ರಾರವರಿಗೆ ಗಾಬರಿ. ಕಾರಣ, ಈಗ ಅವರಿಗೆ 80 ವರ್ಷ. ಆಕೆಗೆ 60-70ರ ಆಸುಪಾಸು ಇರಬಹುದು. ವಾಚಸ್ಪತಿ ಮಿಶ್ರಾ ಅವರು ಆಗ, ''ಹಾಗಾದರೆ ನೀನು ನನಗೇಕೆ ಹೇಳಲಿಲ್ಲ?'' ಎಂದರು.

''ನೀವು ಕೈಗೊಂಡ ಕಾರ್ಯಕ್ಕೆ ಚ್ಯುತಿ ಬರಬಾರದೆಂದು, ಆ ಕಾರ್ಯ ಸಾಂಗವಾಗಿ ನೆರವೇರಲೆಂಬ ಉದ್ದೇಶದಿಂದ ಹೇಳಲಿಲ್ಲ'' ಎಂದಳಾಕೆ. ಮಿಶ್ರಾರವರು ದಿಗ್ಭ್ರಾಂತರಾದರು. ಅವರಿಗೆ ತಾವು ಮದುವೆಯಾಗಿರುವುದು, ಪತ್ನಿ ಇರುವುದು ಇವೆಲ್ಲ ಮರೆತು ಹೋಗಿದ್ದವು. ಅವರು ಆ ಮಟ್ಟಿಗೆ ಗ್ರಂಥ ರಚನೆಯಲ್ಲಿ ಏಕಾಗ್ರತೆಯನ್ನು, ತನ್ಮಯತೆಯನ್ನು ಸಾಧಿಸಿದ್ದರು. ವಾಚಸ್ಪತಿ ಮಿಶ್ರಾ ಅವರಿಗೆ ಕೆಲವು ಕ್ಷಣ ಕಣ್ಣಂಚಿನಲ್ಲಿ ನೀರು ಬಂದಿತು. ತಡೆಯಲಾಗದೆ ಗಳಗಳನೆ ಅತ್ತುಬಿಟ್ಟರು, ಬಹಳ ವ್ಯಥೆಪಟ್ಟರು. ಆಗಲೇ ಕಾಲ ಮಿಂಚಿಹೋಗಿತ್ತು! ''ನಾನು ನಿನಗೆ ಎಂಥ ಅನ್ಯಾಯ ಮಾಡಿದೆನಲ್ಲ, ನನ್ನನ್ನು ಕ್ಷಮಿಸಿಬಿಡು'' ಎಂದರು. ಆಗ ಪತ್ನಿಯು, ''ಅನ್ಯಾಯ ಎಲ್ಲಿ ಸ್ವಾಮಿ? ನಿಮ್ಮಂಥ ಪತಿಯನ್ನು ಪಡೆದ ನಾನೇ ಧನ್ಯೆ, ಭಾಗ್ಯವಂತಳು, ನಿಮ್ಮ ಈ ಅಮೋಘ ಕಾರ್ಯದಲ್ಲಿ ನನಗೆ ಸೇವೆ ಮಾಡುವ ಭಾಗ್ಯ ಸಿಕ್ಕಿತಲ್ಲ, ಅದೇ ದೊಡ್ಡದು!'' ಎಂದು ಭಾವಪೂರ್ಣವಾಗಿ ಹೇಳಿದಳು.

ಮಿಶ್ರಾರವರು ಕ್ಷಣಕಾಲ ಆಲೋಚಿಸಿ ಆ ಗ್ರಂಥದ ಕಡೆ ನೋಡಿದರು. ಅದಕ್ಕೆ ವಿನಿಯೋಗವಾದ ಪರಿಶ್ರಮದ ಹಿನ್ನೆಲೆಯಲ್ಲಿ, ಮಡದಿಯ ತ್ಯಾಗ, ತಾಳ್ಮೆ, ತಪಸ್ಸು ಕಾಣಬಂದಿತ್ತು. ಅವರಿಗೆ ತಾಳೆಗರಿಯನ್ನು ಕೊಡುವುದರಿಂದ ಹಿಡಿದು, ರಾತ್ರಿ ದೀಪ ಬೆಳಗಿಸುವವವರೆಗೆ, ಅವರ ಕಾರ್ಯಕ್ಕೆ ಚ್ಯುತಿ ಬಾರದಂತೆ ನೋಡಿಕೊಂಡಿದ್ದಳು ಪತ್ನಿ. ಮಿಶ್ರಾರವರು, ''ಈ ಗ್ರಂಥದ ರಚನೆ ದೊಡ್ಡದಲ್ಲ, ನಿನ್ನ ತ್ಯಾಗ, ಪ್ರೀತಿಯ ಸೇವೆ ದೊಡ್ಡದು, ನಮಗೆ ಇದುವೇ ಮಗು ಎಂದು ಭಾವಿಸೋಣ, ಇದಕ್ಕೆ ನಿನ್ನದೇ ಹೆಸರಿಡುತ್ತೇನೆ'' ಎಂದು ಆ ಗ್ರಂಥಕ್ಕೆ 'ಭಾಮತಿ' ಎಂದು ನಾಮಕರಣ ಮಾಡಿದರು. ಈ ಗ್ರಂಥದ ಕೀರ್ತಿಪತಾಕೆ, ದೇಶ ವಿದೇಶಗಳಲ್ಲಿ, ನಾಡಿನ ಮೂಲೆ ಮೂಲೆಗಳಲ್ಲಿ ಹಬ್ಬಿತು. ಘನ ವಿದ್ವಾಂಸರಿಂದ ಮೆಚ್ಚುಗೆಯ ಮಾತುಗಳು ಕೇಳಿಬಂದವು. ಬ್ರಹ್ಮಸೂತ್ರಗಳಿಗೆ ಬರೆದ ಶಂಕರರ ಭಾಷ್ಯವನ್ನು ಅರ್ಥೈಸಿಕೊಳ್ಳಲು ಮಿಶ್ರಾರವರ ವ್ಯಾಖ್ಯಾನವನ್ನೇ ಇಂದು ಎಲ್ಲರೂ ಅನುಸರಿಸುವಂತಾಗಿದೆ.ಇಂಥ ಸ್ತ್ರೀಯರ ತ್ಯಾಗ-ತಪಸ್ಸುಗಳಿಂದಾಗಿ, ನಮ್ಮ ಭಾರತೀಯ ತತ್ವಶಾಸ್ತ್ರ, ಆಧ್ಯಾತ್ಮಿಕ ಜ್ಞಾನ-ವಿಜ್ಞಾನ ಕ್ಷೇತ್ರಗಳೆಲ್ಲ ಶ್ರೀಮಂತವಾಗಿವೆ. ನಮ್ಮ ಭಾರತವನ್ನು ಬೆಳಗಿದವರು ಇಂಥ 'ಭಾಮತಿ'ಯರು, ಮೌನ ತಪಸ್ವಿನಿಯರು. ಈಗಲೂ ಅಲ್ಲಲ್ಲಿ, ನಮ್ಮ ಪರಿಸರದಲ್ಲಿ, ಮನೆ ಮನೆಗಳಲ್ಲಿ ಇಂಥವರು ಕಂಡುಬರುತ್ತಾರೆ. ನಮಗೆ ನೋಡುವ ದೃಷ್ಟಿ ಇರಬೇಕಷ್ಟೆ. ಇಂಥ ತ್ಯಾಗ, ತಪ, ಸಹನೆ, ತಾಳ್ಮೆಗಳು ನಮ್ಮೆಲ್ಲರಿಗೂ ಸ್ಫೂರ್ತಿಯಾಗಬಲ್ಲವು...

ಮನಸ್ಸಿದ್ದರೆ ಮಾರ್ಗ

• ಮಂಜುನಾಥ ಡಿ.ಎಸ್., ಬೆಂಗಳೂರು

'ಮನಸ್ಸಿದ್ದರೆ ಮಾರ್ಗ', 'ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ'- ದೃಢ ಸಂಕಲ್ಪದ ಅಪಾರ ಶಕ್ತಿಯನ್ನು ಮನವರಿಕೆ ಮಾಡಿಕೊಡುವ ಇಂಥ ಹಲವಾರು ಲೋಕೋಕ್ತಿಗಳನ್ನು ಕೇಳಿರುತ್ತೇವೆ. ಸಂಕಲ್ಪ ಶಕ್ತಿಯಿಂದ ಸಾಧನೆಗೈದ ಹಲವಾರು ವ್ಯಕ್ತಿಗಳ ಉದಾಹರಣೆಗಳನ್ನು ಸಹ ಗಮನಿಸಿರುತ್ತೇವೆ. ಇತ್ತೀಚಿನ ಮುಕ್ತಿನಾಥ ಯಾತ್ರೆಯ ಸಂದರ್ಭದಲ್ಲಿ ನಾನು ಕಂಡ ಹಿರಿಯರೊಬ್ಬರು ಈ ನಾಣ್ನುಡಿಗಳನ್ನು ಮತ್ತೆ ನೆನಪಿಸಿದರು. ಮನಸ್ಸಿನ ಆಣತಿಯನ್ನು ದೇಹ ಪಾಲಿಸುತ್ತದೆ ಎಂಬುದಕ್ಕೆ ಪುರಾವೆಯಾಗಿ ಗೋಚರಿಸಿದರು.

ಮುಕ್ತಿನಾಥ ಮಂದಿರ ಸಮುದ್ರ ಮಟ್ಟದಿಂದ ಸುಮಾರು ಹನ್ನೆರಡು ಸಾವಿರ ಅಡಿಗಳಷ್ಟು ಎತ್ತರದಲ್ಲಿದೆ. ಹಾಗಾಗಿ ಅಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆ ಇರುತ್ತದೆ. ನಾನು ಹೋಗಿದ್ದಾಗ ಅಲ್ಲಿನ ತಾಪಮಾನ ಸುಮಾರು ಐದಾರು ಡಿಗ್ರಿ ಸೆಲ್ಸಿಯಸ್ ಇತ್ತು. ಮಂದಿರವನ್ನು ತಲುಪಲು ಅಂದಾಜು ಮುನ್ನೂರು ಮೆಟ್ಟಿಲುಗಳನ್ನು ಹತ್ತಬೇಕು. ಅವುಗಳಲ್ಲಿ ಕೆಲವು ಕಡಿದಾಗಿದ್ದವು. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ನಡುವಯಸ್ಸಿನವರೂ ಮೆಟ್ಟಿಲುಗಳನ್ನೇರಲು ಹರಸಾಹಸ ಪಡುತ್ತಿದ್ದರು. ಅಲ್ಲಲ್ಲಿ ನಿಂತೋ ಕುಳಿತೋ ಸಾವರಿಸಿಕೊಳ್ಳುತ್ತಿದ್ದರು. ಅನೇಕರು ಡೋಲಿಯಲ್ಲಿ ಅಥವಾ ಕುದುರೆಯ ಮೇಲೆ ಕುಳಿತು ಮಂದಿರಕ್ಕೆ ಹೋಗುತ್ತಿದ್ದರು.

ಅಂತೂ ಇಂತೂ ನಡೆದುಕೊಂಡೇ ಹೋಗಿ ಮುಕ್ತಿನಾಥನ ದರ್ಶನ ಮಾಡಿ ಹಿಂದಿರುಗುತ್ತಿದ್ದಾಗ ಅರ್ಧ ದಾರಿಯಲ್ಲಿ ಹಿರಿಯರೊಬ್ಬರು ಊರುಗೋಲೊಂದನ್ನು ಹಿಡಿದು ಮೆಟ್ಟಿಲುಗಳನ್ನು ಹತ್ತಿಬರುತ್ತಿರುವುದನ್ನು ಕಂಡೆ. ಅವರೊಡನಿದ್ದ ಕುಟುಂಬದವರಿಂದ ಆ ಹಿರಿಯರು ತೊಂಬತ್ತರ ಇಳಿವಯಸ್ಸಿನವರೆಂದು ತಿಳಿದು ಮೂಕವಿಸ್ಮಿತನಾದೆ. ಮುಕ್ತಿನಾಥನ ದರ್ಶನ ಮಾಡಲು ಹಂಬಲಿಸಿದ್ದ ಆ ಹಿರಿಯರು ದೇವರ ದರ್ಶನಕ್ಕೆ ಪರಾವಲಂಬಿಯಾಗಿ ಹೋಗುವುದಿಲ್ಲವೆಂದು ತೀರ್ಮಾನಿಸಿದ್ದರಂತೆ. ಡೋಲಿಯಲ್ಲಿ ಹೋಗಿರೆಂಬ ಕುಟುಂಬಸ್ಥರ ಸಲಹೆಯನ್ನು ಅವರು ವಿನಮ್ರತೆಯಿಂದ ತಿರಸ್ಕರಿಸಿದ್ದರಂತೆ. ಅಲ್ಲದೆ ಜತೆಗಿದ್ದ ಸದಸ್ಯರ ಆಸರೆಯನ್ನೂ ಅವರು ನಿರಾಕರಿಸಿದ್ದರು. ತಾವೇ ನಿಧಾನವಾಗಿ ಮೆಟ್ಟಿಲುಗಳನ್ನು ಹತ್ತಿ ಸಾಗುತ್ತಿದ್ದರು. ಸ್ವಲ್ಪ ಹೊತ್ತು ನಿಂತು ವಿರಮಿಸುತ್ತಿದ್ದ ಅವರ ಮುಖದಲ್ಲಿ ಆಯಾಸದ ಕುರುಹು ಕಿಂಚಿತ್ತೂ ಇರಲಿಲ್ಲ. ಆ ವಯೋವೃದ್ಧರ ಇಚ್ಛಾಶಕ್ತಿಗೆ ಶರಣೆನ್ನುತ್ತಾ, ಅವರಿಗೆ ವಂದಿಸಿ, ಅಂಥ ಮನೋಭಾವವನ್ನು ನನಗೂ ನೀಡಲೆಂದು ಭಗವಂತನಲ್ಲಿ ಮೊರೆಯಿಟ್ಟೆ....

ಕಾಡು ಉಳಿದರಷ್ಟೇ ನಾಡು ಉಳಿದೀತು

ಕಾಡು ಕಾಡೆಂದರೆ, ಕಾಡೇನ ಬಣ್ಣಿಸಲಿ...

• ಶಿವಯೋಗಿ ಎಂ.ವಿ., ರಾಂಪುರ

ಕಾಡು ಎಂಬುದು ಕೇವಲ ಮರಗಿಡಗಳ ಗುಂಪು ಅಲ್ಲ; ಅದು ಜೀವವೈವಿಧ್ಯಗಳ ಕಣಜ, ನಮ್ಮ ಉಸಿರಿನ ಮೂಲ. ಅಮೆಜಾನ್ ಮಳೆಕಾಡುಗಳನ್ನು 'ವಿಶ್ವದ ಆಮ್ಲಜನಕದ ಕಣಜ' ಎಂದು ಕರೆಯುವುದನ್ನು ನೋಡಿದರೆ, ಕಾಡಿನ ಮಹತ್ವ ಅರಿವಾಗುತ್ತದೆ. ಭೌಗೋಳಿಕ ಪ್ರದೇಶದ ಶೇ.33ರಷ್ಟು ಹಸಿರು ಹೊದಿಕೆ ಇರಬೇಕು ಎಂಬ ಜಾಗತಿಕ ಮಾನದಂಡದಿಂದ ನಾವು ದೂರವಿದ್ದೇವೆ (ಕರ್ನಾಟಕದಲ್ಲಿರುವ ಪ್ರಮಾಣ ಸುಮಾರು ಶೇ.21ರಷ್ಟು). ಇದು ದುರದೃಷ್ಟಕರ ಸಂಗತಿ. ಪರಿಸ್ಥಿತಿ ಹೀಗಿರುವಾಗ, ಇರುವ ಅರಣ್ಯವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಬೇಕು.

• **ಸಂರಕ್ಷಣೆ ಅನಿವಾರ್ಯ**

ನಮ್ಮ ಪೂರ್ವಿಕರು ಪ್ರಕೃತಿ ಸಂರಕ್ಷಣೆಯನ್ನು ಒಂದು ಆರಾಧನೆಯಾಗಿ ಬೆಳೆಸಿದ್ದರು. ಊರಿನ ಮಧ್ಯೆ ಅತಿ ಹೆಚ್ಚು ಆಮ್ಲಜನಕ ನೀಡುವ ಅರಳಿಮರವನ್ನು ನೆಟ್ಟು ಪೂಜಿಸುವುದು, 'ದೇವರ ಕಾಡು' ಎಂದು ಹೆಸರಿಟ್ಟು ಬೆಟ್ಟ-ಗುಡ್ಡಗಳನ್ನು ರಕ್ಷಿಸುವುದು- ಇವು ನೂರಾರು ವರ್ಷಗಳ ಹಿಂದೆಯೇ ರೂಪುಗೊಂಡ ನಮ್ಮ ಸಂವಿಧಾನ. ಇದೇ ಆಶಯವನ್ನು ನಮ್ಮ ಈಗಿನ ಸಂವಿಧಾನವೂ ಎತ್ತಿ ಹಿಡಿದಿದೆ. ಭಾರತದ ಸಂವಿಧಾನದ 51(ಎ) ಕಲಂ ಸ್ಪಷ್ಟವಾಗಿ ಹೇಳುವಂತೆ, ಅರಣ್ಯ, ಸರೋವರ, ನದಿ, ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಮತ್ತು ಸುಧಾರಿಸುವುದು, ಜೀವಿಗಳ ಬಗ್ಗೆ ಸಹಾನುಭೂತಿ ಹೊಂದಿರುವುದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಕರ್ತವ್ಯ. ಆದರೆ, ''ಪ್ರಕೃತಿ, ಪರಿಸರ ಇರುವುದು ಮನುಷ್ಯನ ಅವಶ್ಯಕತೆ ಪೂರೈಸುವುದಕ್ಕೇ ಹೊರತು, ದುರಾಸೆ ಪೂರೈಸುವುದಕ್ಕಲ್ಲ'' ಎಂಬ ಮಹಾತ್ಮ ಗಾಂಧಿಯವರ ಮಾತನ್ನು ನಾವು ಮರೆತಿದ್ದೇವೆ:

• **ಹುಲಿಗಳ ಸಾವು**

ಕಳೆದ 50 ವರ್ಷಗಳಲ್ಲಿ 'ಹುಲಿ ಯೋಜನೆ' ಯಶಸ್ವಿಯಾಗಿ ದೇಶದಲ್ಲಿನ ಹುಲಿಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿದೆ. ಆದರೆ, ಇತ್ತೀಚೆಗೆ ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಕಾನನದಲ್ಲಿ ಒಂದಷ್ಟು ಹುಲಿಗಳು ಸತ್ತವು; ಇದು ನಿಜಕ್ಕೂ ನಾವೆಲ್ಲರೂ ತಲೆ ತಗ್ಗಿಸಬೇಕಾದ ಸಂಗತಿ.

• **ಬದುಕಿನ ಸಮೀಕರಣ**

ಗಾಂಧೀಜಿ ಹೇಳಿದಂತೆ, ಪ್ರಕೃತಿಯು ಮನುಷ್ಯನ ಅವಶ್ಯಕತೆ ಪೂರೈಸಲು ಸಾಕು, ಆದರೆ ದುರಾಸೆಗೆ ಸಾಲುವುದಿಲ್ಲ. ನಾವು ಪ್ರಕೃತಿಗೆ ದಯೆ ತೋರದಿದ್ದರೆ, ಪ್ರಕೃತಿ ನಮ್ಮನ್ನು ಕ್ಷಮಿಸುವುದಿಲ್ಲ. ಕಾಡು ನಾಶವಾದರೆ ವನ್ಯಜೀವಿಗಳೂ ನಾಶವಾಗುತ್ತವೆ. ವನ್ಯಜೀವಿಗಳು ನಾಶವಾದರೆ ಪರಿಸರದ ಸಮತೋಲನ ಕುಸಿಯುತ್ತದೆ. ಅಂತಿಮವಾಗಿ, ಮನುಷ್ಯನೇ ನಾಶವಾಗುತ್ತಾನೆ.

• **ನಮ್ಮ ಜವಾಬ್ದಾರಿ ಏನು?**

ಈ ಜಗತ್ತು ನಮ್ಮ ಪಿತ್ರಾರ್ಜಿತ ಆಸ್ತಿಯಲ್ಲ, ಬದಲಿಗೆ ಹಿಂದಿನ ಪೀಳಿಗೆಯಿಂದ ನಾವು ಪಡೆದಿರುವ ಸಾಲ. ಇದನ್ನು ಜತನವಾಗಿ ಕಾಪಾಡಿ ಮುಂದಿನವರಿಗೆ ಇರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹಿತಮಿತವಾಗಿ ಅರಣ್ಯ ಸಂಪನ್ಮೂಲ ಬಳಕೆ, ಮರುಬಳಕೆಗೆ ಒತ್ತು ನೀಡುವುದು, ಅರಣ್ಯ ಸಂರಕ್ಷಣಾ ಕಾಯ್ದೆ ಹಾಗೂ ವನ್ಯಜೀವಿ ಸಂರಕ್ಷಣಾ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಈಗಿನ ತುರ್ತು.

ಕಾಡನ್ನು ರಕ್ಷಿಸುವ ಹೊಣೆ ಸರಕಾರದ್ದಷ್ಟೇ ಅಲ್ಲ, ಅದು ಪ್ರತಿಯೊಬ್ಬ ನಾಗರಿಕನ ವೈಯಕ್ತಿಕ ಬದ್ಧತೆಯಾಗಬೇಕು. ಹುಲಿಗಳ ಸಾವಿನ ದುರಂತ ಇನ್ನು ಮುಂದೆ ಸಂಭವಿಸದಿರಲಿ. ಕಾಡಿನ ಸಂಪನ್ಮೂಲಗಳ ಮೇಲಿನ ಅತಿಯಾದ ಹಸ್ತಕ್ಷೇಪಕ್ಕೆ ಕಡಿವಾಣ ಹಾಕಿ, ನಾವು ಮತ್ತು ಪ್ರಕೃತಿ ಸಮತೋಲನದಲ್ಲಿ ಬದುಕೋಣ...



ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2	3		4	■	5	
	■	■		■	6			■
7	8			■		■	9	10
■		■	■	11		■	■	
12			■		■	13	14	
	■	■	15		■	■		■
16	17	■		■	18			19
■	20			■		■	■	
21		■	22				■	

ಎಡದಿಂದ ಬಲಕ್ಕೆ

2. ತಪ್ಪಿಸಿಕೊಳ್ಳುವಿಕೆ ಅಥವಾ ಪರಾರಿ (4)
5. ಅನುಮಾನಕ್ಕೆ ಎರಡೇ ಅಕ್ಷರ (2)
6. ವ್ಯಾಪಾರಿ (3)
7. ಸಿಹಿಯಾದ ಮಧು (4)
9. ವಿರಮಿಸಿದ ಸೂರ್ಯ (2)
11. ಸುತ, ತನಯ (2)
12. ನಾಕ ತೋರಿಸುವ ಮುಖಂಡ (3)
13. ಮೊಸಳೆಗೆ ಮತ್ತೊಂದು ಹೆಸರಿದು (3)
15. ಸತ್ಯವೇ ಇದು (2)
16. ಮಂಗಳನಿಗೆ ಮತ್ತೊಂದು ಹೆಸರು (2)
18. ನಾಲ್ಕಕ್ಷರದ ಪೂಜೆ (4)
20. ವಾದ್ಯವನ್ನು ಬಾರಿಸುವವ (3)
21. ಭೈರಪ್ಪನವರ ಕಾದಂಬರಿಯೊಂದನ್ನು ನೆನಪಿಸುವ ಸಂಚಾರ (2)
22. ಯುದ್ಧಭೂಮಿಗೆ ಮತ್ತೊಂದು ಹೆಸರು (4)

ಮೇಲಿಂದ ಕೆಳಕ್ಕೆ

1. ಮೋಸ ಮಾಡದಂತೆ ಬಂದಿದೆ ಕರಿದ ತಿಂಡಿ (3)
3. ಕಂದೀಲು ಅಥವಾ ಲಾಂದ್ರ (3)
4. ದೇವಾಲಯದ ಸಭಾಮಂಟಪ (4)
5. ಶಿವನಿಗೆ ಇನ್ನೊಂದು ಹೆಸರು (3)
8. ಆಶ್ಚರ್ಯ ಅಥವಾ ಅಚ್ಚರಿ (3)
10. ವಿನೋದವಾಗಿ ಕಾಲಕಳೆಯುತ್ತ ಸುತ್ತಾಡುವುದು (3)
11. ಪೂಜೆಯ ವೇಳೆ ಉಡುವ ವಿಶೇಷ ಪಂಚೆ (3)
12. ನಯವಾದುದು ಅಥವಾ ಓರಣ (3)
14. ಪೂಜೆಯಲ್ಲಿ ನೀರು ತುಂಬಿಡುವ ಕೊಡ (3)
15. ಚುಟುಕುಬ್ರಹ್ಮ ಎನಿಸಿದ ಇವರ ಹೆಸರಿನ ಪೂರ್ವಾರ್ಧ ಮಾತ್ರ ಇದೆ (4)
17. ಜನರ ನಡುವಿನ ಸೇವಕ (3)
18. ಹರಿಯುವ ಹಾವು (3)
19. ಗಡಿ ದಾಟಿದಾಗ ಉಂಟಾದ ಶೀತಬಾಧೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2.ಪಲಾಯನ 5.ಶಂಕೆ 6.ವರ್ತಕ 7.ಸವಿಜೇನು 9.ರವಿ 11.ಮಗ 12.ನಾಯಕ 13.ಮಕರ 15.ದಿಟ 16.ಕುಜ 18.ಉಪಾಸನೆ 20.ವಾದಕ 21.ಯಾನ 22.ರಣಾಂಗಣ

ಮೇಲಿಂದ ಕೆಳಕ್ಕೆ
1.ಸಮೋಸ 3.ಲಾಟೀನು 4.ನವರಂಗ 5.ಶಂಕರ 8.ವಿಸ್ಮಯ 10.ವಿಹಾರ 11.ಮಗುಟ 12.ನಾಜೂಕು 14.ಕಳಸ 15.ದಿನಕರ 17.ಜವಾನ 18.ಉರಗ 19.ನೆಗಡಿ

ತಂದೆ-ತಾಯಿಯರ ಸೇವೆಗಿಂತ ಮಿಗಿಲಾದ ಪುಣ್ಯ ಯಾವುದೂ ಇಲ್ಲ

ವಿಷ್ಣುವಿನ ಭಕ್ತರಾದ ಜಾನುದೇವ -ಸತ್ಯವತಿ ಎಂಬ ಬ್ರಾಹ್ಮಣ ದಂಪತಿಗೆ ವಿಷ್ಣು ಅಂಶದ ಪುತ್ರನ ಜನನವಾಯಿತು. ಅವನಿಗೆ ಪುಂಡಲೀಕ ಎಂದು ಹೆಸರಿಟ್ಟರು. ಇವನು ಸಹವಾಸ ದೋಷದಿಂದಾಗಿ, ದುಶ್ಚಟಗಳೇ ಮೈವೆತ್ತಂತೆ ದುಷ್ಟ ಮಗನಾಗಿ ಬೆಳೆದು ಕಳ್ಳನಾದನು, ವೃದ್ಧರಾದ ತಂದೆ-ತಾಯಿಗಳನ್ನು ದೂರ ಮಾಡಿದನು. ಕೆಲವು ಕಾಲ ಕಳೆಯಿತು. ಕಾಶಿ ವಿಶ್ವನಾಥನ ದರ್ಶನ ಮಾಡಿದರೆ ಸಕಲ ಪಾಪಗಳಿಂದ ಮುಕ್ತಿಯಾಗುತ್ತದೆ ಎಂಬ ಸುದ್ದಿ ಕೇಳಿ, ತನ್ನ ಪಾಪಗಳನ್ನು ಕಳೆದುಕೊಳ್ಳುವ ಸಲುವಾಗಿ ಕಾಶಿಗೆ ಯಾತ್ರೆ ಹೊರಟನು. ಖರ್ಚಿಗೆ ದಾರಿ ಮಧ್ಯದಲ್ಲಿ ಸುಲಿಗೆ ಮಾಡುತ್ತಾ ಅಲ್ಲಲ್ಲೇ ರಾತ್ರಿ ಕಳೆದು ಸಾಗುತ್ತಿದ್ದನು.

ಒಂದು ದಿನ ಕತ್ತಲಾದಾಗ, ಒಂದು ಆಶ್ರಮದ ಮುಂದೆ ತಂಗಿದನು. ಅದು ಕುಕ್ಕುಟ ಮುನಿಗಳ ಆಶ್ರಮವಾಗಿತ್ತು. ಮರದ ಕೆಳಗೆ ಕುಳಿತು ನೋಡುತ್ತಿದ್ದಂತೆ ಕಳಾಹೀನವಾದ ಮುಖ, ನಿಶ್ಶಕ್ತ ಶರೀರದ ಮೂರು ಜನ ಮಹಿಳೆಯರು ಗುಡಿಸಲ ಒಳಗೆ ಹೋದರು, ನಂತರ ಗುಡಿಸಲನ್ನು ಸ್ವಚ್ಛಗೊಳಿಸಿ, ಮುನಿಗಳ ಸೇವೆ ಮಾಡಿ ಮುಂಜಾನೆ ಹೊರಗೆ ಬರುವಾಗ ಸುಂದರವಾಗಿ, ಸದೃಢವಾಗಿ ಬಂದರು. ಪುಂಡಲೀಕನಿಗೆ ಆಶ್ಚರ್ಯವಾಗಿ ಅವರನ್ನು ತಡೆದು ನಿಲ್ಲಿಸಿ ಜೋರುಮಾಡಿ ಕಾರಣ ಕೇಳಿದ. ಹೇಳದಿದ್ದರೆ ಬಿಡುವುದಿಲ್ಲ ಎಂದು ಅವರನ್ನು ಅಡ್ಡಗಟ್ಟಿದ.

ಆಗ ತರುಣಿಯರು ಹೇಳಿದರು- ''ನಾವು ಗಂಗಾ-ಯಮುನಾ-ಸರಸ್ವತಿ ನದಿಗಳು. ನಮ್ಮ ಒಡಲಲ್ಲಿ ಮನುಷ್ಯರು ಸ್ನಾನ ಮಾಡಿ ತಾವು ಮಾಡಿದ ಪಾಪಕರ್ಮಗಳನ್ನು ತೊಳೆದುಕೊಳ್ಳುತ್ತಾರೆ. ಆ ಪಾಪದ ಫಲವನ್ನು ಹೊತ್ತ ನಾವು ವೃದ್ಧರಾಗಿ ಬಳಲಿ ಕುರೂಪಿಗಳಾಗುತ್ತೇವೆ. ಸಂಜೆಯಾಗುತ್ತಲೇ ನಾವು ಕುಕ್ಕುಟ ಮುನಿಗಳ ಆಶ್ರಮಕ್ಕೆ ಬಂದು ಆ ಪುಣ್ಯವಂತರ ಸೇವೆ ಮಾಡಿ, ಪಾಪಗಳಿಂದ ಮುಕ್ತಿ ಪಡೆದು ಲವಲವಿಕೆಯಿಂದ ಹೊರಡುತ್ತೇವೆ'' ಎಂದು ಹರಸಿ ಹೊರಟರು. ಪುಂಡಲೀಕನು ಪುಣ್ಯವಂತರಾದ ಕುಕ್ಕುಟ ಮುನಿಗಳ ಕುರಿತು ತಿಳಿಯಲು ಆಶ್ರಮದ ಒಳಗೆ ಬಂದನು. ಆಗಲೇ ಅವನ ಮನಸ್ಸು ಬದಲಾದಂತೆ ಅನಿಸಿತು. ಅವರನ್ನು ಕೇಳಿದನು- ''ನಿಮ್ಮ ಕುಟೀರಕ್ಕೆ ದೇವತೆಗಳಾದ ಗಂಗಾ-ಯಮುನಾ-ಸರಸ್ವತಿಯರೇ ಬಂದು ಸ್ವಚ್ಛ ಮಾಡಿ ಹೋಗಿದ್ದನ್ನು ನೋಡಿದೆ. ಅಂಥ ದೇವಾನುದೇವತೆಗಳೇ ನಿಮ್ಮ ಸೇವೆ ಮಾಡಲಿಕ್ಕಾಗಿ ಬರಲು ನೀವು ಮಾಡುವ ಕಠಿಣ ತಪಸ್ಸು ಯಾವುದು?''.

ಮುನಿಗಳು ಹೇಳಿದರು, ''ನಾನು ಯಾವ ತಪಸ್ಸನ್ನೂ ಮಾಡುತ್ತಿಲ್ಲ. ತಪಸ್ಸು ಮಾಡಿ ಒಲಿಸಿಕೊಳ್ಳಲು ನನಗೆ ಸಮಯವಿಲ್ಲ. ವೃದ್ಧರಾದ ನನ್ನ ತಂದೆ-ತಾಯಿಯರ ಸೇವೆ ಮಾಡುವುದು, ಅವರನ್ನು ಚೆನ್ನಾಗಿ ನೋಡಿಕೊಳ್ಳುವುದು ಮಾತ್ರ ನನ್ನ ಕೆಲಸ, ಬೇರೇನೂ ಮಾಡುವುದಿಲ್ಲ''. ನಂತರ ಅವರು, ಪುಂಡಲೀಕನು ಪುಣ್ಯ ಪಡೆಯಲು ಕಾಶಿಗೆ ಹೋಗುತ್ತಿರುವ ವಿಷಯ ಕೇಳಿ, ''ನೀನು ಪುಣ್ಯ ಪಡೆಯಲು ಎಲ್ಲಿಗೂ ಹೋಗಬೇಕಾಗಿಲ್ಲ. ಭಗವಂತನ ನಾಮಸ್ಮರಣೆ ಮಾಡುತ್ತಾ, ನಿನ್ನ ತಂದೆ-ತಾಯಿಯರ ಸೇವೆ ಮಾಡಿದರೆ ಸಕಲ ಪಾಪಗಳಿಂದ ಮುಕ್ತಿ ದೊರಕಿ, ಪುಣ್ಯ ಲಭಿಸುತ್ತದೆ'' ಎಂದರು. ಮುನಿಗಳ ಉಪದೇಶದಿಂದ ಪುಂಡಲೀಕನಿಗೆ ತನ್ನ ತಪ್ಪಿನ ಅರಿವಾಗಿ, ಕಾಶಿಗೆ ಹೋಗುವುದನ್ನು ಬಿಟ್ಟು ವಾಪಸಾದನು. ತಂದೆ-ತಾಯಿಯರಲ್ಲಿ ಕ್ಷಮೆ ಬೇಡಿ, ಆ ಕ್ಷಣದಿಂದಲೇ ಅವರ ಸೇವೆಯಲ್ಲಿ ತೊಡಗಿದನು. ನಿರಂತರ ಹರಿನಾಮಸ್ಮರಣೆಗೆ ಶುರುವಿಟ್ಟುಕೊಂಡನು. ಹೀಗೆಯೇ ವರ್ಷಗಳು ಉರುಳಿದವು.

ಹೀಗಿರುವಾಗ ಒಮ್ಮೆ ಕೃಷ್ಣನ ಜತೆ ಕೋಪಗೊಂಡ ರುಕ್ಮಿಣಿ ತವರುಮನೆಗೆ ಬಂದಳು. ಅವಳನ್ನು ಬಿಟ್ಟಿರಲಾರದ ಕೃಷ್ಣನೂ ಅವಳನ್ನು ಹುಡುಕಿಕೊಂಡು ಮಥುರಾ-ಗೋಕುಲ-ದ್ವಾರಕ ಎಲ್ಲಾ ಕಡೆಗೂ ಸುತ್ತಿ ಮಹಾರಾಷ್ಟ್ರಕ್ಕೆ ಬಂದನು. ತವರಿನಲ್ಲಿದ್ದ ರುಕ್ಮಿಣಿಯನ್ನು ಕಂಡು ಸಮಾಧಾನ ಮಾಡಿದನು. ನಂತರ ಕೃಷ್ಣನು ತನ್ನ ಭಕ್ತ ಪುಂಡಲೀಕನನ್ನು ನೋಡಲು ಅವನ ಮನೆಯ ಬಳಿ ಬಂದನು. ಬಾಗಿಲಲ್ಲಿ ನಿಂತು 'ಪುಂಡಲೀಕ' ಎಂದು ಕೃಷ್ಣ ಕೂಗುತ್ತಾನೆ. ಪುಂಡಲೀಕ ತಂದೆ-ತಾಯಿಯ ಸೇವೆ ಮಾಡುತ್ತಿದ್ದವನು ತಿರುಗಿ ನೋಡದೆ, ''ಸೇವೆ ಮುಗಿಸಿ ಬರುತ್ತೇನೆ'' ಎಂದನು. ಆಗ ಕೃಷ್ಣನು ನಗುತ್ತಾ, ''ನೀನು ಬರುವ ತನಕ ನಾನು ಎಲ್ಲಿ ನಿಲ್ಲಲಿ?'' ಎಂದು ಕೇಳಿದಾಗ, ಪುಂಡಲೀಕನು ತನ್ನ ಬಳಿ ಇದ್ದ ಒಂದು ಇಟ್ಟಿಗೆಯನ್ನು ತಳ್ಳಿ, ''ಇದರ ಮೇಲೆ ನಿಂತಿರು'' ಎಂದನು. ಮರು ಮಾತನಾಡದೆ ಕೃಷ್ಣನು ಕೈಗಳನ್ನು ಸೊಂಟದ ಮೇಲಿಟ್ಟುಕೊಂಡು, ಪುಂಡಲೀಕನು ತಂದೆ-ತಾಯಿಯರ ಸೇವೆ ಮಾಡುವುದನ್ನು ನೋಡುತ್ತಾ ನಿಂತನು.

ಪುಂಡಲೀಕ ತನ್ನ ತಂದೆ-ತಾಯಿಯರ ಸೇವೆ ಮುಗಿಸಿ ಹೊರಗೆ ಬಂದು ಸಾಕ್ಷಾತ್ ಭಗವಂತನೇ ನಿಂತಿರುವುದನ್ನು ಕಂಡು ಪುಳಕಿತನಾಗಿ ಅವನನ್ನು ಸ್ತುತಿಸಿ ಕೈ ಮುಗಿಯುತ್ತಾನೆ ಹಾಗೂ ನೀನು ಇಲ್ಲಿಯೇ ಸ್ಥಿರವಾಗಿ ನೆಲೆಸು ಎಂದು ಅಂಗಲಾಚಿ ಬೇಡಿಕೊಳ್ಳುತ್ತಾನೆ. ಭಕ್ತನ ಮಾತಿನಂತೆ ಕೃಷ್ಣನು ಪತ್ನಿ ರುಕ್ಮಿಣಿ ಸಮೇತ 'ಪಂಢರಿನಾಥ ಪಾಂಡುರಂಗ' ಎಂಬ ಹೆಸರಿನೊಂದಿಗೆ ಅಲ್ಲೇ ನೆಲೆಸಿದನು. ಇದೇ ಮುಂದೆ 'ಪಂಢರಾಪುರ' ಎಂಬ ಪುಣ್ಯಕ್ಷೇತ್ರವಾಗಿ ಬೆಳೆಯಿತು.

ತಮ್ಮ ಆಯಸ್ಸನ್ನು ಎಲ್ಲಾ ಮಕ್ಕಳ ಶ್ರೇಯಸ್ಸಿಗೆ, ಅಭಿವೃದ್ಧಿಗೆ ವ್ಯಯಿಸಿ ಕೇವಲ ಅವರ ಸುಖಕ್ಕಾಗಿ ಬದುಕುವ ತಂದೆ ತಾಯಿಗಳು, ವೃದ್ಧಾಪ್ಯದಲ್ಲಿದ್ದಾಗ ಮತ್ತೆ ಪುಟ್ಟ ಮಕ್ಕಳಂತಾಗುತ್ತಾರೆ. ಕೈಲಾಗದ ಮಕ್ಕಳಂತೆ ಹಠ ಮಾಡುವ ಅವರನ್ನು ಸಮಾಧಾನದಿಂದ ಪ್ರೀತಿಯಿಂದ ನೋಡಿಕೊಳ್ಳುವುದಕ್ಕಿಂತ ಪುಣ್ಯದ ಕೆಲಸ ಮತ್ತಾವುದೂ ಇಲ್ಲ. ಇದು ಎಲ್ಲಾ ತೀರ್ಥಯಾತ್ರೆಗಳಿಗಿಂತಲೂ, ತಪಸ್ಸಿಗಿಂತಲೂ ಮಿಗಿಲಾದದ್ದು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಪ್ರೊ ಕಬಡ್ಡಿ ಲೀಗ್ ಬೆಂಗಾಲ್‌ಗೆ ಜಯ

ದೆಹಲಿ: ರೋಚಕವಾಗಿದ್ದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ತಂಡವು ಟೈಬ್ರೇಕರ್‌ನಲ್ಲಿ 7-5ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು. ಇಲ್ಲಿನ ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಮೊದಲ ಪಂದ್ಯದಲ್ಲಿ, ನಾಯಕ ದೇವಾಂಕ್ ದಲಾಲ್ ಅವರ ಆಕರ್ಷಕ ಆಟದ ಬಲದಿಂದ ಬೆಂಗಾಲ್ ತಂಡವು ನಿಗದಿತ ಅವಧಿಯಲ್ಲಿ 45-45ರಲ್ಲಿ ಸಮಬಲ ಸಾಧಿಸಿತ್ತು. ಅತ್ಯುತ್ತಮ ಲಯದಲ್ಲಿರುವ ದೇವಾಂಕ್ ಅವರು 18 ಪಾಯಿಂಟ್ಸ್ ಗಳನ್ನು ಕಲೆ ಹಾಕಿ ಮಿಂಚಿದರು. ಅವರು ಈ ಆವೃತ್ತಿಯಲ್ಲಿ 14ನೇ ಬಾರಿ ಸೂಪರ್ ಟೆನ್ ಸಾಧನೆ ಮಾಡಿದರು. ಟೈಟನ್ಸ್ ತಂಡದ ಭರತ್ ಹೂಡಾ (16 ಅಂಕ) ಅವರ ಹೋರಾಟದ ಫಲವಾಗಿ ಪಂದ್ಯವು ರೋಚಕ ಹಣಾಹಣಿಯನ್ನು ಕಂಡಿತು. ಇನ್ನೊಂದು ಪಂದ್ಯದಲ್ಲಿ ಸಾಂಘಿಕ ಆಟವಾಡಿದ ಪುಣೇರಿ ಪಲ್ಟನ್ ತಂಡವು ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು 57-33ರಿಂದ ಸುಲಭವಾಗಿ ಸೋಲಿಸಿತು.

ಧರ್ಮೇಂದ್ರ ಸಿನ್ಹಾಗೆ 7 ವಿಕೆಟ್ | ಶ್ರೇಯಸ್ ಗೋಪಾಲ್ ಆಲ್‌ರೌಂಡ್ ಆಟ

ಇನ್ನಿಂಗ್ಸ್ ಮುನ್ನಡೆಗೆ ಪೈಪೋಟಿ ನಿರೀಕ್ಷೆ

ರಾಜ್‌ಕೋಟ್: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಪಂದ್ಯದಲ್ಲಿ ಇನ್ನಿಂಗ್ಸ್ ಮುನ್ನಡೆ ಸಾಧಿಸಲು ಅತಿಥೇಯ ಸೌರಾಷ್ಟ್ರ ಹಾಗೂ ಕರ್ನಾಟಕ ಭಾರೀ ಪೈಪೋಟಿ ನಡೆಸುತ್ತಿವೆ.

ಬುಧವಾರ ಬೆಳಿಗ್ಗೆ 5 ವಿಕೆಟ್‌ಗೆ 295 ರನ್‌ಗಳಿಂದ ಆಟ ಮುಂದುವರಿಸಿದ ಕರ್ನಾಟಕ, ತನ್ನ ತಂಡದ ಮಂಗಳವಾರದ ಮೊತ್ತಕ್ಕೆ ಕೇವಲ 77 ರನ್ ಸೇರಿಸಿ, ಧರ್ಮೇಂದ್ರ ಸಿನ್ಹಾ ಜಡೇಜಾ ಅವರ ಸ್ಪಿನ್ 372 ರನ್‌ಗೆ ಆಲೌಟ್ ಆಯಿತು. 66 ರನ್ ಗಳಿಸಿ ಅಜೇಯರಾಗಿದ್ದ ಸ್ಮರಣ್ ರವಿಚಂದ್ರನ್ ಆಟ ಮುಂದುವರಿಸಿ, ತನ್ನ ಬುಧವಾರದ ಮೊತ್ತಕ್ಕೆ ಕೇವಲ 11 ರನ್ ಸೇರಿಸಿ 77 ರನ್ ಗಳಿಸಿದ್ದ ವೇಳೆ ಧರ್ಮೇಂದ್ರ ಸಿನ್ಹಾ ಅವರಿಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್ ಸೇರಿದರು.

ಶ್ರೀಜಿತ್ 15 ಬಾಲ್ ಎದುರಿಸಿದ್ದರೂ ಕೇವಲ 5 ರನ್ ಗಳಿಸಿ ಔಟ್ ಆದರು. ಆದರೆ ಶ್ರೇಯಸ್ ಗೋಪಾಲ್ ಕರ್ನಾಟಕ ತಂಡವನ್ನು ಆಧರಿಸಿದರು. 95 ಬಾಲ್‌ಗಳನ್ನು ಎದುರಿಸಿದ ಅವರು, ಅರ್ಧ ಶತಕ (56) ಗಳಿಸುವಲ್ಲಿ ಶಕ್ತರಾದರು. ಅವರ ಇನ್ನಿಂಗ್ಸ್‌ನಲ್ಲಿ 3 ಸಿಕ್ಸರ್ ಮತ್ತು 4 ಬೌಂಡರಿಗಳಿದ್ದವು.

ಬಳಿಕ ಕ್ರೀಸ್‌ಗೆ ಬಂದ ಶಿಖರ್ ಶೆಟ್ಟಿ 57 ಬಾಲ್‌ಗಳನ್ನು ಎದುರಿಸಿ 41 ರನ್ ಗಳಿಸುವಲ್ಲಿ ಯಶಸ್ವಿಯಾದರು. ಆದರೆ ಬಳಿಕ ಕರ್ನಾಟಕದ ಆಟಗಾರರು ಉತ್ತಮ ಮೊತ್ತ ಗಳಿಸುವಲ್ಲಿ ವಿಫಲರಾದರು. ಎಂ.ವೆಂಕಟೇಶ್ ಯಾವುದೇ ರನ್ ಗಳಿಸದೆ ಔಟ್ ಆದರು. ಮೊಹಸಿನ್ ಖಾನ್ 4 ಬಾಲ್‌ಗಳಲ್ಲಿ 1 ರನ್ ಮತ್ತು ಅಭಿಲಾಷ್ ಶೆಟ್ಟಿ ಕೇವಲ 2 ರನ್ ಗಳಿಸಿ ಅಜೇಯರಾಗುಳಿದರು.

ಸೌರಾಷ್ಟ್ರ ಪರ ಧರ್ಮೇಂದ್ರ ಮೊನಚಿನ ಬೌಲಿಂಗ್ ದಾಳಿ

ಶ್ರೇಯಸ್ ಗೋಪಾಲ್ ಆಲ್‌ರೌಂಡ್ ಆಟ

ಸೌರಾಷ್ಟ್ರ ಪರ ಧರ್ಮೇಂದ್ರ ಸಿನ್ಹಾ ಜಡೇಜಾ 124 ರನ್ ನೀಡಿ 7 ವಿಕೆಟ್ ಗಳಿಸಿ ಮಿಂಚಿದರು.

ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿರುವ ಜಯದೇವ್ ಉನದ್ಕತ್ ನೇತೃತ್ವದ ಸೌರಾಷ್ಟ್ರ ತಂಡವು ಆರಂಭದಲ್ಲಿ ಉತ್ತಮ ಪ್ರದರ್ಶನ ತೋರಿತು. ಎರಡನೇ ದಿನದಾಟದ ಅಂತ್ಯಕ್ಕೆ 4 ವಿಕೆಟ್ ಕಳೆದುಕೊಂಡು 200 ರನ್ ಕಲೆ ಹಾಕಿದ್ದು, ಕರ್ನಾಟಕ ತಂಡದ ಮೊತ್ತ ಸರಿಗಟ್ಟಲು ಸೌರಾಷ್ಟ್ರಕ್ಕೆ ಇನ್ನೂ 172 ರನ್ ಗಳಿಸಬೇಕಿದೆ.

ಸೌರಾಷ್ಟ್ರ ಇನ್ನಿಂಗ್ಸ್ ಆರಂಭಿಸಿದ ಚಿರಾಗ್ ಜಾನಿ ಹಾಗೂ ಹಾರ್ವಿಕ್ ದೇಸಾಯಿ (41) ಮೊದಲ ವಿಕೆಟ್‌ಗೆ 140 ರನ್ ಕಲೆ ಹಾಕಿ, ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಈ ಹಂತದಲ್ಲಿ ದೇಸಾಯಿ ಅವರನ್ನು ಮೊಹಸಿನ್ ಖಾನ್ ಪೆವಿಲಿಯನ್‌ಗೆ ಅಟ್ಟಿದರು. ಬಳಿಕ ಸೌರಾಷ್ಟ್ರ ಪಡೆಯ ಇನ್ನೂ ಮೂರು ವಿಕೆಟ್‌ಗಳು ಬೆನ್ನು ಬೆನ್ನಿಗೆ ಉರುಳಿದವು.

148 ಎಸೆತಗಳಲ್ಲಿ 90 ರನ್ ಗಳಿಸಿದ್ದ ಜಾನಿ, ಕೇವಲ 10 ರನ್ ಅಂತರದಲ್ಲಿ ಶತಕ ವಂಚಿತರಾದರು, ಅವರನ್ನು ಅನುಭವಿ ಶ್ರೇಯಸ್ ಗೋಪಾಲ್ ಕ್ಲೀನ್ ಬೌಲ್ಡ್ ಮಾಡಿದರು. ಜಾನಿ ಹಿಂದೆಯೇ ಜಯ್ ಗೋಹಿಲ್ (3) ಮತ್ತು ಅನ್ ಗೋಸಾಯಿ (19) ಅವರನ್ನೂ ಶ್ರೇಯಸ್ ಔಟ್ ಮಾಡಿದರು.

ಈ ಹಂತದಲ್ಲಿ ಜತೆಯಾಗಿರುವ ಅರ್ಪಿತ್ ವಾಸವಾದ (12) ಹಾಗೂ ಪ್ರೇರಕ್ ಮಂಕಡ್ (20) 5ನೇ ವಿಕೆಟ್‌ಗೆ 39 ರನ್ ಸೇರಿಸಿದ್ದು, ಮೂರನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ. ಸೌರಾಷ್ಟ್ರ ಪಡೆಯ ಮೂರು ವಿಕೆಟ್‌ಗಳನ್ನು ಶ್ರೇಯಸ್ ಗೋಪಾಲ್ ಪಡೆದರೆ, ಒಂದು ವಿಕೆಟ್ ಮೊಹಸಿನ್ ಪಾಲಾಯಿತು.

ಮಹಿಳಾ ವಿಶ್ವಕಪ್: ಬಾಂಗ್ಲಾಕ್ಕೆ ಹೀನಾಯ ಸೋಲು

ಆಸೀಸ್‌ಗೆ ಹತ್ತು ವಿಕೆಟ್ ಗೆಲುವು

ವಿಶಾಖಪಟ್ಟಣ: ಗುರುವಾರ ಇಲ್ಲಿ ನಡೆದ ಮಹಿಳಾ ವಿಶ್ವಕಪ್ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ತಂಡವು ಬಾಂಗ್ಲಾವನ್ನು ಹತ್ತು ವಿಕೆಟ್‌ಗಳಿಂದ ಭರ್ಜರಿಯಾಗಿ ಮಣಿಸಿತು. ಮೊದಲು ಬ್ಯಾಟ್ ಮಾಡಿದ ಬಾಂಗ್ಲಾ 9 ವಿಕೆಟ್‌ಗೆ 198 ರನ್ ಗಳಿಸಿದರೆ, ಗುರಿಯನ್ನು ಬೆಂಬತ್ತಿದ ಆಸೀಸ್ ತಂಡವು ಅಲ್ಲೀಸ ಹೀಲಿ ಅವರ ಆಕರ್ಷಕ ಶತಕ (113) ಮತ್ತು ಫೋಬ್ ಲಿಟ್ಚ್‌ಫೀಲ್ಡ್ ಅವರ ಭರ್ಜರಿ ಬ್ಯಾಟಿಂಗ್ (84) ನೆರವಿನಿಂದ ಕೇವಲ 24.5 ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟ ಇಲ್ಲದೆ ಗೆಲುವಿನ ಗುರಿ ತಲುಪಿತು.

ಬಾಂಗ್ಲಾದೇಶದ ಆರಂಭ ಅಷ್ಟೇನೂ ಉತ್ತಮವಾಗಿರಲಿಲ್ಲ. ತಂಡದ ಸ್ಕೋರ್ 32 ರನ್ ಆದಾಗ 8 ರನ್ ಗಳಿಸಿದ್ದ ಫರ್ಗಾನಾ ಹೋಕ್ಯೂ ತಮ್ಮ ವಿಕೆಟ್ ಕಳೆದುಕೊಂಡರು. ಆದರೆ ರುಬಿ ಹೈದರ್ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ತೋರುವಲ್ಲಿ ಯಶಸ್ವಿಯಾದರು. 59 ಬಾಲ್‌ಗಳನ್ನು ಎದುರಿಸಿದ ಅವರು 44 ರನ್ ಗಳಿಸುವಲ್ಲಿ ಗಳಿಸಿದರು.

ಶರ್ಮಿನ್ ಅಕ್ತರ್ 33 ಬಾಲ್‌ಗಳನ್ನು ಎದುರಿಸಿ 19 ರನ್ ಗಳಿಸಿ ಔಟ್ ಆದರೆ, ನಿಗರ್ ಸುಲ್ತಾನ 12 ರನ್ ಗಳಿಸಿ ಅಲಾನಾ ಕಿಂಗ್ ಅವರ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಶೋಭನಾ ಮೋಸ್ಟರೆ ಕ್ರೀಸ್‌ನಲ್ಲಿ ಬಹಳ ಹೊತ್ತು ನಿಂತು 80 ಬಾಲ್‌ಗಳನ್ನು ಎದುರಿಸಿ 60 ರನ್ ಗಳಿಸುವಲ್ಲಿ ಸಫಲರಾದರು.

ಆ ನಂತರ ಬ್ಯಾಟಿಂಗ್‌ಗೆ ಬಂದ ಬಾಂಗ್ಲಾದ ಎಲ್ಲಾ ಬ್ಯಾಟರ್‌ಗಳು ಎರಡಂಕಿ ತಲುಪಲು ವಿಫಲರಾದರು. ಶೋನಾ ಅಕ್ತರ್ 7 ರನ್, ರಿತು ಮೋನಿ 2 ರನ್, ಫಾಹಿಮಾ ಖತುಮ್ 4 ರನ್, ರಬೆಯಾ ಖಾತುನ್ 6 ರನ್, ನಿಸಿತಾ ಅಕ್ತರ್ 1 ರನ್ ಮತ್ತು ಫರಿಹಾ ತ್ರಿಶಾ ಕೇವಲ 1 ರನ್ ಗಳಿಸಿ ಒಬ್ಬರ ಹಿಂದೆ ಒಬ್ಬರಂತೆ ಪೆವಿಲಿಯನ್ ಪೆರೇಡ್ ನಡೆಸಿದರು.

ಗುರಿ ಬೆಂಬತ್ತಿದ ಆಸ್ಟ್ರೇಲಿಯಾದ ಆರಂಭ ಅತ್ಯುತ್ತಮವಾಗಿತ್ತು. ಆರಂಭಿಕ ಬ್ಯಾಟರ್ ಅಲ್ಲೀಸ ಹೀಲಿ ಮತ್ತು ಫೋಬ್ ಲಿಟ್ಚ್‌ಫೀಲ್ಡ್ ಆಸೀಸ್ ತಂಡಕ್ಕೆ ಭರ್ಜರಿ ಆರಂಭ ನೀಡಿದರು. ಹೀಲಿ ಕೇವಲ 77 ಬಾಲ್‌ಗಳನ್ನು ಎದುರಿಸಿ 113 ರನ್ ಗಳಿಸಿ ಅಜೇಯರಾಗುಳಿದರು. ಅವರ ಇನ್ನಿಂಗ್ಸ್‌ನಲ್ಲಿ 20 ಬೌಂಡರಿಗಳಿದ್ದವು. ಲಿಟ್ಚ್‌ಫೀಲ್ಡ್ 72 ಬಾಲ್‌ಗಳಲ್ಲಿ 84 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರ ಇನ್ನಿಂಗ್ಸ್‌ನಲ್ಲಿ 12 ಬೌಂಡರಿ ಮತ್ತು 1 ಸಿಕ್ಸರ್ ಇದ್ದವು.

20 ವರ್ಷಗಳ ಬಳಿಕ ಭಾರತದಲ್ಲಿ ಕ್ರೀಡೋತ್ಸವ | ಹೆಚ್ಚಿನ ಕ್ರೀಡೆಗಳ ಸೇರ್ಪಡೆ ಸಾಧ್ಯತೆ

ಭಾರತಕ್ಕೆ ಕಾಮನ್‌ವೆಲ್ತ್ ಗೇಮ್ಸ್ ಫಿಕ್ಸ್

ದೆಹಲಿ: ಕಾಮನ್‌ವೆಲ್ತ್ ಕ್ರೀಡಾ ಕಾರ್ಯಕಾರಿ ಮಂಡಳಿಯು 2030ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಭಾರತದ ಅಹಮದಾಬಾದ್ ಅನ್ನು ಪ್ರಸ್ತಾವಿತ ಆತಿಥೇಯ ನಗರವಾಗಿ ಶಿಫಾರಸು ಮಾಡಿರುವುದನ್ನು ದೃಢಪಡಿಸಿದೆ. ನವೆಂಬರ್ 26ರಂದು ಗ್ಲ್ಯಾಸ್ಗೋದಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟದ ಸಭೆಯಲ್ಲಿ ಈ ವಿಷಯದ ಕುರಿತು ಅಂತಿಮ ನಿರ್ಧಾರ ಆಗಲಿದೆ.

ಈ ಆಗಸ್ಟ್ 29ರಂದು ಲಂಡನ್‌ನಲ್ಲಿ 2030ರ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಆಯೋಜಿಸಲು ಭಾರತ ತನ್ನ ಬಿಡ್ ಅನ್ನು ಸಲ್ಲಿಸಿತ್ತು. ಆಗ ಗುಜರಾತ್ ಸರಕಾರದ ಕ್ರೀಡಾ ಸಚಿವರಾಗಿದ್ದ ಹರ್ಷ್ ಸಾಂಘ್ವಿ ಅವರು ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಪ್ರಸ್ತಾವನೆಯನ್ನು ಮಂಡಿಸಿದರು. ಭಾರತವು ಇಲ್ಲಿಯವರೆಗೆ ಒಮ್ಮೆ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಆಯೋಜಿಸಿದ್ದು, 2010ರಲ್ಲಿ ದೆಹಲಿಯಲ್ಲಿ ನಡೆದಿತ್ತು.

2026ರ ಗ್ಲಾಸ್ಗೋ ಕಾಮನ್‌ವೆಲ್ತ್ ಕ್ರೀಡಾಕೂಟದಿಂದ ತೆಗೆದುಹಾಕಲಾದ ಎಲ್ಲಾ ಕ್ರೀಡೆಗಳನ್ನು 2030ರಲ್ಲಿ ಸೇರಿಸಲಾಗುವುದು ಎಂದು ಭಾರತೀಯ ಒಲಿಂಪಿಕ್ ಅಸೋಸಿಯೇಷನ್ (ಐಒಎ) ತಿಳಿಸಿದೆ. ಇವುಗಳಲ್ಲಿ ಶೂಟಿಂಗ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಬಿಲ್ಲುಗಾರಿಕೆ, ಕಬಡ್ಡಿ ಮತ್ತು ಖೋ-ಖೋ ಸೇರಿವೆ.

ಅಮಿತ್ ಶಾ ಸಂತಸ: ಕ್ರೀಡಾಕೂಟದ ಆತಿಥ್ಯದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, 'ಇದು ಭಾರತಕ್ಕೆ ಅತ್ಯಂತ ಹೆಮ್ಮೆ ಮತ್ತು ಸಂತೋಷದ ದಿನ. ಕಾಮನ್ವೆಲ್ತ್ ಸಂಘವು 2030ರ ಕಾಮನ್ ವೆಲ್ತ್ ಕ್ರೀಡಾಕೂಟವನ್ನು ಅಹಮದಾಬಾದ್‌ನಲ್ಲಿ ಆಯೋಜಿಸುವ ಹಕ್ಕನ್ನು ಭಾರತಕ್ಕೆ ನೀಡಿದ್ದಕ್ಕಾಗಿ ದೇಶದ ಎಲ್ಲಾ ನಾಗರಿಕರಿಗೆ ಹೃತ್ಪೂರ್ವಕ ಅಭಿನಂದನೆಗಳು' ಎಂದಿದ್ದಾರೆ.



ಭಾರತ, ಲಂಕಾದಲ್ಲಿ ನಡೆಯಲಿರುವ ಕ್ರಿಕೆಟ್ ಟೂರ್ನಿ

ಟಿ20 ವಿಶ್ವಕಪ್: ಒಮಾನ್, ನೇಪಾಳಕ್ಕೂ ಅರ್ಹತೆ

ದುಬೈ: ಪೂರ್ವ ಏಷ್ಯಾ ಪೆಸಿಫಿಕ್ ಅರ್ಹತಾ ಸುತ್ತಿನಲ್ಲಿ ಅಗ್ರ ಮೂರು ಸ್ಥಾನಗಳನ್ನು ಖಚಿತಪಡಿಸಿಕೊಂಡ ನೇಪಾಳ ಮತ್ತು ಒಮಾನ್ ತಂಡಗಳು ಸೂಪರ್ ಸಿಕ್ಸ್ ಪಂದ್ಯಕ್ಕೂ ಮೊದಲೇ ಐಸಿಸಿ ಪುರುಷರ ಟಿ20 ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿದೆ. ಟಿ20 ವಿಶ್ವಕಪ್ ಪಂದ್ಯಾವಳಿ ಮುಂದಿನ ವರ್ಷ ಫೆಬ್ರವರಿಯಲ್ಲಿ ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿದೆ.

ಸೂಪರ್ ಸಿಕ್ಸ್ ಹಂತದ ಮೊದಲ ಆರು ಪಂದ್ಯಗಳಲ್ಲಿ ಐದು ಪಂದ್ಯಗಳ ಫಲಿತಾಂಶ ಕೊನೆಯ ಓವರ್ ವರೆಗೂ ಹೋಯಿತು. ಆದರೂ ನೇಪಾಳ ಎರಡು ಪ್ರಮುಖ ಪಂದ್ಯಗಳನ್ನು ಗೆಲ್ಲುವ ಮೂಲಕ ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿತು. ಒಮಾನ್ ಕೂಡ ಕತಾರ್ ವಿರುದ್ಧ ಜಯ ಸಾಧಿಸುವ ಮೂಲಕ ವಿಶ್ವಕಪ್‌ಗೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು.

ಈ ವರೆಗೆ ಭಾರತ, ಶ್ರೀಲಂಕಾ, ಅಫ್ಘಾನಿಸ್ತಾನ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಅಮೆರಿಕ, ವೆಸ್ಟ್ ಇಂಡೀಸ್, ಐರ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನ, ಕೆನಡಾ, ನೆದರ್‌ಲ್ಯಾಂಡ್ಸ್, ಇಟಲಿ, ಜಿಂಬಾಬ್ವೆ, ನಮೀಬಿಯಾ, ನೇಪಾಳ, ಒಮಾನ್ ಅರ್ಹತೆ ಪಡೆದ ದೇಶಗಳಾಗಿದೆ.

ಯುನೈಟೆಡ್ ಅರಬ್ ಎಮಿರೇಟ್ಸ್, ಕತಾರ್, ಮಲೇಷ್ಯಾ, ಕುವೈತ್, ಜಪಾನ್, ಸಮೋವಾ, ಪಪುವಾ ನ್ಯೂಗಿನಿಯಾ ದೇಶಗಳ ಪೈಕಿ ಒಂದು ತಂಡವು ಕ್ವಾಲಿಫೈಯರ್ ಪಂದ್ಯಗಳನ್ನಾಡಿ ಅರ್ಹತೆ ಪಡೆಯಬೇಕಿದೆ. ಒಮಾನ್ ತಂಡ ಏಷ್ಯಾಕಪ್‌ನಲ್ಲಿ ಬಲಿಷ್ಠ ತಂಡ ಭಾರತಕ್ಕೂ ತೀವ್ರ ಪೈಪೋಟಿ ನೀಡಿತ್ತು.

ಮೂಲಗಳ ಪ್ರಕಾರ ಫೈನಲ್ ಪಂದ್ಯ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆಯುವ ಸಾಧ್ಯತೆಯಿದೆ. ಆದರೆ ಒಂದು ವೇಳೆ ಪಾಕಿಸ್ತಾನ ಫೈನಲ್ ಗೇರಿದರೆ ಆ ಪಂದ್ಯ ಕೊಲಂಬೊದಲ್ಲಿ ನಡೆಯಲಿದೆ. ಪಾಕಿಸ್ತಾನ ತಂಡ ಭಾರತಕ್ಕೆ ಪ್ರಯಾಣಿಸದ ಕಾರಣ ತನ್ನ ಎಲ್ಲ ಪಂದ್ಯಗಳನ್ನು ಕೊಲಂಬೊದಲ್ಲಿ ಆಡಲಿದೆ.

ದ್ವಿಶತಕ ಬಾರಿಸಿ ದಾಖಲೆ ಬರೆದ ಗೋವಾ ಬ್ಯಾಟ್ಸ್‌ಮನ್

ಅಭಿನವ್ ತೇಜ್ರಾಣ ರಣಜಿ ದಾಖಲೆ

ದೆಹಲಿ: ರಣಜಿ ಟ್ರೋಫಿ ಪದಾರ್ಪಣೆ ಪಂದ್ಯದಲ್ಲಿಯೇ ಗೋವಾ ತಂಡದ ಬ್ಯಾಟ್ಸ್‌ಮನ್ ಅಭಿನವ್ ತೇಜ್ರಾಣ ಅವರು ದ್ವಿಶತಕ ಬಾರಿಸಿ ನೂತನ ಮೈಲುಗಲ್ಲಿಗೆ ಭಾಜನರಾಗಿದ್ದಾರೆ. ಗೋವಾ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಚಂಡೀಗಢ ವಿರುದ್ಧ ತಮ್ಮ ಮೊದಲನೇ ಪಂದ್ಯದಲ್ಲಿ ಅಭಿನವ್ ತೇಜ್ರಾಣ ಹೊಸ ಸಾಧನೆಗೈದಿದ್ದಾರೆ.

ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ಅಭಿನವ್, ಪಂದ್ಯದ ಮೊದಲ ದಿನವೇ ಮೂರಂಕಿ ವೈಯಕ್ತಿಕ ಮೊತ್ತವನ್ನು ಕಲೆ ಹಾಕಿದರು. ಪ್ರಥಮ ದರ್ಜೆ ಕ್ರಿಕೆಟ್‌ನ ಪದಾರ್ಪಣೆ ಪಂದ್ಯದಲ್ಲಿಯೇ ಶತಕ ಬಾರಿಸಿದ ಗೋವಾದ ಮೂರನೇ ಬ್ಯಾಟ್ಸ್‌ಮನ್ ಎಂಬ ದಾಖಲೆಯನ್ನು ಕೂಡ ಅಭಿನವ್ ತ್ರಜ್ರಾಣ ಬರೆದಿದ್ದಾರೆ, ಆ ಮೂಲಕ ಅರ್ಜುನ್ ತೆಂಡೂಲ್ಕರ್ ಒಳಗೊಂಡ ಎಲೈಟ್ ಲಿಸ್ಟ್‌ಗೆ ಸೇರಿದ್ದಾರೆ. ಅರ್ಜುನ್ ತೆಂಡೂಲ್ಕರ್ ಅವರು 2022ರಲ್ಲಿ ತಮ್ಮ ಪದಾರ್ಪಣೆ ಪಂದ್ಯದಲ್ಲಿಯೇ ಶತಕವನ್ನು ಸಿಡಿಸಿದ್ದರು. ರಾಜಸ್ಥಾನ್ ರಾಯಲ್ಸ್ ವಿರುದ್ಧದ ತಮ್ಮ ಪದಾರ್ಪಣೆ ಪಂದ್ಯದಲ್ಲಿ ಅವರು 120 ರನ್‌ಗಳನ್ನು ಕಲೆ ಹಾಕಿದ್ದರು.

ಮೊದಲನೇ ದಿನದಾಟದ ಅಂತ್ಯಕ್ಕೆ ಅಜೇಯ 130 ರನ್‌ಗಳನ್ನು ಕಲೆ ಹಾಕಿದ್ದ ಅಭಿನವ್, ಎರಡನೇ ದಿನ 70 ರನ್‌ಗಳನ್ನು ಹೆಚ್ಚುವರಿಯಾಗಿ ಸೇರಿಸಿದರು. ಚೊಚ್ಚಲ ದ್ವಿಶತಕವನ್ನು ಪೂರ್ಣಗೊಳಿಸಲು 301 ಎಸೆತಗಳನ್ನು ತೆಗೆದುಕೊಂಡಿದ್ದಾರೆ. ರಣಜಿ ಟ್ರೋಫಿ ಪದಾರ್ಪಣೆ ಪಂದ್ಯದಲ್ಲಿ ಚೊಚ್ಚಲ ದ್ವಿಶತಕ ಬಾರಿಸಿದ ಗೋವಾದ ಮೊದಲ ಬ್ಯಾಟ್ಸ್‌ಮಮ್ ಎನಿಸಿಕೊಂಡಿದ್ದಾರೆ. ಅಮೋಲ್ ಮುಝುಂದರ್ ಹಾಗೂ ಗುಂಡಪ್ಪ ವಿಶ್ವನಾಥ್ ಬಳಿಕ ಈ ಸಾಧನೆ ಮಾಡಿದ ಭಾರತದ 13ನೇ ಬ್ಯಾಟ್ಸ್‌ಮನ್ ಆಗಿದ್ದಾರೆ.

ಬಾಲ್ಯದ ದಿನಗಳನ್ನು ನೆನಪಿಸುವ ವಲವಾರ

ಚಂದನವನದಲ್ಲಿ ಕಮರ್ಷಿಯಲ್ ಸಿನಿಮಾಗಳ ನಡುವೆ ಮಕ್ಕಳ ಚಿತ್ರಗಳು ತೆರೆಗೆ ಬರಲು ಸಿದ್ಧವಾಗಿವೆ. ಅದರಲ್ಲಿ ವಲವಾರ ಸಿನಿಮಾವೂ ಒಂದು. ವಲವಾರ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಬಡ ರೈತನ ಕುಟುಂಬದಲ್ಲಿ ನಡೆಯುವ ಕಥೆ ಇದಾಗಿದ್ದು, ಗೌರಿ ಎಂಬ ಹಸು ಕೂಡ ಇಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದೆ. ಬಹುತೇಕ ಹೊಸ ಕಲಾವಿದರೇ ಚಿತ್ರದಲ್ಲಿ ಅಭಿನಯಿಸಿದ್ದಾರೆ. ವೇದಿಕ್ ಕೌಶಲ್, ಶಯನ್. ಪೋಷಕ ಪಾತ್ರಧಾರಿಗಳಾಗಿ ಮಾಲತೇಶ್, ಹರ್ಷಿತಾಗೌಡ, ಅಭಯ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಮಾಯಾಬಜಾರ್, ಐರಾವತ, ರಾಟೆ, ಜ್ಯೂನಿಯರ್ ಚಿತ್ರಗಳ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿರುವ ಸುತನ್ ಗೌಡ ಈ ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಹಾಗೂ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಅವರು ನಮ್ಮ ಚಿತ್ರದ ಕಥೆ ಕೇಳಿ ಮೆಚ್ಚಿಕೊಂಡು,

ತಮ್ಮದೆ ಪಿಆರ್‌ಕೆ ಬ್ಯಾನರ್‌ನಲ್ಲಿ ಈ ಚಿತ್ರವನ್ನು ನಿರ್ಮಿಸಲು ಉದ್ದೇಶಿಸಿದ್ದರು. ಆದರೆ ಅಪ್ಪು ಸರ್ ಅವರನ್ನು ಕಳೆದುಕೊಂಡು ಅವರ ಬ್ಯಾನರ್‌ದಲ್ಲಿ ಸಿನಿಮಾ ಆಗದಿದ್ದಕ್ಕೆ ಬೇಸರವಿದೆ ಎನ್ನುತ್ತಾರೆ ಸುತನ್ ಗೌಡ.

ಮಾರ್ಫ್ ಪ್ರೊಡಕ್ಷನ್ಸ್‌ನಲ್ಲಿ ಜೆ.ಗಿರಿಧರ್ ಮತ್ತು ಅನಿರುದ್ ಗೌತಮ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಸಕಲೇಶಪುರದ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಪ್ರಮೋದ್ ಮರವಂತೆ ಸಾಹಿತ್ಯದ ಹಾಡುಗಳಿಗೆ ಕದ್ರಿ ಮಣಿಕಾಂತ್ ಸಂಗೀತ ಸಂಯೋಜಿಸಿದ್ದಾರೆ. ಬಾಲರಾಜ್ ಗೌಡ ಛಾಯಾಗ್ರಹಣ, ಶ್ರೀಕಾಂತ್ ಸಂಕಲನ ಈ ಚಿತ್ರಕ್ಕಿದೆ. ವಲವಾರ ಚಿತ್ರವನ್ನು ವೀಕ್ಷಿಸಿದ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಪ್ರಶಂಸೆ ವ್ಯಕ್ತಪಡಿಸಿದ್ದು, ಯು ಪ್ರಮಾಣಪತ್ರ ನೀಡಿದೆ. ನವೆಂಬರ್‌ನಲ್ಲಿ ವಲವಾರ ತೆರೆಗೆ ಬರಲಿದೆ.

ವಿಟಾಕೀಸ್



ಪ್ರೇಕ್ಷಕರು ಒಟಿಟಿಗೆ ಒಗ್ಗಿ ಹೋಗಿದ್ದಾರೆ, ಇನ್ನು ಸಿನಿಮಾಗಳನ್ನು ಚಿತ್ರಮಂದಿರಕ್ಕೆ ಬಂದು ನೋಡೋದು ಕಷ್ಟ ಎನ್ನುವ ಮಾತುಗಳು ಕೇಳಿ ಬರುತ್ತಿದ್ದವು. ವರ್ಷಾರಂಭದಲ್ಲಿ ಈ ಮಾತು ಸತ್ಯ ಅನ್ನಿಸುತ್ತಿತ್ತು. ಆದರೆ ಕನ್ನಡದ ಸಿನಿಮಾಗಳು ಅದೆಲ್ಲವನ್ನು ಸುಳ್ಳಾಗಿಸಿದೆ. ಮಾದೇಶನಿಂದ ಆರಂಭವಾದ ಸಂಭ್ರಮ, ಸು ಫ್ರಮ್ ಸೋನಿಂದ ಮತ್ತಷ್ಟು ಹೆಚ್ಚಿತು. ಕಾಂತಾರ ಅದನ್ನು ಇಮ್ಮಡಿಗೊಳಿಸಿದೆ. ಪ್ರೇಕ್ಷಕರಿಲ್ಲದೆ ಮುಚ್ಚಿದ್ದ ಚಿತ್ರಮಂದಿರಗಳು ಮತ್ತೆ

ತೆರೆದಿವೆ. ಮಾತ್ರವಲ್ಲ, ಹೌಸ್ ಫುಲ್ ಪ್ರದರ್ಶನ ಕಾಣುತ್ತಿವೆ. ಒಂದು ವಾರ ಮುಂಗಡವಾಗಿಯೇ ಟಿಕೆಟ್‌ಗಳು ಬುಕ್ ಆಗುತ್ತಿವೆ. ದಸರಾದಿಂದ ಆರಂಭವಾದ ಧಮಾಕಾ ಇನ್ನು ಮುಂದುವರಿಯಲಿದೆ. ಯಾಕೆಂದರೆ ಇನ್ನು ಮುಂದೆಯೂ ಕಾಂತಾರದಂತಹ ಸಾಲು ಸಾಲು ಹೈಬಜೆಟ್‌ನ ಸಿನಿಮಾಗಳು ತೆರೆಗೆ ಬರಲಿವೆ. ಕಾಂತಾರ ಹಚ್ಚಿದ ಕಿಚ್ಚಿಗೆ ಇಡೀ ಸ್ಯಾಂಡಲ್ ವುಡ್ ಬೆಳಗುತ್ತಿದೆ.

ಬ್ರ್ಯಾಟ್: ಅದ್ಭುತ ಲವ್ ಸ್ಟೋರಿಯ ಸಿನಿಮಾಗಳನ್ನು ತೆರೆಗೆ ತಂದು ಸೈ ಎನಿಸಿಕೊಂಡಿರುವ ನಿರ್ದೇಶಕ ಶಶಾಂಕ್ ಮತ್ತೊಂದು ನವಿರಾದ ಪ್ರೇಮಕಥೆಯ ಸಿನಿಮಾವನ್ನು ಹೊತ್ತುಬರುತ್ತಿದ್ದಾರೆ. ಬ್ರ್ಯಾಟ್ ಶೀರ್ಷಿಕೆಯಲ್ಲಿ ಸಿದ್ಧವಾಗಿರುವ ಈ ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿದ್ದು ಚಿತ್ರದ ಬಗ್ಗೆ ಕುತೂಹಲ ಮೂಡಿಸಿದೆ. ಬ್ರ್ಯಾಟ್ ಪ್ರೇಮಕಥೆಗೆ ಸೀಮಿತವಾಗಿಲ್ಲ. ಇಲ್ಲಿ ಥ್ರಿಲ್ಲರ್ ಸ್ಟೋರಿಯೂ ಇದೆ. ಕೃಷ್ಣನಿಗೆ ಜತೆಯಾಗಿ ಮನೀಷಾ ಕಂದಕೂರ್ ಕಾಣಿಸಿಕೊಂಡಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಹಾಡುಗಳು ಸಖತ್ ಸದ್ದು ಮಾಡುತ್ತಿವೆ. ಇದೇ ತಿಂಗಳು ಬ್ರ್ಯಾಟ್ ತೆರೆಗೆ ಬರಲಿದೆ.

ಚಂದನವನದಲ್ಲಿ ಮರುಕಳಿಸಿದ ವೈಭವ

ಮಾರ್ಕ್-45 ವಾರ್

ಇನ್ನು ಡಿಸೆಂಬರ್‌ನಲ್ಲಿ ಸ್ಟಾರ್ ವಾರ್ ಆರಂಭವಾಗಲಿದೆ. ಹೌದು ಕಿಚ್ಚ ಸುದೀಪ್ ಅಭಿನಯದ ಮಾರ್ಕ್ ಹಾಗೂ ಶಿವಣ್ಣ, ಉಪೇಂದ್ರ ನಟಿಸಿರುವ 45 ಚಿತ್ರದ ನಡುವೆ ಪೈಪೋಟಿ ಶುರುವಾಗಲಿದೆ. ಈ ಎರಡು ಸಿನಿಮಾಗಳು ಡಿಸೆಂಬರ್ 25ರ ಕ್ರಿಸ್‌ಮಸ್ ಹಬ್ಬದಂದೇ ತೆರೆಗೆ ಬರುತ್ತಿವೆ. ಮಾರ್ಕ್ ಸೆಟ್ಟೇರಿದ ದಿನವೇ ಕಿಚ್ಚ ಸುದೀಪ್ ತಮ್ಮ ಚಿತ್ರವನ್ನು ಕ್ರಿಸ್‌ಮಸ್‌ಗೆ ತೆರೆಗೆ ತರುವುದಾಗಿ ಹೇಳಿದ್ದರು. 45 ಆಗಸ್ಟ್‌ನಲ್ಲಿಯೇ ರಿಲೀಸ್ ಆಗಬೇಕಿತ್ತು. ಆದರೆ ಸಿಜಿ ಕೆಲಸಗಳು ಮುಗಿಯದ ಕಾರಣ ಬಿಡುಗಡೆಯನ್ನು ಮುಂದೂಡಲಾಗಿತ್ತು. ಈಗ 45 ಕೂಡ ಡಿಸೆಂಬರ್‌ನಲ್ಲಿಯೇ ದರ್ಶನ ನೀಡಲಿದೆ. ಹೀಗಾಗಿ ಮತ್ತೊಮ್ಮೆ ಸ್ಟಾರ್ ವಾರ್ ಶುರುವಾಗಲಿದೆ. ಇನ್ನು ಸ್ಟಾರ್ ನಟರ ಸಿನಿಮಾಗಳ ಜತೆಗೆ ಹೊಸಬರೇ ನಿರ್ಮಿಸಿ, ನಿರ್ದೇಶಿಸಿರುವ ಸಿನಿಮಾಗಳು ರಿಲೀಸ್ ಆಗಲಿದ್ದು, ಪ್ರೇಕ್ಷಕರನ್ನು ಚಿತ್ರಮಂದಿರಗಳತ್ತ ಸೆಳೆಯುವ ನಿರೀಕ್ಷೆ ಮೂಡಿಸಿವೆ. ಒಟ್ಟಾರೆ ಮಸುಕಾಗಿದ್ದ ಚಂದನವನದಲ್ಲಿ ಮತ್ತೆ ವೈಭವ ಮರುಕಳಿಸಿದೆ.

ಗತವೈಭವ: ಸಿಂಪಲ್ ಸ್ಟೋರಿ ಮೂಲಕವೇ ಪ್ರೇಕ್ಷಕರನ್ನು ಸೆಳೆಯುವ ನಿರ್ದೇಶಕ ಸುನಿ, ಗತವೈಭವ ಸಾರಲಿದ್ದಾರೆ. ಹೌದು ಸುನಿ ಗತವೈಭವ ಚಿತ್ರವನ್ನು ನಿರ್ದೇಶನ ಮಾಡಿದ್ದು, ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ನಾಲ್ಕು ಕಾಲಘಟ್ಟದಲ್ಲಿ ನಡೆಯುವ ಕಥನವನ್ನು ಒಳಗೊಂಡಿರುವ ಈ ಚಿತ್ರ, ಟೀಸರ್ ಮೂಲಕವೇ ಮನಗೆದ್ದಿದೆ. ಅದಾಗಲೇ ಈ ಚಿತ್ರದ ಹಾಡುಗಳು ಕೂಡ ಸಿನಿಪ್ರಿಯರನ್ನು ರಂಜಿಸಿವೆ. ನವ ನಟ ದುಷ್ಯಂತ್ ನಾಯಕನಾಗಿ ನಟಿಸಿದ್ದು, ಆಶಿಕಾ ರಂಗನಾಥ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಗತವೈಭವ ನವೆಂಬರ್ 14ರಂದು ಅದ್ದೂರಿಯಾಗಿ ರಿಲೀಸ್ ಆಗಲಿದೆ.

ಮಾರುತ: ನಿರ್ದೇಶಕ ಎಸ್.ನಾರಾಯಣ್ ಬಹುದಿನಗಳ ಬಳಿಕ ಹೈವೋಲ್ಟೇಜ್ ಚಿತ್ರವನ್ನು ತೆರೆಗೆ ತರಲು ಸಿದ್ಧವಾಗಿದ್ದಾರೆ. ಮಾರುತ ಶೀರ್ಷಿಕೆಯಲ್ಲಿ ಮೂಡಿಬಂದಿರುವ ಈ ಚಿತ್ರ ಬೆಳ್ಳಿತೆರೆಯಲ್ಲಿ ಸುನಾಮಿ ಎಬ್ಬಿಸಲಿದೆ. ಅದ್ದೂರಿಯಾಗಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಧ್ರುವ ಸರ್ಜಾ, ಕೆಡಿ ಅವತಾರದಲ್ಲಿ ತೆರೆಗೆ ಎಂಟ್ರಿಕೊಡಲಿದ್ದಾರೆ. ಈ ಹಿಂದೆಯೇ ಕೆಡಿಯ ಅಬ್ಬರ ಆರಂಭವಾಗಬೇಕಿತ್ತು. ಆದರೆ ಸಿನಿಮಾದ ಕೆಲಸಗಳು ಬಾಕಿ ಇದ್ದಿದ್ದರಿಂದ ಬಿಡುಗಡೆ ತಡವಾಗಿತ್ತು. ಕೆಡಿ ಕೂಡ ನವೆಂಬರ್ ನಲ್ಲಿಯೇ ರಿಲೀಸ್ ಆಗಲಿದೆ. ಜೋಗಿ ಪ್ರೇಮ್ ನಿರ್ದೇಶನದ ಈ ಚಿತ್ರದಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್, ರಮೇಶ್ ಅವರವಿಂದ್, ಸಂಜಯ್ ದತ್, ಶಿಲ್ಪಾ ಶೆಟ್ಟಿ ಹೀಗೆ ದೊಡ್ಡ ತಾರಾಬಗವೇ ಇದೆ. ಕಿಚ್ಚ ಸುದೀಪ್ ಕೂಡ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಡೆವಿಲ್: ದರ್ಶನ್ ಮರಳಿ ಸೆರೆಮನೆ ಸೇರಿದ್ದಾರೆ. ಆದರೆ ಇತ್ತ ಡೆವಿಲ್ ಹವಾ ಜೋರಾಗಿಯೇ ಇದೆ. ಟೀಸರ್‌ನಲ್ಲಿ ನಿರೀಕ್ಷೆ ಹೆಚ್ಚಿಸಿದ್ದ ಡೆವಿಲ್ ಈಗ ಹಾಡುಗಳ ಮೂಲಕವೂ ಧೂಳೆಬ್ಬಿಸುತ್ತಿದೆ. ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳನ್ನು ಮುಗಿಸಿರುವ ಡೆವಿಲ್, ಡಿಸೆಂಬರ್‌ನಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ದರ್ಶನ್, ಡೆವಿಲ್ ಅವರತಾರದಲ್ಲಿ ಅಕ್ಷರಶಃ ಅಬ್ಬರಿಸಿದ್ದಾರೆ. ಮಿಲನ ಪ್ರಕಾಶ್ ನಿರ್ದೇಶನದ ಈ ಚಿತ್ರ ಬಲು ಅದ್ದೂರಿಯಾಗಿ ನಿರ್ಮಾಣವಾಗಿದೆ.

ಲವ್ ಸ್ಟೋರಿ ಹೇಳಿದ ರೂಪೇಶ್

ಬಿಗ್‌ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ಜೈ ಸಿನಿಮಾ ಟೀಸರ್‌ನಲ್ಲಿಯೇ ಸದ್ದು ಮಾಡುತ್ತಿದೆ. ಸದ್ಯ ಈ ಚಿತ್ರದ ಲವ್ ಸಾಂಗ್ ರಿಲೀಸ್ ಆಗಿದೆ. ಗುರುಕಿರಣ್ ದಂಪತಿ, ಈ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಈ ಹಾಡಿಗೆ ರೂಪೇಶ್ ಅವರೇ ಸಾಹಿತ್ಯ ರಚಿಸಿದ್ದು, ರಜತ್ ಹೆಗ್ಡೆ ದನಿಯಾಗಿದ್ದಾರೆ. ನಾಯಕ, ನಾಯಕಿಗೆ ಪ್ರೇಮ ನಿವೇಧೆ ಮಾಡುತ್ತಾ ಸಾಗುವ ಈ ಹಾಡು ಯುವ ಸಮೂಹದ ಮನಸೂರೆಗೊಂಡಿದೆ. ಜೈ ತುಳು ಮತ್ತು ಕನ್ನಡದಲ್ಲಿ ನಿರ್ಮಾಣವಾಗಿದೆ. ತುಳು ಮತ್ತು ಕನ್ನಡ ಎರಡು ಭಾಷೆಯಲ್ಲಿಯೂ ಈ ಹಾಡು ಬಿಡುಗಡೆಯಾಗಿದೆ. ರೂಪೇಶ್ ಶೆಟ್ಟಿಗೆ ನಾಯಕಿಯಾಗಿ ಅದ್ವಿತಿ ಶೆಟ್ಟಿ ಬಣ್ಣಹಚ್ಚಿದ್ದಾರೆ. ಈ ಸಿನಿಮಾದಲ್ಲಿ ಅದ್ವಿತಿ ಪತ್ರಕರ್ತೆಯ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ನಮ್ಮ ಜೈ ಚಿತ್ರದ ಪ್ರೇಮಗೀತೆ ಇದು, ಹಾಗಾಗಿ ಈ ಹಾಡನ್ನು ದಂಪತಿಗಳಿಂದಲೇ ಬಿಡುಗಡೆ ಮಾಡಿಸಬೇಕು ಎಂದುಕೊಂಡಿದ್ದೆ. ಅಂತೆಯೇ ಗುರುಕಿರಣ್ ದಂಪತಿಗಳು ಬಂದು ಹಾಡು ಬಿಡುಗಡೆ ಮಾಡಿಕೊಟ್ಟಿದ್ದಾರೆ. ಈ ಹಾಡು ಎಲ್ಲರಿಗೂ ಹಿಡಿಸಲಿದೆ. ಜೈ ಪೊಲಿಟಿಕಲ್ ಡ್ರಾಮಾ ಜತೆಗೆ ಲವ್ ಸ್ಟೋರಿಯೂ ಬೆರೆತಿದೆ.

ಎಲ್ಲರಿಗೂ ಕನೆಕ್ಟ್ ಆಗುವ ಕಥೆ ಚಿತ್ರದಲ್ಲಿ ಅಡಕವಾಗಿದೆ ಎಂದು ರೂಪೇಶ್ ಶೆಟ್ಟಿ ತಿಳಿಸಿದರು. ಆರ್.ಎಸ್ ಸಿನಿಮಾಸ್, ಶೂಲಿನ್ ಫಿಲಂಸ್, ಮುಗ್ರೋಡಿ ಪ್ರೊಡಕ್ಷನ್ ಲಾಂಛನದಲ್ಲಿ ಅನಿಲ್ ಶೆಟ್ಟಿ, ಸುಧಾಕರ ಶೆಟ್ಟಿ ಮುಗ್ರೋಡಿ, ಮಂಜುನಾಥ ಅತ್ತಾವರ ಚಿತ್ರ ನಿರ್ಮಾಣ ಮಾಡಿದ್ದಾರೆ.